# ಅಲೀಬಾಬ ಮತ್ತು ನಲವತ್ತು ಮಂದಿ ಕಳ್ಳರು

## ನನ್ನ ಮಾತು

ನಾಟಕವೊಂದು ಒಂದು ಮುದ್ರಣ ಕಾಣುವುದೇ ಪುಣ್ಯ ಎನ್ನುವಂತಹ ಸ್ಥಿತಿಯಲ್ಲಿ ನನ್ನ ನಾಟಕಗಳು ಹಲವಾರು ಮುದ್ರಣ ಕಂಡಿರುವುದು ನನ್ನ ಭಾಗ್ಯ ಎಂದೇ ಭಾವಿಸುತ್ತೇನೆ.

ಈಗ ಮರುಮುದ್ರಣವಾಗುತ್ತಿರುವ 'ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು', 'ಪುಷ್ಪರಾಣಿ' ಮತ್ತು 'ಕಿಟ್ಟೀಕಥೆ'-ಮೂರು ಮಕ್ಕಳ ನಾಟಕಗಳು. ಶ್ರೀ ಬಿ.ಬಿ. ಕಾರಂತರ ಸಂಗೀತ ಮತ್ತು ಶ್ರೀಮತಿ ಪ್ರೇಮಾ ಕಾರಂತರ ನಿರ್ದೇಶನದಲ್ಲಿ ಈ ನಾಟಕಗಳು ಯಶಸ್ವಿಯಾಗಿ ಪ್ರಯೋಗವಾಗಿವೆ. ಅವರಿಗೆ;

ಈ ನಾಟಕಗಳಿಗೆ ಮುಖಪುಟ ವಿನ್ಯಾಸ ಮಾಡಿದ ಕಲಾವಿದ ಶ್ರೀ ಹಾದಿಮನಿ ಅವರಿಗೆ;

ಈ ನಾಟಕವನ್ನು ಮುದ್ರಿಸಿದ ಸ್ವ್ಯಾನ ಪ್ರಿಂಟರ್ಸ್ ಅವರಿಗೆ ಮತ್ತು ಪ್ರಕಟಿಸಿದ ಪ್ರಕಾಶ್ ಕಂಬತ್ತಳ್ಳಿ ದಂಪತಿಗಳಿಗೆ;

ನನ್ನ ನಾಟಕಗಳನ್ನು ಓದಿ, ನೋಡಿ ಮೆಚ್ಚಿದ ಪ್ರೇಕ್ಷಕರಿಗೆ, ಆಡಿದ ರಂಗ ತಂಡಗಳಿಗೆ;

ನನ್ನ ನಮನಗಳು ಸಲ್ಲುತ್ತವೆ.

**ಚಂದ್ರಶೇಖರ ಕಂಬಾರ**

## ಪಾತ್ರಗಳು

| | |
|---|---|
| ಗಣೇಶ | ಸಲೀಂ |
| ಮೇಳ | ಬೇಗಂ |
| ಸೂತ್ರಧಾರ | ಫಾತಿಮಾ |
| ಮೇಳದ ನಾಯಕ | ಖಾಸಿಂ |
| ಹುಡುಗ | ಐಜೀಕೆ |
| ಮರ್ಜೀನಾ | ಹಕೀಂ |
| ಚೋರೋಂಕಾ ರಾಜಾ | ಆಯಿಲ್ ಶಾ |
| ಅಲೀಬಾಬಾ | ಕಳ್ಳರು |
| ೩ ಕತ್ತೆಗಳು | |

# ಪೂರ್ವಾರ್ಧ (ಪೂರ್ವರಂಗ)

*(ಖಾಲಿ ರಂಗದ ಮೇಲೆ ಒಬ್ಬ ಹುಡುಗ ಉಡಿ ತುಂಬ ಲಾಡು, ಎಡಗೈಯಲ್ಲಿ ಗಣೇಶನ ಮುಖವಾಡ ಹಿಡಿದುಕೊಂಡು ಅತ್ತಿತ್ತ ನೋಡುತ್ತ ಓಡಿ ಬರುವನು. ಗಣೇಶನಿಗೆ ಇಟ್ಟಿದ್ದ ಆಸನದ ಮೇಲೆ ಮುಖವಾಡ ಇಟ್ಟು ಒಂದೊಂದೇ ಲಾಡು ತಿನ್ನತೊಡಗುತ್ತಾನೆ.)*

ಹುಡುಗ : ಅಬ್ಬಾ! ಏನು ರುಚಿಯಾಗಿದೆಯಂತ! ಈ ಮೇಷ್ಟ್ರಿಗೆ ಬುದ್ಧೀನೇ ಇಲ್ಲ. ಗಣೇಶನಾಗಬೇಕಾದ್ರೆ ದೊಡ್ಡ ಹೊಟ್ಟೆ ಬೇಡವಾ? ಹೊಟ್ಟೆ ದೊಡ್ಡದಾಗಬೇಕಾದ್ರೆ ಒಂದೆರಡು ಕೇಜಿ ಲಾಡು ಮೊದಲೇ ತಿನ್ನಿಸಿರಬಾರದಾ? ಹೊಟ್ಟೆಹಸಿದು ಚಡ್ಡಿ ಕೆಳಗಿಳೀತಾ ಇದೆ, ಗಣೇಶನಾಗಬೇಕಂತೆ! ಮೇಳದವರು ನನ್ನ ಎದುರಿಗೆ ಲಾಡು ಇಡ್ತಾರಂತೆ, ನಾನು ಸುಮ್ಮನೇ ಆಶೀರ್ವಾದ ಮಾಡಬೇಕಂತೆ. ನಾಟಕ ಮುಗಿದ ಮೇಲೆ ಎಲ್ಲರೂ ಹಂಚಿ ತಿನ್ನೋಣ ಅಂತ ಹೇಳ್ತಾರೆ. ಅಲ್ಲಾ, ನನಗೆ ನೈವೇದ್ಯ ಇಟ್ಟದ್ದನ್ನು ಎಲ್ಲರೂ ಯಾಕೆ ತಿನ್ನಬೇಕು? ಇದೇನಪ್ಪ, ಯಾರೋ ಬರ್ತಿರೋ ಹಾಗಿದೆ!

*(ಲಬಕ್ಕನೆ ಲಾಡುಗಳನ್ನೆಲ್ಲ ಅಂಗಿಯೊಳಗಿನಿಂದ ಹೊಟ್ಟೆಗೆ ಸೇರಿಸಿ ಇನ್‌ಶರ್ಟ್‌ಮಾಡಿಕೊಂಡು ಹೊಟ್ಟೆ ಉಬ್ಬಿಸಿಕೊಳ್ಳುತ್ತಾನೆ. ಅವಸರದಿಂದ ಮುಖವಾಡ ಧರಿಸಿ ಗಣೇಶನ ಭಂಗಿಯಲ್ಲಿ ಕೂರುತ್ತಾನೆ. ಆದರೆ ಉಬ್ಬಿದ ಹೊಟ್ಟೆಯಿಂದಾಗಿ ಕೂರಲಾಗುವುದಿಲ್ಲ. ಮಲಗುತ್ತಾನೆ. ಮೇಳದವರು ಹಾಡುತ್ತ ಕುಣಿಯುತ್ತ ಬರುತ್ತಾರೆ.)*

ಮೇಳ : ಶ್ರೀ ಗಜವದನಾ
ಗಿರಿಜಾನಂದನ
ಸ್ವೀಕರಿಸಯ್ಯ ಸಾವಿರ ನಮನ||
ಗೊನೆ ಮುರಿದ ಬಾಳೇಹಣ್ಣು
ಥರಾವರಿ ಹೂವಾ ಹಣ್ಣು
ಸ್ವೀಕರಿಸಯ್ಯಾ ಸಾವಿರ ನಮನ||

ಭದ್ರಾಕೃತಿಯವನೆ
ಜೋಕಿಲಿ ಕೂತವನೆ
ಜೋಕೆ ತಪ್ಪದ ಮಾತು ದಯಪಾಲಿಸಣ್ಣಾ||

ಕಲಿಸಿದ ಗುರುವರ್ಯ
ಭೂಸನೂರ ಮಠದಯ್ಯ
ಸಾವಳಗಿ ಶಿವಲಿಂಗ
ಘೋಡಗೇರಿ ಗಜಲಿಂಗ||

ಇಂತಿಂಥಾ ಸಂತರ ಮಾತಾಗಿ ಬಂದವನೆ
ತಪ್ಪೀದ ಪದ ಒಪ್ಪಿ ಅಪ್ಪಿಕೊಂಬಂಥವನೆ||

**ಮತಿವಂತ ಮಂದೀಯ ವಿದ್ಯೆಗೆ ಅಧಿಕಾರಿ**
**ಹಂಕಾರ ಪಡುವಂಥ ಹುಂಬರ ಕಡುವೈರಿ**
**ಸ್ವೀಕರಿಸಯ್ಯಾ ಸಾವಿರ ನಮನ||**

ಸೂತ್ರಧಾರ : ಬಾಲಕ ಬಾಲಕಿಯರೇ, ಮತ್ತು ಪಾಲಕರೇ, ನಾವು ಓದೋ ಮಕ್ಕಳು, ನಾಟಕಾ ಆಡತೀವಿ. ನಾಟಕದ ಹೆಸರು 'ಅಲೀಬಾಬ ಮತ್ತು ನಲವತ್ತು ಕಳ್ಳರು' ಅಂತ. ನಾಟಕದ ಪ್ರಾರಂಭದಲ್ಲಿ ಗಣೇಶನ ಪೂಜೆ ಮಾಡಬೇಕು. ಇದೇನಪ್ಪಾ, ಅಲ್ಲಾನೂರಲ್ಲಿ ಕಲ್ಲಯ್ಯಂದೇನು? ಅಂದಂತೆ ಮುಸ್ಲೀಮರ ಕಥೇಲಿ ಗಣೇಶನ ಪೂಜೆ ಯಾಕೆ ಅಂತ ಗಲಾಟೆ ಮಾಡಬೇಡಿ. ನಿಮ್ಮ ಗಲಾಟೆ ಎಂಬ ವಿಘ್ನ ದೂರ ಮಾಡೋದಕ್ಕೇ ನಾವು ಗಣೇಶನ ಪೂಜೆ ಮಾಡ್ತಾ ಇರೋದು. ಇದು ಹೇಳಿ ಕೇಳಿ ಕಳ್ಳರ ಕಥೆ. ನಮ್ಮ ಗಣೇಶ ಶಿಷ್ಟಪಾಲಕ, ದುಷ್ಟ ಶಿಕ್ಷಕ. ಅಂದರೆ ಶಿಷ್ಟರಿಗೆ ಪಾಲಕ ಅಂದರೆ ಪೇರೆಂಟನೋಪಾದಿಯಲ್ಲೂ ದುಷ್ಟರಿಗೆ ಶಿಕ್ಷಕ ಅಂದರೆ ಟೀಚರೋಪಾದಿಯಲ್ಲೂ ಇರತಕ್ಕಂಥವನು. ಅದಕ್ಕೇ ಪ್ರಾರಂಭದಲ್ಲಿ ಅವನ ಪೂಜೆ ಮಾಡಿ ನಾಟಕ ಸುರು ಮಾಡ್ತೀವಿ.

*(ಮೇಳದಲ್ಲಿಯ ಒಬ್ಬನಿಗೆ)*

ಓ ಮಗು ಹೋಗಿ ನೈವೇದ್ಯ ತಗೊಂಬಾ, ಗಣೆಶನ ಅನುಗ್ರಹ ಕೇಳೋಣ.

*(ಆ ಹುಡುಗ ಹೋಗುವನು, ಮಲಗಿರುವ ಗಣೇಶನನ್ನು ಗಮನಿಸಿ.)*

ಇದೇನಪ್ಪಾ, ನಮ್ಮ ನಾಟಕದ ಕಂಟಕ ಹರನಾದ ಬೆನಕೇಶ್ವರನು ಮಲಗೇ ಬಿಟ್ಟಿದ್ದಾನೆ! ಇವನನ್ನ ಎಬ್ಬಿಸೋದು ಹ್ಯಾಗೆ? ಹಾ! ತಿಳಿಯಿತು. ನಮ್ಮ ನಾಟಕದ ನಾಯಕಿ ನಟಿಯ ನೃತ್ಯ ತೋರಿಸ್ತೇನೆ.

*(ಅಷ್ಟರಲ್ಲಿ ಮೇಳದ ಹುಡುಗ ಎರಡೇ ಲಾಡುಗಳಿರುವ ತಟ್ಟೆ ತರುವನು.)*

ಸೂತ್ರಧಾರ : ಯಾಕಯ್ಯಾ ಎರಡೇ ಲಾಡು ತಂದಿದೀಯಾ? ಬಾಕೀದೆಲ್ಲಾ ಎಲ್ಲಿ?

ಹುಡುಗ : ತಟ್ಟೇಲಿ ಎರಡೇ ಇತ್ತು.

ಸೂತ್ರಧಾರ : ತಟ್ಟೇ ತುಂಬಾ ಇತ್ತಲ್ಲೊ. ನೀ ತಿನ್ನಲಿಲ್ಲ ತಾನೆ?

ಹುಡುಗ : ಗಣೇಶನಾಣೆಗೂ ಇಲ್ಲ.

ಸೂತ್ರಧಾರ : ಕಳ್ಳರೇನಾದರೂ ಬಂದಿದ್ದರಾ?

ಹುಡುಗ : ಅವರು ಆ ಕಡೆ ಮೇಕಪ್ ಮಾಡ್ಕೊತಿದಾರೆ.

ಸೂತ್ರಧಾರ : ನಾಟಕದ ಪ್ರಾರಂಭದಲ್ಲೇ ಕಂಟಕ ಸುರುವಾಯ್ತಲ್ಲಪ್ಪಾ!

ಹುಡುಗ : ಲಾಡು ಎರಡೇ ಇದೆ. ನಾಟಕಾ ಮಾಡೋದು? ಬ್ಯಾಡವಾ?

ಸೂತ್ರಧಾರ : ಯಾಕೆ?

ಹುಡುಗ : ನಾಟಕ ಮುಗಿದ ಮೇಲೆ ಹಂಚಿಕೊಂಡು ತಿನ್ನೋದಕ್ಕೆ ಲಾಡೂನೇ ಇಲ್ಲ!

ಸೂತ್ರಧಾರ : ಥೂ ಹೊಟ್ಟೆಬಾಕ,

*(ಗಣೇಶನಿಗೆ ಕೈಮುಗಿದು)*

ಪ್ರಭೋ ಬೆನಕೇಶ್ವರಾ, ಇಷ್ಟರಿಂದಲೇ ಈದಿನ ತೃಪ್ತನಾಗಿ ನಮ್ಮ ನಾಟಕದ ಕಂಟಕಗಳನ್ನು ಪರಿಹರಿಸಿ ಈ ಅಜ್ಞಾನಿ ಬಾಲಕರನ್ನ ಅನುಗ್ರಹಿಸುವಂಥವನಾಗು. *(ಎಲ್ಲರೂ ಎರಡು ಸಾಲಾಗಿ ಕೈಮುಗಿಯುತ್ತಿರುವಾಗ ಹಿಂದಿನಿಂದ ಒಬ್ಬ ಹುಡುಗಿ "ಕಳ್ಳ ಕಳ್ಳ" ಎಂದು ಹೆದರಿ ಓಡಿ ಬಂದು ಮೇಳದಲ್ಲಿ ನಿಂತು ಕೈಮುಗಿಯುತ್ತಾಳೆ. ಸೂತ್ರಧಾರ ಅವಳನ್ನು ಗಮನಿಸಿ.)*

ಸೂತ್ರಧಾರ : ಯಾರಮ್ಮ ನೀನು?

ಒಬ್ಬ : ಓಹೋ ಲಾಡು ಕದ್ದವಳು ಇವಳೇ ಇರಬೇಕು.

ಹುಡುಗಿ : ನಾನಲ್ಲ, ಒಬ್ಬ ಕಳ್ಳ ನನ್ನ ಹಿಡೀಬೇಕಂತ ಬೆನ್ನು ಹತ್ತಿ ಬರ್ತಿದಾನೆ. ದಯವಿಟ್ಟು ಕಾಪಾಡಿ.

ಸೂತ್ರಧಾರ : ಏನಮ್ಮಾ ಸಮಾಚಾರ? ನೀನೆಲ್ಲಿ? ಕಳ್ಳ ಎಲ್ಲಿ? ಸಮಾಧಾನದಿಂದ ಸವಿಸ್ತಾರವಾಗಿ ಕಥನ ಮಾಡಿ ಹೇಳು. ಯಾರು ನೀನು? ನಿನ್ನ ಹೆಸರೇನು?

ಹುಡುಗಿ : ನನ್ನ ಹೆಸರು ಮರ್ಜೀನಾ, ಮುಲ್ಲಾಪುರದ ಮಂತ್ರೀಮಗಳು. ಇಂದಿಗೆ ಆರು ತಿಂಗಳ ಹಿಂದೆ ನಾನು ನಮ್ಮ ತಂದೇ ಜೊತೆ ಪ್ರವಾಸ ಹೊರಟಿದ್ದೆ. ದಾರೀಲಿ ಈ ಕಳ್ಳ ನಮ್ಮನ್ನ ನಿಲ್ಲಿಸಿ ನಮ್ಮ ತಂದೇನ ಕೊಂದ್ಹಾಕಿಬಿಟ್ಟ-ನಾನು ತಪ್ಪಿಸಿಕೊಂಡು ಓಡಿ ಬಂದೆ.

ಸೂತ್ರಧಾರ : ಇಂದಿಗೆ ಆರು ತಿಂಗಳಿಂದ ಹೀಗೇ ಓಡ್ತಾ ಇದ್ದೀಯಮ್ಮಾ?

ಮರ್ಜೀನಾ : ಇಲ್ಲ. ಆಗಲೇ ಓಡಿ ಬಂದು ಈ ಊರಿನಲ್ಲಿ ಒಬ್ಬರ ಮನೇಲಿ ಕೆಲಸಕ್ಕಿದೀನಿ. ಈ ಹೊತ್ತು ನಮ್ಮ ಯಜಮಾನರ ಕುದುರೆ ತಪ್ಪಿಸಿಕೊಂಡು ಹೋಗಿತ್ತು. ನೋಡಿ ಬರೋಣ ಅಂತ ಹೋದರೆ ಆ ಕಳ್ಳ ನನ್ನನೋಡಿ ಬೆನ್ಹತ್ತಿ ಬಂದ. ದೇವಸ್ಥಾನ ಕಂಡಿತು. ಓಡಿ ಬಂದೆ. ಅಕೋ ಬರ್ತಿದಾನೆ, ದಯವಿಟ್ಟು ರಕ್ಷಣೆ ಕೊಡಿ, ಇವರೆ.

ಸೂತ್ರಧಾರ : ಹಾಗಿದ್ದರೆ ಒಂದು ಕೆಲಸ ಮಾಡು: ಆ ಕಳ್ಳ ಬರಲಿ. ನೀನು ನಿನ್ನ ಪಾಡಿಗೆ ಶೃಂಗಾರ ಪೂರ್ಣವಾಗಿ ಹಾವ ಭಾವ ವಿಲಾಸ ವಿಭ್ರಮಗಳಿಂದ ನಮ್ಮ ಪ್ರೇಕ್ಷಕರ ನಯನಗಳಿಗೆ ಮನೋಹರವಾಗಿರುವಂತೆ ನೃತ್ಯ ಮಾಡು. ಇತ್ತ ಕಳ್ಳನ ಕಣ್ಣಲ್ಲಿ ಮಣ್ಣೆರಚಿದ ಹಾಗೂ ಆಯ್ತು. ನಿನ್ನ ರಕ್ಷಣೆಯೂ ಆಯ್ತು. ಇತ್ತ ಮಲಗಿದ ನಮ್ಮ ದೇವರನ್ನ ಎಬ್ಬಿಸಿದ ಹಾಗೂ ಆಯ್ತು, ಏನಂತಿ?

*(ಅಷ್ಟರಲ್ಲಿ ದೂರದಿಂದ ಕುದುರೆ ಸಪ್ಪಳ ಕೇಳಿಸುತ್ತದೆ.)*

ಮರ್ಜೀನಾ : ಆಗಲಿ,

**ನಾsss**

**ಮರ್ಜೀನಾ||**

*(ಹಾಡು ಸುರುವಾಗುತ್ತಿದ್ದಂತೇ ಕಳ್ಳ ಗಹಗಹಿಸಿ ನಗುತ್ತ ಬರುತ್ತಾನೆ. ಮರ್ಜೀನಾ ತಕ್ಷಣ ತಲೆಯ ಪರದೆ ಇಳಿಬಿಟ್ಟು ಅರ್ಧಮುಖ ಮುಚ್ಚಿ ಕೊಳ್ಳುತ್ತಾಳೆ. ಕಳ್ಳ ಮರ್ಜೀನಾಳನ್ನೇ ಹುಡುಕುತ್ತಿದ್ದಾನೆ. ಮೇಳದ ಹುಡುಗರು ಹೆದರಿ ಹಿಂದೆ ಸರಿಯುತ್ತವೆ.)*

ಸೂತ್ರಧಾರ : ಭೋ ಸ್ವಾಮೀ, ಹೊನ್ನಿನ ಚೂರಿ ಧಾರಣ ಮಾಡಿ, ಉನ್ನತನಂತೆ ಕಾಣುವ ಧೀರ ವೀರ ಗಂಭೀರನೇ, ನಿನ್ನ ಮಾತು ನಾಮಾಂಕಿತವೇನು?

ಕಳ್ಳ : ಎಲವೋ ಸೂತ್ರಧಾರ, ಛಪ್ಪನ್ನೈವತ್ತಾರು ದೇಶದ ರಾಜರನ್ನ ಗಪ್ಪನೆ ಮಣ್ಣು ಮುಕ್ಕಿಸಿ, ಅವರ ಅಷ್ಟೈಶ್ವರ್ಯವನ್ನ ಒಪ್ಪಾಗಿ ಚಪ್ಪರಿಸುವ ಕಳ್ಳರ ಕಳ್ಳ, ಸುಳ್ಳರ ಸುಳ್ಳ, ಶ್ರೀಮನ್ಮಹಾ ಚೋರೇಂದ್ರ ಯಾರೆಂದು ಬಲ್ಲೆ?

ಸೂತ್ರಧಾರ : ಚಾಲೀಸ್ ಚೋರೋಂಕಾ ರಾಜಾ, ಹಸನ್!

ಹಸನ್ : ಅವನೇ ನಾನೆಂದು ಭಾವಿಸೈ ಸೂತ್ರಧಾರಾ ಜೋಕೆ ನಿನ್ನ ಉಡುದಾರ!

ಸೂತ್ರಧಾರ : ಸ್ವಾಮೀ, ತಮ್ಮ ದರ್ಶನದಿಂದ ಈ ಹತಭಾಗ್ಯನು ಮೆತ್ತಗಾದನು. ತಾವು ಈ ಸಭಾಮಂದಿರಕ್ಕೆ ಬಂದ ಕಾರಣವೇನು?

ಹಸನ್ : ಸೂತ್ರಧಾರ, ಈ ಹುಡುಗಿ ಯಾರು?

ಸೂತ್ರಧಾರ : ಛೇ ಛೇ! ಇವಳು ನಮ್ಮ ಮೇಳದವಳು; ದೇವರಿಗೆ ನಾಟ್ಯಸೇವೆ ಸಲ್ಲಿಸ್ತಿದ್ದಾಳೆ.

ಹಸನ್ : ನಿಜ ತಾನೆ?

ಸೂತ್ರಧಾರ : ಸುಳ್ಯಾಕ ಹೇಳ್ಲಿ ಸ್ವಾಮಿ?

ಹಸನ್ : ನಾನು ಹುಡುಕೋ ಹುಡುಗಿ ಸಾಮಾನ್ಯ ಹುಡುಗಿ ಅನ್ನಬೇಡ. ಈಗ ಆರು ತಿಂಗಳ ಹಿಂದೆ ಮುಲ್ಲಾಪುರದ ಮಂತ್ರಿ, ಮಗಳ ಜೊತೆ, ಪ್ರವಾಸ ಹೊರಟಿದ್ದ. ದಾರೀಲಿ ನಾವು ಅವನ ಐಶ್ವರ್ಯ ದೋಚಿ ಅವನನ್ನ ಕೊಂದಿವಿ. ಆದರೆ ಅವನ ಮಗಳು ತಪ್ಪಿಸಿಕೊಂಡು ಓಡಿ ಬಿಟ್ಲು. ದಿನಾ ಸಾವಿರಾರು ಕಳ್ಳತನ, ಮೋಸ, ದಗಲ್ಬಾಜಿ ಮಾಡಿದೀನಿ. ಸುತ್ತ ಛಪ್ಪನ್ನೈವತ್ತಾರು ದೇಶದಲ್ಲಿ ನನ್ನನ್ನ ಗುರುತು ಹಿಡಿಯೋ ಒಂದು ನರಪಿಳ್ಳೆಯೂ ಇಲ್ಲ. ಆದರೆ ಆ ಹುಡುಗಿ, ಬೆರಿಕೀದು, ನಾನು ಯಾವ ವೇಷದಲ್ಲಿದ್ದರೂ ಗುರುತು ಹಿಡೀಬಲ್ಲಳು. ಅವಳನ್ನ ಈ ದಿನ ನೋಡಿದೆ. ಮುಗಿಸಿ ಬಿಡೋಣ ಅಂತ ಬಂದಿದ್ದೇನಯ್ಯಾ ಸೂತ್ರಧಾರ ತಿಳೀತಿಲ್ಲೋ ಮಜಕೂರಾ?

ಸೂತ್ರಧಾರ : ತಿಳೀತು ಸ್ವಾಮೀ, ಒಳ್ಳೇ ಕೆಲಸಕ್ಕೇ ಬಂದಿದ್ದೀರಿ. ಆದರೆ ಅವಳು ಇಲ್ಲಿಲ್ಲವಲ್ಲ.

ಹಸನ್ : ಅಡ್ಡೀಯಿಲ್ಲ. ಸೂತ್ರಧಾರ ನನಗೊಬ್ಬ ಕಳ್ಳಬೇಕು.

*(ಈ ಮಾತು ಕೇಳಿಸಿಕೊಂಡು ಗಣೇಶ ಎದ್ದು ಮತ್ತೆ ಮಲಗುವನು.)*

ಸೂತ್ರಧಾರ : ಕಳ್ಳರಿಗೇನು ಕೊರತೆ?

ಒಬ್ಬ ಹುಡುಗ : ಆಗಲೇ ನಮ್ಮಲ್ಲಿ ಯಾರೋ ಲಾಡು ಕದ್ದಿದಾರೆ……

ಹಸನ್ : ಸೂತ್ರಧಾರ, ನನ್ನ ಬಿರುದೇನು ಹೇಳು ನೋಡೋಣ.

ಸೂತ್ರಧಾರ : ಚಾಲೀಸ್ ಚೋರೊಂಕಾ ರಾಜಾ

ಹಸನ್ : ಆದರೆ ನನ್ನಲ್ಲಿರೋದು ಈಗ ಮೂವತ್ತೊಂಬತ್ತೇ ಜನ ಕಳ್ಳರು. ಆ ಬಿರುದು ಉಳೀಬೇಕಾದರೆ ಇನ್ನೊಬ್ಬ ಕಳ್ಳ ಬೇಕಲ್ಲ.

ಸೂತ್ರಧಾರ : ಆದರೆ ಇದು ದೇವಸ್ಥಾನ. ಇಲ್ಲೆಲ್ಲಿ ಕಳ್ಳರು?

ಹಸನ್ : ಎಲೈ ಸೂತ್ರಧಾರ, ಕಳ್ಳರಿಗೂ ಸುಳ್ಳರಿಗೂ ಸುರಕ್ಷಿತ ಸ್ಥಳ ದೇವಸ್ಥಾನ ಅಂತ ಗೊತ್ತಿಲ್ಲವೊ? ನಿಮ್ಮಲ್ಲಿ ಯಾರೋ ಲಾಡು ಕದ್ದಿದ್ದಾರೆ ಅಂದೆ. ಯಾರವನು?

ಸೂತ್ರಧಾರ : ಅವನಿನ್ನೂ ಪತ್ತೆ ಆಗಿಲ್ಲ ಸ್ವಾಮಿ.

ಹಸನ್ : ನಾ ಹೇಳಲೊ ಕಳ್ಳ ಯಾರಂತ?

*(ಎಲ್ಲರನ್ನೂ ಪರೀಕ್ಷಿಸಿ ನೋಡುತ್ತ ಹಸನ್ ಗಣೇಶನ ಹತ್ತಿರ ಹೋಗಿ ನಿಲ್ಲುವನು. ಗಣೇಶ ಎರಡೂ ಕೈಯಿಂದ ಹೊಟ್ಟೆ ಹಿಡಿದುಕೊಂಡಿದ್ದಾನೆ. ಕಳ್ಳ ಅವನನ್ನು ಅಮಾತ ಎತ್ತಿಕೊಂಡು ಹೊರಡುವನು. ಗಣೇಶ ಅಯ್ಯಯ್ಯೋ ಎಂದು ಅಳುತ್ತಿರುವನು.)*

ಸೂತ್ರಧಾರ : ಸ್ವಾಮೀ ಚೋರೋಂಕಾ ರಾಜರೆ, ಇವನು ನಮ್ಮ ದೇವರು ಗಣೇಶ ಸ್ವಾಮಿ. *(ಕಳ್ಳರಸ ಅವನನ್ನಿಳಿಸಿ.)*

ಹಸನ್ : ಏ ನಿಜ ಹೇಳೊ. ಲಾಡು ಕದ್ದವನು ನೀನೇ ತಾನೆ?

ಗಣೇಶ : ನಾನಲ್ಲ.

ಹಸನ್ : ಸುಳ್ಳು ಹೇಳ್ತೀಯಾ? ಹೊಟ್ಟೆ ಮೇಲಿನ ಕೈ ತಗಿ. ತಗಿ
ಮೊದಲು. *(ಗಣೇಶ ಹೊಟ್ಟೆ ಮೇಲಿನ ಕೈ ತೆಗೆಯುವನು. ಲಾಡು ಬೀಳುತ್ತವೆ.)* ನೋಡಿದಿಯಾ ಸೂತ್ರಧಾರ?

ಗಣೇಶ : ಅಲ್ಲಲ್ಲ, ಗಣೇಶನಿಗೆ ದೊಡ್ಡ ಹೊಟ್ಟೆ ಇರಬೇಕಂತ ಅವನ್ನ ಇಲ್ಲಿಟ್ಟುಕೊಂಡಿದ್ದೆ.

ಹಸನ್ : ಆಹಾ! ಇವನು ಕಳ್ಳನೂ ಹೌದು. ಸುಳ್ಳನೂ ಹೌದು. ನನಗೆ ಇವನೇ ಸರಿ. ಹಹ್ಹಹ್ಹಾ! ನಾನೀಗ ಚಾಲೀಸ್‌ಚೋರೋಂಕಾ ರಾಜಾ ಆದೆ!

*(ಎನ್ನುತ್ತಾ ಗಣೇಶನನ್ನು ಹೊತ್ತುಕೊಂಡು ಹೊರಡುವನು. ಗಣೇಶ ಅಯ್ಯಯ್ಯೋ ಎಂದು ಅಳುತ್ತಿದ್ದಾನೆ. ಮೇಳದವರು ಅವಾಕ್ಕಾಗಿ ನಿಂತಿದ್ದಾರೆ. ಏನು ಮಾಡಬೇಕೆಂದು ತಿಳಿಯದೆ ಸೂತ್ರಧಾರ ಒದ್ದಾಡುತ್ತಿರುವ ಗಣೇಶನಿಗೆ ಕೈಮುಗಿಯುತ್ತಾನೆ.)*

# ಪೂರ್ವಾರ್ಧ (ಹಾ ಖುದಾ ಧನ್ಯನು ಧನ್ಯನೊ ನಾನಾ!)

ಮೇಳ : ಇಸ್ಲಾಂಪುರವೆಂಬ ಮುಸ್ಲೀಮರೂರು
ಅಲ್ಲಾನ ಭಕ್ತರು ಅಲ್ಲಿಯ ಜನರು
ಎದ್ದರೆ ಬಿದ್ದರೆ ಅಲ್ಲಾ ಎನ್ನುವರು
ಎದ್ದಾಗ ಶ್ರೀಮಂತರಾದರು ಕೆಲರು

ಆ ಊರಿನಲ್ಲೊಬ್ಬ ಅಲ್ಲೀಬಾಬಾ
ಅಂತಿದ್ದ ಅಲ್ಲಾಗೆ ತೋಬಾ ತೋಬಾ
ಆತನ ಕಂಡರೆ ಅಲ್ಲಾನಿಗಿಷ್ಟ
ಹಾಗಂತ ಕೊಟ್ಟಿದ್ದ ಬಡತನ ಕಷ್ಟ.

ಬಡತನ ತೊಲಗಿಸೊ ದೇವರೆ ಅಲ್ಲಾ
ಅಲ್ಲಾನೆ ಖುದ್ದಾಗಿ ಅಂತಿದ್ದ ಇಲ್ಲಾ
ಪ್ರಾರ್ಥಿಸಿಕೊಂಡನು ದೌಲತ್ತು ಬೇಡಿ
ಅಲ್ಲಾ ಕೊಟ್ಟನು ಮಗನ, ಅವನೊಬ್ಬ ಖೋಡಿ.

ದಿನ ದಿನ ಅಲೀಬಾಬಾ ಕಾಡಿಗೆ ಹೋಗಿ
ಒಣಸೌದೆ ಕಲೆಹಾಕಿ ಹೊರೆಗಳ ಕಟ್ಟಿ
ಅಬ್ಬಾ ಎನ್ನುತ ಕತ್ತೆ ಡುಬ್ಬಿಗೆ ಹೇರಿ
ಉಬ್ಬಿ ಮಾರುತಲಿದ್ದ ಊರೂರು ಕೇರಿ.

ಕತ್ತೆಗಳೆಂದರೆ ಕತ್ತೆಗಳಣ್ಣ
ಸಂಗೀತವೆಂದರೆ ಅವುಗಳಿಗೆ ಪ್ರಾಣ

ಅವುಗಳ ಸಂಗೀತ ಸಭೆಗಳ ಮುಂದೆ
ನಾವೇನು ಹಾಡೇವು ಕುರಿಗಳ ಮುಂದೆ.

*(ಹಾಡು ಸಾಗಿದ್ದಂತೆ ಅಲೀಬಾಬಾ ಕತ್ತೆಗಳ ಸಮೇತ ಬರುತ್ತಾನೆ. ದಟ್ಟಕಾಡು. ಅಲ್ಲೇ ದೊಡ್ಡ ಬಂಡೆಯಿದೆ. ಅಲೀಬಾಬಾ ಸೌದೆ ಸಂಗ್ರಹಿಸುತ್ತಾನೆ. ಕತ್ತೆಗಳು ಸಂಗೀತಗಾರರ ಠೀವಿಯಲ್ಲಿ ಹಾಡಿಕೊಳ್ಳುತ್ತ ಪರಸ್ಪರ ಸ್ಪರ್ಧಿಸುತ್ತ ಬರುತ್ತವೆ. ಮೇಳದ ಹಾಡು ಮುಗಿದಾಗ ಅವುಗಳ ಸ್ಪರ್ಧೆ ಇನ್ನೂ ಜೋರಾಗುತ್ತದೆ. ಅಲೀಬಾಬಾ ಗದರುತ್ತಾನೆ. ಸುಮ್ಮನಾಗುತ್ತವೆ.)*

ಅಲೀಬಾಬಾ : ನನ್ನ ಹೆಸರು ಅಲೀಬಾಬಾ ಅಂತ. ಅಲ್ಲಾನ ಹೆಸರು ಹೇಳಿ ಎಷ್ಟೋ ಜನ ಶ್ರೀಮಂತರಾದರು. ಆದರೆ ಅಲ್ಲಾನ ದೃಷ್ಟಿ ನನ್ನ ಮೇಲೆ ಬೀಳಲೇ ಇಲ್ಲ. ಮನೇ ಮುಂದೆ ಭಿಕ್ಷುಕರು ಬರ್ತಾರೆ: "ಅವರಿಗೆ ಭಿಕ್ಷೆ ನೀಡುವಷ್ಟಾದರೂ ಶ್ರೀಮಂತಿಕೆ ಕೊಡೋ ದೇವರೇ" ಅಂದೆ. "ಮಗನೇ ನೀನು ಪ್ರಾಮಾಣಿಕ. ಆದ್ದರಿಂದ ಬಡವನಾಗೇ ಇರು" ಅಂತಾನೆ! ಅಲ್ಲಾನ ಮನಸ್ಸಿನಲ್ಲಿ ನಾ ಹೀಗೇ ಸೌದೆ ಮಾರತಾನೇ ಸಾಯಬೇಕಂತ ಇದೆಯೋ ಏನೋ! ಅಲ್ಲಾ, ಎರಡು ಸಂಗೀತ ಘರಾಣಾದ ಕತ್ತೆಗಳು

ಕೂಡಿ ಇರಬೇಕಾದರೆ ಶ್ರೀಮಂತಿಕೆ ಪ್ರಾಮಾಣಿಕತೆ ಎರಡೂ ಒಂದೇ ಕಡೆ ಯಾಕಿರಬಾರದು? ಇದಕ್ಕೆ ಮಾತ್ರ ಅಲ್ಲಾ ಉತ್ತರಾ ಕೊಡೋದೇ ಇಲ್ಲ.

ಹೋಗಲಿ ಆ ನನ್ನ ಮಗ ಸಲೀಮ, ಅವನಾದರೂ ದುಡಿದರೆ ಸ್ವಲ್ಪ ಅನುಕೂಲ ಆಗಬಹುದು. ಆದರೆ ಅವನೋ ಸೋಮಾರಿ. "ದೊಡ್ಡವನಾಗಿದ್ದೀಯಾ, ಉದ್ಯೋಗ ಮಾಡೋ ಬೇಕೂಫಾ" ಅಂದರೆ "ಮೊಹಬ್ಬತ್ ಮಾಡತೇನೆ ಬಾಬಾ" ಅಂತಾನೆ! ಈ ಥರ ಬಾಯ್ಬಿಟ್ಟು ಹೇಳಿ ಯಾರಾದರೂ ಪ್ಯಾರ್ ಮಾಡತಾರಾ? ನನ್ನ ಕತ್ತೆಯಂಥಾ ಕತ್ತೆಗಳಿಗೆ ಎಂಥಾ ಮರ್ಯಾದೆ ಇದೆ ಅಂತೀರಿ? ಎರಡೂ ಕಣ್ಣಲ್ಲೇ ಮಾತಾಡಿಕೊಂಡು ಹಾಳುಗೋಡೆ ಹತ್ತಿರ ಹೋಗಿ, ಯಾರಿಲ್ಲ ಅಂತ ಖಾತ್ರಿ ಆದ ಮೇಲೆ ಮೋತಿಗೆ ಮೋತಿ ತಿಕ್ಕುತ್ತವೆ. ಆಗೇನಾದರೂ ನನ್ನ ಕಾಲ ಸಪ್ಪಳ ಕೇಳಿಸಿದರೆ ಸಾಕು, ತಕ್ಷಣ ದೂರ ಸರಿಯುತ್ತವೆ! ಇದಪ್ಪಾ ಮೈರ್ಯಾದೆ ಅಂದರೆ! ಈ ನನ್ನ ಮಗ ನನ್ನ ಮುಂದೇ ಪ್ಯಾರ ಮಾಡತೀನಂತ ಹೇಳೋದೆ? ಅದ್ಯಾರೋ ಮರ್ಜೀನಾ ಅಂತೆ. ಹುಡುಗಿ ಒಳ್ಳೇದೇ. ಪ್ಯಾರ್ ಮಾಡೋದೂ ಒಳ್ಳೇದೇ; ಆರೋಗ್ಯದ ಲಕ್ಷಣ. ಆದರೆ ಮದುವೆ ಆದ ಮೇಲೆ ಬರೇ ಪ್ಯಾರ್ ಪ್ಯಾರಂದರೆ ಹೊಟ್ಟೆ ತುಂಬುತ್ತಾ? ಈಗಿನ ಹುಡುಗರಿಗೆ ಇದು ತಿಳಿಯೋದೇ ಇಲ್ಲ. ಅವರಿಗೆ ಸದ್ಬುದ್ಧಿಕೊಡೋ ಬುದ್ಧಿ ಅಲ್ಲಾಗೂ ಇಲ್ಲ.

*(ಅಷ್ಟರಲ್ಲಿ ಹೆಣ್ಣು ಕತ್ತೆ ಭೈರವಿ ಸಣ್ಣಾಗಿ ಹಾಡತೊಡಗುತ್ತದೆ.)*

ಅಮ್ಮ ಭೈರವಿ ನಿಲ್ಲಸ್ತೀಯಮ್ಮಾ?

*(ಅದು ನಿಲ್ಲಿಸಿ ರಾಕೆನ್ನರೋಲು ಹಾಡತೊಡಗುತ್ತದೆ)*

ನಿಲ್ಲಿಸೋ ಏ ಮುಠ್ಠಾಳ. ಭೈರವಿಗೆ ನಿಲ್ಲಿಸು ಅಂದರೆ ನೀನು ಹಾಡು ಅಂತಲೋ ಅದರರ್ಥ?

*(ಅದೂ ನಿಲ್ಲಿಸಿ ಮರಿಕತ್ತೆ ಸುರು ಮಾಡುತ್ತದೆ.)*

ತಗೊಳ್ಳಪಾ, ಏ ಚಿಲ್ಲರೆ ನಿಲ್ಲಸೊ.

*(ನಿಲ್ಲಿಸುತ್ತದೆ.)*

ಪಾಪ ಇವುಗಳ ಸಂಗೀತ ಯಾರು ಕೇಳಬೇಕು? ಇಲ್ಲಾ ನಾನು ಕೆಳಬೇಕು. ಇಲ್ಲಾ ಅಲ್ಲಾ ಕೇಳಬೇಕು. ನನಗೋ ಕೈತುಂಬ ಕೆಲಸ. ಅಲ್ಲಾಗೋ ಕಣ್ತುಂಬ ನಿದ್ದೆ. ಒಂದಿನ ಬಿಡುವು ಮಾಡಿಕೊಂಡು ಕೇಳಬೇಕು. ಏನೇನು ಹೊಸ ಹಾಡು ಕಲಿತಿವೆಯೊ!

*(ಮೂರೂ ಸೇರಿ ಒದರಲಾರಂಭಿಸುತ್ತವೆ.)*

ಏ ಏ ನಿಲ್ಲಸ್ರೋ ಏ ಕತ್ತೆಗಳ್ರಾ,-

*(ನಿಲ್ಲಿಸುವುದಿಲ್ಲ.)*

ಯಾಕಿವತ್ತು ಹೀಗೆ?

*(ಕುದುರೆ ಗೊರಸಿನ ಸಪ್ಪಳ ಕೇಳಿಸುತ್ತದೆ.)*

ಅರೆ! ಯಾರೋ ಬರ್ತಿರೋ ಹಾಗಿದೆ! ಕುದುರೆ ಕಾಲಿನ ಸಪ್ಪಳ!

*(ಗಾಬರಿಯಾಗುತ್ತಾನೆ. ಭೈರವಿ, ರಾಕೆನ್ನರೋಲು, ಮರಿಕತ್ತೇ-ಎಂದು ಹೆಸರುಗೊಂಡು ಕತ್ತೆಗಳನ್ನು ಕರೆದು ಮರದ ಪೊದೆಯಲ್ಲಿ ಅಡಗುತ್ತಾನೆ. ಕುದುರೆಗಳ ಕಾಲ ಸಪ್ಪಳ ಜಾಸ್ತಿಯಾಗುತ್ತದೆ. ಸ್ವಲ್ಪ ಹೊತ್ತಾದ ಬಳಿಕ ಪೂರ್ವರಂಗದಲ್ಲಿ ಬಂದಿದ್ದ ಕಳ್ಳರಸ ಹಾಗೂ ಅವನ ೪೦ ಜನ ಕಳ್ಳರು ತುಂಬಿದ ಚೀಲ ಹೊತ್ತುಕೊಂಡು ಬರುವರು. ಅವರಲ್ಲಿ ಗಣೇಶನೂ ಇದ್ದಾನೆ. ಎಲ್ಲರೂ ಬಂದದ್ದು ಖಾತ್ರಿಯಾದ ಮೇಲೆ ಕಳ್ಳರಸ ಅಲ್ಲಿದ್ದ ದೊಡ್ಡ ಬಂಡೆಯ ಮುಂದೆ ನಿಂತು ಜೋರಾಗಿ)*

**"ಖುದಾ ಕಾ ಕಸಂ**
**ಹಸನ್ ಕಾ ಹುಕುಂ**
**ಖುಲ್ ಜಾ ಸೇಸಮಿ"**

*(ಎನ್ನುತ್ತಾನೆ. ಬಂಡೆ ಭಯಂಕರ ಸಪ್ಪಳ ಮಾಡುತ್ತಾ ತೆರೆದುಕೊಳ್ಳುತ್ತದೆ. ಹಸನ್ ಉಳಿದವರಿಗೆಲ್ಲ ಒಳನುಗ್ಗಲು ಸನ್ನೆ ಮಾಡುತ್ತಾನೆ. ಕೊನೆಯಲ್ಲಿ ಎಲ್ಲರೂ ಒಳ ಹೋದ ಮೇಲೆ ಸುತ್ತ ಯಾರೂ ಇಲ್ಲದ್ದನ್ನು ನೋಡಿ. ತಾನೂ ಒಳಹೋಗಿ)*

**"ಬಂದ್ ಹೋ ಜಾ ಸೇಸಮಿ"**

*(ಎನ್ನುತ್ತಾನೆ. ಬಂಡೆ ಮುಚ್ಚಿಕೊಳ್ಳುತ್ತದೆ. ಅಲೀಬಾಬಾ ಕಂಠಪಾಠ ಮಾಡುವಂತೆ "ಖುದಾ ಕಾ ಕಸಂ ಹಸನ್ ಕಾ ಹುಕುಂ……………… ಎನ್ನುತ್ತಾ ಅದನ್ನೇ ವಟಗುಟ್ಟುತ್ತಾನೆ. ಅಷ್ಟರಲ್ಲಿ ಮರಿಕತ್ತೆ ಕಿರಚಬೇಕೆಂಬಷ್ಟರಲ್ಲಿ ಅಲೀಬಾಬಾ ಅದರ ಬಾಯಿ ಮುಚ್ಚುತ್ತಾನೆ. ತುಸು ಹೊತ್ತಾದ ಮೇಲೆ ಬಂಡೆ ಮತ್ತೆ ತೆರೆಯುತ್ತದೆ. ಒಳಗಡೆಯಿಂದ ಕಳ್ಳರಸ ಹಸನ್‌ಬರುತ್ತಾನೆ. ಕಳ್ಳರು ಅವನನ್ನು ಅನುಸರಿಸುತ್ತಾರೆ. ಹಸನ್ ಮತ್ತೆ)*

**"ಬಂದ್ ಹೋ ಜಾ ಸೇಸಮಿ"**

*(ಎನ್ನುತ್ತಾನೆ. ಬಂಡೆ ಮುಚ್ಚಿಕೊಳ್ಳುತ್ತದೆ. ಹಸನ್ ಸಂತೋಷದಿಂದ ಗಹಗಹಿಸಿ ನಗುತ್ತ ಹೊರಡುತ್ತಾನೆ. ಉಳಿದವರು-)*

**ಒಳ್ಳೆ ಸಮಯ ಒಳ್ಳೆ ಸಮಯ**
**ಒಳ್ಳೆ ಸಮಯವು!**
**ಕಳ್ಳತನವ ಮಾಡಲಿಕ್ಕೆ**
**ಒಳ್ಳೆ ಸಮಯವು||**

*(ಎಂದು ಹಾಡುತ್ತ ಮರೆಯಾಗುತ್ತಾರೆ. ಕುದುರೆಗಳ ಸಪ್ಪಳ ಮಾಯವಾಗುತ್ತದೆ. ಅಲೀಬಾಬಾ ಮೆಲ್ಲಗೆ ಹೊರಬರುತ್ತಾನೆ).*

ಅಲೀಬಾಬಾ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**
**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

*(ಮೇಳ ಇದನ್ನು ರಿಪೀಟ್‌ಮಾಡುತ್ತದೆ.)*

ದಡಿಯರು ಇವರ್ಯಾರೊ ಏನೆಂಥ ಮಂದಿ
ಒಬ್ಬೊಬ್ಬ ಒಂದೊಂದು ಕೊಬ್ಬಿದ ಹಂದಿ
ಕಳ್ಳರು ಬಂದರು ಸುಳ್ಳರು ಬಂದರು
ಕದ್ದುಕೊಂಬಂದರು ಏನೇನೊ ತಂದರು||

ಕತ್ತೆಯೇನಾದರು ಅಂದಿದ್ದರೆ ಕಿಮಕ್
ನನ್ನ ಜೀವಾ ಅಲ್ಲೆ ಕಚಕ್ ಕಚಕ್!
ನನ್ನನ್ನ ಕತ್ತೇನ್ನ ಬಿಸಮಿಲ್ಲಾ ಮಾಡಿ
ಪಾಪ ಮರಿ ಕತ್ತೇನ್ನ ಚಟ್ನೀಯ ಮಾಡಿ||

ತಿಂತಿದ್ದರಲ್ಲಾ ದೊಡ್ಡವನೊ ದೇವಾ
ಉಳಿಸಿದೆಯಲ್ಲಾ ನಾಲ್ವರ ಜೀವಾ||

ಮೇಳ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**
**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

ಅಲೀಬಾಬಾ : **ತಲಿನೋಡು ಕಸಬರಿಗೆ ಹುಲ್ಲೀನ ಹುಬ್ಬು**
**ಕಾಗೆ ಕೂತಂಗಿತ್ತು ಆ ಮೂಗಿನುಬ್ಬು**
**ಹಲ್ಲೆಂಬೊ ಗರಗಸ ಮತ್ತೆರಡು ಕೋರೆ**
**ಕಣ್ಣೊಳಗೊಂದೊಂದು ಹದನಾದ ಚೂರಿ||**

**ಹೊತ್ತು ತಂದದ್ದನ್ನ ಎತ್ತಿ ಇಟ್ಟರು ಒಳಗೆ**
**ಏನು ಇದ್ದಿರಬಹುದು ಈ ಗವಿಯ ಒಳಗೆ?**
**ಅಲ್ಲಾನ ಹೆಸರಿನಲ್ಲಿ ಒಳಗೆ ಹೋದರೆ ಹೇಗೆ**
**ಭಯ ಬರುವುದೇನೋ ನಿಜ ಕಳ್ಳರ ನೆನೆದರೆ-**

*(ಸುತ್ತ ಯಾರೂ ಇಲ್ಲದನ್ನು ಖಾತ್ರಿ ಮಾಡಿಕೊಂಡು)*

**ಹ್ಯಾಗು ಚೋರರು ಬೇಗ ಹಿಂದಿರುಗಲಾರರು**
**ಮೇಲೆ ಅಲ್ಲಾ ಉಂಟು ಕೆಳಗೆ ಕತ್ತೆಗಳುಂಟು**

*(ಬಂಡೆಯ ಬಳಿಗೆ ಅನುಮಾನಿಸುತ್ತಾ ಹೋಗಿ, ನಿರ್ಧರಿಸಿ)*

**ಖುದಾ ಕಾ ಕಸಂ**
**ಹಸನ್ ಕಾ ಹುಕುಂ**
**ಖುಲ್ ಜಾ ಸೇಸಮಿ**

ಮೇಳ : **ಖುಲ್ ಜಾ ಸೇಸಮಿ**

*(ಬಂಡೆ ತೆರೆಯುತ್ತದೆ. ಬಯದಲ್ಲೇ ಒಳಗೆ ಹೋಗುತ್ತಾನೆ. ಕತ್ತೆಗಳೂ ಬೆನ್ನುಹತ್ತಿ ಹೋಗುತ್ತವೆ. ಈಗ ದೃಶ್ಯ ಬದಲಾಗುತ್ತದೆ. ದೊಡ್ಡ ಗವಿ. ಅಲ್ಲಲ್ಲಿ ಕಳ್ಳರು ಕದ್ದಿಟ್ಟ ಶ್ರೀಮಂತಿಕೆ ಯದ್ವಾತದ್ವಾ ಹರಡಿಕೊಂಡು ಬಿದ್ದಿದೆ.)*

ಅಲೀಬಾಬಾ : **ಹಾಯಲ್ಲಾ ಚಿನ್ನ! ಹೇರಳ ರನ್ನ!**
**ಅಸಲಿ ಆಭರಣ ಹಿಗ್ಯಾವು ಕಣ್ಣ**
**ಹೊಳೇಯುವ ಮುತ್ತ ರಾಶಿ ದೌಲತ್ತ**
**ಕತ್ತೀನ ಹಾರ ರತ್ನದ ಹಾರ||**

ಮೇಳ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**
**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

ಅಲೀಬಾಬಾ : **ನೂರಾರು ಮೂಟೆಯ ನಾಣ್ಯ ಬಂಗಾರ**
**ಲೆಕ್ಕವಿಲ್ಲದ ಬೆಳ್ಳಿ ಎತ್ತರ ಭಾರ||**

**ಏನ ನೋಡಲಿ ಕಣ್ಣು ಸಾಲsವು ಮತ್ತೆ**
**ಎಷ್ಟಂತ ಒಯ್ಯಲಿ ಬರಿ ಮೂರೆ ಕತ್ತೆ||**

**ಕುಸಿದು ಬಿತ್ತೊ ನಿನ್ನ ಹೆಚ್ಚಿನ ಕರುಣಾ**
**ಹಾ ಖುದಾ ಧನ್ಯನು ಧನ್ಯನೋ ನಾನಾ||**

ಮೇಳ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**
**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

ಅಲೀಬಾಬಾ : **ಬಾರಮ್ಮಾ ಭೈರವಿ, ಬಾರೊ ರಾಕಣ್ಣಾ**
**ಬಾ ನನ್ನ ಮರಿಕತ್ತೆ ಬಾ ನನ್ನ ಚಿನ್ನ**

ಬೆಳ್ಳಿ ಬೇಡ, ಚಿಲ್ಲರೇನೂ ಬೇಡ, ಭಾರವಾಗುತ್ತದೆ. ಆಭರಣ ಬೇಡ, ಯಾರ್ಯಾರ್ದಿದೆಯೊ! ಆದರೂ ಒಂದೆರಡಿರಲಿ, ಬೇಗಮ್‌ಗೆ, ಭೈರವಿಗೆ. ಈ ಹಾರ ಮಾತ್ರ ಮರಿಕತ್ತೆಗೆ, ಸಾಕು. ಉಳಿದದ್ದೆಲ್ಲ ಚಿನ್ನದ ನಾಣ್ಯದ ಮೂಟೆ!

*(ಕತ್ತೆಗಳ ಮೇಲೆ ಅವಸರದಿಂದ ಬಂಗಾರದ ನಾಣ್ಯದ ಮೂಟೆ ಹೇರುವನು)*

ಭೈರವಿಗೆ ಎರಡು ಮೂಟೆ, ರಾಕಣ್ಣಂಗೆರಡು, ಮರಿಗೊಂದು, ನನಗೊಂದು ಸಾಕು. ಅತಿಯಾಸೆ ಗತಿಗೇಡು. ಬನ್ನಿ ಬನ್ನಿ………………

*(ನಾಣ್ಯದಮೂಟೆಯ ಮೇಲೆ ಸೌದೆ ಹೇರಿ*
***ಖುದಾ ಕಾ ಕಸಂ***
***ಹಸನ್‌ಕಾ ಹುಕುಂ***
***ಖುಲ್‌ಜಾ ಸೇಸಮಿ***
*ಎಂದು ಕೂಗುತ್ತಾನೆ. ಬಂಡೆ ತೆರೆದೊಡನೆ ಹೊರಡುತ್ತಾನೆ.)*

## ಪೂರ್ವಾರ್ಧ (ಹಾ! ನಾನೆ ಮದುವಣಿಗ ಕುದುರೆಯ ಮೇಲೆ)

*(ಊಟದ ತಟ್ಟೆಯ ಮುಂದೆ ಕೂತು ಸಲೀಂ ಗೊಣಗುತ್ತ ಒಂದು ಕವಿತೆ ಬರೆಯುತ್ತಿದ್ದಾನೆ. ತಾಯಿ ಅಂದರೆ ಅಲೀಬಾಬಾನ ಬೇಗಂ ಮುಂದೆ ಕೂತಿದ್ದಾಳೆ.)*

ಸಲೀಂ : **ಮರ್ಜೀನಾ! ನಿನ್ನ ಮರೆಯಲಾರೆ ನಾ**
**ನೀ ಎನ್ನ ಹೃದಯ ಕವನಾ| ಹೇಳಬೇಡ ನನನಾ**
**ಮುಗುಳು ನಗು ನೀನಾ| ಧನ್ಯನು ನಾನಾ.....**

ಬೇಗಂ : ಲೋ ಬಾಯ್ಮುಚ್ಚೊ,

ಸಲೀಂ : ಅಪ್ಪನ ಕತ್ತೆ ಕಿರಿಚಿದರೆ ಕೇಳಿಸಿಕೊಳ್ಳುತ್ತ; ನಾ ಹಾಡಿದರೆ ಬಾಯ್ಮುಚ್ಚು ಅಂತೀಯಲ್ಲಮ್ಮಾ……..

ಬೇಗಂ : ಕತ್ತೆ ದುಡಿಯುತ್ತವೆ. ದುಡಿಯೋರು ಏನು ಹಾಡಿದರೂ ಚಂದ. ನೀನಿದ್ದೀ ನೋಡು, ಬೆಳಿಗ್ಗೆ ಊಟ ಮಾಡಿದವನೇ ಫರಾರಿ. ಮತ್ತೆ ಊಟಕ್ಕೇ ಹಾಜರಿ. ಎಲ್ಲೋ ಹಾಳಾಗಿ ಹೋಗಿದ್ದೆ ಅಂದರೆ……

ಸಲೀಂ : ಕೆಲಸ ಹುಡುಕಲಿಕ್ಕೆ-

ಬೇಗಂ : ಅಂತಿ. ಯಾಕೋ ಸುಳ್ಳು ಹೇಳ್ತಿ? ಆ ಗುಲಾಮಳು ಅಡ್ಡಾಡೋ ರಸ್ತೇಲಿ ಬಾಯಿ ತರಕೊಂಡು ನಿಂತಿದ್ದೇ-ಅನ್ನು.

ಸಲೀಂ : ಬಾಯಿ ತೆರಕೊಂಡ ನಿಂತಿದ್ದೆ.

ಬೇಗಂ : ಪಾಪ, ನಿನ್ನ ತಂದೆ ಬೆಳಿಗ್ಗೆ ಹೋದವರು ಇನ್ನೂ ಬರಲಿಲ್ಲ, ನಿನಗೇನಾದರೂ ಕಾಳಜಿ ಇದೆಯಾ? ಒಂದಿಷ್ಟಾದರೂ ಮನೇ ಜವಾಬ್ದಾರಿ ಇದೆಯೇನೋ ನಿನಗೆ?

ಸಲೀಂ : ಇದೆ.

ಬೇಗಂ : ಏನಿದೆಯೋ?

ಸಲೀಂ : ನಿನಗೆ ವಯಸ್ಸಾಯ್ತು. ದುಡಿದು ದುಡಿದು ಹಣ್ಣಾದೆ. ನಿನಗೆ ಒಬ್ಬ ಸೊಸೆ ಬೇಕು. ಸೊಸೇನ ತರೋದಕ್ಕೆ ಪ್ಯಾರ ಮಾಡ್ತಾ ಇದೀನಮ್ಮ. ಜವಾಬ್ದಾರಿ ಇಲ್ಲದೇ ಇಷ್ಟೆಲ್ಲ ಮಾಡ್ತೀನಾ?

ಬೇಗಂ : ಆಹಾಹಾ ಮಗರಾಯಾ! ಪ್ಯಾರ್ ಪ್ಯಾರಂದರೆ ಹೊಟ್ಟೆ ತುಂಬುತ್ತೇನೊ?

ಸಲೀಂ : ಅವಳನ್ನ ನೋಡ್ತಾ ಇದ್ದರೆ ಹಸಿವೇ ಆಗೋದಿಲ್ಲವಮ್ಮಾ!

ಬೇಗಂ : ಮತ್ಯಾಕೊ ಊಟಾ ಮಾಡ್ತಿ?

ಸಲೀಂ : ಈಗವಳು ಎದುರಿಗಿಲ್ಲವಲ್ಲ, ಹಸಿವಾಯ್ತು.

ಬೇಗಂ : ಅವಳನ್ನ ಕರೆತಂದು ಏನೋ ಹೊಟ್ಟಗ್ಹಾಕ್ತಿ?

ಸಲೀಂ : ಅವಳು ಎದುರಿಗಿದ್ದರೆ ನನಗಂತೂ ಹಸಿವಾಗೋದಿಲ್ಲ, ನನ್ನ ಪಾಲಿನ ಅನ್ನ ಅವಳಿಗೇ ಹಾಕು.

ಬೇಗಂ : ದಡ್ಡ ನನ ಮಗನೆ.

ಸಲೀಂ : ನಿಜ.

ಬೇಗಂ : ಅವಳೊ ಗುಲಾಮಳು. ಆ ಗುಲಾಮಳ ಗುಲಾಮ ಆಗೀಯಲ್ಲೋ ಆಗಲೇ.

ಸಲೀಂ : ಗುಲಾಮಳಲ್ಲಮ್ಮ ಅವಳು, ಯಾವುದೋ ಮಂತ್ರೀ ಮಗಳಂತೆ! ಅವರಪ್ಪ ಬದುಕಿದ್ದರೆ ನಾನು ಮಂತ್ರೀ ಅಳಿಯ ಆಗಿರ್ತಿದ್ದೆ.

ಬೇಗಂ : ಅಂಥವಳು ನಿನ್ನನ್ನ ಮದುವೆ ಆಗ್ತಾಳೇನೋ ಬೇಕೂಫಾ?

ಸಲೀಂ : ಆಗದೇನಮ್ಮಾ? ಮದುವ್ಯಾಗತೀನಂತ ನಿನ್ನೆ ಮಾತು ಕೊಟ್ಟಿದ್ದಾಳೆ-ಕನಸಿನಲ್ಲಿ.

ಬೇಗಂ : ಥೂ ಹಾಳಾದವನೇ!
*(ಹೊರಗಿನಿಂದ ಬಾಗಿಲು ಬಡಿದ ಸದ್ದು. ಬೇಗಂ-ಎಂಬ ಕರೆ ಕೇಳಿಸುತ್ತದೆ.)*
ಹೋಗೋ, ನಿಮ್ಮ ತಂದೆ ಬಂದರೂಂತ ಕಾಣಸತ್ತೆ. ಬಾಗಿಲ ತಗೀ ಹೋಗು.

ಸಲೀಂ : *(ಓಡಿಹೋಗಿ ತಿರುಗಿ ಬಂದು)* ಅಮ್ಮಾ ಅಪ್ಪನಿಗೆ ಹೇಳಮ್ಮಾ…….

ಬೇಗಂ : ಹೋಗಿ ಬಾಗಿಲು ತಗೀಯೋ…….

ಸಲೀಂ : ತಗೀತೀನಮ್ಮಾ. ಹ್ಯಾಗೂ ಖಾಸೀಂ ಚಾಚ್ಯಾ ಹತ್ತಿರ ಅವಳಿರೋದು. ನಾಳೆ
ನೀನು, ಅಪ್ಪಾ ಹೋಗಿಬಿಟ್ಟು………….

ಅಲೀಬಾಬಾ : *(ಹೊರಗಿನಿಂದ)* ಬೇಗಂ ಬಾಗಿಲು ತಗಿ.

ಬೇಗಂ : ಬೇಗ ಹೋಗೊ.

ಸಲೀಂ : ಹೋಗತೀನಮ್ಮಾ, ನಾಳೆ ನೀವಿಬ್ಬರೂ ಹೋಗಿ ನಮ್ಮ ಮದುವೇ ವಿಚಾರಾನ
……….

ಅಲೀಬಾಬಾ : *(ಹೊರಗಿನಿಂದ)* ಬೇಗಂ ಏನಾಗಿದೆ ನಿನಗೆ? ಬೇಗ ಬಾಗಿಲು ತಗಿ.

ಬೇಗಂ : ಹಾಳಾದವನೇ………………..

*(ಎನ್ನುತ್ತ ತಾನೇ ಬಾಗಿಲು ತೆಗೆಯಲಿಕ್ಕೆ ಹೊರಡುತ್ತಾಳೆ. ಸಲೀಂ ತಾನೇ ಮುಂದೆ ಹೋಗಿ ಬಾಗಿಲು ತೆಗೆಯುತ್ತಾನೆ. ಅಲೀಬಾಬಾ ಅವಸರವಾಗಿ ಮೂರೂ ಕತ್ತೆಗಳನ್ನ ದೂಡಿಕೊಂಡೇ ಒಳಬರುತ್ತಾನೆ. ಒಳಬಂದವನೇ ಮೂಟೆ ಇಟ್ಟು ಮತ್ತೆ ಬಾಗಿಲಿಕ್ಕುತ್ತಾನೆ. ಓಡಿ ಬಂದು ಬೇಗಂ ಬೇಗಂ ಎನ್ನುತ್ತ ಮೂಟೆಯೊಳಗಿನ ಬಂಗಾರದ ನಾಣ್ಯಗಳನ್ನು ಸುರಿಯುತ್ತಾನೆ. ಬೇಗಂ ಹುಚ್ಚಿಯ ಹಾಗೆ "ಮಾ ಶಾ ಅಲ್ಲಾ!" ಎನ್ನುತ್ತ ಕುಣಿಯುತ್ತ, ನಾಣ್ಯಗಳನ್ನು ಎತ್ತೆತ್ತಿ ಚೆಲ್ಲುತ್ತ, ಮೈಮೇಲೆ ಸುರಿದುಕೊಳ್ಳುತ್ತಾಳೆ. ಸಲೀಂ ಆಶ್ಚರ್ಯದಿಂದ ತಂದೆಗೆ ಕತ್ತೆಯ ಮೇಲಿನ ಮೂಟೆ  ಇಳಿಸಲು ಸಹಾಯ ಮಾಡುತ್ತಿದ್ದಾನೆ. ಸಂತೋಷದಿಂದ ವಿಚಿತ್ರವಾಗಿ ಅರಳಿದ ಮುಖದೊಂದಿಗೆ ಬೇಗಂ ಅಲೀಬಾಬಾನ ಬಳಿಗೆ ಓಡಿ ಬರುತ್ತಾಳೆ.)*

ಬೇಗಂ : ರೀ ರೀ ಇದೆಲ್ಲಾ ಅಸಲಿ ಬಂಗಾರ ತಾನೆ?

ಸಲೀಂ : ನಕಲೀ ಆದರೂ ನಮಗೆಲ್ಲಿ ಸಿಗುತ್ತಿತ್ತಮ್ಮಾ?

ಅಲೀಬಾಬಾ : ಅಸ್ಸಲ್ ಸೋನಾ, ಅಪ್ಪಟ ಬಂಗಾರ!

ಬೇಗಂ : ರೀ ರೀ ಇದೆಲ್ಲಾ ನಿಜ ಏನ್ರಿ? ಕನಸಲ್ಲ ತಾನೆ?

ಅಲೀಬಾಬಾ : ಹುಚ್ಚಿ.

ಬೇಗಂ : ಇದೆಲ್ಲಾ ಎಲ್ಲಿ ಸಿಕ್ಕಿತು?

ಸಲೀಂ : ಹ್ಯಾಗೆ ಸಿಕ್ಕಿತು?

ಬೇಗಂ : ಯಾರು ಕೊಟ್ಟರು?

ಅಲೀಬಾಬಾ : ಅಲ್ಲಾ ಕೊಟ್ಟ, ನಾ ತಂದೆ.

*(ಮುಂದಿನ ಹಾಡನ್ನು ಒಬ್ಬೊಬ್ಬರು ಹುಚ್ಚುಚ್ಚಾಗಿ ಕುಣಿಯುತ್ತಾ ಹೇಳುತ್ತಿದ್ದರೆ ಉಳಿದವರು ನಾಣ್ಯ ಸುರಿಸುರಿದು ಖುಶಿಪಡುತ್ತಾರೆ. ಮೇಳದ ಪಲ್ಲವಿಗೆ ಮೂವರೂ ಸೇರಿ ಕುಣಿಯುತ್ತಾರೆ.)*

ಬೇಗಂ : **ಇಲ್ಲಿಲ್ಲಾ ಅಲ್ಲಲ್ಲಾ ನಿನ್ನಂಥೋರಿಲ್ಲಾ**
**ನಿನ್ನ ಕರುಣೆಗೆ ಇನ್ನು ಸರಿಸಮನಿಲ್ಲಾ||**
**ದೊಡ್ಡಮನೆ! ಆಸ್ತಪಾಸ್ತಿ!**
**ಕೈಗೊಂದಾಳು ಮನೇತುಂಬ ಕಾಳು!**
**ಕತ್ತಿನ ತುಂಬ ಥರಾವರಿ ಸರ**
**ಮೈತುಂಬೆಲ್ಲಾ ಮಣ ಬಂಗಾರ!**
**ಚಿನ್ನದ ಬಳೆ ಬಳೆ ಮೊಲಕೈತನಕ**
**ಕಾಲಿಗೆ ನೂಪುರ ಥೈ ಥೈ ಥಕ ಥಕ**
**ವಜ್ರದ ಮುಗುತಿ ಮಾಡಿಸ್ಕೊತೀನಿ**
**ಖಾಸೀಂ ಹೇಂತೀಗೆ ಮೂಗು ಮೂರೀತೀನಿ!**

ಮೇಳ : **ಇಲ್ಲಿಲ್ಲಾ ಅಲ್ಲಲ್ಲಾ ನಿನ್ನಂಥೋರಿಲ್ಲಾ**
**ನಿನ್ನ ಕರುಣೆಗೆ ಇನ್ನು ಸರಿಸಮನಿಲ್ಲಾ||**
ಸಲೀಂ : **ಬಾಜಾ ಬಜಂತ್ರಿಯ ಭಾರೀ ಮೆರವಣಿಗೆ**
**ತುತ್ತೂರಿ ಢಂ ಡೋಲು ದಿಬ್ಬಣ ಜೊತೆಗೆ**
**ದಿಬ್ಬಣ ಹೊರಟಿದೆ ಮರ್ಜೀನಾ ಬಳಿಗೆ**
**ಹುಡಿಗೇರ ಕುಡಿನೋಟ ಬರಿ ನನ್ನ ಕಡೆಗೆ**
**ಗೆಳೆಯರು ನಗುತಾರೆ ಹೊಟ್ಟೆ ಕಿಚ್ಚೊಳಗೆ**
**ಹಾ ನಾನೆ ಮದುವಣಿಗ ಕುದುರೆಯ ಮೇಲೆ**

ಅಲೀಬಾಬಾ : *(ತಿದ್ದುವಂತೆ)* ಕುದುರೆ ಮೇಲಲ್ಲ ಮಗು, ಕತ್ತೇ ಮೇಲೆ ಅನ್ನು.

ಸಲೀಂ : ಮದುವೆ ಮೆರವಣಿಗೆ ಕತ್ತೇ ಮೇಲೆ ಹ್ಯಾಗಪ್ಪಾ?

ಅಲೀಬಾಬಾ : ಹ್ಯಾಗೇನು? ದೇವರಂಥಾ ಕತ್ತೆ! ಅವು ಹೊತ್ತು ತಂದದ್ದರಿಂದ ತಾನೇ ನಿನಗಿಂಥಾ ಅದ್ದೂರಿ ಮದುವೆ? ಬೇಕಾದರೆ ಗಂಡು ಕತ್ತೇ ಮೇಲೆ ಕೂತುಕೊ. ಆದರೆ ಮದುವೆ ಮೆರವಣಿಗೆ ಮಾತ್ರ ಕತ್ತೆ ಮೇಲೇನೇ.

ಸಲೀಂ : ಕತ್ತೇ ಮೇಲೆ!

ಬೇಗಂ : ಸುಳ್ಳಲ್ಲ ಮಗಾ, ಒಂದು ಕಣ್ಣು ಮುಚ್ಚಿ ನೋಡಿದರೆ, ನಮ್ಮ ಕತ್ತೆ ಕೂಡ
ಕುದುರೆ ಥರ ಕಾಣುತ್ತೆ ಗೊತ್ತಾ?

ಮೇಳ : **ಅಲ್ಲಲ್ಲಾ ಇಲ್ಲಿಲ್ಲಾ ನಿನಂಥೋರಿಲ್ಲಾ**
**ನಿನ್ನ ಕರುಣೆಗೆ ಇನ್ನು ಸರಿಸಮನಿಲ್ಲಾ||**

ಅಲೀಬಾಬಾ : **ಮಕ್ಕಾಕ ಹೋಗತೀನಿ ಮದೀನಾ ನೋಡತೀನಿ**
**ತಿರುಕರಿಗೆ ಕೈತುಂಬ ದಾನ ಮಾಡತೀನಿ**

ಸಲೀಂ : ಕತ್ತೇ ಮೇಲೆ ಮದುವೆ ಮೆರವಣಿಗೆ ಸಾಧ್ಯವಿಲ್ಲಾ ಅಂದೆ!

ಅಲೀಬಾಬಾ : ಹಾಗಿದ್ದರೆ ನಿನಗೆ ಮದುವೇನೇ ಇಲ್ಲಾ ಅಂದೆ.
**ಕತ್ತೆಗೆ ಜರತಾರಿ ಹಗ್ಗ ತರತೀನಿ**
**ಚಿನ್ನದ ಗೂಟಕ್ಕೆ ಕಟ್ಟಿ ಹಾಕ್ತೀನಿ**

ಮೇಳ : **ಇಲ್ಲಿಲ್ಲಾ ಅಲ್ಲಲ್ಲಾ ನಿನ್ನಂಥೋರಿಲ್ಲಾ**
**ನಿನ್ನ ಕರುಣೆಗೆ ಇನ್ನು ಸರಿಸಮನಿಲ್ಲಾ||**

ಸಲೀಂ : (ನಿರಾಸೆಯಿಂದ) ಸ್ಸssರಿ.

ಅಲೀಬಾಬಾ : ಆಯ್ತಲ್ಲ. ಹೀಗೇ ಕುಣಿದಾಡ್ತೀರೊ? ಒಳಗಡೆ ಇಡ್ತೀರೊ? ಯಾರಾದರೂ ನೋಡಿ ರಾಜರಿಗೆ ಸಿದ್ದಿ ಮುಟ್ಟಿಸಿದರೆ ಮುಗಿದ್ಹೋಯ್ತು ನಮ್ಮ ಕಥೆ.

ಬೇಗಂ : ಹೌದಲ್ಲ! ಬೇಗನೇ ಪೆಟ್ಟಿಗೆ ತರತೀನಿ.

ಸಲಿಂ : ಎಣಿಸಿಡೊಣ.

ಅಲೀಬಾಬಾ : ಎಣಿಸಲಿಕ್ಕಾಗತ್ತಾ? ಎಣಿಸೋವಷ್ಟರಲ್ಲಿ ಯಾರಾದರೂ ಬಂದರೆ?.....

ಬೇಗಂ : ಹಾಗಾದರೆ ಅಳೆದಿಟ್ಟಿರೋಣ.

ಅಲೀಬಾಬಾ : ಅದೇ ಸರಿ. ಪಾವು ತತಾ

ಬೇಗಂ : ನಮ್ಮಲ್ಲಿಲ್ಲ, ಖಾಸೀಮನ ಮನೇಲಿದೆ. ಇಸ್ಕೊಂಬರ್ತೀನಿ.

ಅಲೀಬಾಬಾ : ಬಾಗಿಲು ಹಾಕಿಕೊಂಡು ಹೋಗು. ಬೇಗನೇ ಬಾ. ಕೇಳಿದರೆ ಏನೋ ರಾಗಿ ಅಳೀತೀನಿ ಅಂತ ಹೇಳು.

*(ಹೋಗುವಳು. ತಂದೆ ಮಗ ನಾಣ್ಯಗಳನ್ನು ಸುರಿಯುತ್ತ ಕನಸು ಕಾಣುತ್ತ ಕೂರುವರು.)*

ಮೇಳ : **ಖುಲ್ ಜಾ ಸೇಸಮಿ**

*(ಬಂಡೆ ತೆರೆಯುತ್ತದೆ. ಬಯದಲ್ಲೇ ಒಳಗೆ ಹೋಗುತ್ತಾನೆ. ಕತ್ತೆಗಳೂ ಬೆನ್ನುಹತ್ತಿ ಹೋಗುತ್ತವೆ. ಈಗ ದೃಶ್ಯ ಬದಲಾಗುತ್ತದೆ. ದೊಡ್ಡ ಗವಿ. ಅಲ್ಲಲ್ಲಿ ಕಳ್ಳರು ಕದ್ದಿಟ್ಟ ಶ್ರೀಮಂತಿಕೆ ಯದ್ವಾತದ್ವಾ ಹರಡಿಕೊಂಡು ಬಿದ್ದಿದೆ.)*

ಅಲೀಬಾಬಾ : **ಹಾಯಲ್ಲಾ ಚಿನ್ನ! ಹೇರಳ ರನ್ನ!**
**ಅಸಲಿ ಆಭರಣ ಹಿಗ್ಗ್ಯಾವು ಕಣ್ಣ**
**ಹೊಳೇಯುವ ಮುತ್ತ ರಾಶಿ ದೌಲತ್ತ**
**ಕತ್ತೀನ ಹಾರ ರತ್ನsದ ಹಾರ||**

ಮೇಳ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**
**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

ಅಲೀಬಾಬಾ : **ನೂರಾರು ಮೂಟೆಯ ನಾಣ್ಯ ಬಂಗಾರ**
**ಲೆಕ್ಕವಿಲ್ಲದ ಬೆಳ್ಳಿ ಎತ್ತರ ಭಾರ||**

**ಏನ ನೋಡಲಿ ಕಣ್ಣು ಸಾಲsವು ಮತ್ತೆ**
**ಎಷ್ಟಂತ ಒಯ್ಯಲಿ ಬರಿ ಮೂರೆ ಕತ್ತೆ||**

**ಕುಸಿದು ಬಿತ್ತೊ ನಿನ್ನ ಹೆಚ್ಚಿನ ಕರುಣಾ**

**ಹಾ ಖುದಾ ಧನ್ಯನು ಧನ್ಯನೋ ನಾನಾ||**

ಮೇಳ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**

**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

ಅಲೀಬಾಬಾ : **ಬಾರಮ್ಮಾ ಭೈರವಿ, ಬಾರೊ ರಾಕಣ್ಣಾ**

**ಬಾ ನನ್ನ ಮರಿಕತ್ತೆ ಬಾ ನನ್ನ ಚಿನ್ನ**

ಬೆಳ್ಳಿ ಬೇಡ, ಚಿಲ್ಲರೇನೂ ಬೇಡ, ಭಾರವಾಗುತ್ತದೆ. ಆಭರಣ ಬೇಡ, ಯಾರ್ಯಾರ್ದಿದೆಯೊ! ಆದರೂ ಒಂದೆರಡಿರಲಿ, ಬೇಗಮ್‌ಗೆ, ಭೈರವಿಗೆ. ಈ ಹಾರ ಮಾತ್ರ ಮರಿಕತ್ತೆಗೆ, ಸಾಕು. ಉಳಿದದ್ದೆಲ್ಲ ಚಿನ್ನದ ನಾಣ್ಯದ ಮೂಟೆ!

*(ಕತ್ತೆಗಳ ಮೇಲೆ ಅವಸರದಿಂದ ಬಂಗಾರದ ನಾಣ್ಯದ ಮೂಟೆ ಹೇರುವನು)*

ಭೈರವಿಗೆ ಎರಡು ಮೂಟೆ, ರಾಕಣ್ಣಂಗೆರಡು, ಮರಿಗೊಂದು, ನನಗೊಂದು ಸಾಕು. ಅತಿಯಾಸೆ ಗತಿಗೇಡು. ಬನ್ನಿ ಬನ್ನಿ……………

*(ನಾಣ್ಯದಮೂಟೆಯ ಮೇಲೆ ಸೌದೆ ಹೇರಿ*

***ಖುದಾ ಕಾ ಕಸಂ***

***ಹಸನ್‌ಕಾ ಹುಕುಂ***

***ಖುಲ್‌ಜಾ ಸೇಸಮಿ***

*ಎಂದು ಕೂಗುತ್ತಾನೆ. ಬಂಡೆ ತೆರೆದೊಡನೆ ಹೊರಡುತ್ತಾನೆ.)*

## ಪೂರ್ವಾರ್ಧ (ಪಾವಿನ ತಳಕ್ಕೆ ಮೇಣ)

*(ಖಾಸೀಮನ ಹೆಂಡತಿ ಫಾತಿಮಾ ಹಾಸಿಗೇ ಮೇಲೆ ಬಿದ್ದುಕೊಂಡು ಒದರಾಡ್ತಿದ್ದಾಳೆ. ಮರ್ಜೀನಾ ಮನೆಗೆಲಸ ಮಾಡುತ್ತಿದ್ದಾಳೆ.)*

ಫಾತಿಮಾ : ಏ ಮುರಗೀ……………. ಬಿಸಿ ನೀರು ಕೂಡೇ.

ಮರ್ಜೀನಾ : ನನ್ನ ಹೆಸರು ಮುರಗೀ ಅಲ್ಲಾ, ಮರ್ಜೀನಾ ಅಂತ.

ಫಾತಿಮಾ : ಮುರಗೀನೊ, ಮರ್ಜೀನಾನೊ………. ನನ್ನ ಗುಲಾಮಳು ನೀನು.

ಮರ್ಜೀನಾ : ನಾ ಮರೆತಿಲ್ಲ.

ಫಾತಿಮಾ : ಮರೀದಿದ್ರೆ ಯಾಕೆ ಬಾಯಿ ಮುಚ್ಚತಾ ಇಲ್ಲ?

ಮರ್ಜೀನಾ : ಯಾಕೆ ಮುಚ್ಚಬೇಕು?

ಫಾತಿಮಾ : ನಾನು ಈ ಮನೆ ಯಜಮಾನಿ.

ಮರ್ಜೀನಾ : ಹೌದು.

ಫಾತಿಮಾ : ನಿನ್ನ ಬಯ್ಯೋದಕ್ಕೆ ನನಗೆ ಅಧಿಕಾರ ಇದೆ.

ಮರ್ಜೀನಾ : ಹೌದು.

ಫಾತಿಮಾ : ಮತ್ತೆ ಯಾಕೆ ಬಾಯಿ ಹಾಕತೀಯೆ?

ಮರ್ಜೀನಾ : ನೀವು ಬಯ್ಯುತ್ತೀರಿ, ಅದಕ್ಕೆ.

ಫಾತಿಮಾ : ನೀ ಹೀಗೆ ಅಡ್ಡಬಾಯಿ ಹಾಕಿದರೆ ಹ್ಯಾಗೆ ಬಯ್ಯೋದು? ಮನೇ ಯಜಮಾನಿ, ಯಾವಾಗಲೂ ಹಾಸಿಗೆ ಮೇಲೇ ಬಿದ್ದಿರತೀನಿ, ಒಂದು ಬೈಗುಳಾನಾದರೂ ಬಯದು ಸಂತೋಷ ಪಡೋಣ ಅಂದರೆ…………….

ಮರ್ಜೀನಾ : ಬೈದು ಬೈದು ನೀವು ಸಂತೋಷ ಪಡರಿ. ಅತ್ತು ಅತ್ತು ನಾ ಸಂತೋಷ
ಪಡತೀನಿ.

ಫಾತಿಮಾ : ಅಳೋದಕ್ಕೆ ನಿನಗೇನೇ ಆದದ್ದು?

ಮರ್ಜೀನಾ : ಬೈಯೋದಕ್ಕೆ ನಿಮಗೇನಾಗಿದೆ?

ಫಾತಿಮಾ : ರೋಗ! ರೋಗ ಬಂದಿದೆಯೇ, ರೋಗಿಷ್ಟರನ್ನ ಹ್ಯಾಗೆ ನೋಡಿಕೋಬೇಕಂತ
ಗೊತ್ತಿಲ್ಲವೆ ಗುಲಾಮಳೆ?

ಮರ್ಜೀನಾ : ಗೊತ್ತು. ಆದರೆ ನಿಮಗೆ ರೋಗ ಬಂದಿಲ್ಲ; ಅಷ್ಟೆ.

ಫಾತಿಮಾ : ಹಾಳಾದವಳೆ, ಒಬ್ಬ ಗುಲಾಮಳು ಬೇಕೆಂದರೆ ನಿನ್ನಂಥವಳನ್ನ ತಂದು ಇಟ್ಟಾನಲ್ಲಾ, ಬರಲಿ. ನಿನ್ನ ಕೆಲಸದಿಂದ ಬಿಡಿಸಿ ಓಡಿಸಿ ಬಿಡತೀನಿ.

ಮರ್ಜೀನಾ : ಆಮೇಲೆ ಬಯ್ಯೋದಕ್ಕೆ ನಿಮಗ್ಯಾರೂ ಇರೋದಿಲ್ಲ, ಅಷ್ಟೆ.

ಫಾತಿಮಾ : ನನ್ನ ನಾನೇ ಬಯ್ದುಕೊಳ್ಳತೀನಿ. ಆದರೂ ನಿನ್ನ ಹೊರಗೆ ಹಾಕತೀನಿ.

ಮರ್ಜೀನಾ : ಆಮೆಲೆ ನಿಮ್ಮ ಯಜಮಾನರು ಹೊಡೀತಿದ್ದರೆ ಬಿಡಿಸಿಕೊಳ್ಳಿಕ್ಕೆ ಯಾರೂ ಇರೋದಿಲ್ಲಾ, ಅಷ್ಟೆ.

ಫಾತಿಮಾ : ಹಾಳಾದವಳೇ, ಔಷಧಿ ಕುಡಿಯೋ ಹೊತ್ತಾಯ್ತು; ಈಗೇನು ಬಿಸಿ ನೀರು ಕೊಡ್ತೀಯಾ? ಇಲ್ಲಾ ನಿನ್ನನ್ನು ಒದ್ದು ಒದ್ದು ಒದ್ದು…………

ಮರ್ಜೀನಾ : ಅಯ್……………

ಫಾತಿಮಾ : ಬಿಸಮಿಲ್ಲಾ ಮಾಡಿ…….

ಮರ್ಜೀನಾ : ಹೊಯ್……………..

ಫಾತಿಮಾ : ಚರ್ಮಾ ಸುಲಿದು…………

ಮರ್ಜೀನಾ : ಹೊಯ್

ಫಾತಿಮಾ : ಮಸಾಲಿ ಹಾಕಿ ಪಲ್ಯಾ ಮಾಡಿ……..

ಮರ್ಜೀನಾ : ಹೊಯ್ ಹೊಯ್……………

ಫಾತಿಮಾ : ನಾಯಿಗಿ ಹಾಕಲೊ?

ಮರ್ಜೀನಾ : ಅಲ್ಲೇ ಬಿಸಿನೀರಿದೆ. ಮಾತ್ರೆ ತಗೊಳ್ಳಿ. ನಾಳೆ ಪಲ್ಯ ಮಾಡಿ ನಾಯಿಗಿ ಹಾಕೀರಂತೆ.

ಫಾತಿಮಾ : ಮೊದಲೇ ಯಾಕ್ಹೇಳಲಿಲ್ಲವೆ ಗಯ್ಯಾಳಿ? (ಬಾಗಿಲು ಬಡಿದ ಸದ್ದು) ಯಾರು ಬಂದರು, ನೋಡೇ.

*(ಮರ್ಜೀನಾ ಹೋಗಿ ಬಾಗಿಲು ತೆಗೆಯುವಳು. ಬೇಗಂ ಬಾಗಿಲಲ್ಲೇ ನಿಲ್ಲುವಳು.)*

ಬೇಗಂ : ಫಾತಿಮಾ ಬಹೆನ್…………..

ಮರ್ಜೀನಾ : ಬೇರೆಯವರು ಸಂತೋಷವಾಗಿದ್ದರೆ ನಮ್ಮ ಯಜಮಾನಿಗೆ ಆಗಿ ಬರೋದಿಲ್ಲ. ದಯವಿಟ್ಟು ನಗಬೇಡಿ, ಹಾ……………

ಫಾತಿಮಾ : ಏನೇ ನಿನ್ನ ತಲೆ ಹರಟೆ? ಯಾರದು?

ಮರ್ಜೀನಾ : ಬೇಗಂ ಬಹೆನ್

ಫಾತಿಮಾ : ಏನಂತೆ? ಹಿಟ್ಟು ಕಡ ಕೇಳೋದಕ್ಕೆ ತಾನೇ ಬಂದಿರೋದು? ಇಲ್ಲಾ ಅಂತ ಹೇಳು.

ಬೇಗಂ : ಹಿಟ್ಟಲ್ಲ ಬಹೆನ್.

ಫಾತಿಮಾ : ಇನ್ನೇನು ಉಪ್ಪೋ ಕಾರವೋ-ಇಲ್ಲಂತ ಹೇಳು.

ಬೇಗಂ : ಪಾವು ಬೇಕಿತ್ತು.

ಫಾತಿಮಾ : ಪಾವು? ಒಳಗಡೆ ಕರೆ, *(ಬೇಗಂ, ಮರ್ಜೀನಾ ಒಳಬರುವರು.)* ಯಾಕಮ್ಮಾ, ಏನಳೀಲಿಕ್ಕೊ?

ಬೇಗಂ : ಇನ್ನೇನಿಲ್ಲ, ರಾಗಿ ಅಳೀಬೇಕಿತ್ತು.

ಫಾತಿಮಾ : ಏನು! ಅಳೆಯೋವಷ್ಟು ರಾಗಿ ಸಿಕ್ಕಿತಾ ಈ ಹೊತ್ತು? ಮಾ ಶಾ ಅಲ್ಲಾ! ಸೌದೆ ಅಷ್ಟೊಂದು ತುಟ್ಟೀ ಆಯ್ತಾ? ಆಯ್ತು ಹೊರಗಿರು, ಕೊಡುತಾಳೆ, ಏ ಮುರಗೀ ಪಾವು ತಾರೇ.

*(ಬೇಗಂ ಹೊರಗೂ ಮರ್ಜೀನಾ ಪಾವು ತರಲಿಕ್ಕೆ ಒಳಗೂ ಹೋಗುತ್ತಾರೆ. ಫಾತಿಮಾ ಆಶ್ಚರ್ಯದಲ್ಲಿ ಕೂತಿರುವಾಗ ಮರ್ಜೀನಾ ಪಾವು ತರುತ್ತಾಳೆ.)*

ಫಾತಿಮಾ : ಏ ಮುರಗೀ, ಅವಳ ಮುಖ ನೋಡಿದೆಯಾ?

ಮರ್ಜೀನಾ : ನೋಡಿದೆ.

ಫಾತಿಮಾ : ಒಳಗೊಳಗೇ ಪಕಪಕ ನಗತಿದ್ದಳಲ್ಲವಾ?

ಮರ್ಜೀನಾ : ನಗಬೇಡಿ ಅಂತ ಹೇಳಿದೆ. ಆದರೂ ನಗುತ್ತಿದ್ದರು, ನೋಡಿ.

ಫಾತಿಮಾ : ಪಾವು ತಾರೇ ಇಲ್ಲಿ.

*(ಕಸಿದುಕೊಂಡು ಒಳಗೋಡುವಳು. ಮರ್ಜಿನಾ ಏನೂ ತಿಳಿಯದೆ ಮತ್ತೆ ಕೆಲಸಕ್ಕೆ ತೊಡಗುವಳು. ಫಾತಿಮಾ ಒಳಗಿನಿಂದ ಬಂದು ಪಾವನ್ನು ಅವಳ ಕೈಗೆ ಕೊಟ್ಟು)* ಹೋಗಿ ಕೊಟ್ಟುಬಾ. ಬೇಗನೆ ಹಿಂದಿರುಗಿ ಕೊಡೋದಕ್ಕೆ
ಹೇಳು. *(ಮರ್ಜೀನಾ ಹೋಗಿ ಹೊರಗೆ ನಿಂತ ಬೇಗಂಳಿಗೆ ಪಾವು ಕೊಟ್ಟು ಬರುವಳು.)*

ಫಾತಿಮಾ : ಒಪ್ಪತ್ತು ಗಂಜಿಗೂ ದಿಕ್ಕಿಲ್ಲದವರಿಗೆ ಅಳೆಯೋವಷ್ಟು ರಾಗಿ ಸಿಕ್ಕೋದುಂಟೆ? ಇದರಲ್ಲೇನೋ ಗುಟ್ಟಿದೆ ಕಣೇ
ಮುರಗೀ……… *(ಹೋಗಿ ಅವಳೆದುರು ನಿಂತು.)* ನಾ ಏನು ಮಾಡಿದೆ ಗೊತ್ತಾ?

ಮರ್ಜೀನಾ : ಗೊತ್ತಿಲ್ಲ.

ಫಾತಿಮಾ : ಗೊತ್ತಿಲ್ಲದಿದ್ದರ ಕೇಳೇ, ಏನ ಮಾಡಿದಿರಿ ಯಜಮಾನೀ? ಅಂತ.

ಮರ್ಜೀನಾ : ಏನ್‌ಮಾಡಿದಿರಿ ಯಜಮಾನೀ?

ಫಾತಿಮಾ : ಪಾವಿನ ತಳಕ್ಕೆ ಮೇಣ, ಮೇಣ ಹಚ್ಚಿ ಕೊಟ್ಟಿದೀನಿ! ಅದೇನು ಅಳೀತಾರೋ ಗೊತ್ತಾಗಲೀ-ಅಂತ. ಹ್ಯಾಗಿದೆ ನನ್ನ ಉಪಾಯ? ಹೆಹ್ಹೆ!

ಮರ್ಜೀನಾ : ನಿಮ್ಮ ಮುಖದ ಹಾಗೇ ಇದೆ!

ಫಾತಿಮಾ : ಥೂ ಹಾಳಾದವಳೇ, ಬಿಸಿನೀರ್ಯಾಕೆ ತರಲಿಲ್ಲವೆ?
ಅಯ್ಯೋ………….. *(ನರಳುತ್ತ ಮತ್ತೆ ಮೊದಲಿನಂತೆ ಹಾಸಿಗೆಯಲ್ಲಿ ಮಲಗುವಳು.)*

## ಪೂರ್ವಾರ್ಧ (ಚೆನ್ನದ ವಾಸನೆ)

*(ರಸ್ತೆ. ಮರ್ಜೀನಾ ದಾಟುತ್ತಿರಬೇಕಾದರೆ ಸಲೀಂ ಬೆನ್ನು ಹತ್ತುತ್ತಾನೆ. ಸ್ವಲ್ಪ ಹೊತ್ತು ಓಡಾಡಿದ ಮೇಲೆ ತರುಬುತ್ತಾನೆ.)*

ಸಲೀಂ : ಈ ದಿನ ನೀನು ಖಡಾಖಂಡಿತವಾಗಿ ನಿನ್ನ ನಿರ್ಧಾರವನ್ನು ಹೇಳಲೇಬೇಕು.ಹೇಳೋತನಕ ನಾ ಬಿಡೋದೇ ಇಲ್ಲ.

ಮರ್ಜೀನಾ : ಹೇಳಿಯಾಗಿದೆಯಲ್ಲ-ಇಲ್ಲಾ ಇಲ್ಲಾ ಇಲ್ಲಾ ಅಂತ.

ಸಲೀಂ : ನೀ ಹೇಳಬೇಕಾದ್ದು ಇಲ್ಲಾ ಅಂತಲ್ಲ; ಆಗಲಿ ಅಂತ.

ಮರ್ಜೀನಾ : ಅದು ಸಾಧ್ಯವಿಲ್ಲ.

ಸಲೀಂ : ಯಾಕಿಲ್ಲ? ಮನುಷ್ಯ ಮನಸ್ಸು ಮಾಡಿದರೆ ಏನೂ ಮಾಡಬಹುದು.

ಮರ್ಜೀನಾ : ನಾ ಮನಸ್ಸು ಮಾಡೋದಿಲ್ಲ.

ಸಲೀಂ : ನೀನು ಮನಸ್ಸು ಮಾಡದಿದ್ದರೆ ನಾ ನೇಣು ಹಾಕ್ಕೋತೀನಿ.

ಮರ್ಜೀನಾ : ಹಾಕ್ಕೊ.

ಸಲೀಂ : ವಿಷ ತಗೋತೀನಿ.

ಮರ್ಜೀನಾ : ತಗೊ.

ಸಲೀಂ : ಚೂರಿಯಿಂದ ಇರಿದುಕೊಳ್ಳತೀನಿ.

ಮರ್ಜೀನಾ : ನಿನ್ನಿಷ್ಟ.

ಸಲೀಂ : ಹಾಯಲ್ಲಾ! ಎಂಥಾ ಕಲ್ಲೆದೆಯವಳು ನೀನು! ತಗೋ. ತಗೋ ಈ ಚೂರಿ. ನಾ ಸಾಯ್ತಾ ಇರೋದು ನಿನಗಾಗಿ. ನೀನೇ ಕೊಲ್ಲು. *(ಅವನ ಒತ್ತಾಯದಿಂದ ಚೂರಿ ಕೈಯಲ್ಲಿ ಹಿಡಿದುಕೊಳ್ಳುವಳು.)* ತಾಳು, ತಾಳು; ಒಂದು ಪ್ರೇಮಗೀತೆ ರಚನೆ ಮಾಡಿದೀನಿ; ಅದನ್ನ ಕೇಳಿಯಾದ ಮೇಲೆ ಕೊಲ್ಲು, *(ಜೇಬಿನಿಂದ ಕಾಗದ ತೆಗೆದು ಅದರಲ್ಲಿಯ ಪದ್ಯ ಓದುವನು.)*
ಓ! ಪ್ಯಾರೇ ಮರ್ಜೀನಾ! ಪ್ಯಾರ ಕರತಾ ಹೂ ಮೈ ನಿನ್ನಾ॥

ಮರ್ಜೀನಾ : *(ಒಳಗೊಳಗೆ ನಗುತ್ತ)* ಛೀ!

ಸಲೀಂ : ಯಾಕೆ. ಚೆನ್ನಾಗಿಲ್ಲವಾ? ಹಾಗಿದ್ದರೆ ಈಗ ಕೇಳು;
**ಮೈ ಪ್ಯಾರೇಹೂ ಕರತಾ ನಿನ್ನ ಪ್ಯಾರ ಮರ್ಜೀನಾ ಓ! ||**

ಮರ್ಜೀನಾ : *(ಮೆಚ್ಚುಗೆಯಿಂದ ಆದರೆ ಹೊರಗೆ ಅಸಹ್ಯಭಾವನೆ ಪ್ರಕಟಿಸುತ್ತ)* ಛೀ ಛೀ!

ಸಲೀಂ : ಹಾಗಿದ್ದರೆ ಇದನ್ನ ಕೇಳು;
**ಓ! ನಿನ್ನಾ ಪ್ಯಾರೇ ಮರ್ಜೀನಾ ||**
**ಪ್ಯಾರ ಕರತಾ ಹೂ ಮೈ ನಿನ್ನಾ ||**

*(ಭಾವುಕನಾಗಿ ತನ್ನ ಕಾವ್ಯ ತಾನೇ ಮೆಚ್ಚುತ್ತ ಕಣ್ಣುಮುಚ್ಚಿ ಮತ್ತೆ ಮತ್ತೆ ಹೇಳುತ್ತಾನೆ. ಇದೇ ಸಂದರ್ಭವೆಂದು ಮರ್ಜೀನಾ ನಗುತ್ತಾ ಓಡುತ್ತಾಳೆ. ಕಣ್ತೆರೆದಾಗ ಮರ್ಜೀನಾ ಇಲ್ಲದ್ದನ್ನು ಗಮನಿಸಿ ಹುಡುಕುತ್ತ ಮರೆಯಾಗುತ್ತಾನೆ. ಫಾತಿಮಾ ಪಾವು ಹಿಡಿದುಕೊಂಡು ಬಂದು ಮೇಳದ ನಾಯಕನನ್ನು ಕೇಳುತ್ತಾಳೆ.)*

ಫಾತಿಮಾ : ಅಯ್ಯಾ ನನ್ನ ಯಜಮಾನನನ್ನು ನೋಡಿದೀಯಾ?

ಮೇಳದ ನಾಯಕ : ಈಗಷ್ಟೇ ಇಲ್ಲಿ ಯಾರೋ ಒಬ್ಬ ಹುಡುಗೀ ಬೆನ್ನು ಹತ್ತಿ ಓಡಾಡ್ತಿದ್ದ.
ಅಕೋ ಅವನೇ ಇರಬಹುದಾ ನೋಡಿ!

*(ಖಾಸೀಂ ಬರುವನು. ಫಾತಿಮಾ ಬಳಿಗೆ ಹೋಗಿ)*

ಖಾಸೀಂ : ಅರೇ, ನೀನ್ಯಾಕಿಲ್ಲಿಗೆ ಬಂದೆ ಬೇಗಂ?

ಫಾತಿಮಾ : ಥೂ ಹಲ್ಕಾ!

ಖಾಸೀಂ : ಸುರುವಾಯ್ತೋ! ಲೇ ಲೇ ರಸ್ತೇಲಿದ್ದೇವಿ. ಇಲ್ಲೇನಾದರೂ ಬೈದರೆ ನಿನ್ನ ಮೂಳೆ ಮುರೀತೀನಿ.

ಫಾತಿಮಾ : ನನ್ನ ಮೂಳೆ ಮುರೀತೀಯೇನೊ ಭಡವಾ? ನಿನ್ನ ಚರ್ಮಾ ಸುಲೀತೀನಿ.

ಖಾಸೀಂ : ನಿನ್ನ ಸಿಗದ ಹಾಕ್ತೀನಿ.

ಫಾತಿಮಾ : ನಿನ್ನ ಮಣ್ಣೊಳಗ ಹುಗೀತೀನಿ.

ಖಾಸೀಂ : ಥೂ! ಗಂಡನಿಗೆ ಸಾರ್ವಜನಿಕ ರಸ್ತೆಯೊಳಗೆ ಹೀಗೆಲ್ಲಾ ಬೈತೀಯೇನೇ? ಥೂ ಥೂ ನಮ್ಮ ಮದುವೆ ಮಾಡಿದ ಇಮಾಮ ಸತ್ತುಹೋಗಲಿ.

ಫಾತಿಮಾ : ನಮ್ಮ ಮದುವೆ ನೋಡಿದ ಹಿರೇರೆಲ್ಲಾ ಹಾಳಾಗಿಹೋಗಲಿ.

ಖಾಸೀಂ : ಲೇ, ಲೇ ನನ್ನ ಮದುವೆ ಮಾಡಿಕೊಳ್ಳಬೇಕಾದರೆ ಪುಣ್ಯ ಮಾಡಿರಬೇಕು ಕಣೇ.

ಫಾತಿಮಾ : ಹೌದು ಹೌದು, ದಿನಾ ನನ್ನ ಪ್ರಾಣ ತಿಂತೀಯಲ್ಲ, ಅದಕ್ಕೆ.

ಖಾಸೀಂ : ತಿಂತೀನಿ, ಕುಡೀತೀನಿ. ನೀ ಯಾರೇ ಕೇಳೋದಕ್ಕೆ?

ಫಾತಿಮಾ : ಅಯೋಗ್ಯ. ಸಾಲದಕ್ಕೆ ಯಾರ್ದೋ ಹುಡುಗೀ ಬೆನ್ನು ಹತ್ತಿದ್ದೆಯಂತೆ!

ಖಾಸೀಂ : ಈ ಸುಳ್ಳಿಗೆ ನೀನು ಹತ್ತೇಟು ತಿನ್ನಬೇಕಾಯ್ತು.

ಫಾತಿಮಾ : ಹೆದರ್ತೀನಂದುಕೊಂಡ್ಯೇನೊ ಬೇಕೂಫಾ? ಹೊಡೆಯೋ ಧೈರ್ಯ ಇದ್ದರೆ ಹೊಡಿ, ನೋಡ್ತೀನಿ.

ಖಾಸೀಂ : ಈ ಮಾತಿಗೆ ಐದು. ಒಟ್ಟು ಹದಿನೈದಾಯ್ತು. ನಿನಗೆ ಶಕ್ತಿ ಇರೋದು ಹದಿನೈದೇಟು ಸಹಿಸಲಿಕ್ಕೆ ಮಾತ್ರ. ಇವತ್ತಿನ ಖೋಟಾ ಇಷ್ಟೆ. ತಯಾರಾಗು. *(ಗುರಿ ಹಿಡಿದು ಅವಳ ಬಳಿಗೆ ಹೋಗಿ ಎಣಿಸುತ್ತ ಹೊಡೆಯ ತೊಡಗುವನು)* ಕೆಟ್ಟ ಹೆಂಗಸೆ, ಇಷ್ಟು ಆಸ್ತಿ ಕೊಟ್ಟೆ ಒಂದು, ಚಿನ್ನ ಕೊಟ್ಟೆ ಎರಡು, ಬೆಳ್ಳಿ ಕೊಟ್ಟೆ ಮೂರು. ಮತ್ತೆ ಒದರಾಡ್ತೀಯೇನೆ? ನಾಲ್ಕು, ಎಷ್ಟು ಕೊಟ್ಟರೂ ಐದು, ನಿನಗೆ ತೃಪ್ತಿ ಇದೆಯೇನೆ? ಆರು. ಅಯೋಗ್ಯಳೇ ಏಳು…………..

*(ಮೇಳದ ನಾಯಕ ನಡುವೆ ಬಂದು ತಡೆಯುವನು.)*

ಮೇಳದ ನಾಯಕ : ಏ ಏ ಏ, ದನ ಬಡಿದ ಹಾಗೆ ಹೆಂಡ್ತೀನ್ನ ಬಡೀತೀಯಾ, ಅಯೋಗ್ಯ ನಿನಗೆ ನಾಚ್ಕೆ ಆಗೋದಿಲ್ಲವೇನೊ?

ಫಾತಿಮಾ : ಅವ ಗಂಡ, ನಾ ಹೆಂಡತಿ. ಅವ ಬಡೀತಾರೆ, ನಾ ಬಡಿಸ್ಕೋತೀನಿ. ಮಧ್ಯೆ ನೀ ಯಾರೊ ಕೇಳೊದಕ್ಕೆ?

ಖಾಸೀಂ : ಅವಳಣ್ಣನಾ ತಮ್ಮನಾ?

ಮೇಳದ ನಾಯಕ : ಯಾರೂ ಅಲ್ಲ.

ಫಾತಿಮಾ : ನಾವು ಗಂಡ ಹೆಂಡತಿ ಜಗಳಾಡಿದರೆ ನಿಮ್ಮ ಅಪ್ಪಂದೇನು ಗಂಟು ಹೋಯ್ತು?

ಮೇಳದ ನಾಯಕ : ಏನಿಲ್ಲ.

ಫಾತಿಮಾ : ಅವ ನನಗೆ ಏಟು ಹಾಕಿದರೆ ನಿನ್ನ ಮೈ ನೋಯುತ್ತಾ?

ಮೇಳದ ನಾಯಕ : ಇಲ್ಲ.

ಫಾತಿಮಾ : ಮತ್ತ್ಯಾಕೆ ನಮ್ಮಿಬ್ಬರ ಮಧ್ಯೆ ನಿನ್ನ ಹೊಲಸು ಮೂಗು ತೂರಿಸಿದೆ?

ಖಾಸೀಂ : ದಂಪತಿಗಳ ಸುಂದರವಾದ ಜಗಳಕ್ಕೆ ಯಾಕೆ ಭಂಗ ತಂದೆ?

ಫಾತಿಮಾ : *(ಮೇಳದ ನಾಯಕನನ್ನ ಹೊಡೆಯುತ್ತ)* ದಡ್ಡನ್ನ ತಂದು

ಖಾಸೀಂ : *(ಹೊಡೆಯುತ್ತ)* ಮೂರ್ಖನ್ನ ತಂದು.

ಫಾತಿಮಾ : *(ಹೊಡೆಯುತ್ತ)* ದರಿದ್ರನ್ನ ತಂದು.

ಖಾಸೀಂ : *(ಹೊಡೆಯುತ್ತ)* ಅಯೋಗ್ಯನ್ನ ತಂದು.

ಮೇಳದ ನಾಯಕ : *(ಹೊಡೆತ ತಾಳದೆ)* ಅಯ್ಯಯ್ಯೋ ತಪ್ಪಾಯ್ತು. ತಪ್ಪಾಯ್ತು. ಕ್ಷಮಿಸಬೇಕು, ದಯಮಾಡಿ ನನ್ನ ಬಿಟ್ಟು ಬಿಡಿ. ಅಯ್ಯಾ ಸ್ವಾಮೀ, ನಿನ್ನ ಹೆಂಡ್ತೀನ್ನ ಮನಸ್ಸು ತೃಪ್ತಿ ಆಗೋತನಕ ಹೊಡೆದು, ಚರ್ಮಾ ಸುಲಿದು, ಸಾಯಿಸು. ನಾ ಕೇಳೋದಿಲ್ಲ. ಯಾರಾದರೂ ಜಗಳ ಬಿಡಿಸಲಿಕ್ಕೆ ಬಂದರೆ, ಅವರನ್ನೂ ದೂರದಲ್ಲೇ ತಡೆಹಿಡೀತೀನಿ. ಸುರುಮಾಡಿ. *(ಹೊರಡುವನು.)*

ಖಾಸೀಂ : ಏ ಬಾರೋ ಇಲ್ಲಿ.
*(ಮೇಳದ ನಾಯಕ ಬರುವನು.)*
ಇನ್ನು ಮೇಲೆ ನಾವು ಜಗಳಾಡಿದರೆ ಸುಮ್ಮನೆ ಇರ್ತೀಯಾ?

ಮೇಳದ ನಾಯಕ : ಹೌದು, ದೇವರಾಣೆ.

ಖಾಸೀಂ : ಗಂಡ ಹೆಂಡತಿ ಜಗಳಾಡಿದರೆ ಸುಮ್ಮನೆ ನಿಂತುಕೊಂಡು ನೋಡೋನು ನೀನೊಬ್ಬ ನಾಗರಿಕನೇನೊ?

ಫಾತಿಮಾ : ಹೊಡೆದಾಡ್ರಿ ಅಂತೀಯಲ್ಲಾ, ನೀನೊಬ್ಬ ಸಭ್ಯನೇನೊ?

ಖಾಸೀಂ : ಅಯೋಗ್ಯ *(ಹೊಡೆಯುವನು)*

ಫಾತಿಮಾ : ಅಸಭ್ಯ *(ಹೊಡೆಯುವಳು)*

ಖಾಸೀಂ : ದಡ್ಡ *(ಹೊಡೆಯುವನು)*

ಫಾತಿಮಾ : ದಬಕ (ಹೊಡೆಯುವಳು)

*(ಹೊಡೆತ ತಾಳದೆ ಮೇಳದ ನಾಯಕ ಓಡಿಹೋಗುವನು.)*

ಖಾಸೀಂ : ಆಯ್ತಲ್ಲ ಬೇಗಂ. ಇನ್ನು ಒಪ್ಪಂದ ಮಾಡಿಕೊಳ್ಳೋಣ………?

ಫಾತಿಮಾ : ಹೂ ಇಷ್ಟೆಲ್ಲಾ ಏಟು ತಿಂದ ಮೇಲೆ-

ಖಾಸೀಂ : ಛೇ ಛೇ ದಿನಕ್ಕೆ ಹದಿನೈದೇಟು ಹೆಚ್ಚಲ್ಲ. ಗಂಡ ಹೆಂಡತಿ ಮಧ್ಯೆ ಏಟಿನ ವ್ಯವಹಾರ ಇಲ್ಲದಿದ್ದರೆ, ಪ್ರೀತಿ ಸೊರಗಿ ಹೋಗುತ್ತಲ್ಲವಾ? ಹೇಳು, ಹಾಸಿಗೆ ಬಿಟ್ಟು ಯಾಕೆ ಬಂದೆ? ನಾನೇ ಅಲ್ಲಿಗೆ ಬಮದು ಹೊಡೀತಿರಲಿಲ್ಲವಾ?

ಫಾತಿಮಾ : ಯಾವ್ದೋ ಹುಡುಗೀ ಬೆನ್ನು ಹತ್ತಿದ್ದೆಯಂತೆ………….

ಖಾಸೀಂ : ಛೇ ಛೇ. ಮರ್ಜೀನಾಳನ್ನ ನಮ್ಮ ಸಲೀಂ ಬೆನ್ನು ಹತ್ತಿದ್ದನ್ನು ನೋಡಿ ನಾನೇ ಅಂತ ನಿನಗನ್ನಿಸಿದೆ.

ಫಾತಿಮಾ : ನಿನ್ನನ್ನ ಕರಕೊಂಡು ಬರೋದಕ್ಕೆ ಮುರ್ಗೀನ್ನ ಕಳಿಸಿದ್ದೆ. ತಡ ಆಯ್ತು ಅಂತ ನಾನೇ ಬಂದೆ. ನನ್ನ ಕೈಯಲ್ಲೇನಿದೆ ನೋಡು.

ಖಾಸೀಂ : ಪಾವು.

ಫಾತಿಮಾ : ವಾಸನೆ ಬಂತಾ?

ಖಾಸೀಂ : ಇಲ್ಲವಲ್ಲ.

ಫಾತಿಮಾ : ಮತ್ತೆ ಯಾಕೆ ಜಂಬ ಕೊಚ್ಚಿಕೊಳ್ತಿ?-ಚಿನ್ನ ಎಲ್ಲಿದ್ದರೂ ನನಗೆ ವಾಸನೆ ಬರ್ತದೆ-ಅಂತ. ಇಕ್ಕಾ, ನೋಡು:

*(ಪಾವಿನ ಬುಡ ತೋರಿಸುವಳು. ಅಲ್ಲಿ ಬಂಗಾರದ ನಾಣ್ಯಗಳು ಅಂಟಿಕೊಂಡಿವೆ.)*

ಖಾಸೀಂ : ಮಾ ಶಾ ಅಲ್ಲಾ!
*(ಲಬಕ್ಕನೆ ಕಸಿಯುವನು.)* ಅಸಲಿ, ಅಸಲಿ ಚಿನ್ನ! ಎಲ್ಲಿ ಸಿಕ್ಕಿತು? ಹ್ಯಾಗೆ ಸಿಕ್ಕಿತು? ಬೇಗ್ಹೇಳು ಬೇಗಂ…….

ಫಾತಿಮಾ : ನಿನ್ನ ತಮ್ಮ ಅಲೀಬಾಬ ತಂದಿದಾನೆ!

ಖಾಸೀಂ : ಅಲೀಬಾಬಾ! ಛೇ, ಬಡವ. ಹೊತ್ತು ಹೊತ್ತಿಗೆ ರಾಗೀ ಹಿಟ್ಟಿಲ್ಲ. ಇನ್ನು ಚಿನ್ನದ ನಾಣ್ಯಗಳು!…………

ಫಾತಿಮಾ : ಹುಚ್ಚುಚ್ಚಾರ ಆಡಬೇಡ. ಅವನೇ ತಂದದ್ದು. ಎಲ್ಲಿ ಸಿಕ್ಕಿದೆಯೋ! ಅದೂ ಮೂಟೆಗಟ್ಟಲೆ! ಎಣಿಸಲಾರದೆ ಪಾವಿನಿಂದ ಅಳಿತಾರಂದರೆ ಮಾ ಶಾ ಅಲ್ಲಾ! ಹೋಗಿ ವಿಷಯ ತಿಳ್ಕೋಬೇಕು. ಹೇಳಿದರೆ ಸೈ, ಇಲ್ಲದಿದ್ದರೆ ರಾಜರಿಗೆ ಹೇಳ್ತೀನಿ ಅಂತ ಹೆದರಿಕೆ ಹಾಕು.

ಖಾಸೀಂ : ಹೊರಟೆ, ಹೊರಟೆ ಇಕೋ ಹೊರಟೆ. (ಹೊರಡುವನು.)

**ಏನ ನೋಡಲಿ ಕಣ್ಣು ಸಾಲsವು ಮತ್ತೆ**
**ಎಷ್ಟಂತ ಒಯ್ಯಲಿ ಬರಿ ಮೂರೆ ಕತ್ತೆ||**

**ಕುಸಿದು ಬಿತ್ತೊ ನಿನ್ನ ಹೆಚ್ಚಿನ ಕರುಣಾ**
**ಹಾ ಖುದಾ ಧನ್ಯನು ಧನ್ಯನೋ ನಾನಾ||**

ಮೇಳ : **ಹಾಯಲ್ಲಾ ನಿನ್ನಂಥೋರಿನ್ನೊಬ್ಬರಿಲ್ಲಾ**
**ಅಲ್ಲಾ ಹೊ ಅಕಬರ ನೀ ಹೌದು ಮೌಲಾ||**

ಅಲೀಬಾಬಾ : **ಬಾರಮ್ಮಾ ಭೈರವಿ, ಬಾರೊ ರಾಕಣ್ಣಾ**

**ಬಾ ನನ್ನ ಮರಿಕತ್ತೆ ಬಾ ನನ್ನ ಚಿನ್ನ**

ಬೆಳ್ಳಿ ಬೇಡ, ಚಿಲ್ಲರೇನೂ ಬೇಡ, ಭಾರವಾಗುತ್ತದೆ. ಆಭರಣ ಬೇಡ, ಯಾರ್ಯಾರ್ದಿದೆಯೊ! ಆದರೂ ಒಂದೆರಡಿರಲಿ, ಬೇಗಮ್‌ಗೆ, ಭೈರವಿಗೆ. ಈ ಹಾರ ಮಾತ್ರ ಮರಿಕತ್ತೆಗೆ, ಸಾಕು. ಉಳಿದದ್ದೆಲ್ಲ ಚಿನ್ನದ ನಾಣ್ಯದ ಮೂಟೆ!

*(ಕತ್ತೆಗಳ ಮೇಲೆ ಅವಸರದಿಂದ ಬಂಗಾರದ ನಾಣ್ಯದ ಮೂಟೆ ಹೇರುವನು)*

ಭೈರವಿಗೆ ಎರಡು ಮೂಟೆ, ರಾಕಣ್ಣಂಗೆರಡು, ಮರಿಗೊಂದು, ನನಗೊಂದು ಸಾಕು. ಅತಿಯಾಸೆ ಗತಿಗೇಡು. ಬನ್ನಿ ಬನ್ನಿ………………

*(ನಾಣ್ಯದಮೂಟೆಯ ಮೇಲೆ ಸೌದೆ ಹೇರಿ*

***ಖುದಾ ಕಾ ಕಸಂ***

***ಹಸನ್‌ಕಾ ಹುಕುಂ***

***ಖುಲ್‌ಜಾ ಸೇಸಮಿ***

*ಎಂದು ಕೂಗುತ್ತಾನೆ. ಬಂಡೆ ತೆರೆದೊಡನೆ ಹೊರಡುತ್ತಾನೆ.)*

# ಪೂರ್ವಾರ್ಧ (ಖುಲ್ ಜಾ ಸೇಸೆಮಿ)

*(ಅಲೀಬಾಬಾ ಠೀವಿಯಿಂದ ಕೂತು ಕತ್ತೆಗಳ ಸಂಗೀತ ಕೇಳುವುದರಲ್ಲಿ ನಿರತನಾಗಿದ್ದಾನೆ. ಪಕ್ಕದಲ್ಲಿ ಅವನ ಬೇಗಂ ಕೂತಿದ್ದಾಳೆ. ದೂರದಲ್ಲಿ ಎರಡೂ ಕತ್ತೆಗಳು ಸಂಗೀತಗಾರರಂತೆ ಶಾಲು ಹೊದ್ದುಕೊಂಡು ಸನ್ಮಾನಿತರಾಗಿ ನಿಂತಿವೆ. ಮರಿಕತ್ತೆ ಭಾರೀ ವಿದ್ವಾಂಸರಂತೆ ಹಾಡತೊಡಗಿದೆ. ಮಧ್ಯೆಮಧ್ಯೆ ಅಲೀಬಾಬಾ ಭೇಶ್ ಭೇಶ್ ಎಂದು ತನ್ನ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾನೆ. ಅದರ ಹಾಡು ಮುಗಿಯುತ್ತಲೂ ಅಲೀಬಾಬಾ ಅದಕ್ಕೂ ಶಾಲು ಹೊದೆಸಿ ಸನ್ಮಾನ ಮಾಡುತ್ತಾನೆ.)*

ಅಲೀಬಾಬಾ : ಭೇಶ್ ಭೇಶ್! ಚೆನ್ನಾಗಿ ಕಲಿ ಮರಿ, ನಿನ್ನ ತಂದೆ ಇದಾನಲ್ಲ, ಅವನ ಅನುಕರಣೆ ಮಾಡಬೇಡ. ಒಳ್ಳೇ ಪ್ರತಿಭೆಯನ್ನ ಹಾಳುಮಾಡಿಕೊಂಡ. ನೋಡಿದಾಗೆಲ್ಲಾ ಯಾವುದಾದರೊಂದು ಹೆಣ್ಣು ಕತ್ತೇ ಬೆನ್ನು ಹತ್ತಿದರೆ ಏನಾಗಬೇಡ? ಸಂಗೀತ ಅಂದರೆ ಒಂದು ತಪಸ್ಸು. ಮನಸ್ಸನ್ನ ಏಕಾಗ್ರಗೊಳಿಸಿ ಸಂಗೀತದ ಅಭ್ಯಾಸ ಮಾಡಬೇಕು. ಎದುರಿನಲ್ಲಿ ಹೆಣ್ಣುಕತ್ತೆ ಕುಣಿದರೂ ಆ ಕಡೆ ನೋಡಬಾರದು, ತಪಸ್ಸೆಂದರೆ ಅದು. ನೀನೂ ಆ ಥರ ಮಾಡಿ ಈ ನಾಡಿನ ದೊಡ್ಡ ಸಂಗೀತಗಾರನಾಗಬೇಕು-ತಿಳೀತಾ? *(ಮರಿಕತ್ತೆ ಕತ್ತು ಹಾಕುತ್ತಿದೆ, ಅಷ್ಟರಲ್ಲಿ ಖಾಸೀಂ ಬರುತ್ತಾನೆ.)*

ಖಾಸೀಂ : ಆದಾವಂದ್ ಅಲೀಬಾಬಾ,

ಅಲೀಬಾಬಾ : ಅರೆ! ಭಾಯೀ ಸಾಹೇಬ್! ಅದಾವಂದ್. ಬಾ ಬಾ.

*(ಬೇಗಂ ಒಳಗೆ ಹೋಗುವಳು. ಪ್ರಾರಂಭದಲ್ಲಿದ್ದ ಬಡ ಮನೆಯ ಆಕಾರ ಬದಲಾಗಿದೆ. ಶ್ರೀಮಂತಿಕೆ ಒಡೆದು ಕಾಣುತ್ತಿದೆ. ಖಾಸೀಂ ನೋಡಿ ಆವಾಕ್ಕಾಗುತ್ತಾನೆ.)*

ಖಾಸೀಂ : ಏನು, ಸೌದೆ ತರಲಿಕ್ಕೆ ಹೋಗಿಲ್ಲವೊ?

ಅಲೀಬಾಬಾ : ಈ ದಿನ ಹೋಗಲಿಲ್ಲ.

ಖಾಸೀಂ : ದರ್ಬಾರ್ ಕೂಡಿರೋ ಹಾಗಿದೆ!

ಅಲೀಬಾಬಾ : ನಿನ್ನ ದರ್ಬಾರಿನ ಮುಂದೆ ನಂದೇನಪ್ಪಾ?

ಖಾಸೀಂ : ಓಹೋ! ಈ ಆಸನಗಳು! ಈ ಅಲಂಕಾರಗಳು! ಸೌದೆ ಮಾರೋನ ಸೌಭಾಗ್ಯವೇ! ಈಗ ಒಂದು ಹೊರೆ ಸೌದೆ ಬೆಲೆ ಒಂದು ಸಾವಿರ ಹೊನ್ನಾಗಿದೆ ಯಂತೆ ಹೌದಾ ಅಲೀಬಾಬಾ?

ಅಲೀಬಾಬಾ : ನಿನ್ನ ವ್ಯಂಗ್ಯ ನನಗೂ ಅರ್ಥವಾಗುತ್ತಪ್ಪ. ಏನೀಗ? ಸೌದೆ ಮಾರುವವರು ಶ್ರೀಮಂತರಾಗಬಾರದೋ?

ಖಾಸೀಂ : ಒಪ್ಪಿಕೊಂಡೆಯಲ್ಲ, ನೀನೂ ಶ್ರೀಮಂತ ಅಂತ. ಈಗ್ಹೇಳು: ಒಂದೇ ದಿನದಲ್ಲಿ ನಿನಗೆ ಈ ಶ್ರೀಮಂತಿಕೆ ಹ್ಯಾಗೆ ಬಂತು?

ಅಲೀಬಾಬಾ : ದುಡಿದೆ, ಬಂತು.

ಖಾಸೀಂ : ಒಪ್ಪತಿದ್ದೆ-ನೀ ಕತೆ ಹೇಳಿದರೆ, ಹೂ ಅನ್ನೋದಕ್ಕೆ ನಾನು ಮಗು ಆಗಿದ್ದರೆ. ಎರಡೂ ಅಲ್ಲವಲ್ಲ. ಅಷ್ಟೇ ಅಲ್ಲ, ಎಂಟೋ ಹತ್ತೋ ನಾಣ್ಯ ಗಳಿಸಿದ್ದರೆ ಅದನ್ನೂ ಒಪ್ಕೋತಿದ್ದೆ. ಹಾಗೂ ಅಲ್ಲ. ನಿನಗ್ಗೊತ್ತಿದೆ: ಒಂದು ಸ್ಥಳದಲ್ಲಿ ಎಷ್ಟು ಚಿನ್ನ ಇದೆ ಅನ್ನೋದನ್ನ ನಾನು ವಾಸನೆಯಿಂದಲೇ ಕಂಡು ಹಿಡಿಯಬಲ್ಲೆ.ಈಗ ನನ್ನ ಮುಗು ಏನ್ಹೇಳ್ತಾ ಇದೆ ಗೊತ್ತೊ? ಈ ಮನೆಯಲ್ಲಿ ಖಂಡಿತ ಮೂಟೆಗಟ್ಟಲೆ ಚಿನ್ನದ ನಾಣ್ಯಗಳಿವೆ ಅಂತ. ಏನಂತಿ?

ಅಲೀಬಾಬಾ : ನಿನಗೆ ನೆಗಡಿ ಆಗಿಲ್ಲ ತಾನೆ?

ಖಾಸೀಂ : ಇಲ್ಲ.

ಅಲೀಬಾಬಾ : ನಿನ್ನ ಮೂಗು ಮುಖದಲ್ಲೇ ಇದೆ ತಾನೆ?

ಖಾಸೀಂ : ಹೌದು, ನೋಡಿಕೊ.

ಅಲೀಬಾಬಾ : ಹಾಗಿದ್ದರೆ ನಿನ್ನ ಮೂಗು ಸರಿಯಾಗೇ ಹೇಳಿದೆ.

ಖಾಸೀಂ : ಅದು, ಅದು, ಈಗ್ಹೇಳು: ಹ್ಯಾಗ್ಬಂತು ಮೂಟೆಗಟ್ಟಲೆ ಚಿನ್ನ? ಯಾರು
ಕೊಟ್ಟರು?

ಅಲೀಬಾಬಾ : ಅಲ್ಲಾ ಕೊಟ್ಟ.

ಖಾಸೀಂ : *(ಗಹಗಹಿಸಿ ನಗುವನು.)* ಅಲ್ಲಾ ಕೊಡೋ ಹಾಗಿದ್ದರೆ ಮುಂಚೆ ನನಗೇ ಕೊಡತಿದ್ದ. ಇನ್ಯಾರೋ ಮನುಷ್ಯರು ಕೊಟ್ಟದ್ದು: ಇಲ್ಲಾ ನೀ ಕದ್ದುಕೊಂಡು ಬಂದದ್ದು.

ನಿಜ ಹೇಳು.

ಅಲೀಬಾಬಾ : ನಿನಗ್ಗೊತ್ತು. ನಾ ಕಳ್ಳ ಅಲ್ಲ.

ಖಾಸೀಂ : ಬಡವ ಹೌದೋ? ಬಡತನ ಏನೇನೋ-ಕಲಿಸ್ತದೆ, ಕಳ್ಳತನ ಕಲಿಸೋದಿಲ್ಲವೊ? ನಿಜ ಹೇಳು, ಹ್ಯಾಗ್ಬಂತು? ಎಲ್ಲಿಂದ ಬಂತು! ಹೇಳದಿದ್ದರೆ ಇಕಾ ನಾ ಹೊರಟೆ.

ಅಲೀಬಾಬಾ : ಎಲ್ಲಿಗೆ?

ಖಾಸೀಂ : ರಾಜನ ಹತ್ತಿರ!

ಅಲೀಬಾಬಾ : ರಾಜನ ಹತ್ತಿರ!

ಖಾಸೀಂ : ಹೂ! ನೀನು ಅಲ್ಲಾನ ಭಕ್ತ; ಅಲ್ಲಾನ ಹತ್ತಿರ ಹೋಗ್ತಿದ್ದೆ. ನಾನು ಪಾಪಿ. ಅಲ್ಲಾನ ಪ್ರತಿನಿಧಿ ರಾಜನ ಹತ್ತಿರ ಹೋಗಿ ಕೇಳ್ತೀನಿ: ಬಡ ಅಲೀಬಾಬಾನನ್ನ ಅಲ್ಲಾ ಹ್ಯಾಗೆ ಶ್ರೀಮಂತ ಮಾಡಿದ? ಅದೂ ನನ್ನ ಬಿಟ್ಟು?

ಅಲೀಬಾಬಾ : ಭಾಯೀ ಸಾಹೇಬ, ಹಾಗೆಲ್ಲಾ ಮಾಡಿದರೆ ಹೇಗೆ? ಬಾ ಬಾ ಕೂತುಕೋ ಬಾ.

ಖಾಸೀಂ : ಕೂತುಕೊಳ್ಳೋದು ಇಲ್ಲ. ನಿಂತುಕೊಳ್ಳೋದೂ ಇಲ್ಲ, ಹೇಳಿದರೆ ಸರಿ; ಇಲ್ಲದಿದ್ದರೆ ರಾಜನ ಹತ್ತಿರ ದೂರು ಒಯ್ತೀನಿ.

ಅಲೀಬಾಬಾ : ಹೇಳ್ತೀನಿ ಬಾ.

ಖಾಸೀಂ : ಹೇಳು, ಹಾಗಾದರೆ.

ಅಲೀಬಾಬಾ : ಹೇಳತೀನಿ, ನೀ ಯಾರ ಮುಂದೂ ಹೇಳೋದಿಲ್ಲಾಂತ ಅಲ್ಲಾನ ಆಣೆ ಮಾಡಿದರೆ.

ಖಾಸೀಂ : ಅಲ್ಲಾನಾಣೆ.

ಅಲೀಬಾಬಾ : ನೋಡು: ಊರ ಹೊರಗೆ, ಕಾಡಿನಲ್ಲಿ, ನದೀ ಹತ್ತಿರ ದೊಡ್ಡ ಬಂಡೆ ಇದೆ; ಗೊತ್ತಲ್ಲ?

ಖಾಸೀಂ : ಗೊತ್ತು.

ಅಲೀಬಾಬಾ : ಆ ಬಂಡೇ ಹತ್ತಿರ ಹೋಗು. ಆಸು ಪಾಸು ಯಾರೂ ಇಲ್ಲಾಂತ ಖಾತ್ರಿ ಮಾಡಿಕೊ. ಬಂಡೇ ಮುಂದೆ ನಿಂತು,

**ಖುದಾ ಕಾ ಕಸಂ**
**ಹಸನ್‌ಕಾ ಹುಕುಂ**
**ಖುಲ್‌ಜಾ ಸೇಸೆಮಿ**-ಅಂತ ಒದರಿ ಹೇಳು, ಬಂಡೆ ಬಾಗಿಲು ತೆರೀತದೆ.
ಒಳಗಡೆ ಹೋದರೆ ಚಿನ್ನ ಬೆಳ್ಳಿ ಇದೆ, ರಾಶಿಗಟ್ಟಳೆ! ತಗೊಂಬಾ.

ಖಾಸೀಂ : ನೀ ಹೇಳಿದ್ದು ಅಲ್ಲಾನ ಸಾಕ್ಷಿಯಾಗಿ ನಿಜ ತಾನೆ?

ಅಲೀಬಾಬಾ : ನಿಜ.

ಖಾಸೀಂ : ಸುಳ್ಳು ಹೇಳಿದರೆ, ಗೊತ್ತಲ್ಲ?…………….ಜೇಲಿಗೆ!

ಅಲೀಬಾಬಾ : ಆ ಯೋಚನೆಯಿಲ್ಲ. ಆದರೆ ದಯಮಾಡಿ ನೆನಪಿಟ್ಟುಕೊ: ಒಳಗಡೆ ಹೋದ ತಕ್ಷಣ ಬಂಡೇ ಬಾಗಿಲಾ ಮುಚ್ಚು. ಮುಚ್ಚ ಬೇಕಾದರೆ.-**"ಬಂದ್ ಹೋ ಜಾ ಸೇಸೆಮಿ"** ಅಂತ ಹೇಳಬೇಕು. ಮತ್ತೆ ಹೊರಗಡೆ ಬರಬೇಕಾದರೆ,-

ಖಾಸೀಂ : ಗೊತ್ತಾಯ್ತು. ಬಂಡೇ ಬಾಗಿಲಾ ತೆರೀಬೇಕಾದರೆ,……………

ಅಲೀಬಾಬಾ : **ಖುದಾ ಕಾ ಕಸಂ**
**ಹಸನ್ ಕಾ ಹುಕುಂ**
**ಖುಲ್ ಜಾ ಸೇಸೆಮಿ**

ಖಾಸೀಂ : ಮುಚ್ಚಬೇಕಾದರೆ……..

ಅಲೀಬಾಬಾ : **ಬಂದ್ ಹೋ ಜಾ ಸೇಸೆಮಿ**

ಖಾಸೀಂ : ಖುದಾಕಾ ಕಸಂ, ಹಸನ್ ಕಾ ಹುಕುಂ, ಖುಲ್ ಜಾ ಸೇಸೆಮಿ, ಬಂದ್ ಹೋ ಜಾ ಸೇಸೆಮಿ…………ಅಂದಹಾಗೆ ನೀನೆಷ್ಟು ಕತ್ತೆ ಒಯ್ದಿದ್ದೆ?

ಅಲೀಬಾಬಾ : ಮೂರು.

ಖಾಸೀಂ : ನೀ ಮೂರು ಕತ್ತೆ ಒಯ್ದಿದ್ದರೆ ನಾನು ಬಾರಾ ಕುದುರೆ ಒಯ್ತೀನಿ. ಒಂದೇ ದಿನದಲ್ಲಿ ನಿನ್ನ ಆರು ಪಟ್ಟು ಶ್ರೀಮಂತನಾಗ್ತೀನಿ!

ಅಲೀಬಾಬಾ : ಉತ್ಸಾಹದಲ್ಲಿ ಮೈಮರೀಬೇಡಣ್ಣಾ. ಅದು ಅಪಾಯದ ಜಾಗ. ಕಳ್ಳರು ಕೂಡಿಟ್ಟ ಐಶ್ವರ್ಯ ಅದು! ನೋಡಿಕೊಂಡು ಹೋಗು. ಅತಿಯಾಸೆ ಗತಿಗೇಡು ಅಂತಾರೆ. ಏನಂತೆ, ಒಂದು ಸಲ ನೋಡಿ ಬಂದ ಮೇಲೆ ಬೇಕಾದ ಹಾಗೆ ಮತ್ತೆ ತರಬಹುದು. ಹುಷಾರಾಗಿ ಬಾ. ಅಲ್ಲಾ ನಿನ್ನ ಕಾಪಾಡಲಿ.

ಖಾಸೀಂ : ಖುದಾ ಕಾ ಕಸಂ, ಹಸನ್‌ಕಾ ಹುಕುಂ, ಖುಲ್‌ಜಾ ಸೇಸೆಮಿ……..
(ಎನ್ನುತ್ತ ಹೋಗುವನು.)

# ಪೂರ್ವಾರ್ಧ (ಇದನೆಲ್ಲ ಹೆಂಗಾರೆ ಸಾಗಿಸಲಣ್ಣ)

*(ಕಾಡು. ಖಾಸೀಂ ಕುದುರೆ ಹೊಡೆದುಕೊಂಡು ಹಾಡುತ್ತ ಬರುತ್ತಾನೆ.)*

ಖಾಸೀಂ : **ಈ ನಾಡಲ್ಲೇ ನನ್ನೆದುರಲ್ಲೇ ನಿಲ್ಲುವರಿನ್ಯಾರೋ||**
**ಮೂರೂ ಕತ್ತೆ ಒಯ್ದು ತಂದ ಬೆಳ್ಳಿ ಬಂಗಾರ**
**ಬಾರಾ ಕುದುರೆ ಒಯ್ದು ತರುವೆ ನಾನೇ ಸಾವ್ಕಾರ||**
**ಸರಿಕರ ಹೊಟ್ಟೆಗೆ ಹೊಟ್ಟೇಕಿಚ್ಚಿನ ರಾಶಿ ಸುರಿಯುವೆನೊ**
**ನೋಡಿ ಬಡವರ ನಗಲು ಚಿನ್ನದ ಹಲ್ಲು ಮಾಡಿಸುವೆನೊ**
**ಹೇಂತೀ ಹೊಡೆಯೋ ಕೋಲಿಗೆ ಚಿನ್ನದ ಅಣಸ ಹಾಕಿಸುವೆನೊ**
**ಮತ್ತೂ ಒಬ್ಬಳ ಹಡೆಯೋ ಹುಡಿಗಿಯ ಮದುವೆ ಆಗುವೆನೋ||**
**ಈ ನಾಡೆಲ್ಲಾ ನನ್ನೆದುರಲ್ಲೇ ನಿಲ್ಲುವರಿನ್ಯಾರೋ|**
**ತಿರುಕರು ಕಳ್ಳರನೋಡಿಸಲಿಕ್ಕೆ ನಾಯೀಸಾಕುವೆನೋ||**

*(ಹಾಡು ಮುಗಿದಾಗ ಆವನ ಮೂಗು ಅರಳಿದೆ. ಮೂಸುತ್ತ ಹೊರಡುತ್ತಾನೆ.)*

ಖಾಸೀಂ : ವಾಸನೆ ಬರ್ತಾ ಇದೆ!

*(ಅಲ್ಲಿ ಇಲ್ಲೆಂದು ಹುಡುಕುತ್ತ ಆ ಬಂಡೆಯ ಬಳಿಯೇ ಬರುತ್ತಾನೆ. ಠೀವಿಯಿಂದ ನಿಂತು ಒಮ್ಮೆ ಕುದುರೆಗಳ ಕಡೆಗೆ ಸಡಗರದಿಂದ ನೋಡಿ)*

**ಖುದಾ ಕಾ ಕಸಂ**
**ಹಸನ್ ಕಾ ಹುಕುಂ**
**ಖುಲ್ ಜಾ ಸೇಸೆಮಿ**

*(ಬಾಗಿಲು ಭಯಂಕರ ಸಪ್ಪಳದೊಂದಿಗೆ ತೆರೆಯುತ್ತದೆ. ಹೆದರಿ ಹಿಂದೆ ಸರಿದ ಕುದುರೆಗಳನ್ನು ಸಾವರಿಸಿಕೊಂಡು ಒಳನುಗ್ಗಿ "ಬಂದ್ ಹೋ ಜಾ ಸೇಸೆಮಿ" ಎನ್ನುತ್ತಾನೆ. ಈಗ ದೃಶ್ಯ ಬದಲಾಗುತ್ತದೆ. ಗವಿಯ ಒಳಭಾಗದಲ್ಲಿ ಹೇರಳ ಚಿನ್ನ. ಆಭರಣಗಳ ರಾಶಿ ಬಿದ್ದಿದೆ. ಸಂತೋಷಾತಿಶಯದಲ್ಲಿ ಮೈಮರೆತು ಓಡಿ ಹೋಗಿ ಚಿನ್ನದ ಮೂಟೆಗಳನ್ನ ತಬ್ಬಿಕೊಳ್ಳುತ್ತಾನೆ.)*

ಖಾಸೀಂ : **ಹಾಯ್ ಹಾಯರೆ ಚಿನ್ನ ಬೇಖಬರಾದೆನೊ ನೋಡಿ ಇದನ್ನ!**
**ಇದನೆಲ್ಲ ಹೆಂಗಾರೆ ಸಾಗಿಸಲಣ್ಣ**
**ಸಾಲsವು ಈ ಕುದುರೆ ಸತ್ತೇನೋ ನಾನಾ||**

ಮೇಳ : **ಚಿನ್ನ! ಚಿನ್ನ! ಹಾಯ್ ಹಾಯರೆ ಚಿನ್ನ!**
**ಇದನೆಲ್ಲ ಹೆಂಗಾರೆ ಸಾಗಿಸಲಣ್ಣ||**

ಖಾಸೀಂ : **ಮತ್ತೊಮ್ಮೆ ಬರುವೆನು ಇನ್ನೊಮ್ಮೆ ನಾನಾ**
**ತರುವೆನು ನೂರಾರು ಕುದುರೆಗಳನ್ನ**

ಮೇಳ : **ಚಿನ್ನ! ಚಿನ್ನ! ಹಾಯ್ ಹಾಯರೆ ಚಿನ್ನ!**
**ಇದನೆಲ್ಲ ಹೆಂಗಾರೆ ಸಾಗಿಸಲಣ್ಣ||**

*(ಅವಸರದಿಂದ "ಇದನೆಲ್ಲ ಹೆಂಗಾರೆ ಸಾಗಿಸಲಣ್ಣ" ಎನ್ನುತ್ತ ಮೂಟೆಗಳನ್ನು ಕುದುರೆಯ ಮೇಲೆ ಹೇರುತ್ತಾನೆ. ಮೇಳದವರು ಆಗಾಗ ತಮ್ಮ ಹಾಡನ್ನು ರಿಪೀಟ್ ಮಾಡುತ್ತಿರುತ್ತಾರೆ, ಹೊರಡಬೇಕೆಂದು ಬರುತ್ತಾನೆ. ಓಡಿ ಹೋಗಿ ಇನ್ನೇನೋ ತಗೊಳ್ಳುತ್ತಾನೆ. ಹೀಗೆ ಅನೇಕ ಸಲ ಮಾಡಿ, ಇನ್ನೂ ತಗೊಳ್ಳುವುದು ಸಾಧ್ಯವಿಲ್ಲವೆಂದಾದ ಮೇಲೆ ಒಲ್ಲದ ಮನಸ್ಸಿನಿಂದ ಬಂಡೆಯ ಬಳಿಗೆ ಬಂದು.)*

**"ಹಸನ್ ಕಾ ಕಸಂ**
**ಖುದಾ ಕಾ ಹುಕುಂ**
**ಖುಲ್ ಜಾ.............ಮುಂದೇನದು?**
**ಹಾ! ಖುಲ್ ಜಾ ಮಫಸಮಿ"**

*(ಎನ್ನುತ್ತಾನೆ. ಮೇಳ ಪ್ರತಿಧ್ವನಿಯೆಂಬಂತೆ ಮೋಸಮಿ ಎನ್ನುವುದು ರಿಪೀಟ್ ಆಗುತ್ತದೆ. ಬಂಡೆ ತೆರೆಯುವುದಿಲ್ಲ.)*

ಖಾಸೀಂ : ಛೇ ಛೇ ಮರವಾಯ್ತಲ್ಲಪಾ ಅದು. ಹಾ!
**ಹಸನ್ ಕಾ ಕಸಂ**
**ಖುದಾ ಕಾ ಹುಕುಂ**
**ಕುಲ್ ಜಾ ಚಿನ್ನಿಮಿ**

ಮೇಳ : ಚಿನ್ನಿಮಿ ಚಿನ್ನಿಮೀ ಚಿನ್ನಿಮೀ ಚಿನ್ನಿಮೀ……………

ಖಾಸೀಂ : ಖುಲ್ ಜಾ ಬಂಡೆಮೀ…………….

ಮೇಳ : ಬಂಡೆಮೀ ಬಂಡೆಮೀ ಬಂಡೆಮೀ……………

*(ಪ್ರತಿ ಸಲ ಹೀಗೇ ಆಗುತ್ತದೆ. ಹೆದರುತ್ತಾನೆ, ನಿರಾಸೆ ಜಾಸ್ತಿಯಾಗುತ್ತಿದೆ. ಅಲ್ಲಾ ಎಂದು ಅಳುತ್ತಾನೆ. ಮತ್ತೆ ನೆನಪಾದಂತಾಗಿ ಓಡಿ ಹೋಗಿ ಖುಲ್ ಜಾ ಮಮ್ಮೀ ಎಂದು ಬೊಗಳುತ್ತಾನೆ. ಅವನು ಹೇಳಿದ್ದನ್ನೆಲ್ಲ ಮೇಳ ರಿಪೀಟ್ ಮಾಡುತ್ತದೆ. ಧ್ವನಿಯ ಭಯಂಕರತೆಯಿಂದ ಇನ್ನಷ್ಟು ಅಧೀರನಾಗುತ್ತಾನೆ. ಗೋಳಾಡುತ್ತಾನೆ.)*

ಖಾಸೀಂ : ಯಾಕಾದರೂ ಮರೆತನೊ, ಅಲ್ಲಾ! ಇದ್ದುದರಲ್ಲೇ ಸಮಾಧಾನದಿಂದ ಇರಬೇಕಾಗಿತ್ತು. ಅತಿಯಾಸೆ ಗತಿಗೆಡಿಸ್ತಲ್ಲೋ ದೇವರೇ……

*(ಎಂದು ಅಳುತ್ತಾನೆ. ಮಧ್ಯೆ, ನೆನಪಾಗಿ ಮತ್ತೆ ಬಂಡೆಯ ಬಳಿ ಓಡಿ ಹೋಗಿ "ಖುಲ್ ಜಾ ಮೂಟಮ್ಮೀ" ಎಂದು ಏನೇನೋ ಹೇಳಿ ಬರುತ್ತಾನೆ. ಕೊನೆಗೆ "ಅಲ್ಲಾ, ನನ್ನ ಪಾರು ಮಾಡಿದರೆ ಇದರಲ್ಲಿಯ ಐದು ನಾಣ್ಯಗಳನ್ನ ನಿನ್ನ ಹೆಸರಿನಲ್ಲಿ ಬಡವರಿಗೆ ದಾನ ಮಾಡುತ್ತೇನೆ" ಎನ್ನುತ್ತಾ ಬಾಗಿಲ ಬಳಿ ಬಂದು ಬಾಯಿ ತೆರೆಯಬೇಕೆನ್ನುವಷ್ಟರಲ್ಲಿ ಹೊರಗಡೆಯಿಂದ.)*

**ಖುದಾ ಕಾ ಕಸಂ**

**ಹಸನ್ ಕಾ ಹುಕುಂ**

**ಖುಲ್ ಜಾ ಸೇಸೆಮಿ**

*(ಎಂದು ಕೇಳಿಸಿ ಖುಶಿಯಾಗುತ್ತದೆ. ಬಂಡೆ ತೆರೆದುಕೊಳ್ಳುತ್ತದೆ. ಲಗುಬಗೆಯಿಂದ ಹೊರಡುವಷ್ಟರಲ್ಲಿ ಬಾಗಿಲಲ್ಲಿ ಚೋರೋಂಕಾ ರಾಜಾ ಹಸನ್ ನಿಂತಿದ್ದಾನೆ.)*

ಖಾಸೀಂ : ಅರೆ! ಯಾರಪ್ಪಾ ನೀವು? ನೀವೂ ನನ್ನ ಹಾಗೆ ತಗೊಂಡು ಹೋಗಲಿಕ್ಕೆ
ಬಂದೀರಿ ತಾನೆ? ಹುಷಾರಪ್ಪಾ, ಆ ಬಂಡೆ ಮಂತ್ರ ಮರೆಯಬೇಡಿ…….

(ಹಸನ್‌ತನ್ನ ಜೊತೆಗಾರ ಕಳ್ಳರಿಗೆ ಸನ್ನೆ ಮಾಡುತ್ತಾನೆ. ಕಳ್ಳರು ಅವನನ್ನು ಮುತ್ತುತ್ತಾರೆ.)

## ಪೂರ್ವಾರ್ಧ (ಘಾತವಾಯಿತು ಪತಿಯ ಜೀವಕ್ಕೆ)

*(ಖಾಸೀಮನ ಮನೆ. ಚಿಂತೆ ಮಾಡುತ್ತ ಫಾತಿಮಾ ಕೂತಿದ್ದಾಳೆ. ಮರ್ಜೀನಾ ಅವಳನ್ನು ಸಂತೈಸುತ್ತಿದ್ದಾಳೆ. ಹಾಡಿನ ಅರ್ಥದಂತೇ ಮುಂದಿನ ಅಭಿನಯವಿರಬೇಕು.)*

ಮೇಳ : **ಕತ್ತಲಾದರು ಬರಲೇ ಇಲ್ಲ ಮನೆಗೆ ಖಾಸೀಮ**
**ಅತ್ತು ಕರೆಯುತ ಚಿಂತೆ-ಮಾಡಿದಳವನ ಬೇಗಮ್ಮ॥**

**ಹೆಚ್ಚಿನಾಸೆಗೆ ಹುಚ್ಚಳಾದೆನು ದಾರಿ ಸಿಗದಲ್ಲಾ।**
**ಹೋದವ ತಿರುಗಿ ಬರನಲ್ಲಾ**

**ನಮ್ಮ ಭಾಗಕೆ ಕಣ್ಣು ಮುಚ್ಚಿದನಲ್ಲ ಹಾಯಲ್ಲಾ।**
**ಅವನೆದೆ ಒಣಗಿ ಹೋಯ್ತಲ್ಲಾ॥**

*(ಅಲೀಬಾಬಾನ ಮನೆಗೆ ಹೊರಡುವಳು. ದೃಶ್ಯ ಬದಲಾವಣೆಗೆ ಅಗತ್ಯವಿದ್ದಷ್ಟು ಹೊತ್ತು ಮೇಳ ಆಯಾ ಸಾಲುಗಳನ್ನು ರಿಪೀಟ್ ಮಾಡು ತ್ತದೆ.)*

**ಬಾಗಿ ನಡೆಯುವ ಹೊತ್ತು ಬಂದವು ಬಾರೆ ಮರ್ಜೀನಾ**
**ಪತಿಯ ತಮ್ಮನ ಮತವ ಕೇಳೋಣು ಹಿಡಿದು ಕಾಲನ್ನ॥**

*(ಅಲೀಬಾಬಾ ಮನೆ. ಅಲೀಬಾಬಾ, ಸಲೀಂ ಕೂತಿದ್ದಾರೆ. ಫಾತಿಮಾ, ಮರ್ಜೀನಾಳನ್ನು ಅವಲಂಬಿಸಿ ಬರುತ್ತಾಳೆ.)*

ಫಾತಿಮಾ : **ನೀ ತಮ್ಮನಲ್ಲಾ ಖಾಸ ಅಲ್ಲಾ ಕಾಯೊ ನಮ್ಮನ್ನಾ**
**ಹೋದ ಪತಿ ಹಿಂದಿರುಗಿ ಬಾರನು ತೋರೊ ಕರುಣೆಯನಾ॥**

ಅಲೀಬಾಬಾ : ಅಲ್ಲಾನೇ ಕಾಪಾಡಬೇಕು. ಬೆಳಿಗ್ಗೆ ಹೋದವನು ಇನ್ನೂ ಬರಲಿಲ್ಲ, ಅಂದರೆ ಏನೋ ಅನಾಹುತವೇ ಆಗಿರಬೇಕು. ನಾನೇ ಅಲ್ಲಿಗೆ ಹೋಗಿ ಬರ್ತೀನಿ. ಅಲ್ಲಾ ಇದ್ದಾನೆ. ಮಾಡೋಣ ಮಾಡೋ ಪ್ರಯತ್ನ. ಮುಂದಿನದು ಅಲ್ಲಾನ ಚಿತ್ತ, ಸಲೀಂ, ನೀ ಹೋಗಿ ನಿನ್ನ ದೊಡ್ಡಮ್ಮನ ಮನೆಯಲ್ಲಿರು.

ಸಲೀಂ : ನಾನೂ ನಿನ್ನ ಜೊತೆ ಬರ್ತೀನಪ್ಪಾ.

ಅಲೀಬಾಬಾ : ಅದು ಅಪಾಯದ ಸ್ಥಳ. ದಾಟಿ ಬರೋದು ನನಗೊಬ್ಬನಿಗೇ ಗೊತ್ತು. ನೀ ಹೋಗು.

ಮೇಳ : **ಅಲ್ಲಾ ಎಂದನು ಅಲೀಬಾಬಾ ದೊಡ್ಡವನೊ ನೀನಾ**
**ದೊಡ್ಡದು ಭಕ್ತರಲ್ಲಿ ಕರುಣಾ**
**ನೀನೆ ಕೊಡುವವ ನೀನೇ ಕೊಂಬವ ಅಸಮ ಘನವಾನಾ||**
**ಹೊಂಟು ನಿಂತನು ಎಂಟು ಎದೆಯಲಿ**
**ಕತ್ತೆ ಹಿಂಬಾಲಾ**
**ಮುತ್ತಿಕೊಂಡಿತು ಕತ್ತಲಾತನ**
**ಚಿತ್ತದಲಿ ದಿಗಿಲಾ||**
(ಬಂಡೆಯ ಬಳಿ ಬರುತ್ತಾನೆ)

**ಬಂಡೆಯ ಬಳಿ ಬಂದಾನು ಕಳ್ಳರ ದಂಡು ಇರಲಿಲ್ಲ**
**ಖುಲ್ ಜಾ ಸೇಸೆಮಿಯೆಂದು ಮೆಲ್ಲಗೆ ಉಸುರಿದಾನಲ್ಲಾ**
**ಒಳಗೆ ಹೊಕ್ಕನು ನೋಡಿ ಚೀರಿದ ಅಲ್ಲಾ ಹಾಯಲ್ಲಾ||**

ಅಲೀಬಾಬಾ : ಹಾಯಲ್ಲಾ……………

ಮೇಳ : ಹಾಯಲ್ಲಾsss

*(ಒಳಗೆ ಖಾಸೀಮ ಅರೆಜೀವವಾಗಿ ನೇತಾಡುತ್ತಿದಾನೆ)*

ಅಲೀಬಾಬಾ : **ಏನಿದೇನಿದು ಕಾಣದಾಯಿತು ಆಸೆಗಿಂಥಾ ಶಿಕ್ಷೆಯೇ**
**ಅಣ್ಣನೀ ಪರಿ ಭಿನ್ನವಾದನು ಅರ್ಧಜೀವಾಗಿರುವನೇ**
**ಕೆಟ್ಟ ಆಸೆಯ ಕೈಗೆ ಕೊಟ್ಟನು ತನ್ನ ಬುದ್ಧಿಯನಣ್ಣನೊ**
**ಹೊಟ್ಟೆಕಿಚ್ಚಿಗೆ ಸುಟ್ಟು ಹೋದನು ಕೆಟ್ಟುಹೋದನು ಅಣ್ಣನೊ||**

ಮೇಳ : **ಅತ್ತು ಕರೆಯುವ ಹೊತ್ತು ಮೀರಿತು ಥಟ್ಟನೆದ್ದನು ಸೋದರ**
**ತುಂಡು ದೇಹದ ಗುಂಡು ಮಾಡುತ ಕತ್ತೆ ಡುಬ್ಬಿಗೆ ಹೇರಿದಾ||**

**ಮನೆಗೆ ಹೊರಟನು ವಿಧಿಯ ಶಪಿಸುತ ದಾರಿ ತುಂಬಾ ನೆತ್ತರು**
**ಕಣ್ಣ ನೀರನು ಸುರಿಸಿ ತೊಳೆದನು ದಾರಿ ಮೊದಲಂತಾಯಿತು||**

*(ಖಾಸೀಮನ ಮನೆಗೆ ಬಂದು ಬಾಗಿಲು ಬಡಿಯುವನು. ತೆರೆದ ತಕ್ಷಣ ಕತ್ತೆ ದೂಕಿಕೊಂಡು ಒಳನುಗ್ಗಿ ಬಾಗಿಲಿಕ್ಕಿಕೊಳ್ಳುವನು. ಮನೆಯ ಒಳಭಾಗ. ನೋಡಿ ಫಾತಿಮಳಿಗೆ ಆಘಾತವಾಗುತ್ತದೆ.)*

ಫಾತಿಮಾ : **ಘಾತವಾಯಿತು ಪತಿಯ ಜೀವಕ್ಕಾ**
**ಘಾತಿಸಿದ ಪಾಪಿಯ ಹೇಂತಿಯಾಗಲಿ ರಂಡಿ ಈ ಕ್ಷಣಕ**
**ವಿಧವೆಯಾಗಲಿ ವಿಧಿಯ ಹೆಂಡತಿ ನೋಡಿ ನಕ್ಕುದಕ**
**ನನ್ನ ಭಾಗ್ಯವು ಕಂದಿತಲ್ಲಾ ಎಂಥ ಕಾಲವು ಬಂದಿತಲ್ಲಾ**
**ಏನಿದೆಲ್ಲಾ ಹಾಯರೆ ಹಾಯಲ್ಲಾ! ಹಾಯಲ್ಲಾ||**

ಅಲೀಬಾಬಾ : ಖಂಡಿತ ಇದು ಅಳುವ ಸಮಯವಲ್ಲ. ಹೊರಗೆ ಕಳ್ಳರು ಕಾಯುತ್ತಿರಬಹುದು. ಇದೇ ಮನೆ ಅಂತ ಗೊತ್ತಾದರೆ ಇದ್ದದ್ದೂ ಕಷ್ಟ. ಖಾಸೀಮನ ಜೀವ ಮುಖ್ಯ. ಈಗೊಬ್ಬ ಹಕೀಮ ಬೇಕು. ಸಲೀಂ,

ಸಲೀಂ : ಹಕೀಮನ ಮನೆ ಗೊತ್ತಿಲ್ಲವಲ್ಲ. ಕೇಳ್ತಾ ಹೋಗ್ತೀನಿ.

ಮರ್ಜೀನಾ : ಕೇಳಿಕೊಂಡು ಹೋದರೆ ಊರತುಂಬ ಸುದ್ಧಿಯಾಗಬಹುದು. ಅದು ಕಳ್ಳರಿಗೂ ತಲುಪಬಹುದು. ಹಕೀಮ್ ಮುಸ್ತಫಾನ ಮನೆ ನಾ ಬಲ್ಲೆ. ನಾನೇ ಹೋಗಿ ಕರೆದುಕೊಂಡು ಬರ್ತೀನಿ.

ಸಲೀಂ : ನಾನೂ ನಿನ್ನ ಜೊತೆ ಬರ್ತೀನಿ.

ಅಲೀಬಾಬಾ : ಬೇಡ. ಒಬ್ಬಳೇ ಹೋಗಲಿ. ಆದರೆ ಹುಷಾರ್. ಹೊರಗಡೆ ಯಾರಾದರೂ ಇದ್ದಿದ್ದಾರು. ನೋಡಿಕೊಂಡು ಹೋಗು. ಹಾಗೇ ಹಕೀಮನಿಗೂ ಇಂಥಾ ಮನೆಗೇ ಹೋಗಿದ್ದೆ ಅಂತ ತಿಳೀಬಾರದು. ಕೇಳಿದಷ್ಟು ದುಡ್ಡು ಕೊಡು. ಕಣ್ಣುಮುಚ್ಚಿ ಕರೆದುಕೊಂಡು ಬಾ. ಹಾಗೇ ನೀ ಯಾರಂತ್ಲೂ ಹೇಳಬೇಡ, ಹೋಗು.

ಮರ್ಜೀನಾ : ಸರಿ

*(ಬುರ್ಖಾ ಹಾಕಿಕೊಂಡು ಹೊರಡುವಳು.)*

## ಪೂರ್ವಾರ್ಧ (ಸಣ್ಣ ಜನ)

*(ವೈದ್ಯಶಾಲೆ. ಹಕೀಂ ಮುಸ್ತಫಾ ಬಾಬಾ ಒಬ್ಬನೇ ತಂತಾನೆ ಮಾತಾಡಿ ಕೊಳ್ಳುತ್ತಿದ್ದಾನೆ.)*

ಹಕೀಂ : ಅಲ್ಲಾ! ನೀನು ದೊಡ್ಡವನೋ ಅಲ್ಲಾ. ಅದರಲ್ಲೇನೂ ಸಂಶಯವಿಲ್ಲಾ. ನೀ ಯಾಕೆ ದೊಡ್ಡವನು ಅಂದರೆ, ನಾ ಹೇಳ್ತೀನಿ ಅದಕ್ಕೆ. ನನ್ನ ಮಾತಿನಲ್ಲಿ ಯಾರಿಗಾದರೂ ನಂಬಿಕೆ ಇಲ್ಲಾ ಅಂದರೆ, ಅಲ್ಲಾ, ಅವರಿಗೇನೋ ರೋಗ ಇದೆ ಅಂತ ಅರ್ಥ. ಅಂಥಯವರನ್ನ ನನ್ನ ಹತ್ತಿರ ಕಳಿಸು. ಗುಣಪಡಿಸಿ ದಿನಕ್ಕೆ ಐದು ಬಾರಿ ನಮಾಜ ಮಾಡೋ ಹಾಗೆ ಮಾಡ್ತೀನಿ. ಆದರೆ ಅವರಲ್ಲ ಅಲ್ಲಾ, ನಿಜವಾದ ರೋಗಿ ನೀನು! ನೀನೇ ಆರೋಗ್ಯವಂತನಾಗಿದ್ದರೆ ನನಗೆ ಈ ರೀತಿ ಬಡತನ ಕೊಡತಿದ್ಯಾ? ದುಡ್ಡು ಕೊಡೋ ದೇವರೇ ಅಂದರೆ ದಯ ಕೊಡೋದೇ? ರೋಗಿಗಳು ಸಾಲಾಗಿ ಬರ್ತಾರೆ. ಔಷಧಿ ತಗೋತಾರೆ. ದುಡ್ಡೆಲ್ಲಿ ಅಂದರೆ ನಿನ್ನ ಹೆಸರು ಹೇಳತಾರೆ. ನಿನ್ನ ಹೆಸರಿನ ಉದ್ರಿ ಖಾತೆ ಬೆಳೆದೂ ಬೆಳೆದೂ ಇಷ್ಟುದ್ದಾಯ್ತು. ಒಂದು ದುಡ್ಡನ್ನಾದರೂ ತೀರಿಸಿದೆಯಾ? ಏನಪ್ಪಾ, ನಾ

ಜಾಸ್ತಿ ಕೇಳಿದ್ನಾ? ಚಡ್ಡಿ ಹರಿದು ಹೋಗಿದೆ, ಒಂದು ಗಟ್ಟಿ ಚಡ್ಡಿ ಕೊಡೋ ದೇವರೇ ಅಂದೆ. ಕೊಟ್ಟೆಯಾ? ಅಲ್ಲಾ ನನಗೆ ಸಿಟ್ಟು ಬರ್ತಾ ಇದೆ. ಇವತ್ತಿನಿಂದಾ *(ಮರ್ಜೀನಾ ಬರುವಳು.)*

ಮರ್ಜೀನಾ : ಮುಸ್ತಫಾ ಬಾಬಾ, ಹಕೀಂ ಮುಸ್ತಫಾ ಬಾಬಾ…….

ಹಕೀಂ : ಯಾರದು?

ಮರ್ಜೀನಾ : ಬೇಗನೇ ಬನ್ನಿ ಹಕೀಮರೇ.

ಹಕೀಂ : ನಿನಗ್ಯಾರೋ ತಪ್ಪು ವಿಳಾಸ ಹೇಳಿದಾರಮ್ಮಾ. ಇಲ್ಲಿ ಯಾರೂ ಹಕೀಮರಿಲ್ಲವಲ್ಲ.

ಮರ್ಜೀನಾ : ಹಾಗ್ಹೇಳಬೇಡಿ, ನೀವೇ ಹಕೀಂ ಮುಸ್ತಫಾ ಬಾಬಾ. ನಮ್ಮ ಯಜಮಾನರು ಸಾಯ್ತಿದಾರೆ. ನೀವು ಬಂದರೆ ಜೀವ ಉಳಿಯುತ್ತೆ. ಅಲ್ಲಾನ ಹೆಸರಿನಲ್ಲಾದರೂ ಬನ್ನಿ.

ಹಕೀಂ : ಯಾರ ಹೆಸರಿನಲ್ಲಿ? ಅಲ್ಲಾನಃ? ನನಗೂ ಅವನಿಗೂ ಜಗಳ ಆಯ್ತು ತಾಯೀ.

ಮರ್ಜೀನಾ : ಬೇಗ ಬನ್ನಿ ಹಕೀಮರೇ,

ಹಕೀಂ : ದೊಡ್ಡ ಜಗಳ. ಹಿಂದೆ ಈ ಥರ ಅವನ ಜೊತೆ ಯಾರೂ ಜಗಳಾಡಿರಲಿಲ್ಲ.

ಮರ್ಜೀನಾ : ಹಕೀಮರೇ, ಒಂದು ಗಳಿಗೆ ತಡ ಆದರೂ ಅನಾಹುತವಾಗಬಹುದು.

ಹಕೀಂ : ಯಾಕಂತೀಯಾ? ಅಲ್ಲಿ ನೋಡು, ಅವನ ಉದ್ರೀ ಖಾತೆ ಹ್ಯಾಗೆ ಬೆಳೆದಿದೆ! ಎಲ್ಲರೂ ನಿನ್ನ ಹಾಗೇ ಅವನ ಹೆಸರು ಹೇಳಿಕೊಂಡೇ ಬರತಿದ್ದರು.

ಮರ್ಜೀನಾ : ಹಕೀಮರೇ, ಜೀವ ಮಿಂಚಿ ಹೋಗಬಹುದು.

ಹಕೀಂ : ಜಗಳಾಡಿದ್ದಕ್ಕೆ ನನಗೂ ದುಃಖ ಆಯ್ತು. ಏನು ಮಾಡ್ತೀ ಹೇಳು, ದೊಡ್ಡ ಮಂದಿ ಸಹವಾಸ.

ಮರ್ಜೀನಾ : ಇದು ಹರಟೆ ಹೊಡೆಯೋ ಸಮಯ ಅಲ್ಲ, ಹಕೀಮರೇ.

ಹಕೀಂ : ಒಪ್ಪಿದೆ. ನಾ ದೊಡ್ಡ ಸಜ್ಜನ ಅಲ್ಲ ಅಂತ. ಆದರೆ ಖಂಡಿತ ಸಣ್ಣ ಸಜ್ಜನ ಹೌದೋ? ಸಣ್ಣ ಸಜ್ಜನನಿಗೆ ಸಣ್ಣ ಅನ್ಯಾಯ ಆಗಲಿ, ಸಹಿಸ್ಕೋಬಹುದು. ಆದರೆ ದೊಡ್ಡ ಅನ್ಯಾಯ ಆದರೆ ಹ್ಯಾಗೆ? ಏನಂತಿ?

ಮರ್ಜೀನಾ : ನೀವು ಕೇಳಿದಷ್ಟು ಹಣ ಕೊಡ್ತೀನಿ.

ಹಕೀಂ : (ತಕ್ಷಣ ಎದ್ದು ಬಂದು.) ಏನಂದಿ?

ಮರ್ಜೀನಾ : ಬೇಕಾದರೆ ಚಿನ್ನದ ನಾಣ್ಯ ಕೊಡ್ತೀನಿ.

ಹಕೀಂ : ಈಗೇನಾದರೂ ಕೊಡ್ತೀರೊ?

ಮರ್ಜೀನಾ : ಓಹೊ, ತಗೊಳ್ಳಿ.

ಹಕೀಂ : ಅಯ್ಯಯ್ಯೊ ದೇವರೇ! ಮೊದಲೇ ಯಾಕ್ಹೇಳಲಿಲ್ಲ? ಎಂಥಾ ಹುಚ್ಚು ಹುಡುಗಿ ನೀನು? ಇಷ್ಟು ಸಮಯ ಹಾಳು ಮಾಡಿದೆ. ಕೊಡು, ಕೊಡು.

ಮರ್ಜೀನಾ : ನನ್ನ ಕರಾರು ಒಪ್ಪೋದಾದರೆ.

ಹಕೀಂ : ಮೊದಲು ಅದನ್ನ ಕೊಡು. ನೀ ಹೇಳಿದಕ್ಕೆಲ್ಲಾ ಒಪ್ಕೋತೀನಿ. *(ಹಣ ಕೊಡುವಳು. ಪರೀಕ್ಷಿಸಿ ನೋಡಿ.)* ಹಾಯಲ್ಲಾ! ಅಸಲಿ ಚಿನ್ನದ ನಾಣ್ಯ ತಾನೆ?

ಮರ್ಜೀನಾ : ಕಣ್ಣು ಮುಚ್ಚಿ ಕರೆದುಕೊಂಡು ಹೋಗ್ತೀನಿ. ಬರೋಹಾಗಿದ್ರೆ ಇನ್ನೆರಡು ಕೊಡ್ತೀನಿ. ಏನಂತೀರಿ?

ಹಕೀಂ : ಆ ಎರಡನ್ನೂ ಈಗಲೇ ಕೊಡೋದಾದರೆ ಕಣ್ಣು ಕಟ್ಟು

*(ಕಣ್ಣು ಕಟ್ಟುವಳು. ಕೈಹಿಡಿದು ಕರೆದುಕೊಂಡು ಹೊರಡುವಳು.)*

ಮೇಳ : **ಕುರುಡು ವೈದ್ಯನ ಹಿಡಿದು ತಂದಳು ಜಾಣೆ ಮರ್ಜೀನಾ**
**ವೈದ್ಯ ತಡವರಿಸುತ್ತ, ನಾಣ್ಯವ ಚಿಂತಿಸುತ ಬಂದಾ||**
**ಎಂಥ ಚಿನ್ನದ ಭಾಗ್ಯವಂತರೊ ನನ್ನ ಕರೆದವರಾ| ಇವರಾ**
**ಕಣ್ಣ ಕಟ್ಟಿದರ್ಯಾಕೆ ಈ ಪರಿ ಗುಟ್ಟು ಬಿಡದವರಾ| ಇವರಾ**
**ಗುಟ್ಟ ಕಟ್ಟಿದ ಗಂಟ ಬಿಚ್ಚುವೆ ಬೆದಕುವೆನೊ ಮೂಲ| ಈಗಲೆ**
**ಕಲ್ಲು ತಾಗಿತು ಎಡವಿ ಬಿದ್ದನು ಚಿಂತೆ ಮಾಡುತ್ತ| ಹಾ**
**ಯಲ್ಲಾನ ನೆನೆಯುತ್ತ||**

*(ಹಾಡು ನಡೆದಾಗ ರಸ್ತೆಯಲ್ಲಿ ಬರುತ್ತಿರುತ್ತಾನೆ. ಹಾಡು ಮುಗಿದಾಗ ಎಡವಿ ಬೀಳುತ್ತಾನೆ. ಅಲ್ಲೇ ಮನೆ. ಒಳಕ್ಕೆ ಹೋಗುವರು.)*

# ಪೂರ್ವಾರ್ಧ (ಪತ್ತೇದಾರಿ)

*(ಬಂಡೆಯ ಮುಂಭಾಗದಲ್ಲಿ ಹಸನ್ ಖಾಸೀಮನ ಒಂದು ಮೆಟ್ಟು ಹಿಡಿದು ಆಕಡೆ ಈಕಡೆ ಅಡ್ಡಾಡುತ್ತಿದ್ದಾನೆ. ಹಿಂದೆ ಐಜೀಕೆ ಅಡ್ಡಾಡುತ್ತಿದ್ದಾನೆ. ಕಳ್ಳರೆಲ್ಲ ಸುಮ್ಮನೆ ನಿಂತಿದ್ದಾರೆ.)*

ಹಸನ್ : ಛಪ್ಪನ್ನೈವತ್ತಾರು ದೇಶದಲ್ಲಿ ನನ್ನನ್ನು ಎದುರು ಹಾಕಿಕೊಳ್ಳೋ ಧೈರ್ಯ ಯಾವನಲ್ಲೂ ಇರಲಿಲ್ಲ; ಈಗ ಇದ್ದಕಿದ್ದ ಹಾಗೆ ನಾನು ಕದ್ದದ್ದನ್ನೇ ಯಾರೋ ಕದೀತಿದಾರಲ್ಲ! ಕಳ್ಳ ಸಿಕ್ಕಿಬಿದ್ದ ಅಂತ ಅವನ್ನ ಅರೆಜೀವಾ ಮಾಡಿ ವಿಷಯ ತಿಳಿದುಕೊಳ್ಳೋಣ ಅಂದರೆ ಅವನೂ ನಾಪತ್ತೆ! ಹೊಸದಾಗಿ ಕಳ್ಳತನ ಮಾಡೋದಿರಲಿ, ಅದ್ದದ್ದನ್ನು ಕಾಪಾಡಿಕೊಳ್ಳೋದೇ ಸಾಕಾಗಿದೆ.

ಐಜೀಕೆ : ಇದರ ಹಿಂದೆ ಯಾವುದೋ ಬಹು ದೊಡ್ಡ ಕಳ್ಳರ ಜಾಲ ಇದ್ದ ಹಾಗಿದೆ. ಬಾಸ್.

ಕಳ್ಳ ೪ : ಜಾಲ ಇದ್ದಿದ್ದರೆ ಈ ಥರ ಒಬ್ಬನೇ ಬರತಿದ್ದ ಅಂತೀಯಾ?

ಕಳ್ಳ ೩ : ಪೋಲೀಸರೇ ಇರಬಹುದೊ? ಯಾಕೆಂದರೆ ಕಳ್ಳರ ಮಾಲು ಕದಿಯೋದು ಅವರಿಗೇ ಸಾಧ್ಯ!

ಹಸನ್ : ಪೋಲೀಸರಾಗಿದ್ದರೆ ಅಷ್ಟು ಐಶ್ವರ್ಯ ಒಟ್ಟಿಗೇ ಹೊತ್ತುಕೊಂಡು ಹೋಗತಿದ್ದರ?

ಕಳ್ಳ ೪ : ನಮ್ಮ ಕೈಗೆ ಸಿಕ್ಕು ಪಾರಾದವನು ಪೋಲೀಸಂತೂ ಅಲ್ಲ.

ಕಳ್ಳ ೫ : ಅಷ್ಟಿಷ್ಟೇ ಸಾಗಸ್ತಾ ಇರೋದನ್ನ ನೋಡಿದರೆ ಇದ್ಯಾವುದೊ ಸಣ್ಣ ಕಳ್ಳರ ಗುಂಪಿರಬೇಕು ಬಾಸ್.

ಕಳ್ಳ ೪ : ನಮ್ಮಿಂದ ಏಟು ತಿಂದವನು ಯಾವನೋ ಮರಿ ಕಳ್ಳನೇ ಇರಬೇಕು. ಮಂತ್ರ ಮರೆತು ನಮ್ಮ ಕೈಗೆ ಸಿಕ್ಕುಬಿದ್ದ. ಅನುಭವ ಸಾಲದು ನೋಡಿ! ಇವನ ಗುರು ಕಳ್ಳ ಒಬ್ಬ ಇದಾನೆ. ಆತನೇ ಅವನಿಗೆ ಮಂತ್ರ ಕಲಿಸಿ ಕಳಿಸಿದ್ದು. ಅವನ ಪತ್ತೆ ಆಗಬೇಕು.

ಹಸನ್ : ಹಾಗಂತೀಯಾ?

ಐಜೀಕೆ : ಅವನ ಮಾತನ್ನ ನಂಬ್ತೀರಲ್ಲಾ ಬಾಸ್.

ಕಳ್ಳ ೪ : ಮೂವತ್ತು ವರ್ಷ ಸರ್ವೀಸಾಯ್ತು ಸಾರ್.

ಐಜೀಕೆ : ಕತ್ತೆಗೂ ವಯಸ್ಸಾಗುತ್ತಯ್ಯಾ, ಹಾಗಾದರೆ…………

ಹಸನ್ : ಐಜೀಕೆ.

ಐಜೀಕೆ : ಎಸ್ ಬಾಸ್.

ಹಸನ್ : ಎಲ್ಲಿಗೆ ಬಂತು ನಿನ್ನ ಪತ್ತೇದಾರಿ ಕೆಲಸ?

ಐಜೀಕೆ : ತುಂಬ ಪ್ರಯತ್ನ ಮಾಡ್ತಾ ಇದೀನಿ. ಕಳ್ಳರ ಸುಳಿವೇ ಸಿಗ್ತಾ ಇಲ್ಲ ಬಾಸ್.

ಹಸನ್ : ನಿನ್ನಿಂದ ಆಗೋದಿಲ್ಲ ಅನ್ನು.

ಐಜೀಕೆ : ಯಾರಿದ್ದರೂ ಇಷ್ಟೇ ಬಾಸ್.

ಹಸನ್ : ನಾಲಾಯಖ್! ಇವತ್ತಿನಿಂದ ನಿನ್ನನ್ನ ಐಜೀಕೆ ಪೋಸ್ಟಿನಿಂದ ಡಿಸ್‌ಮಿಸ್ ಮಾಡಿದೀನಿ. (ಹೋಗಿ ಅವನ ಬಿರುದು ಬಾವಲಿಗಳನ್ನು ಕಸಿಯುವನು.) ಯಾರು ಕಳ್ಳನ್ನ ಪತ್ತೆ ಮಾಡತಾರೋ ಅವರೇ ಐಜೀಕೆ! ಯಾರು ಮುಂದೆ ಬರ್ತೀರಿ?

ಕಳ್ಳ : ನನ್ನನ್ನ ಐಜೀಕೆ ಮಾಡಿ ಬಾಸ್, ಬೇಜಾನ್ ಸರ್ವೀಸಾಗಿದೆ.

ಹಸನ್ : ಐಜೀಕೆ ಅಂದರೆ ಗೊತ್ತೇನಯ್ಯಾ?

ಕಳ್ಳ ೪ : ಗೊತ್ತು ಬಾಸ್. ಇನ್ಸಪೆಕ್ಟರ್ ಜನರಲ್ ಆಫ್ ಕಳ್ಳಾಸ್,

ಹಸನ್ : ಹಾಗಿದ್ದರೆ ಮೊದಲು ಕಳ್ಳನ ಪತ್ತೆ ಮಾಡಿಕೊಂಬಾ. ಆಮೇಲೆ ನೋಡೋಣ.

ಕಳ್ಳ : ಆಯ್ತು ಮೆಟ್ಟು ಕೊಡಿ.

*(ಹಸನ್ ಕಳ್ಳ ೪ ನಿಗೆ ಖಾಸೀಮನ ಮೆಟ್ಟು ಕೊಡುವನು. ಅವನದನ್ನು ಕಣ್ಣಿಗೆ ಒತ್ತಿಕೊಂಡು ಹೊರಡುವನು.)*

## ಉತ್ತರಾರ್ಧ (ಈಜೀಕೆ ತುರಾಯಿ)

*(ಓಡುತ್ತ ಬಂದ ಮೇಳ ರಂಗವನ್ನು ವ್ಯಾಪಿಸಿ ಕುಣಿಯುತ್ತ ಹಾಡತೊಡಗುತ್ತಾರೆ. ಕಳ್ಳ ೪ ಬರುತ್ತಾನೆ.)*

ಮೇಳ : **ಬೆಚ್ಚಗಿನ ಪ್ರೇಮಕ್ಕೆ ಹೂವು ಬಿಟ್ಟಾವು ಗಿಡಕೆ**
**ಪ್ರೀತಿಯ ಹಾಡಲಿಕ್ಕೆ ಬಾಯಿರದವರ್ಯಾರೋ**
**ಬಾಯಿ| ಮುಚ್ಚುವ ಕವಿ ಯಾರೊ||**

ಕಳ್ಳ : ಯೇ ಯೇ, ನಿಲ್ಲಸ್ರೋ ಹಾಡನ್ನ………………

ಮೇಳ : **ಹಾಡು ಕತೆಗಳ ಒಳಗೆ ಹರಿದಾವು ಪ್ರೇಮದ ನಡಿಗೆ**
**ಪ್ರೇಮಿಗಳ ಹರಸಿದರೆ ಗೌರವ ದೇವರಿಗೆ**
**ಬೀಸೋ ತಂಗಾಳಿಗೆ ಗೊತ್ತು ಪ್ರೇಮದ ಮಹಿಮೆ||**

ಕಳ್ಳ : ಯೋ ಯೋ ನಿಲ್ಲಸ್ರಯ್ಯಾ ಅಂದರೆ………….

ಮೇಳ : **ಪ್ರೇಮಿಯ ಕಣ್ಣಿಗೆ ಮಿಂಚುಗಳಂಜ್ಯಾವೆ**
**ಪ್ರೇಮಿಯ ಮಾತಿಗೆ ಸಿಡಿಲು ನಡುಗ್ಯಾವೆ**
**ಗುಡ್ಡ ಬೆಟ್ಟಗಳೆಲ್ಲ ದಾರಿ ಬಿಟ್ಟಾವೇ ಜೀಯಾ|**
**ಸೈ ಸೈ ಎಂದಾವೇ||**

ಕಳ್ಳ : ಈ ನನ್ನ ಮಕ್ಕಳು ಅದೇನಪ್ಪಾ ಹರಿಕಥೆ ಸುರು ಮಾಡಿದರು!
ತಾಳಿ ಮಾಡತೇನೆ………………….

*(ಹಡಪದಿಂದ ವಿಚಿತ್ರ ಸಪ್ಪಳ ಮಾಡಿ ಚೂರಿ ಹಿರಿದು ನಿಲ್ಲುತ್ತಾನೆ. ಕುಣಿಯುತ್ತಿದ್ದ ಮೇಳ ಬೆದರಿ ಹಿಂಜರಿಯುತ್ತಾರೆ. ತನ್ನ ಕಾರ್ಯಕ್ಕೆ ತಾನೇ ಖುಷಿಪಟ್ಟು ಕಳ್ಳ ನಗುತ್ತಾನೆ.)*
ಸುಮ್ಮನೇ ನನ್ನ ತಂಟೆಗೆ ಬರಬೇಡಿ. ಹೋಗಿ……………..

*(ಮೇಳ ಹಿಂದೆ ಸರಿಯುತ್ತಾರೆ. ಈತ ಮತ್ತೆ ಹಡಪದಲ್ಲಿ ಚೂರಿ ಇಟ್ಟು ಸ್ವಗತದಲ್ಲಿ ತನ್ಮಯನಾಗುತ್ತಾನೆ.)*

ಕಳ್ಳ : ಅಲ್ಲಾ ನಾವೇ ಕಳ್ಳರು ಅಂದರೆ ನಮ್ಮಲ್ಲೇ ಕಳ್ಳತನ ಮಾಡೋದೆ? ಅಂದರೆ
ಕದಿಯುವಂಥವ ಭಾರೀ ಕಳ್ಳನೇ ಇರಬೇಕು. ನನಗೇನಾದರೂ ಆ ಕಳ್ಳ ನನ
ಮಗನ ಸುಳಿವು ಸಿಕ್ಕಿದರೆ ನಾನೇ ಇನ್ಸ್‌ಪೆಕ್ಟರ್ ಜನರಲ್ ಆಫ್ ಕಳ್ಳಾಸ್!

*(ಅಷ್ಟರಲ್ಲಿ ಮೇಳದ ಒಬ್ಬ ಅವನ ಹಡಪ ಕದಿಯುವನು. ಕಳ್ಳ ಅವನ ಬೆನ್ನು ಹತ್ತುವನು.)*

ಕಳ್ಳ : ಅಯ್ಯಯ್ಯೋ ಬೇಡ ಬೇಡ, ಕೊಡಪಾ……………..

ಮೆಳದ ನಾಯಕ : ಏನಯ್ಯಾ; ನಮ್ಮ ಪಾಡಿಗೆ ನಾವು ಹಾಡಿಕೊಂಡಿದ್ದರೆ ನಿಂದೇನಯ್ಯಾ ಗಂಟು ಹೋಯ್ತು? ಈ ರಂಗಭೂಮಿ ನಿಂದಾ? ಈ ವಾದ್ಯಗಳು ನಿಂದಾ? ನಾವು ಹಾಡಿಕೊಂಡಿರ್ಲಿಕ್ಕೆ ದುಡ್ಡು ಕೊಟ್ಟಿದ್ದೆಯಾ?

ಕಳ್ಳ : ಇಲ್ಲ.

ಮೇಳದ ನಾಯಕ : ಮತ್ತೆ ನಮಗ್ಯಾಕೆ ಅಡ್ಡಿ ಮಾಡಿದೆ? ಯಾಕೆ ಹೆದರಿಸಿದೆ?

ಕಳ್ಳ : ಇನ್ನು ಮಾಡೋದಿಲ್ಲ; ಹಡಪ ಕೊಡಿ.

ಮೇಳದ ನಾಯಕ : ತಪ್ಪಾಯ್ತೂಂತ ಹೇಳ್ತೀಯಾ?

ಕಳ್ಳ : ತಪ್ಪಾಯ್ತು, ಹಡಪ ಕೊಡಿ.

ಮೇಳದ ನಾಯಕ : ಕಿವಿ ಹಿಡಿದುಕೊಳ್ತೀಯಾ?

ಕಳ್ಳ : ಹಿಡಕೊಂಡೆ, ಹಡಪ ಕೊಡಿ,

ಮೇಳದ ನಾಯಕ : ಎದ್ದುಕೂತು ಮಾಡ್ತೀಯಾ?

ಕಳ್ಳ : *(ಎದ್ದುಕೂತು)* ಮಾಡಿದೆ ಹಡಪ ಕೊಡು.

ಮೇಳದ ನಾಯಕ : ತಪ್ಪಿಗೆ ಹತ್ತು ನಾಣ್ಯ ದಂಡ ಕೊಡ್ತೀಯಾ? ಇಲ್ಲಾ ಕೆನ್ನೆಗೆ ಹತ್ತೇಟು ಹೊಡಕೊಳ್ತೀಯ?

ಕಳ್ಳ : ಹತ್ತೇಟು ಹೊಡಕೊಳ್ತೀನಿ. (ಹೊಡೆದುಕೊಳ್ಳುತ್ತ) ಒಂದು ಎರಡು

ಮೇಳದ ಇನ್ನೊಬ್ಬ : ಜೋರಾಗಿ.

ಕಳ್ಳ : ಮೂರು ನಾಲ್ಕು ಐದು ಆರು.

ಮೇಳದ ಒಬ್ಬ : ಇನ್ನೂ ಜೋರಾಗಿ.

ಕಳ್ಳ : ಏಳು ಎಂಟು ಒಂಬತ್ತು ಹತ್ತು……ಹೊಡಕೊಂಡೆ. ಹಡಪ ಕೊಡಿ.

ಮೇಲದ ನಾಯಕ : ಕೊಡಲಾ?

ಕಳ್ಳ : ಕೊಡಿ ಸ್ವಾಮಿ.

ಮೇಳದ ನಾಯಕ : ಕೊಡಲಾ?

ಕಳ್ಳ : ಕೊಡಿ ಸ್ವಾಮಿ

ಮೇಳದ ನಾಯಕ : ಕೊಡೋದಿಲ್ಲ ಹೋಗಯ್ಯಾ

ಕಳ್ಳ : ಅಯ್ಯಾ, ಅಯ್ಯಾ ಹತ್ತು ನಾಣ್ಯ ಕೊಡತೀನಿ, ಕೊಡಿ, ಇಗಾ ತಗೊಳ್ಳಿ.

*(ಕೊಡುವನು, ಮೇಳದ ನಾಯಕ ಹಡಪ ಕೊಡಹೋಗಿ ಇನ್ನೊಬ್ಬನಿಗೆ ಎಸೆಯುವನು. ಅವನು ಇನ್ನೊಬ್ಬನಿಗೆ. ಕಳ್ಳ "ಅಯ್ಯಯ್ಯೋ ಕೊಡಿ ಸ್ವಾಮಿ" ಎನ್ನುತ್ತ ಓಡೋಡಿ ಹಡಪವನ್ನೇ ಅನುಸರಿಸುತ್ತಾರೆ. ಹಡಪದೊಳಗಿನ ಸಾಮಾನು ಕೆಳಗೆ ಬೀಳುತ್ತವೆ. ಅಷ್ಟರಲ್ಲಿ ಹಕೀಂ ಮುಸ್ತಫಾ ಬಾಬಾ ಬರುತ್ತಾನೆ.)*

ಹಕೀಂ : ಏ ಏ, ಮೇಳದವರಾ, ಬಿಡ್ರೋ ಬಿಡ್ರೋ ಪಾಪ…………

ಮೇಳದ ಒಬ್ಬ : ಆಗೋದಿಲ್ಲರಿ.

ಹಕೀಂ : ಅಯ್ಯೋ, ನನ್ನ ಮುಖ ನೋಡಿ ಬಿಡ್ರೊ.

ಮೇಳದ ನಾಯಕ : ಎಲ್ಲರೂ ಇವನ ಮುಖ ನೋಡಿದಿರೇನ್ರೋ?

ಎಲ್ಲರೂ : ನೋಡಿದಿವಿ.

ಮೇಳದ ನಾಯಕ : ಅಯ್ಯಾ ಹಕೀಮರೇ, ನಿಮ್ಮ ಮುಖ ನೋಡಿ ಇವನನ್ನ ಬಿಡತೀವಿ.
ಇನ್ನೊಮ್ಮೆ ನಮ್ಮ ತಂಟೆಗೆ ಬರಬೇಡಾ ಅಂತ ಬುದ್ಧೀ ಹೇಳಿ. ನಡೀರೊ…….

*(ಮೇಳದವರು ಸ್ವಸ್ಥಾನಕ್ಕೆ ಹೋಗುವರು, ಚೆಲ್ಲಾಪಿಲ್ಲಿಯಾದ, ಹಡಪದೊಳಗಿನ ವಸ್ತುಗಳನ್ನೆಲ್ಲ ಕಳ್ಳ ಕಲೆಹಾಕತೊಡಗುತ್ತಾನೆ. ಹಕೀಮನೂ ಅವನಿಗೆ ನೆರವಾಗುತ್ತಾನೆ. ಹಕೀಮನಿಗೆ ಮೆಟ್ಟು ಸಿಗುತ್ತದೆ. ಅದನ್ನೇ ನೊಡುತ್ತ ನಿಂತುಬಿಡುತ್ತಾನೆ. ಕಳ್ಳ ಇದನ್ನು ಗಮನಿಸಿ ಕೂಡಲೇ ಓಡಿಬಂದು ಅದನ್ನು ಕಸಿಯಲೆತ್ನಿಸುತ್ತಾನೆ. ಹಕೀಂ ಕೊಡುವುದಿಲ್ಲ.)*

ಹಕೀಂ : ಅಯ್ಯಾ ಇದು ಯಾರದು?

ಕಳ್ಳ : ನಂದು.

ಹಕೀಂ : ಇನ್ನೊಂದೆಲ್ಲಿ?

ಕಳ್ಳ : ಇದೊಂದೇ ಇರೋದು.

ಹಕೀಂ : ಇಲ್ಲಿ ಬಾ. *(ನಾಡಿ ಹಿಡಿದು)* ಜೀವಂತವಾಗಿದ್ದೀಯಲ್ಲಾ! ಅಯ್ಯಾ ಈಗ
ಎರಡು ದಿನಗಳ ಹಿಂದೆ ನೀನೇನಾದರೂ ಸತ್ತುಹೋಗಿದ್ದೆಯಾ?

ಕಳ್ಳ : ನನಗೆ ಆಗೀಗ ಸಾಯೋ ಅಭ್ಯಾಸ ಇಲ್ಲವಲ್ಲ.

ಹಕೀಂ : ಹಾಗಿದ್ದರೆ ಈ ಮೆಟ್ಟು ನಾನು ನೋಡಿದ್ದೀನಲ್ಲ!

*(ಕಳ್ಳ ತಕ್ಷಣ ಹಕೀಮನ ಕಾಲು ಹಿಡಿದು)*

ಕಳ್ಳ : ಸ್ವಾಮೀ, ಸ್ವಾಮೀ ನಿಮ್ಮನ್ನೇ ಹುಡಿಕ್ಕೊಂಡು ನಾನು ಬಂದದ್ದು.

ಹಕೀಂ : ನನ್ನನ್ನ?

ಕಳ್ಳ : ಹೌದು. ದಯವಿಟ್ಟು ಆ ಮೆಟ್ಟು ನೋಡಿದ್ದೀರಲ್ಲ, ಎಲ್ಲಿ ನೋಡಿದಿರಿ, ಯಾವಾಗ ನೋಡಿದಿರಿ, ಯಾಕೆ ನೋಡಿದಿರಿ,-ಎಲ್ಲಾ ಹೇಳಿಕೊಟ್ಟರೆ ಹತ್ತು ಚಿನ್ನದ ನಾಣ್ಯ ಕೊಡತೀನಿ.

ಹಕೀಂ : ಹತ್ತು! ಮೊದಲು ಕೊಡು, ಹೇಳ್ತೀನಿ. *(ಕೊಡುವನು.)*

ಕಳ್ಳ : ಹೇಳಿ.

ಹಕೀಂ : ಅದನ್ನ ಒಂದು ಮನೆಯಲ್ಲಿ ನೋಡಿದೆ.

ಕಳ್ಳ : ಯಾವ ಮನೆ?

ಹಕೀಂ : ಇನ್ನೂ ಹತ್ತು ಕೊಡು, ಹೇಳ್ತೀನಿ; *(ಕೊಡುವನು.)*

ಕಳ್ಳ : ಬೇಗ ಹೇಳಿ.

ಹಕೀಂ : ಆದರೆ ಆ ಮನೆ ನನಗೆ ಗೊತ್ತಿಲ್ಲವಲ್ಲ. *(ಕಳ್ಳ ರೇಗಿ ಚೂರಿ ತೆಗೆಯುತ್ತ)*

ಕಳ್ಳ : ನಾ ಯಾರು ಗೊತ್ತೇನ್ರಿ? ಕಳ್ಳ! ನಾ ಬಂದಿರೋದು ಕಳ್ಳನ್ನ ಪತ್ತೇ ಹಚ್ಚಲಿಕ್ಕೆ. ಹುಷಾರಾಗಿ ಮಾತಾಡಿ.

ಹಕೀಂ : ಹಾ ನೆನಪಾಯ್ತು. ಒಂದು ಕೆಲಸ ಮಾಡು. ನನ್ನ ಕಣ್ಣು ಕಟ್ಟು. ರಸ್ತೆಯಲ್ಲಿ ಕೈಹಿಡಿದುಕೊಂಡು ಹೀಗೆ ನಡೆ. ನಾ ಎಡ ಅಂದರೆ ಎಡಕ್ಕೆ. ಬಲ ಅಂದರೆ ಬಲಕ್ಕೆ ತಿರುಗು. ನಾ ಎಲ್ಲಿ ಅಲ್ಲಾ ಅಂತ ಎಡವಿ ಬೀಳ್ತೀನೋ ಅಲ್ಲೇ ಅವರ ಮನೆ.

ಕಳ್ಳ : ಅದ್ಸರಿ, ಕಣ್ಣುಕಟ್ಟಲೇ ಬೇಕಾ?

ಹಕೀಂ : ಹೌದಪ್ಪಾ, ಆ ದಿನ ಹುಡುಗಿ ಮನೇ ಗುರ್ತು ಸಿಗದಿರಲೀ ಅಂತ ಕಣ್ಣು ಕಟ್ಟಿಕೊಂಡೇ ಕರೆದುಕೊಂಡು ಹೋದ್ಲು. (ಮಾತು ಮುಂದುವರಿದಂತೆ ಕಳ್ಳನ ಮುಖ ಘಳಘಳ ಹೊಳೆಯತೊಡಗುತ್ತದೆ.) ಒಳಗಡೆ ಹೋದಮೇಲೆ ಕಣ್ಣು ಬಿಚ್ಚಿದರು. ಆತ ಬದುಕೋ ಆಸೆ ಇರಲಿಲ್ಲ. ಮೈತುಂಬ ಚೂರಿ ಗಾಯಗಳಾಗಿತ್ತು. ಮಾಡೋ ವೈದ್ಯ ಮಾಡಿದೆ. ಆಗಲೇ ಇದರ ಜೊತೆ ಮೆಟ್ಟು ನಾನಲ್ಲಿ ನೋಡಿದ್ದು, ಒಂದೇ ಇದೆಯಲ್ಲಾ ಅಂತ ಅನ್ನಿಸ್ತು, ಆತ ಬದುಕಲಿಲ್ಲ. ಯಾರ ಮುಂದೂ ಹೇಳಬೇಡ ಅಂತ್ಹೇಳಿ, ಮತ್ತೆ ಕಣ್ಣು ಕಟ್ಟಿ ವಾಪಸ್ಸು ತಂದು ಬಿಟ್ಟರು.

ಕಳ್ಳ : ನಿಜಾನಾ ಸ್ವಾಮಿ? ಕಣ್ಣು ಕಟ್ಟಿದರೆ ಮನೆ ಗುರ್ತು ಖಂಡಿತ ಸಿಗುತ್ತಲ್ಲಾ?

ಹಕೀಂ : ನೀ ಕಟ್ಟಿ ನೋಡು, ಹೇಳ್ತೀನಿ. ಆದರೆ ನೀ ಮೊದಲೇ ಕಳ್ಳ. ಕಣ್ಣು ಬೇರೆ ಕಟ್ಟಿರ್ತೀಯ. ನನ್ನ ಜೇಬಿಗೆ ಕೈ ಬಿಡಬೇಡ.

ಕಳ್ಳ : ಅಯ್ಯೋ ಉಂಟೇ ಸ್ವಾಮಿ? ಬನ್ನಿ ಬನ್ನಿ…………

*(ಹಕೀಮನ ಕಣ್ಣು ಕಟ್ಟುವನು. ಹೊರಡುವರು)*

ಹಕೀಂ : ಅದಾಯ್ತಲ್ಲಾ, ಏನಾದರೂ ಮಾತಾಡ್ತಿರಪ್ಪ. ಅವಳೂ ಆ ಮನೇತನಕಾ ಮಾತಾಡ್ತಾನೇ ಇದ್ಲು. ಏನ್ಸಮಾಚಾರ?

ಕಳ್ಳ : ನಾವೂ ಸಜ್ಜನರೇ ಸ್ವಾಮಿ. ಆಗೀಗ ಕಳ್ಳತನ ಮಾಡ್ತೀವಷ್ಟೇ. ಆದರೆ ಯಾವನೋ ನಮಗಿಂತ ಭಾರೀ ಸಜ್ಜನ, ಅಂದರೆ ಕಳ್ಳ ನಾವು ಮಾಲು ಇಡೋ ಜಾಗ ಪತ್ತೆ ಮಾಡಿಕೊಂಡು ಕದೀಲಿಕ್ಕೆ ಸುರು ಮಾಡಿದಾನೆ. ಮೊನ್ನೆ ಸಿಕ್ಕುಬಿದ್ದ.

ಹಕೀಂ : ಎಡಕ್ಕೆ.

*(ಎಡಕ್ಕೆ ತಿರುಗುವರು.)*

ಕಳ್ಳ : ಮೊನ್ನೆ ಸಿಕ್ಕುಬಿದ್ದ. ಹಣ್ಣುಗಾಯಿ ನೀರುಗಾಯಿ ಮಾಡಿದಿವಿ; ಅಲ್ಲೇ ಚೆಲ್ಲಿ ಹೋದಿವಿ. ಬಂದು ನೋಡಿದರೆ ಆಸಾಮಿ ನಾಪತ್ತೆ! ಇದಕ್ಕೇನಂತಿರಾ?

ಹಕೀಂ : ಬಲಕ್ಕೆ. *(ಬಲಕ್ಕೆ ತಿರುಗುವರು.)*

ಕಳ್ಳ : ನಮಗೊಬ್ಬ ಯಜಮಾನ, ಬಾಸ್ ಇಲ್ಲವೆ? ಹಾಗೇ ಅವನಿಗೂ ಒಬ್ಬ ಬಾಸ್ ಇರಬೇಕು. ನೋಡಿ, ಅವ ಬಂದು…………….

ಹಕೀಂ : ಎಡಕ್ಕೆ. *(ಎಡಕ್ಕೆ ತಿರುಗುವರು.)*

ಕಳ್ಳ : ಅವ ಬಂದು ಇವನ್ನು ಎತ್ತಿಕೊಂಡು ಹೋದ. ಅವಸರದಲ್ಲಿ ಒಂದು ಮೆಟ್ಟು ಬಿಟ್ಟು ಹಾಗೇ ಹೋಗಿದಾನೆ. ಕಳ್ಳನ ಪತ್ತೇ ಮಾಡಲಿಕ್ಕೆ ನಮಗಿರೋದು ಈ ಮೆಟ್ಟೊಂದೇ ಗತಿ. ನೀವು ಸಿಕ್ಕಿರಲ್ಲ ಸಧ್ಯ,-

ಹಕೀಂ : ಬಲಕ್ಕೆ, *(ಬಲಕ್ಕೆ ತಿರುಗುವರು.)*

ಕಳ್ಳ : ನನಗೇನಾದರೂ ಆ ಕಳ್ಳನ ಪತ್ತೆ ಆದರೆ ನನ್ನ ಡಿಗ್ರಿ ಏನ್ಯೇಳ್ತೀರಾ? ಐಜೀಕೆ!

ಹಕೀಂ : ಈಗ ನೀನೇನು?

ಕಳ್ಳ : ಬರೀ ಒಬ್ಬ ಪ್ಯಾದೇ ಅಷ್ಟೆ.

ಹಕೀಂ : ಹಾಯಲ್ಲಾ! *(ಎನ್ನುತ್ತ ಎಡವಿ ಬೀಳುವನು.)* ಕಣ್ಣು ಬಿಚ್ಚು. ಕಣ್ಣು ಬಿಚ್ಚು. *(ಕಣ್ಣು ಬಿಚ್ಚುತ್ತಾನೆ.)* ಇಲ್ಲಿಂದ ಮೂರೇ ಹೆಜ್ಜೆ. ಇದೇ ಮನೆ.

ಕಳ್ಳ : ನಿಜವಾಗ್ಲೂ?

ಹಕೀಂ : ಸಂಶಯವೇ ಇಲ್ಲ.

ಕಳ್ಳ : ಹಾಗಿದ್ದರೆ ಇರಿ. ಈ ಮನೆಗೆ ಗುರ್ತು ಮಾಡಿರತೇನೆ.

*(ಕಳ್ಳ ಆ ಮನೆಗೆ ಗುರ್ತು ಮಾಡಿ ಬರುವನು. ಅಷ್ಟರಲ್ಲಿ ಹೊರಗಿನಿಂದ ಬಂದು ಮರ್ಜೀನಾ ಅಡಗಿಕೊಂಡು ಇವರನ್ನೇ ಗಮನಿಸುತ್ತಿದ್ದಾಳೆ.)*

ಕಳ್ಳ : ಸ್ವಾಮೀ, ನನಗೆ ಬಡ್ತಿ ಗ್ಯಾರಂಟಿ. ತಮ್ಮ ಉಪಕಾರ ಜಾಸ್ತೀ ಆಯ್ತು. ನಿಮ್ಮ ಹೆಸರ್ಹೇಳಿ ನನ್ನ ರುಮಾಲಿಗೆ ಈಜೀಕೆ-ತುರಾಯಿ ಹಾಕ್ಕೊಳ್ತೀನಿ. ನಿಮ್ಮ ಹೆಸರೇ ನಂದಿರಿ?

ಹಕೀಂ : ಮುಸ್ತಫಾ ಬಾಬಾ.

ಕಳ್ಳ : ಸರಿ ಬಿಡಿ. ಐಜೀಕೆಎಂ ಅಂತ ಹೆಸರಿಟ್ಕೋತೀನಿ. ಇದೊ ಇನ್ನೂ ಹತ್ತು ನಾಣ್ಯ ಇಟ್ಕೊಳ್ಳಿ. ತಾವಿನ್ನು ಹೊರಡಬಹುದು. ನಾ ಬರ್ತೀನಿ.

ಹಕೀಂ : ನಾ ಇನ್ನ ಮೇಲೆ ವೈದ್ಯವೃತ್ತಿ ಬಿಟ್ಟು ಮನೇ ತೋರಿಸೋ ಕಸಬು ಮಾಡೋದೇ ಒಳ್ಳೇದು ಅಂತ ಕಾಣಸ್ತದೆ! (ಹೋಗುವರು. ಮರ್ಜೀನಾ ಬರುವಳು.)

ಮರ್ಜೀನಾ : ಅದ್ಯಾಕೆ ನಮ್ಮ ಮನೆಗೆ ಈ ಥರ ಗುರ್ತು ಮಾಡಿದರಲ್ಲ! ಹಕೀಂ ಮುಸ್ತಫಾ ಬಾಬಾನೇ ಮನೆ ತೋರಿಸಿ ಹೋದ. ಇದು ಆ ಕಳ್ಳರ ಸಂಚೇ ಸರಿ.

*(ಸಲೀಂ ಬರುವನು.)*

ಸಲೀಂ : ಪ್ಯಾರೇ, ಮರ್ಜೀನಾ!

ಮರ್ಜೀನಾ : ಸಲೀಂ, ಕಳ್ಳರಿಗೆ ನಮ್ಮ ಮನೇ ಗುರ್ತು ಸಿಕ್ಕಿರೋ ಹಾಗಿದೆ, ಅಕಾ ನೋಡು ಹ್ಯಾಗೆ ಗುರ್ತು ಮಾಡಿ ಹೋಗಿದಾರೆ! ಇದೇ ಥರ ನಾವೂ ಎಲ್ಲಾ ಮನೆಗಳಿಗೂ ಗುರ್ತು ಮಾಡಬೇಕು. ನಾನು ಈ ಸಾಲಿನ ಮನೆಗಳಿಗೆ ಗುರ್ತು ಮಾಡತೇನೆ.
ನೀನು ಆ ಸಾಲಿಗೆ
ಹೊರಡು. *(ಮರ್ಜೀನಾ ಹೊರಡುವಳು. ಸಲೀಂ ಅವಳು ಹೇಳಿದ ಹಾಗೇ ಮನೇ ಬಾಗಿಲ ಮೇಲೆ ಗುರ್ತು ಮಾಡುತ್ತ ಹೊರಡುತ್ತಾನೆ. ಹಾಗೆ ಗುರತು ಮಾಡುವಾಗೆಲ್ಲ "ಪ್ಯಾರೇ ಮರ್ಜೀನಾ" ಎಂದು ಜಪಿಸುತ್ತಾನೆ. ಒಂದು ಮನೇ ಮುಂದೆ ಒಬ್ಬ ಭಾರೀ ಹೆಂಗಸು ಬುರ್ಖಾ ದಲ್ಲಿ ನಿಂತಿದ್ದಾಳೆ. ಬಾಗಿಲೆಂದು ಭಾವಿಸಿ ಅವಳ ಹಣೇ ಮೇಲೆ ಗುರುತು ಕೊರೆಯುತ್ತಾನೆ. ತಕ್ಷಣ ಅವಳು ಬುರ್ಖಾ ತೆಗೆಯುತ್ತಾಳೆ. ತಾನು ಮಾಡಿದ ತಪ್ಪು ಅರಿವಾಗಿ ಸಲೀಂ ತಬ್ಬಿಬ್ಬಾಗುತ್ತಾನೆ.)*

ಸಲೀಂ : ಕ್ಷಮಿಸಬೇಕು ಪ್ರೇಮಿಗಳಿಗೆ ಕಣ್ಣು ಕಾಣೋದಿಲ್ಲ ಅಂತ ಹೇಳ್ತಾರೆ………ನಾನೂ ಅಷ್ಟೊ ಇಷ್ಟೊ ಸುರು ಮಾಡಿದೀನಿ. ಅದಕ್ಕೇ……..

*(ಆ ಹೆಂಗಸು ಇನ್ನೂ ಹಾಗೇ ನಿಂತಿದ್ದಾಳೆ. ಹೆದರಿ ಮರ್ಜೀನಾ ಎನ್ನುತ್ತ ಓಡಿ ಹೋಗುತ್ತಾನೆ.)*

## ಉತ್ತರಾರ್ಧ (ಆಯಿಲ್ ಶಾ)

*(ಹಸನ್ ಎಣ್ಣೆ ವ್ಯಾಪಾರಿಯ ಹಾಗೆ ಉಡುಪು ಧರಿಸಿದ್ದಾನೆ. ರಸ್ತೆಯಲ್ಲಿ ಸಲೀಮನನ್ನು ಸಂಧಿಸುತ್ತಾನೆ.)*

ಹಸನ್ : ಅರೇ ಭಾಯೀ, ಕ್ಯಾ ಆಪಕಾ ನಾಂ ಸಲೀಂ ಹೈ?

ಸಲೀಂ : ಹೌದು.

ಹಸನ್ : ಕ್ಯಾ ಆಪ್‌ಕಾ ಬಾಪಕಾ ನಾಂ ಅಲೀಬಾಬಾ ಹೈ?

ಸಲೀಂ : ಹೌದು.

ಹಸನ್ : ಹಾಗಿದ್ದರೆ ಹಾಥ್ ಮಿಲಾವ್‌ಭಾಯಿ.

ಸಲೀಂ : ನಿಮಗೆ ನಾ ಸಲೀಮಂತ ಹ್ಯಾಗೆ ಗೊತ್ತಾಯ್ತು?

ಹಸನ್ : ಊರಿನ, ಬಡಾ ವ್ಯಾಪಾರೀ ಹೆಸರು ಗೊತ್ತಾಗೋದು ಕಷ್ಟಾನಾ? ನಾ ಯಾರೂಂತ ನೀವು ಕೇಳಿ, ಕೇಳಿ.

ಸಲೀಂ : ನೀವು ಯಾರು?

ಹಸನ್ : ಹಹ್ಹಾ! ನನ್ಹೆಸರು ಆಯಿಲ್‌ಶಾ! ಯಾನೇ ಎಣ್ಣೇ ರಾಜ, ಅಂತ. ಎಣ್ಣೇ? ತೇಲ್‌ಜೋ ಹೋತಾ ಹೈ ನ?-ಆ ಎಣ್ಣೇನ ಇಧರ್ ಸೆ ಉಧರ್; ಉಧರ ಸೆ ಇಧರ್-ಸಾಗಿಸೋದು ಹಮಾರಾ ದಂಧಾ. ಇರಾನೀ ಶಾ ಹೈ ನ?-ಓ ಹಮಾರಾ ದೋಸ್ತ್ ಹೈ. ಅವನ ಮದುವೇಗೆ ಎಣ್ಣೆ ಒಯ್ತಾ ಇದ್ದೆ. ಕ್ಯಾ ಕರನಾ? ರಸ್ತೇಮೆ ಕುಚ್ ಗಡಬಡ್ ಹುವಾ. ಬಿರುಗಾಳಿ ಬೀಸಿ ನಮ್ದು ಕುದುರೇಗೆ ನಡೀಲೇ ಇಲ್ಲ. ಈ ಹೊತ್ತು ಇಲ್ಲಿದ್ದು ನಾಳೆ ಹೊರಡಬೇಕು. ಕ್ಯಾ ಹಂ ದೋನೋ ದೋಸ್ತ್ ಬನೆ?

ಸಲೀಂ : ಓಹೋ!

ಹಸನ್ : ಹಾಥ್ ಮಿಲಾವ್‌ಭಾಯೀ.

ಸಲೀಂ : ಈ ಎಣ್ಣೇ ವ್ಯಾಪಾರದಿಂದ ನಿಮಗೆ ತಿಂಗಳಿಗೆ ಎಷ್ಟುಲಾಭ ಸಿಗುತ್ತೆ ಆಯಿಲ್ ಶಾ ಭಾಯಿ? ಹಜಾರ್ ದೋ ಹಜಾರ್?

ಹಸನ್ : ಹಜಾರ್ ದೋ ಹಜಾರ್? ಹೆ ಹ್ಹೆ ಹ್ಹೆ………….ಆಪ್‌ಲೋಗ್ ಲಾಭಾನ್ನ ಗಿನತಾ ಹೈ? ಮಗರ್ ಹಂ ನಹೀ. ಪಿಕಾಸಿ ಜೋಹೋತಾ ಹೈನ-ಪಿಕಾಸೀಸೆ ಎಳೀತಾ ಹೈ! ಗಿನನೇಕಾ ವಖ್ತ್ ಕಹಾ ಹೈ? ಲಾಖ್ ದೋ ಲಾಖ್ ಹೋತಾ ತೊ ಗಿನ್‌ಸಕತೇ. ದೋ ಚಾರ್ ಕರೋಡ್ ಹೋ ತೊ?

ಸಲೀಂ : ತಿಂಗಳಿಗೆ ಕರೋಡಗಟ್ಲೆ ಸಿಗುತ್ತಾ?

ಹಸನ್ : ಕೆಂಪ್ ನಹೀ? ಕೆಂಪ್ ನಹೀ? ನಮ್ದು ಠೋಕ್ ವ್ಯಾಪಾರ, ಕಿರುಕುಳ ನಹೀ. ಅರೇ ಭಾಯೀ ತುಮ್ ಭೀ ಹಮಾರಾ ಪಾರ್ಟನರ್ ಬನೋ, ತುಮ್ ಭೀ ಕಮಾಯೇಗಾ.

ಸಲೀಂ : ನಿಜವಾಗ್ಲೂ?

ಹಸನ್ : ಇಸಮೆ ಕ್ಯಾ ಶಕ್ ಹೈ? ಈ ಹೊತ್ತು ರಾತ್ರಿ ನಮ್ದೂಗೆ ಎಣ್ಣೇಗೆ ಕುದುರೇಗೆ ರಹನೇಕೋ ಠಿಕಾಣ ಯಾನೆ ಆಶ್ರಯ ಬೇಕಿಲ್ಲ. ಹ್ಯಾಗೆ ಮಾಡೋದು?

ಸಲೀಂ : ನಮ್ಮ ಮನೇಲೇ ಇರಿ.

ಹಸನ್ : ದೋಸ್ತಿ ಹೋ ತೋ ಐಸಾ. ಹಾಗಿದ್ದರೆ ನಮ್ದು ಎಣ್ಣೆ ಹರವಿ ಎಲ್ಲಿಡೋಣ?

ಸಲೀಂ : ಏನೊ ಯೋಚನೆ ಮಾಡಬೇಡಿ. ನಿಮ್ಮಂಥವರ ಗೆಳೆತನ ಸಿಕ್ಕೋದು ನಮ್ಮ ಸೌಭಾಗ್ಯ. ಮನೇ ದೊಡ್ಡದು. ಅಲ್ಲೇ ಹರವಿ ಇಳಿಸಬಹುದು. ಈ ದಿನ ನೀವು ನನ್ನ ಮೆಹಮಾನ್! ಬನ್ನಿ, ಊಟ ಮಾಡಿದ ಮೇಲೆ ಇನ್ನಷ್ಟು ಮಾತಾಡೋಣ. *(ಹೊರಡುವರು.)*

# ಉತ್ತರಾರ್ಧ (ಪ್ಯಾರ ಕರನಾ ಕೋಯೀ ಗದಾ ಹೈ?)

*(ರಂಗದ ಮೇಲೆ ದೂರದಿಂದೆಂಬಂತೆ ಚೋರೋಂಕಾ ರಾಜಾ ಹಸನ್ ಮತ್ತು ಕಳ್ಳ ೪ ಬರುತ್ತಾರೆ.)*

ಹಸನ್ : ಮನೆ ಸರಿಯಾಗಿ ನೋಡಿದ್ದೀ ತಾನೆ?

ಕಳ್ಳ : ನೋಡಿದೀನಿ, ಮನೇ ಮೇಲೆ ಗುರ್ತು ಕೂಡ ಹಾಕಿದೀನಿ ಬಾಸ್! ನನ್ನ ಜಾಣತನ ನೋಡಿ ನೀವೇ ಭೇಶ್ ಮಗನೇ ತಗೋ ಬಡ್ತಿ ಅಂತೀರಾ.

ಹಸನ್: ನೀನು ಆ ಥರ ಗುರ್ತು ಮಾಡೋದನ್ನ ಯಾರೂ ನೋಡಿಲ್ಲ ತಾನೆ?

ಕಳ್ಳ : ಮೂವತ್ತು ವರ್ಷ ಕಳ್ಳತನ ಮಾಡಿದೀನಿ. ಅಷ್ಟೂ ತಿಳಿಯುವುದಿಲ್ಲವೆ ಹುಜೂರ್?

ಹಸನ್ : ಆ ಮನೆಯವರ ವಿಷಯ ಗೊತ್ತಾಯ್ತಾ?

ಕಳ್ಳ : ತಿಳಿದುಕೊಂಡೆ ಹುಜೂರ್. ಆತನ ಹೆಸರು ಖಾಸೀಂ ಅಂತ. ಆತನೂ ತಮ್ಮ ಹಾಗೇ ಚೋರೋಂಕಾ ರಾಜನೇ. ಮಂದಿಗೆ ತೋರ್ಸೋದಿಕ್ಕೆ ಒಂದು ಅಂಗಡಿ ಇಟ್ಕೊಂಡಿದ್ದ. ಹಗಲು ವ್ಯಾಪಾರ. ರಾತ್ರಿ ಕಳ್ಳತನ. ಸರಿ, ತಮ್ಮ ಕೈಗುಣ ಗೊತ್ತಿಲ್ಲವೆ? ಸಿಕ್ಕಿಬಿದ್ದ, ಸತ್ತ. ಮುಂದೆ ಅವನ ತಮ್ಮ ಅಲೀಬಾಬಾನಿಗೆ ಬಡ್ತಿ ಸಿಕ್ಕಿತಂತೆ. ಅವನೀಗ ಖಾಸೀಮನ ಮನೆಯಲ್ಲೇ ಇದ್ದಾನೆ. ಅವನ ಮಗ ಸಲೀಂ ಅಂಗಡಿ ನೋಡಿಕೊಳ್ತಾನೆ. ಇವನು ಆರಾಮಾಗಿ ಕತ್ತೆಗಳ ಸಂಗೀತ ಕೇಳಿಕೊಂಡು ಬಿದ್ದಿರ್ತಾನೆ. ನಾನೊಬ್ಬ ಜುಜುಬೀ ಕಳ್ಳ ಆಗಿದ್ದರೆ ಇಷ್ಟೆಲ್ಲಾ ವಿಷಯ ತಿಳೀತಿತ್ತಾ ಹುಜೂರ್? ಮೂವತ್ತು ವರ್ಷ ಸರ್ವೀಸು ಸುಳ್ಳಾ ಹುಜೂರ್? ಇನ್ನೇನು ರಿಟೈರಾಗೋ ವಯಸ್ಸು. ತಾವು ದೊಡ್ಡ ಮನಸ್ಸು ಮಾಡಿ ಬಡ್ತಿ ಕೊಟ್ಟರೆ.....

ಹಸನ್ : ನೀನು ಅವರ ಮನೆಗೆ ಸರಿಯಾಗಿ ಗುರ್ತು ಹಾಕಿದ್ದೀ ತಾನೆ?

ಕಳ್ಳ : ಓಹೋ! ನೋಡಿ ಎದುರಿಗಿದೆಯಲ್ಲ, ಅದೇ ಮನೆ.

ಹಸನ್ : ಪಕ್ಕದ ಮನೆಗೂ ಅದೇ ಗುರ್ತಿದೆಯಲ್ಲ?

ಕಳ್ಳ : ಅದೇ ಹುಜೂರ್! ಈ ಎರಡು ಮನೆಗಳಲ್ಲೇ ಖಾಸೀಮನ ಮನೆ ಒಂದು.

ಹಸನ್ : ಅಕಾ, ನೋಡು, ಇನ್ನೊಂದು ಮನೆಗೂ ಅದೇ ಥರ ಗುರ್ತಿದೆ!

ಕಳ್ಳ : ಛೇ ಛೇ, ಆ ರೀತಿ ಗುರ್ತಿರೋದು ಒಳ್ಳೇದು ಅಂತ ಅವರೂ ಗುರ್ತು ಮಾಡಿ ಕೊಂಡಿದಾರೆ. ಹುಜೂರ್, ಈ ಮೂರು ಮನೆಗಳಲ್ಲಿ ಯಾವುದೋ ಒಂದು ಮನೆ ಖಾಸೀಮನದು.

ಹಸನ್ : ಇಡೀ ರಸ್ತೆ ಮನೆಗಳಿಗೆಲ್ಲಾ ಆ ಗುರ್ತಿದೆ!

ಕಳ್ಳ : ಅಂತೂ ಈ ರಸ್ತೆಯಲ್ಲೇ ಆ ಮನೆಯಿದೆ.

ಹಸನ್ : ಹಲಾಲ್‌ಖೋರ್! ಈ ಊರಿನಲ್ಲೇ ಆ ಮನೆಯಿದೆ ಅಂತ ನನಗೂ ಗೊತ್ತು. ಎಲ್ಲಾ ಮನೆಗಳಿಗೂ ಆ ಗುರ್ತಿದೆ. ಈಗ ಖಾಸೀಮನ ಮನೆ ಗುರ್ತು ಹಿಡಿಯೋದು ಹ್ಯಾಗೆ?

ಕಳ್ಳ : (ಹೆದರಿ) ಹುಜೂರ್, ನಾನು ಒಂದೇ ಮನೆಗೆ ಗುರ್ತು ಹಾಕಿದ್ದೆ. ಯಾರೋ ಕೇಡಿಗಳು ಎಲ್ಲಾ ಮನೆಗಳಿಗೂ ಹಾಗೇ ಗುರ್ತು ಮಾಡಿದಾರೆ!

ಹಸನ್ : ಆ ಕಳ್ಳ ನಮಗಿಂತ ಬೆರಿಕಿ ಅನ್ನೋದರಲ್ಲಿ ಸಂಶಯವೇ ಇಲ್ಲ. ಈಗ ಖಾಸೀಮನ ಮನೆ ಗುರ್ತು ಹಿಡೀಬೇಕಲ್ಲ. ಹಕೀಮನ ಹತ್ತಿರ ನಡೆ.

ಕಳ್ಳ : ನಾ ಹೇಳ್ತೀನಿ ಹುಜೂರ್,- ಈಗ ಖಾಸೀಮನ ಮನೆಲಿರೋನು ಅಲೀಬಾಬಾ. ಅಲೀಬಾಬಾನ ಹತ್ತಿರ ಮೂರು ಕತ್ತೆ ಇವೆ. ಆ ಗಂಡು ಕತ್ತೆಗೆ ಹೆಣ್ಣು ಕತ್ತೆಗಳ ಖಯಾಲಿ ಜಾಸ್ತಿ. ನಾನು ಹೆಣ್ಣು ಕತ್ತೆ ಥರ ಒದರ್ತೇನೆ. ಯಾವ ಮನೆಯಿಂದ ಗಂಡು ಕತ್ತೆ ಹೊರಗೋಡಿ ಬರುತ್ತೋ, ಅದೇ ಅವನ ಮನೆ.

*(ಹಸನ್ ಕ್ರೂರವಾಗಿ ಇವನತ್ತ ನೋಡುವನು. ಕಳ್ಳ ಇನ್ನೊಂದು ಕಡೆ ತಿರುಗಿ ನಿಂತು ಹೆಣ್ಣು ಕತ್ತೇ-ಥರ ಒದರುತ್ತಾನೆ. ದೂರದಿಂದ ಇನ್ನೊಂದು ಕತ್ತೆಯ ಉತ್ತರ ಬರುವುದು. ಹಸನನಿಗೆ ಖುಷಿಯಾಗಿ ಕಳ್ಳನ ಬಳಿ ಬರುವನು.)*

ಹಸನ್ : ಏನಂತ ಹೇಳಿದೆ?

ಕಳ್ಳ : "ನಾನು ಸುಂದರಿಯಾದ ಯುವತಿ ಕತ್ತೆ. ಪ್ಯಾರ್ ಕರನಾ ಕೋಯೀ ಗದಾ ಹೈ?" ಅಂತ ಒದರಿದೆ. ಅದು "ಹಮ್ ಹೈ ಅಲೀಬಾಬಾ ಕಾ ಗದ್ದಾ" ಅಂತ ಒದರಿತು!

ಹಸನ್ : ಹಾಗಿದ್ದರೆ ಈಗಲೇ ಬಾ ಅಂತ ಒದರು.

*(ಕಳ್ಳ ಮತ್ತೆ ಒದರುವನು. ಅಲೀಬಾಬಾನ ಕತ್ತೆ ರಾಕೆನ್ನರೋಲು ಹೊರಗೋಡಿ ಬರುವದು. ಜೊತೆಯಲ್ಲೇ ಅಲೀಬಾಬಾ ಕೋಲು ತ ಗೊಂಬಂದು ಬೈದು ಕತ್ತೆಯನ್ನು ಒಳಗೆ ಕರೆದೊಯ್ಯುವನು.)*

ಹಸನ್ : ನಿಜ, ನಿಜ! ಇವನ ಚೇರಾಪಟ್ಟಿ ಅವನ ಹಾಗೇ ಇದೆ! ಇದೇ ಮನೆ. ನೋಡು, ನಾಲ್ವತ್ತೊಂದು ದೊಡ್ಡ ಹರಿವಿ ಕೊಂಡುಕೊ, ಒಂದರಲ್ಲಿ ಪೂರ್ತಿ ಎಣ್ಣೆ ಇರಲಿ. ಉಳಿದವುಗಳಲ್ಲಿ ಒಬ್ಬೊಬ್ಬ ಕಳ್ಳ ಒಂದೊಂದರಲ್ಲಿ ಕೂತು, ಒಂದೊಂದು ಹರಿವೀನ್ನ ಒಂದೊಂದು ಕುದುರೆ ಮೇಲೆ ಹೇರಿ ತಯಾರಾಗಿರಿ. ನಾ ಬಂದೆ.

ಕಳ್ಳ : ಹುಜೂರ್ ನನ್ನ ಬಡ್ತಿ?

ಹಸನ್ : ಹೋಗು ಇವತ್ತಿನಿಂದ ನೀನೇ ಐಜೀಕೆ.

*(ಹೊರಡುವರು. ಕಳ್ಳ ಸೆಲ್ಯೂಟ್ ಹೊಡೆಯುವನು.)*

# ಉತ್ತರಾರ್ಧ (ಅಲ್ಲಾ ಎಂಬವನಿಗೆ ಬೆನಕಾ ಎನ್ನುವರು)

*(ದೊಡ್ಡ ಮನೆ. ೪೧ ಎಣ್ಣೆಯ ಹರವಿಗಳಿವೆ.)*

ಮೇಳ : **ಬಿದ್ದಾ ಸಲೀಮ ಕಳ್ಳನ ಬಲೆಗೆ**
**ಬಂದಾವು ಸಂಶಯ ಮರ್ಜೀನಾಳೀಗೆ|**
**ಹಿಂದೆನ್ನ ತಂದೆಯ ಕೊಂದವನೀತನೆ**
**ಕೊಂದೇ ಕೊಲ್ಲುವನೀಗ ಯಜಮಾನರನ್ನೆ|**

*(ಆರಿದ ದೀಪ ಹಿಡಿದುಕೊಂಡು, ವಿಚಾರಮಗ್ನಳಾದ ಮರ್ಜೀನಾ ಪ್ರವೇಶಿಸುವಳು.)*

**ಹ್ಯಾಗೆ ಮಾಡೋದಿವರ ಜೀವ ಉಳಿಸೋಕೆ|**
**ಹಳೆಯ ಸೇಡುಗಳನ್ನ ತೊಳೆಯುವುದಕ್ಕೆ||**

**ಅಲ್ಲಾ ಎಂಬವನಿಗೆ ಏನೆಲ್ಲ ಹೆಸರು**
**ದುಷ್ಟರ ಶಿಕ್ಷಿಸುವ ಬೆನಕ ಎಂಬುವರು||**

**ಗಣಪತಿ ಬಂದಾ ಗುಟ್ಟು ತಿಳಿಸಿದಾ**
**ಶಿಷ್ಟರಿಗೆ ರಕ್ಷಣೆ ದಯಪಾಲಿಸಿದಾ||**

ಮರ್ಜೀನಾ : ಇವನೆಂಥ ಮಳ್ಳ ಈ ಸಲೀಂ! ಬಂದವನು ಆಯಿಲ್ ಶಾ ಅಲ್ಲ, ಕಳ್ಳ, ಚೋರೋಂಕಾ ರಾಜಾ ಅಂದರೂ ನಂಬೋದೇ ಇಲ್ಲ. ಗವಿಯಿಂದ ಚಿನ್ನ ತಂದಿದೀರಲ್ಲ, ಪತ್ತೆ ಹತ್ತಿ ನಿಮ್ಮನ್ನ ಕೊಲ್ಲೋದಕ್ಕೆ ಬಂದಿದಾನೆ ಅಂದರೆ “ಪಾಪ ಎಣ್ಣೇ ವ್ಯಾಪಾರಿ ನೀನೇನೋ ಅಂತಿ” ಅಂತ ನನ್ನನ್ನೇ ಗದರತಾನೆ. ನನ್ನ ತಂದೇನ್ನ ಕೊಂದವನು, ಇವನ ಚೀರಾಪಟ್ಟಿ ನನಗ್ಗೊತ್ತಿಲ್ಲವೆ? ಹೋಗಲಿ, ಯಜಮಾನರಿಗೂ ತಿಳಿಯಬಾರದೆ? ಮನೆಗೆ ಬಂದ ಅತಿಥಿಗಳನ್ನ ಹಾಗೆಲ್ಲಾ ಸಂಶಯದಿಂದ ನೋಡಬಾರದು ಅಂತ ಹೇಳ್ತಾರೆ! ನೋಡೋಣ. ಎಣ್ಣೆ ಇಲ್ಲದೆ ಈ ದೀಪ ಬೇರೆ ಆರತಾ ಇದೆ. ಹ್ಯಾಗೂ ಆಯಿಲ್ ಶಾನ ಎಣ್ಣೆ ಹರವಿಯಿಂದಲೇ ಸ್ವಲ್ಪ ಎಣ್ಣೆ ತಕ್ಕೊಂಡಿರೋಣ.

*(ಕತ್ತಲೆ. ಒಂದು, ಹರವಿ ಹತ್ತಿರ ಬರುತ್ತಾಳೆ. ಪಾತ್ರೆ ಅದ್ದುತ್ತಾಳೆ. ಅದರಲ್ಲಿ ಎಣ್ಣೆ ಇದೆ, ತಕ್ಕೊಂಡು ಹೊರಡಬೇಕೆನ್ನುವಷ್ಟರಲ್ಲಿ ಇನ್ನೊಂದು ಹರವಿಯೊಳಗಿನಿಂದ ಪೂರ್ವರಂಗದಲ್ಲಿ ಚೋರೋಂಕಾ ರಾಜಾ ಎತ್ತಿಕೊಂಡು ಹೋಗಿದ್ದ ಗಣೇಶ ಪಾತ್ರಧಾರಿ ಹುಡುಗ ಕಳ್ಳನ ವೇಷದಲ್ಲಿ ಏಳುತ್ತಾನೆ. ಆತ ಮರ್ಜೀನಾ ಎಂದು ಹೆಸರುಗೊಂಡು ಕರೆಯುತ್ತಲೂ ಮರ್ಜೀನಾ ಚಕಿತಳಾಗುತ್ತಾಳೆ.)*

ಗಣೇಶ : ಮರ್ಜೀನಾ.

ಮರ್ಜೀನಾ : ಯಾರು ನೀನು?

ಗಣೇಶ : ಗುರುತು ಸಿಗಲಿಲ್ಲವೆ? ನಾನು ಗಣೇಶನಾಗಿದ್ದ ಹುಡುಗ. ಚೋರೋಂಕಾ ರಾಜಾ ಬಂದು ನನ್ನನ್ನ ಎತ್ತಿಕೊಂಡು ಹೋಗಿದ್ದನಲ್ಲ, ಅವನೇ ನಾನು.

ಮರ್ಜೀನಾ : ನಿನಗೇನು ಬೇಕು?

ಗಣೇಶ : ಎಂಥಾ ಹುಚ್ಚಿ ನೀನು? ಈಗ ನಿಮ್ಮೆಲ್ಲರ ಜೀವ ಅಪಾಯದಲ್ಲಿದೆ. ಚೋರೋಂಕಾ ರಾಜಾ ಹಸನ್ ತನ್ನ ಕಳ್ಳರನ್ನ ಕರಕೊಂಡು ನಿಮ್ಮನ್ನ ತೀರಿಸಲಿಕ್ಕೆ ಬಂದಿದ್ದಾನೆ. ಬೇಕಾದರೆ ನೋಡ್ತೀಯಾ? ಹೀಗೆ,-ಈ ಹರವಿ ಹತ್ತಿರ ಹೋಗು.

*(ಹೋಗುವಳು. ಅವಳ ಕಾಲ ಸಪ್ಪಳ ಕೇಳಿ ಹರವಿಯೊಳಗಿಂದ ಒಬ್ಬ ಕಳ್ಳ ತಲೆ ಎತ್ತಿ "ಎದ್ದು ಬರೋಣ ಬಾಸ್?" ಎಂದು ಪಿಸುನುಡಿಯುತ್ತಾನೆ.*
*"ಈಗ ಬೇಡ. ಆಮೇಲೆ ಹೇಳ್ತೇನೆ ಹುಷಾರ್" ಎಂದು ಮರ್ಜೀನಾ ನುಡಿದು ಹೆದರಿಕೊಂಡು ಮುಂದೆ ನಡೆಯುವಳು. ಇನ್ನೊಂದು ಹರವಿಯ ಬಳಿಯೂ ಹಾಗೇ ಆಗುತ್ತದೆ. ಹೀಗೇ ಅನೇಕ ಹರವಿ ಹತ್ತಿರ ನಡೆದು ಗಣೇಶನ ಬಳಿ ಓಡಿಬರುವಳು.)*

ಗಣೇಶ : ಗೊತ್ತಾಯ್ತಾ? ಈ ಹರವಿಗಳಲ್ಲಿರೋದು ಕಳ್ಳರು.

ಮರ್ಜೀನಾ ; ನಮ್ಮನ್ನೀಗ ಅಲ್ಲಾನೇ ಕಾಪಾಡಬೇಕು.

ಗಣೇಶ : ಅದಕ್ಕೇ ಬಂದಿದೀನಲ್ಲಾ.

ಮರ್ಜೀನಾ : ಈಗ ಏನ್ಮಾಡೋದು?

ಗಣೇಶ : ಹೇಳ್ತೀನಿ ಬಾಯಿಲ್ಲಿ, ಇಕೋ ಈ ಹರವಿಯಲ್ಲಿ ಎಣ್ಣೆ ಇದೆ. ಆ ಎಣ್ಣೆನೆಲ್ಲಾ ಚೆನ್ನಾಗಿ ಕುದಿಯೋ ಹಾಗೆ ಕಾಸು. ನಾಕು ನಾಕು ಚೊಂಬು ಕಾದಣ್ಣೇನ ಪ್ರತಿಯೊಂದು ಹರವಿಯಲ್ಲಿ ಸುರಿ. ಆಗೇನಾದರೂ ಅವರು ಕಿರಚಬಹುದು. ನಾನು ಡ್ರಮ್ಮು ತಗೊಂಡು ಬಾರಿಸಿ ಯಾರಿಗೂ ಕೇಳಿಸದ ಹಾಗೆ ಮಾಡ್ತೀನಿ. ಈ ಕಳ್ಳ ನನ ಮಕ್ಕಳೆಲ್ಲಾ ಸತ್ಹೋಗತಾರೆ.

ಮರ್ಜೀನಾ : ಆಯಿಲ್ ಶಾ?-

ಗಣೇಶ : ಅವನೇ ಚೋರೋಂಕಾ ರಾಜಾ. ಊಟ ಮಾಡೋವಾಗ ನೃತ್ಯ ಮಾಡತೇನೆ ಅಂತ ಹೇಳು. ಪೂರ್ವರಂಗದಲ್ಲಿ ನನ್ನ ಮುಂದೆ ಮಾಡಿದೆಯಲ್ಲ, ಆ ಥರ ನೃತ್ಯ ಮಾಡ್ತಾ ಮಾಡ್ತಾ ಮೈ ಮರೆಸಿ ಆತನ ಹತ್ತಿರಾನೇ ಹೋಗು. ಅವನ ಹತ್ತಿರಾನೇ ಒಂದು ಚೂರಿ ಇದೆ. ಅದನ್ನ ಕಸಿದು ಅದರಿಂದಲೇ ಅವನ್ನ ಇರಿದುಬಿಡು. ಕಣ್ಣು ಮುಚ್ಚಿ ಕಣ್ಣು ತೆರೆಯೋದರೊಳಗೇ ಇದೆಲ್ಲಾ ಆಗಿರಬೇಕು. ಗೊತ್ತಾಯ್ತಾ?

ಮರ್ಜೀನಾ : ಇದೆಲ್ಲ ನನ್ನಿಂದ ಸಾಧ್ಯವಾ?

ಗಣೇಶ : ಬದುಕೋದಕ್ಕೆ ಇದೊಂದೇ ದಾರಿ. ಮೊದಲು ಇಲ್ಲಿಂದ ನನ್ನನ್ನೆತ್ತು. ಇಲ್ಲದಿದ್ದರೆ ನೀನು ನನ್ನ ಮೇಲೂ ಎಣ್ಣೇ ಸುರೀಬಹುದು.

*(ಗಣೇಶನನ್ನು ಎತ್ತುವಳು).*

ಮರ್ಜೀನಾ : ಮೊದಲು ಈ ಎಣ್ಣೇ ಹರಿವೆಯನ್ನ ನೀರೊಲೆತನಕ ಸಾಗಿಸೋಣ.

ಗಣೇಶ : ಇದನ್ನೊಯ್ದು ಒಲೇ ಮೇಲೆ ಇಟ್ಟು ನನ್ನ ಹೆಸರು ಹೇಳು, ತಕ್ಷಣ ಎಣ್ಣೆ ಕಾಯುತ್ತದೆ. ಹೂ ಹಿಡಿ…………..

*(ಇಬ್ಬರೂ ಎಣ್ಣೆ ಹರವಿಯನ್ನ ತಗೊಂಡು ಹೊರಡುವಷ್ಟರಲ್ಲಿ ಸಲೀಂ ಮತ್ತು ಹಸನ್ ಅಲ್ಲಿಗೆ ಬರುತ್ತಾರೆ. ಹರವಿ ಅಲ್ಲೇ ನಿಲ್ಲುತ್ತದೆ. ಅವರು ಮಾತಿಗೆ ತೊಡಗುತ್ತಲೂ ಮಾಯವಾಗುತ್ತದೆ.)*

ಹಸನ್ : ಹಹ್ಹಾ! ಗೋಡೌನು ಚೆನ್ನಾಗಿದೆ.

ಸಲೀಂ : ಯಾರಲ್ಲಿ?

ಹಸನ್ : ಯಾರಿಲ್ಲವಲ್ಲ.

ಸಲೀಂ : ಆ ಹರಿವೆ ನಡೆದಾಡಿದ ಹಾಗಾಯ್ತಲ್ಲ! ನೋಡಿ ಬರ್ತೀನಿ.

ಹಸನ್ : *(ಅಷ್ಟರಲ್ಲಿ)* ಛೇ ಛೇ, ಹರಿವೆ ನಡೆದಾಡೋದುಂಟೆ? ಇದ್ದಲ್ಲೇ ಇರಲಿ. ಗೋಡೌನು ತುಂಬಾ ಚೆನ್ನಾಗಿದೆ.

ಸಲೀಂ : ಯಾರಾದರೂ ಕಳ್ಳರಿದ್ದಾರೇನೋ ನೋಡೋಣ ಅಂತ.

ಹಸನ್ : ಛೇ ಛೇ ಕಳ್ಳರು. ಇಂಥಾ ಭದ್ರ ಗೋಡೌನಿಗೆ ನುಗ್ಗೋದುಂಟೆ! ಬನ್ನಿ ಬನ್ನಿ ಊಟ ಮಾಡೋಣ. ನಿಮ್ಮ ತಂದೆ ಕಾಯ್ತಿದಾರೆ ಪಾಪ. ಹೆಹೆ………. ಮಾಂಸದ ವಾಸನೆ ಬರ್ತಾ ಇದೆ. ಎಣ್ಣೇಲಿ ಕರೀತಾ ಇದಾರೇಂತ ಕಾಣಸತ್ತೆ. ಈ ವಾಸನೆಗೆ ನನ್ನ ಹಸಿವು ಜಾಸ್ತಿ ಆಯ್ತು. ಬನ್ನಿ. *(ಹರವಿಗಳನ್ನು ಕುರಿತು)* ನನ್ನ ಪ್ರಿಯ ಹರಿವಿಗಳೇ ನಾವು ಊಟಕ್ಕೆ ಹೋಗಿರ್ತೀವಿ. ನಿಮಗೂ ಇಷ್ಟರಲ್ಲೇ ಕರಿದ ಮಾಂಸ ಇದೆ. ಅಲ್ಲೀತನಕ ಸುಮ್ಮನೆ ಕೂತಿರಿ. ಅಡ್ಡಾಡಬೇಡಿ. ಕರೆಯೋ ತನಕ ಕಾಯಬೇಕು, ಅಷ್ಟೆ. (ಸಲೀಮನಿಗೆ) ಜೋಕ್ ಹೊಡೆದೆ, ಹ್ಯಾಗಿದೆ ಹೆಹ್ಹೆಹ್ಹೆ………..ಬನ್ನಿ…….

*(ಹೋಗುವರು. ಗಣೇಶ ದೊಡ್ಡದೊಂದು ಡ್ರಮ್ಮು ತರುವನು. ಮತ್ತೆ ಹೋಗಿ ಮೂರು ಕತ್ತೆಗಳನ್ನು ಎಳೆದು ತರುವನು. ಅಷ್ಟರಲ್ಲಿ ಮರ್ಜೀನಾ ಎಣ್ಣೆ ಪಾತ್ರೆ ಹಿಡಿದು ಬರುವಳು. ಕಾದೆಣ್ಣೆಯನ್ನು ಒಂದೊಂದೇ ಹರವಿಯಲ್ಲಿ ಸುರಿಯುತ್ತಿದ್ದಂತೆ ಗಣೇಶ ಜೋರಿನಿಂದ ಡ್ರಮ್ಮು ಬಾರಿಸುವನು. ಕತ್ತೆಗಳು ಕಿರುಚುವವು. ಹೀಗೇ ಪ್ರತಿಯೊಂದು ಹರವಿಗೂ ಸುರಿಯುತ್ತಾಳೆ.)*

## ಉತ್ತರಾರ್ಧ (ಚೂರಿಯ ಅಂಚಿನ ಮರ್ಜೀನಾ)

*(ಅಲೀಬಾಬಾ, ಆಯಿಲ್ ಶಾ ಹಸನ್ ಮತ್ತು ಸಲೀಂ ಊಟ ಮಾಡುತ್ತಿದ್ದಾರೆ.)*

ಹಸನ್ : ಹಹಹ್ಹ ಕ್ಯಾ ಗದಾ ಆಪಕಾ! ಹಾಡುತ್ತವೆ! ಹಹ್ಹಹ್ಹಾ ಒಂದೊಂದು ಕತ್ತೆಗೆ ಒಂದೊಂದು ಘರಾನಾ!! ಅಬ್ಬ

ಸಲೀಂ : ಆಯಿಲ್ ಶಾ ನಿಮ್ಮ ಕುದುರೆ ಹಾಡುತ್ತವಾ!

ಹಸನ್ : ಕುದುರೆ ಹಾಡೋದೆ! ಹೆಹೆಹೆಹ್ಹೆಹ್ಹೆ………..ನೀವು ನನ್ನನ್ನ ಭಾಳ ನಗಸ್ತಾ ಇದ್ದೀರಿ, ಭಾಳಾ ನಗಸ್ತಾ ಇದ್ದೀರ………..ನೀವು ಏನೇ ಹೇಳಿ ನಿಮ್ಮಂಥ ರಸಿಕರನ್ನ ನಾ ನೋಡಲೇ ಇಲ್ಲ.

ಅಲೀಬಾಬಾ : ಆಯಿಲ್ ಶಾ, ಈಗ ನಿಮ್ಮನ್ನ ಖುಷಿಪಡಿಸಲಿಕ್ಕೆ ಒಂದು ಸಣ್ಣ ನೃತ್ಯ ಕಾರ್ಯಕ್ರಮ ಇಟ್ಕೊಂಡಿದೇವೆ. ಆಗಬಹುದಲ್ಲ!

ಹಸನ್ : ಕತ್ತೆಗಳ ನೃತ್ಯವಾ!

ಅಲೀಬಾಬಾ : ಛೇ ಛೇ. ನಮ್ಮ ಮನೆ ಹುಡುಗಿ ಮರ್ಜೀನಾ ಅಂತ. ಚೆನ್ನಾಗಿ ಕುಣಿತಾಳೆ. ಆಗಬಹುದಲ್ಲ!

ಹಸನ್ : ಓಹೊ! ಕತ್ತೇ ನೃತ್ಯ ಅಲ್ಲವಾದರೆ ಆಗಲಿ. ಯಾಕಂತೀನಿ, ಕತ್ತೆ ಹಾಡಬಹುದು. ಆದರೆ ಕುಣಿಯುವುದು ಸಾಧ್ಯವಿಲ್ಲಾ ಅಂತ ನನ್ನ ಅಭಿಪ್ರಾಯ. ಯಾಕೆಂದರೆ ನಾಲ್ಕು ಕಾಲು ನೋಡಿ! ಹೆ ಹೆ ಹೆ ನೀವೇನಂತೀರಿ!

ಅಲೀಬಾಬಾ : ನಿಜ, ನಿಜ. ಕತ್ತೆ ಹಾಡುತ್ತವೆ. ಮರ್ಜೀನಾ ಎರಡೇ ಕಾಲಿನಿಂದ ಕುಣೀತಾಳೆ. ಆಗಬಹುದಲ್ಲ!

ಹಸನ್ : ಓಹೊ.

*(ಕತ್ತೆಗಳ ಮೇಳಸ್ವರದೊಂದಿಗೆ ಮರ್ಜೀನಾ ಹಾಡುತ್ತ ಹಾಡುತ್ತ ಕುಣಿಯುತ್ತ ಬರುತ್ತಾಳೆ.)*

ಮರ್ಜೀನಾ : **ನಾs ಮರ್ಜೀನಾ||**
**ಮಿರುಗುವ ಮಿಂಚಿನ**
**ಚೂರಿಯ ಅಂಚಿನ**
**ಹರಿತಾದ ಕಣ್ಣೀನ| ಬಾಲೆ ನಾ||**
**ಗುಟ್ಟು ಎದೆಯಾಗಿನ**

**ಸಂಚು ಮನದಾಗಿನ**
**ಗೂಢಗಳ ಇರಿವೇನ|**
**ಮರ್ಜೀನಾ||**

*(ಮರ್ಜೀನಾ ಹಾಡುತ್ತ ಕುಣಿಯುತ್ತ ಆಯಿಲ್ ಶಾನ ಬಳಿ ಬಂದು ಮಿಂಚಿನ ವೇಗದಲ್ಲಿ ಅವನ ಚೂರಿ ಕಿತ್ತುಕೊಂಡು ಇರಿಯುವಳು. ಅಲೀಬಾಬಾ, ಸಲೀಂ ಎದ್ದು Freeze ಆದ ಹಾಗೆ ನಿಲ್ಲುವರು. ಆಯಿಲ್ ಶಾ ಸಾಯುವನು.)*

ಅಲೀಬಾಬಾ : ಮರ್ಜೀನಾ ಇದನ್ನೇನು ಮಾಡಿದೆ!

ಮರ್ಜೀನಾ : ಅವ ಚೋರೋಂಕಾ ರಾಜಾ! ಆಯಿಲ್ ಶಾ ಅಲ್ಲ, ಅಂತ ಎಷ್ಟು ಸಲ ಹೇಳೋದು! ನೀವು ಆತನ ಗವಿಯಿಂದ ಚಿನ್ನ ತಂದಿದ್ದಕ್ಕೇ ಸಿಟ್ಟಾಗಿ ನಿಮ್ಮನ್ನು ತೀರಿಸಬೇಕಂತ ಬಂದಿದ್ದ. ಬೇಕಾದರೆ ಹೋಗಿ ನೋಡಿ: ಹರವಿಗಳಲ್ಲಿರೋದು ಎಣ್ಣೆ ಅಲ್ಲ, ಚೋರರು.

ಸಲೀಂ : ಏನಂದೆ? *(ಓಡುವನು)*

ಅಲೀಬಾಬಾ : ಆತ ಆಯಿಲ್ ಶಾ, ಕಳ್ಳನಲ್ಲ. ನಮ್ಮ ಮೆಹಮಾನ್ ಆಗಿ ಬಂದಿದ್ದ.

ಮರ್ಜೀನಾ : ಎಲ್ಲಾ ಸುಳ್ಳು, ಹೋಗಿ ನೋಡಿ ಗೊತ್ತಾಗುತ್ತದೆ.

ಅಲೀಬಾಬಾ : ಆತ ಇರಾನ್ ಶಾನ ಸ್ನೇಹಿತ. ಕಳ್ಳ ಅಂತ ಹ್ಯಾಗ್ಹೇಳ್ತಿ?

ಮರ್ಜೀನಾ : ಹಿಂದೆ ನನ್ನ ತಂದೇನ ಕೊಂದಿದ್ದ. ಅವನನ್ನ ನಾನು ಚೆನ್ನಾಗಿ ಬಲ್ಲೆ. ಅವನಿಂದಲೇನನಗೆ ಇಂಥಾ ಸ್ಥಿತಿ ಬಂದದ್ದು. ನಿಮ್ಮನ್ನೂ ಮುಗಿಸಬೇಕಂತಿದ್ದ. ಗಣೇಶನ ದಯದಿಂದ ಎಲ್ಲಾರು ಪಾರಾದಿವಿ. (ಸಲೀಂ ಓಡಿಬಂದನು.)

ಸಲೀಂ : ಬಾಪರೇ ಬಾಪ್! ಎಂಥಾ ಮೋಸ! ಹರವಿಯಲ್ಲಿರೋದು ಎಣ್ಣೆ ಅಲ್ಲ ಬಾಬಾ, ಕಳ್ಳರು ಕಳ್ಳರು?

ಅಲೀಬಾಬಾ : ಹೌದೆ?

ಸಲೀಂ : ಹೌದು. ನಾ ನೋಡಿ ಬಂದೆ!

ಅಲೀಬಾಬಾ : ಛೇ ಛೇ! ಎಂಥಾ ಮೋಸ ಬೇಗಂ. ಬೇಗಂ ಹೊರಗಡೆ ಬಾ. (ಬೇಗಂ, ಫಾತಿಮಾ ಹೊರಗೆ ಬರುವರು.) ಮರ್ಜೀನಾ ಕಳ್ಳರಿಂದ ನಮ್ಮ ಜೀವಾ ಕಾಪಾಡಿದಳು. ನಮ್ಮ ಶ್ರೀಮಂತಿಕೆ ಬಚಾವ್ ಮಾಡಿದಳು. ಮರ್ಜೀನಾ ನಿನ್ನ ಉಪಕಾರ ನಮ್ಮ ಮೇಲೆ ಜಾಸ್ತಿ ಆಯ್ತು. ಹಾಗೇ ಇನ್ನೊಂದು ಉಪಕಾರ ಮಾಡು. ಈ ಅಯೋಗ್ಯನ್ನ ಮದುವೆ ಮಾಡಿಕೊಂಡು ನನ್ನ ಸೊಸೆ ಆಗಿಬಿಡು, ಸಾಕು.

ಮರ್ಜೀನಾ : ಅಲ್ಲಾನ ದಯೆ ದೊಡ್ಡದು. ಗಣೇಶನ ರೂಪದಿಂದ ಬಂದು ಕಾಪಾಡಿದ.

ಅಲೀಬಾಬಾ : ಗಣೇಶ? ಅವನ್ಯಾರು? ಎಲ್ಲಿದ್ದಾನೆ?

ಗಣೇಶ : ಇಕೋ ಇಲ್ಲಿದ್ದೇನೆ.

*(ಎಲ್ಲರೂ ತಿರುಗಿ ನೋಡುವರು, ಗಣೇಶ ಮೇಳದೊಂದಿಗೆ ಬರುವನು)*

ಮೇಳದ ನಾಯಕ : ಆಹಾ ಸ್ವಾಮಿ, ಮೇಳದಿಂದ ತಪ್ಪಿಸಿಕೊಂಡು ಹೋಗಿ, ಶಿಷ್ಯದ ರಕ್ಷಣೆ ಮಾಡಿ, ದುಷ್ಟರಿಗೆ ಶಿಕ್ಷೆ ಕೊಟ್ಟಂಥಾ ದೇವಾಧಿದೇವಾ, ನಿನ್ನ ಲೀಲೆ ಅಗಾಧ ವಾದುದು. ಈತನಕ ನಾಟಕ ನೋಡಿದ ಪ್ರೇಕ್ಷಕರಿಗೆ ಸಂದೇಶವೇನಾದರೂ ಇದ್ದರೆ ತಿಳಿಸುವಂಥನಾಗಬೇಕು.

ಗಣೇಶ : ಸೂತ್ರಧಾರ, ಕಳ್ಳರಿಗೆ ಶಿಕ್ಷೆ ಉಂಟೇ ಉಂಟು. ಆದರೆ ಲಾಡು ಚೋರರಿಗೆ ವಿನಾಯಿತಿ ಉಂಟೆಂದು ಸಾರುವಂಥವನಾಗೈ ಸೂತ್ರಧಾರ.

ಮೇಳದ ನಾಯಕ : ಅಪ್ಪಣಾ ಸ್ವಾಮೀ, ಇದೀಗ ಆಟದ ಆರಂಭದಲ್ಲಿ ತಾವು ನಮ್ಮ ಪೂಜೆ ಸ್ವೀಕರಿಸಲಿಲ್ಲ, ಅಂತ್ಯದಲ್ಲಾದರೂ ಸ್ವೀಕರಿಸಬೇಕೆಂದು ಪ್ರಾರ್ಥನೆ.

ಗಣೇಶ : ಲಾಡು ಉಂಟೋ?

ಮೇಳದ ನಾಯಕ : ಉಂಟು ಸ್ವಾಮೀ. ತಮ್ಮ ಉದರದಿಂದ ಉದುರಿದ್ದೇ ಇದೆ.

ಗಣೇಶ : ತಥಾಸ್ತು.

ಎಲ್ಲರೂ : **ಶ್ರೀ ಗಜವದನಾ**
**ಗಿರಿಜಾ ನಂದನ**
**ಸ್ವೀಕರಿಸಯ್ಯಾ ಸಾವಿರ ನಮನಾ||**

# ಕಿಟ್ಟಿ ಕಥೆ

## ಪಾತ್ರವರ್ಗ

ಭಾಗವತ
ಅಜ್ಜಿ-ಟಗರಜ್ಜಿ
ಕುಂಬಾರ್ತಿ-ಮಗ
ಟಗರು-ಭಗವಂತ
ಮುದುಕ-ಸೂಳೆ
ಕರಡಿ-ರಾಜಕುಮಾರಿ
ರಾಜ-ಮೇಳ (ಏಳು ಜನ)
ಕಿಟ್ಟಿ
ಶೆಟ್ಟಿ

## ಗಣಪದ

ಮೇಳ : **ಬಂದ ಕುಂತಿದೀರಿ ಹಿರಿಯ ಕಿರಿಯರಾ**
**ಶರಣು ಹೇಳತೀವಿ ನಾವು ನಿಮಗ| ಸ್ವಾಮಿ**
**ಸಣ್ಣ ಹುಡುಗರು ಬಣ್ಣದ ಗಾಬರಿ**
**ಚೆನ್ನಾಗಿ ಕೇಳಿರಿ ನಮ್ಮ ಕಥನಾ||**

**ತಪ್ಪ ಮಾಡಿದರೆ ಒಪ್ಪ ಮಾಡಿಕೊಳ್ಳಿ**
**ಚಪ್ಪಾಳಿ ಹೊಡೆಯಿರಿ ನಗುನಗುತಾ| ಸ್ವಾಮಿ**
**ಸ್ಕೂಲಿನ ಎಳೆಯರು ತಲೆಯ ಬಾಗತೀವಿ**
**ಕೈಯ ಮುಗಿಯತೀವಿ ನಾವು ನಿಮಗ|| ಸ್ವಾಮಿ**

**ಬುದ್ಧಿವಂತ ಗಣಪ ಡೊಳ್ಳ ಹೊಟ್ಟಿ ಟೊಣಪ**
**ಕೈಯ ಮುಗಿಯತೀವಿ ನಾವು ನಿಮಗ| ಸ್ವಾಮಿ**

**ಬುದ್ಧಿಕೊಡು ನಮಗಷ್ಟು ದೊಡ್ಡ ಕಡುಬಿನಷ್ಟು**
**ಹಾಡಿ ಕುಣಿಯತೀವಿ ನಿನ್ನ ಮುಂದ|| ಸ್ವಾಮಿ**

## ಹಾಕಮ್ಮ ಗಂಟು

*(ಕಿಟ್ಟಿಯ ಆಗಮನ. ಹತ್ತಿರ ನೋಡಿ ಕಂಬಳಿ ಹೊದ್ದು ಮಲಗುತ್ತಾನೆ. ಅಜ್ಜಿ ಅದು ಇದು ಕೆಲಸ ಮಾಡುತ್ತ ಬರುತ್ತಾಳೆ.)*

ಅಜ್ಜಿ : ಏ ಕಿಟ್ಟೀ, ಏಳೊ ಮೇಲೇಳೊ. ಏಳೊ ಅಂದರೆ ಏಳಬೇಕು. ಸ್ಕೂಲಿಗೆ ಹೊತ್ತಾಗೋಯ್ತು. ಏಳೋ ಅಂದ್ರೆ.

ಭಾಗವತ : (ಆಗಮಿಸಿ) ಇದೇನು? ನಾನು ಬರೋದರೊಳಗೇ ನಾಟಕ ಸುರುವಾಗಿ ಬಿಟ್ಟದೆ! ಯಾರು ಈ ಮುದುಕಮ್ಮ? ಯಾರನ್ನ ಎಬ್ಬಿಸ್ತಿದಾಳೆ? ಏ ಏ ಮುದುಕಮ್ಮ, ತಡಿ ತಡಿ. ಏನಿದು? ನಾನು ಬರೋದರೊಳಗೇ ನಾಟಕ ಸುರು ಮಾಡೋದೆ? ಹೇಳಿಲ್ಲಾ ನಿನಗೆ? ಶಾಸ್ತ್ರದ ಪ್ರಕಾರ ನಾಟಕ ಸುರುವಾಗಬೇಕು. ಆಮೇಲೆ ನಿನ್ನ ಪ್ರವೇಶ ಅಂತ? ಈ ಮುದಿಕೇರ ಹಣೇಬರಾನೇ ಇಷ್ಟು. ಈಗ ಮೊದಲು ನನ್ನ ಮಾತಿದೆ. ಸ್ವಲ್ಪ ಆಚೆ ಹೋಗ್ತೀಯಾ?

ಅಜ್ಜಿ : ಯಾರೋ ತಮ್ಮಾ ನೀನು?

ಭಾಗವತ : ನಾನು ಯಾರು? ಇದೊಳ್ಳೆದಾಯ್ತಲ್ಲ, ನಾನು ಭಾಗವತ. ರಂಗದ ಮೇಲೆ ನಿಮ್ಮಂಥವರು ಬರ್ತೀರಲ್ಲ: ನಿಮ್ಮನ್ನ ಈ ಪ್ರೇಕ್ಷಕರಿಗೆ ಪರಿಚಯ ಮಾಡಿಸಬೇಕು. ನಮ್ಮ ಆಟದ ವಿಷಯ ಹೇಳಬೇಕು. ಅದು ಬಿಟ್ಟು ಯಾರಂತ ನನ್ನೇ ಕೇಳ್ತಿದ್ದೀಯಾ! ಬಲೇ ಮುದುಕಿ ನೀನು! ಸ್ವಲ್ಪ ಆಚೆ ಹೋಗ್ತೀಯಾ?

ಅಜ್ಜಿ : ಯಾವನಯ್ಯಾ ನೀನು? ನನ್ನ ಮನೆ, ನನ್ನ ಮೊಮ್ಮಗ, ನನ್ನ ಮಾತು. ನನಗೇ ಆಚೆ ಹೋಗಂತೀಯಾ. ನನ್ನ ಯಜಮಾನ ಕೂಡ ಹಾಗ್ಹೇಳಲಿಲ್ಲ.

ಭಾಗವತ : ಓಹೋ! ಈ ಪಾತ್ರಗಳಿಗೆಲ್ಲಾ ಆಗಲೇ ಜೀವ ಬಂದುಬಿಟ್ಟಿದೆ. ಇವನ್ನೀಗ ಕಂಟ್ರೋಲ್ ಮಾಡೋದೇ ಕಷ್ಟ. ಆಯ್ತಮ್ಮಾ ನಾನು ಭಾಷಣಾ ಮಾಡೋ ದಿಲ್ಲ, ಒಂದೆರಡು ಮಾತು ಹೇಳ್ತೇನೆ. ಸ್ವಲ್ಪ ತೆಪ್ಪಗಿರ್ತೀಯಾ?

ಅಜ್ಜಿ : ಅದೇನೊ ಬೇಗನೆ ಮುಗಸು. ನಾನು ಇಷ್ಟರಲ್ಲೇ ಬರತೇನೆ.

*(ಹೋಗುವಳು)*

ಭಾಗವತ : ಪ್ರೇಕ್ಷಕ ಮಕ್ಕಳಲ್ಲಿ ವಿಜ್ಞಾಪನೆ. ಈ ಹೊತ್ತು ನಾವು ಆಡೋ ಆಟ ಕಿಟ್ಟೀ ಕಥೆ. ಕಿಟ್ಟಿ ನಿಮ್ಮ ಹಾಗೇ ಒಬ್ಬ ಹುಡುಗ. ವಯಸ್ಸು ಎಷ್ಟೋ ಇರಬಹುದು. ಮದುವೆ ವಯಸ್ಸಂತೂ ಖಂಡಿತ ಅಲ್ಲ, ಬೇಕಾದರೆ ನೀವೇ ನೋಡಿ-ಎಲ್ಲಿ ಕಿಟ್ಟೀ? ಕಿಟ್ಟೀ, ಏ ಕಿಟ್ಟೀ-

ಕಿಟ್ಟಿ : *(ಮಲಗಿಕೊಂಡೇ)* ಏನು ಭಾಗವತರೇ?

ಭಾಗವತ : ಅಪ್ಪಾ, ನೀನು ನಮ್ಮ ಕಥಾನಾಯಕ. ಆಟದ ಆರಂಭದಲ್ಲಿ ನಮ್ಮ ಪ್ರೇಕ್ಷಕರಿಗೆ ನಿನ್ನ ಪರಿಚಯ ಮಾಡಿಕೊಡಬೇಕು. ಈಚೆ ಬರತೀಯಾ?

ಕಿಟ್ಟಿ : ನಮ್ಮಜ್ಜಿ ಇಲ್ಲ ತಾನೆ?

ಭಾಗವತ : ಯಾಕೆ ಹೆದರಿದೆಯಾ?

ಕಿಟ್ಟಿ : (ಎದ್ದು ಬಂದು) ಹೆದರಲಿಲ್ಲ ಭಾಗವತರೇ, ರೇಗಿಕೊಂಡು ಎದ್ದು ಬಂದೆ!

ಭಾಗವತ : ರೇಗಿಕೊಂಡು? ಆಯರ ಮೇಲೆ?

ಕಿಟ್ಟಿ : ನಿಮ್ಮ ಮೇಲೆ.

ಭಾಗವತ : ನನ್ನ ಮೇಲೆ? ಅದ್ಯಾಕಪ್ಪ?

ಕಿಟ್ಟಿ : ನನ್ನ ಮದುವೆ ಮಾಡಬಾರದು ಅಂತಲಾ ನಿಮ್ಮ ಅಭಿಪ್ರಾಯ?

ಭಾಗವತ : ಛೇ ಛೇ, ನಾನೂ ಗಂಡಸಲ್ವೇನಪ್ಪಾ ನಿನ್ನ ಹಾಗೆ.

ಕಿಟ್ಟಿ : ಮತ್ತೆ, ನನಗೆ ಮದುವೆ ವಯಸ್ಸಾಗಿಲ್ಲ ಅಂದಿರಿ. ನನಗೆ ಮದುವೆ ವಯಸ್ಸಾಗಿಲ್ಲ ಅಂತ ನಿಮಗೆ ಹ್ಯಾಗೆ ಗೊತ್ತಾಯ್ತು?

ಭಾಗವತ : ನೋಡಿದರೇ ತಿಳಿಯುತ್ತಲ್ಲ-ಮೀಸೆ ಮೂಡಿಲ್ಲ, ಗಡ್ಡ ಬಂದಿಲ್ಲ.

ಕಿಟ್ಟಿ : ಏನಂದಿರಿ? *(ಹೆದರಿಸುವನು)*

ಭಾಗವತ : ಆಯ್ತಪ್ಪ, ನಿನಗೂ ವಯಸ್ಸಾಗಿದೆ, ಸರಿತಾನೆ?

ಕಿಟ್ಟಿ : ನನಗಲ್ಲ, ನನಗೆ ವಯಸ್ಸಾಗಿಲ್ಲ ಅಂದ್ರೆಲ್ಲಾ, ಆ ನಿಮ್ಮ ಪ್ರೇಕ್ಷಕರಿಗೆ ಹೇಳಿಕೊಳ್ಳಿ.

*(ಹೋಗಿ ಮಲಗುವನು)*

ಭಾಗವತ : ಎಲಾ ಇವನ!

ಅಜ್ಜಿ : *(ಬಂದು)* ಏ ಕಿಟ್ಟೀ, ಏಳೋ ಮೇಲೇಳೊ. ಏಳೊಂದ್ರೆ ಏಳಬೇಕು. ಏಳ್ರಾಜಾ, ಏಳೂ ಜಾಣಾ-ಅಯ್ಯೊ ಈ ಹುಡುಗನ್ನ ಏನ್ಮಾಡಿ ಎಬ್ಬಿಸಲಿ? ಏ ಕಿಟ್ಟಿ, ಏಳ್ತಿಯೊ? ಹಿರಿಯರನ್ನ ಕರಸಲೊ? ಅಯ್ಯಾ ಭಾಗವತರೇ,

ಭಾಗವತ : ಏನಮ್ಮಾ ಕರದೆ?

ಅಜ್ಜಿ : ನನ್ನ ಮೊಮ್ಮಗ ಕಿಟ್ಟಿ, ನಿನ್ನೆಯಿಂದ ಒಂದು ಮಾತಾಡಿಲ್ಲ. ಒಂದು ನಕ್ಕಿಲ್ಲ, ಒಂದು ಉಂಡಿಲ್ಲ, ತಿಂದಿಲ್ಲ, ಸುಮ್ಮನೆ ಮಲಗಿಬಿಟ್ಟಿದಾನೆ. ನೀವಾದರೂ ಎಬ್ಬಿಸಿ ಉಪಕಾರ ಮಾಡತೀರಾ?

ಭಾಗವತ : ಓಹೊ! ನಿನ್ನೆಯಿಂದ ಹೀಗೇ ಬಿದ್ದುಕೊಂಡಿದಾನಾ?

ಅಜ್ಜಿ : ಹೂ.

ಭಾಗವತ : ಹಾಗಿದ್ದರೆ ಈ ಕೇಸು ಭಾಳಾ ಸಿರಿಯಸ್ಸು. ಅಲ್ಲಮ್ಮಾ ಯಾಕೆ ಹೀಗೆ ಮಲಗಿದಾನಂತೆ?

ಅಜ್ಜಿ : ಆತ ಹೇಳಿದರಲ್ಲವೆ?

ಭಾಗವತ : ಏನಾದರೂ ತಿಂಡಿ ಕೇಳಿದ್ನಾ?

ಅಜ್ಜಿ : ಇಲ್ಲಾ.

ಭಾಗವತ : ಏನಾದರೂ ಆಟಿಗೆ ಬೇಡಿ ಅತ್ತನಾ?

ಅಜ್ಜಿ : ಇಲ್ಲಾ.

ಭಾಗವತ : ಯಾರ ಜೊತೆಗಾದರೂ ಜಗಳ ಆಡಿದ್ನಾ?

ಅಜ್ಜಿ : ಇಲ್ಲಾ.

ಭಾಗವತ : ತಿಂಡೀ ಕೇಳಿಲ್ಲಾ, ಆಟಿಗೆ ಬೇಡಿಲ್ಲಾ, ಜಗಳ ಆಡಿಲ್ಲ...ತಾಯೀ ಈತನಿಗೆ ಮದುವೆ ಮಾಡಿದ್ದೀಯಾ?

ಕಿಟ್ಟಿ : (ಮೇಲೆದ್ದು) ಕೇಳಿ ಭಾಗವತರೇ, ಅದನ್ನ ಮಾಡಿದಾಳೇನು ಕೇಳಿ.

ಭಾಗವತ : ಏನನ್ನ?

ಕಿಟ್ಟಿ : ನೀವಾಗಲೇ ಏನೋ ಅಂದಿರಲ್ಲ, ಅದನ್ನ.

ಭಾಗವತ : ಅಂದರೆ, ಮದುವೇನಾ?

ಕಿಟ್ಟಿ : ಹೂ ಹೂ. ಅದನ್ನೆ ಮಾಡಿದಾಳೇನು ಕೇಳಿ.

ಅಜ್ಜಿ : ಅಯ್ಯೋ ಶಿವನೆ! ನಿನ್ನಂಥಾ ಚಿಕ್ಕವನಿಗೆ ಮದುವೇನಾ?

ಕಿಟ್ಟಿ : ನಾನು ಚಿಕ್ಕವನೊ ದೊಡ್ಡವನೊ! ಅದನ್ನ ಹೇಳೋಳು ನನ್ನ ಹೆಂಡತಿ,
ನೀವಲ್ಲ.

ಭಾಗವತ : ಏನು ಕಲಿಕಾಲ ಬಂತಪ್ಪ?

ಕಿಟ್ಟಿ : ಏನ್ರಿ ಕಲಿಕಾಲ ಅಂತೀರಿ. ಕಲಿಕಾಲ್ದಲ್ಲಿ ಯಾರೂ ಮದುವೇನೇ ಆಗಬಾರದಾ? 'ಬೆಳೆದು ನಿಂತಿದಾನೆ, ಮದುವೆ ಮಾಡಮ್ಮಾ' ಅಂತ ಹೇಳೋದ ಬಿಟ್ಟು, ಏನೇನೋ ಹೇಳ್ತೀರಾ. ಅಜ್ಜೀ, ಮಾಡಜ್ಜಿ ಮದುವೆ.

ಅಜ್ಜಿ : ಛೇ ಛೇ-

ಕಿಟ್ಟಿ : ಅಜ್ಜೀ-

ಅಜ್ಜಿ : ಅಬ್ಬಬ್ಬಾ! ಇನ್ನೂ ಚಿಗರ ಮೀಸೆ ಮೂಡಿಲ್ಲಾ-

ಕಿಟ್ಟಿ : ಅಜ್ಜೀ-

**ಅಜ್ಜೀ ಅಜ್ಜೀ ಹುಡಿಗಿ ಬೇಕು**
**ನನಗೆ ಮದುವೆ ಮಾಡಬೇಕು||**
**ಹಾಕಮ್ಮ ಗಂಟು**
**ಭಾರೀ ಅರ್ಜೆಂಟು**
**ಮೀಸೆ ಮೂಡಿಲ್ಲಾಂತ ಹೇಳಬೇಡ ಕುಂಟನೆಪ||**
**ನಿಂತೇನೆ ಉದ್ದಾ**

**ಎದೀತನಕಾ ಬೆಳದಾ**

**ಮೀಸೆ ಮೂಡಿಲ್ಲಾಂತ ಹೇಳಬ್ಯಾಡ ಕುಂಟನೆಪ||**

ಕೇಳಿ ಬಂತಾ ಅಜ್ಜೀ-

ಅಜ್ಜಿ : ಸಾಧ್ಯವೆ?

ಭಾಗವತ : ಸಾಧ್ಯವೆ?

ಕಿಟ್ಟಿ : ನಿಮ್ಮಿಬ್ಬರಿಗೂ ಬುದ್ಧಿಯಿಲ್ಲಾಂತ ಹೇಳೋದೇ ಇದಕ್ಕಾಗಿ. ಭಾಗವತರೇ ನಿನ್ನೆ ಏನಾಯ್ತು ಗೊತ್ತಾ?

ಭಾಗವತ : ಇಲ್ಲಪಾ.

ಕಿಟ್ಟಿ : ಚೆನ್ನಿದಾಂಡ ಆಡ್ತಿದೆ, ಮಕ್ಕಳೊಂದಿಗೆ.

ಭಾಗವತ : ನಿನ್ನ ಮಕ್ಕಳೊಂದಿಗಾ?

ಕಿಟ್ಟಿ : ಬೇರೆಯವರ ಮಕ್ಕಳೊಂದಿಗೆ. ಆಗ ಚೆನ್ನೀ ಹೊಡೆದೆ. ಹೋಗಿ ಒಬ್ಬ ಹೆಂಗಸಿನ ತಲೆಗೆ ಹೊಡೀತು. ಅವಳು ಬಿರಿ ಬಿರೀ ಹೀಗೆ ಬಂದ್ಲು. ಏನಂದ್ಲು ಗೊತ್ತಾ?

ಅಜ್ಜಿ : ಏನಂದ್ಲು?

ಕಿಟ್ಟಿ : ಹೇಳಜ್ಜಿ ನೋಡೋಣ; ಏನಂದಿರಬೇಕು?

ಅಜ್ಜಿ : 'ಹೋಗೋ ಬರೋ ಜನ ನೋಡಿ ಚೆನ್ನಿದಾಂಡ ಆಡಬೇಕು ಮಗಾ'-
ಅಂದಿರಬೇಕು.

ಕಿಟ್ಟಿ : ಊಹೂ, ನಿವ್ಹೇಳಿ ಭಾಗವತರೇ ನೋಡೋಣ, ಏನಂದಿರಬೇಕು?

ಭಾಗವತ : 'ರಸ್ತೆ ಮೇಲಲ್ಲ, ಬಯಲಲ್ಲಿ ಚೆನ್ನಿದಾಂಡ ಆಡಬೇಕಪಾ'- ಅಂದಿರಬೇಕು.

ಕಿಟ್ಟಿ : ಅದಕ್ಕೇ ನಿಮಿಬ್ಬರಿಗೂ ಬುದ್ಧಿಯಿಲ್ಲಾ ಅಂತ ಅಂದದ್ದು. ಏನಂದ್ಲು ಗೊತ್ತಾ? ಹೀಗೆ ಬಿರಿ ಬಿರಿ ನನ್ನ ಹತ್ತಿರ ಬಂದ್ಲು. 'ಲೋ ಅಯೋಗ್ಯ, ಇಷ್ಟುದ್ದ ಬೆಳೆದು ನಿಂತೀಯಾ, ಸಕಾಲದಲ್ಲಿ ಮದುವೆ ಆಗಿದ್ದರೆ ಇಷ್ಟೊಂದ ಜನ ಮಕ್ಕಳ ತಂದೆ ಆಗತಿದ್ದೆ, ನಾಚಿಕೆ ಆಗೋಲ್ಲಾ? ಯಾರೋ ನಿನ್ನ ಬೆಳೆಸಿದವರು? ಜೋಪಾನ ಮಾಡಿದವರು? ಅವರಿಗಾದರೂ ಮಾನ ಮರ್ಯಾದೆ ಇಲ್ಲಾ?'-

ಅಜ್ಜಿ : ಅಂದಳಾ?

ಕಿಟ್ಟಿ : ಹೂ. ಹೀಗೇ ಅಂದ್ಲು!

ಅಜ್ಜಿ : ಅಯ್ಯೊ ಶಿವನೆ, ನನ್ನ ಮಾನ ಮರ್ಯಾದೆಯೆಲ್ಲಾ ಹೋಯ್ತುಲ್ಲೊ!

ಕಿಟ್ಟಿ : ಕುಡಲೇ ನನಗೊಂದು ಮದುವೆ ಮಾಡು. ನಿನಗೂ ಮಾನ ಮರ್ಯಾದೆ ಇದೆ ಅಂತ ಅವಳನ್ನ ಹುಡುಕ್ಕೊಂಡ ಹೋಗಿ, ಹೇಳಿ ಬರ್ತೀನಿ.

ಅಜ್ಜಿ : ಅಯ್ಯೊ ಶಿವನೆ! ತಂದೆ ತಾಯಿ ಇಲ್ಲದ ನಿನ್ನನ್ನ ಇಷ್ಟೊಂದು ಕಷ್ಟಪಟ್ಟು ಬೆಳಸಿದ್ದೆಲ್ಲಾ ವ್ಯರ್ಥವಾಯ್ತಲ್ಲೊ!

ಕಿಟ್ಟಿ : ಅದಕ್ಕೇ ಈಗೊಂದು ಮದುವೆ ಮಾಡು, ಎಲ್ಲಾ ಸಾರ್ಥಕವಾಗತದೆ.

ಅಜ್ಜಿ : ಅದ್ಯಾಕಜ್ಜಿ ಯೋಚನೆ ಮಾಡ್ತಿ? ನನ್ನ ಹತ್ತಿರ ಹತ್ತು ಪೈಸೆ ಇದೆ. ಒಂದು ಪೈಸೆ ವಧುವಿಗೆ ಸೀರೆ, ಒಂದು ಪೈಸೆ ನನ್ನ ಬಟ್ಟೆ, ಒಂದು ಪೈಸೆ ಊಟ, ಒಂದು ಪೈಸೆ ಪುರೋಹಿತರ ಫೀಜು, ಒಂದು ಪೈಸೆ ಹಾಸಿಗೆ, ಹತ್ತರಲ್ಲಿ ಇನ್ನೆಷ್ಟುಉಳೀತು ಭಾಗವತರೇ?

ಭಾಗವತ : ಓ ಇನ್ನೂ ಐದು ಪೈಸೆ ಉಳಿಯಿತು.

ಕಿಟ್ಟಿ : ಅದನ್ನ ನನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿಟ್ಟುಬಿಡು.

ಭಾಗವತ : ಮತ್ತೆ ಹುಡಿಗಿ?

ಕಿಟ್ಟಿ : ಅದೇನು ಮಹಾ! ಯಾವುದಾದರೂ ಕಾಲೇಜ ಕಡೆ ಹೋದರೆ ಯದ್ವಾ ತದ್ವಾ ಹುಡಿಗೀರು ಸಿಗತಾರೆ!

ಅಜ್ಜಿ : ಹತ್ತ ಪೈಸಾದಲ್ಲಿ ಮದುವೆ! ಭಾಗವತರೇ ಇರೋನೊಬ್ಬ ಮೊಮ್ಮಗ. ಅವನಿಗೋ ಮದುವೆ ಹುಚ್ಚು ನೆತ್ತಿಗೇರಿಬಿಟ್ಟಿದೆ, ಏನು ಮಾಡೋದು?

ಕಿಟ್ಟಿ : ಮದುವೆ.

ಅಜ್ಜಿ : ಭಾಗವತರೇ,

ಭಾಗವತ : ಏನಜ್ಜಿ?

ಅಜ್ಜಿ : ಏನ್ಮಾಡೋದು ಅಂತ ನಿಮ್ಮನ್ನ ಕೇಳಿದೆ.

ಭಾಗವತ : ಹೇಳ್ತಾನಲ್ಲಾ ಮದುವೆ ಅಂತ.

ಕಿಟ್ಟಿ : ಅಜ್ಜಿ ನನಗಿದೆಯಲ್ಲಾ ಸರಿಬರೋದಿಲ್ಲ. ನೀನೇನು ಈ ಹತ್ತು ಪೈಸಾದಲ್ಲಿ ಮದುವೆ ಮಾಡ್ತಿಯೊ, ಅಥವಾ ನಾನೇ ಮಾಡಿಕೊಂಡು ಬರಲೊ?

ಅಜ್ಜಿ : ಇವನ ಮಾತ ಕೇಳಿ ನನಗೂ ಹುಚ್ಚು ಹತ್ತುತಾ ಇದೆಯಲ್ಲ ಭಾಗವತರೇ!

ಕಿಟ್ಟಿ : ಸರಿ ಸರಿ ಈ ಹತ್ತು ಪೈಸಾದಲ್ಲೇ ಮದುವೆ ಮಾಡಿಕೊಂಡು ಬರ್ತೀನಿ ನೋಡ್ತಾ ಇರಿ.

*(ಭಾಗವತ, ಅಜ್ಜಿ 'ಕಿಟ್ಟೀ ಕಿಟ್ಟೀ ತಡೆಯೋ' ಎನ್ನುತ್ತಿರುವಂತೆ ಕಿಟ್ಟಿ ಹೋಗುವನು.)*

## ಸಣ್ಣ ದೇವರು

*(ಒಂದೂರಿನ ಪೇಟೆ, ಮಡಕೆ ಮಾರುವ ಕುಂಬಾರ್ತಿ, ಅಕ್ಕಿ ಮಾರುವ ಶೆಟ್ಟಿ ಕುಣಿಯುತ್ತ ಬರುತ್ತಾರೆ. ಪರಸ್ಪರ ನೋಡುತ್ತ, ನಗುತ್ತ ಒಲವು ಸೂಚಿಸುತ್ತಾರೆ.)*

ಕುಂಬಾರ್ತಿ : ಮಡಕೆ ಬೇಕೆ ಮಡಕೆ ಬೇಕೆ ಮಡಕೆ ಬೇಕೆ?

ಶೆಟ್ಟಿ : ಅಕ್ಕಿ ಬೇಕೆ ಅಕ್ಕಿ ಬೇಕೆ ಅಕ್ಕೀ ಬೇಕೆ?

ಕುಂಬಾರ್ತಿ : **ಒಡೆದೇನಂದರ ಒಡೆಯೋದಿಲ್ಲ**
**ಮುರಿದೇನಂದರ ಮುರಿಯೋದಿಲ್ಲ**
**ಹೊಚ್ಚ ಹೊಸ ಮಣ್ಣಿನ ಮಡಕೆ॥**

ಶೆಟ್ಟಿ : **ಬಂಗಾರ ಕಟ್ಟಿ ಬೆಳ್ಳೀ ಬಣ್ಣ**
**ಕೋಲಾರಕ್ಕಿ ಸಣ್ಣ ಸಣ್ಣ**
**ಇಂದಿರ ಭೋಗ ಏನ ರುಚಿಯನ್ನ॥**

ಕಿಟ್ಟಿ : *(ಪ್ರವೇಶಿಸಿ)* ಅಯ್ಯೋ, ಯಾವೂರಪ್ಪಾ ಇದು? ಹಸಿವಾಗ್ತಾ ಇದೆ. ಊಟಾಮಾಡಿ ಸಿಟ್ಟು ಮಾಡಬೇಕಿತ್ತು. ಹಾಳದ್ದು ಊಟಾ ಮಾಡಿದರೆ, ನಾ ಸಿಟ್ಟು ಮಾಡಿದ್ದು ಅಜ್ಜಿಗೆ ತಿಳಿಯೋದೇ ಇಲ್ಲ. ಈಗೇನ್ಮಾಡ್ಲಿ?

ಕುಂಬಾರ್ತಿ : ಮಡಕೆ ಬೇಕೆ, ಮಡಕೆ?

ಶೆಟ್ಟಿ : ಅಕ್ಕಿ ಬೇಕೆ, ಅಕ್ಕಿ?

ಕಿಟ್ಟಿ : ಅಮ್ಮಾ, ಈ ಮಡಕೆ ಬೆಲೆ ಎಷ್ಟು?

ಕುಂಬಾರ್ತಿ : ಅದಕ್ಕೆ ಐದು ರೂಪಾಯಿ.

ಕಿಟ್ಟಿ : ಇದಕ್ಕೆ?

ಕುಂಬಾರ್ತಿ : ಹತ್ತು ರೂಪಾಯಿ.

ಕಿಟ್ಟಿ : ಇದಕ್ಕೆ ಅಬ್ಬಬ್ಬಾ ಅಂದ್ರೆ ಐದ ಪೈಸಾ ಕೊಡತೇನೆ, ಕೊಡತೀಯಾ?

ಕುಂಬಾರ್ತಿ : ನೀನೆಂಥ ವ್ಯಾಪಾರ ಮಾಡ್ತಿ ತಗಿ ತಗಿಯೊ. ಹತ್ತ ರೂಪಾಯಿ ಮಡಕೆಗೆ ಐದ ಪೈಸಾ ಕೊಡತಾನಂತೆ. ಪಾಪ ಪುಟ್ಟ ಹುಡುಗ!

ಕಿಟ್ಟಿ : ನೋಡಮ್ಮಾ, ಮಡಕೆ ಕೊಟ್ಟರೆ ಕೊಡು ಬಿಟ್ಟರೆ ಬಿಡು, ನನಗೆ ಪುಟ್ಟ ಹುಡುಗಾ ಅಂತ ಮಾತ್ರ ಹೇಳಬ್ಯಾಡ. ಸಕಾಲದಲ್ಲಿ ಮದುವೆ ಆಗಿದ್ದರೆ ನನಗೂ ನಿನ್ನ ವಯಸ್ಸಿನ ಮಗಳಿರತಿದ್ಲು.

ಕುಂಬಾರ್ತಿ : ಅವಯ್ಯಾ! ಆಯ್ತಪಾ, ಚೆಲುವಾ ಅನ್ನಲಾ?

ಕಿಟ್ಟಿ : ಆಗಬಹುದು.

ಕುಂಬಾರ್ತಿ : ಚೆಲುವಾ, ಐದು ಪೈಸೆಗೆ ಮಡಕೆ ಬರೋದಿಲ್ಲಪ.

ಶೆಟ್ಟಿ : ಮಡಕೆ ಏನ್ಮಾಡ್ತಿ? ಅಕ್ಕಿ ತಗೊ ಅಕ್ಕಿ.

ಕಿಟ್ಟಿ : ಶೆಟ್ಟಿ ಅಬ್ಬಬ್ಬಾ, ಅಂದರೆ ಐದ ಪೈಸೆ ಕೊಡತೇನೆ, ಒಂದು ಕೇಜಿ ಅಕ್ಕಿ ಕೊಡತೀಯಾ?

ಶೆಟ್ಟಿ : ಯಾವನಪ್ಪ ಇವನು? ಐದ ಪೈಸೆಗೆ ಕೇಜಿ ಅಕ್ಕಿ ಕೇಳ್ತಾನೆ? ಯಾವನೋ ಪುಟ್ಟ ಹುಡುಗ, ಪಾಪ!

ಕಿಟ್ಟಿ : ಶೆಟ್ಟಿ, ಅಕ್ಕಿ ಕೊಡು ಬಿಡು, ಪುಟ್ಟ ಹುಡುಗಾ ಅಂತ ಮಾತ್ರ ಹೇಳಬೇಡ. ನನಗೂ ಸಕಾಲದಲ್ಲಿ ಮಕ್ಕಳಾಗಿದ್ದರೆ ನಿನ್ನಂಥಾ ಮಗ ಇರತಿದ್ದ.

ಶೆಟ್ಟಿ : ಎಲಾ ಇವನಾ! ಇನ್ನೇನಪ್ಪಾ, ನಿನಗೆ ತಾತಾ ಅನ್ನಲಾ?

ಕಿಟ್ಟಿ : ಆಗಬಹುದು.

ಶೆಟ್ಟಿ : ತಾತಾ, ಐದ ಪೈಸೆಗೆ ಅಕ್ಕಿ ಬರೋದಿಲ್ಲ. ಹೊರಟ್ಹೋಗು. ತಾತ! ನನ್ನ ತಾತಾ!

ಕುಂಬಾರ್ತಿ : ಚೆಲುವ! ಘನ ಚೆಲುವ!

*(ಹಿಂದೆ ಸರಿಯುತ್ತ ಇಬ್ಬರೋ ಪರಸ್ಪರ)*

ಶೆಟ್ಟಿ : ನನ್ನ ತಾತ ಅವನು!

ಕುಂಬಾರ್ತಿ : ಪಾಪ ಯಾವೂರ ಹುಡುಗನೋ! ತಪ್ಪಿಸಿಕೊಂಡು ಬಂದಿದಾನೋ ಏನೋ?

ಶೆಟ್ಟಿ : ಯಾವೂರಪ್ಪ ನಿಂದು?

ಕಿಟ್ಟಿ : ಮೇಲ್ಗಡೆ ಊರಿಂದ ಬಂದೆ.

ಶೆಟ್ಟಿ : ಮೇಲ್ಗಡೆ ಊರು? ಅದೇನೋ ಕೈಲಾಸ, ವೈಕುಂಠ ಅಂತಾರೆ ಆ ಊರಾ?

ಕುಂಬಾರ್ತಿ : ಮೇಲ್ಗಡೆ ಊರು? ಅದೇನೋ ಸ್ವರ್ಗ ಗಿರ್ಗ ಅಂತಾರೆ ಆ ಊರೇನಪ್ಪಾ?

ಕಿಟ್ಟಿ : ಹೌದು.

ಶೆಟ್ಟಿ : ಆ ಏನಂದೆ? ಕೈಲಾಸದವನ? ಅಯ್ಯಾ ತಾತ, ನನ್ನ ಯಜಮಾನಿ ಮೇಲೆ ಹೋಗಿ ಐದಾರು ವರ್ಷ ಆಯ್ತು. ಅವಳನ್ನೇನಾದರೂ ನೋಡಿದಿಯಾ?

ಕಿಟ್ಟಿ : *(ಬದಿಗೆ ಕರೆದು)* ಒಂದು ಮೂಗಿದೆ, ಎರಡು ಕಣ್ಣಿವೆ, ಒಂದೇ ತಲೆ ಇದೆ, ಸೀರೆ ಉಟ್ಟಿದಾಳೆ, ಅವಳೇ ತಾನೆ?

ಶೆಟ್ಟಿ : ಹಾ ಹಾ ಅವಳೇ ಕಣಪ್ಪ, ನೋಡಿದಿಯಾ?

ಕಿಟ್ಟಿ : ಅಯ್ಯೊ, ನೋಡದೇನು? ದಿನಾಲು ಶೆಟ್ಟಜ್ಜಿ-ಶೆಟ್ಟಜ್ಜಿ ಅಂತ ಎಷ್ಟೊಂದು ಆಟ ಆಡತೇನೆ, ಆಕೆ ಜೊತೆ.

ಶೆಟ್ಟಿ : ಅಯ್ಯೊ ಅಯ್ಯೊ! ನೋಡಿದಿಯಾ? ಅವಳ ಜೊತೆ ದಿನಾಲು ಆಟ ಆಡ್ತೀಯಾ? ಕೇಳಿದೆಯೇನೇ ಕುಂಬಾರ್ತಿ, ಈ ತಾತ ನನ್ನ ಹೆಂಡತೀನ್ನ ದಿನಾಲು ನೋಡ ತಾನಂತೆ ಕೈಲಾಸದಲ್ಲಿ! ಹ್ಯಾಗಿದಾಳೆ? ದಿನಾಲು ನನ್ನ ನೆನಪಿಸಿಕೊಳ್ತಾಳಾ?

ಕಿಟ್ಟಿ : ಅದ್ಯಾಕೋಪಾ. ದೇವರ ಹತ್ತರ ಅದೇನೊ ಗೊಣಗತಿದ್ಲು.

ಶೆಟ್ಟಿ : ದೇವರ ಹತ್ತರ? ಅದೇನಪ್ಪಾ?

ಕಿಟ್ಟಿ : *(ಪಕ್ಕಕ್ಕೊಯ್ದು)* ನೀನೇನೊ ಇತ್ತೀಚೆ ನಿನ್ನ ಯಜಮಾನೀನ ಮರತು ಕುಂಬಾರ್ತಿನ್ನ ನೋಡಿ, ಹಲ್ಲ ಕಿಸೀತಿ ಅಂತೆ!

ಶೆಟ್ಟಿ : ಆ? ಛೇ ಛೇ, ಶಿವ ಶಿವಾ! ನಾನು? *(ಸ್ವಗತ)* ಇದೂ ಅವಳಿಗೆ ಗೊತ್ತಾಗಿ ಬಿಟ್ಟಿತೆ? *(ಕುಂಬಾರ್ತಿಯನ್ನು ಗಮನಿಸಿ)* ತಾತ, ನಿನ್ನ ಆಮೇಲೆ ನೋಡ್ತೇನೆ… ಅಕ್ಕಿ ಬೇಕಾದರೆ ತಗೊಂಡ್ಹೋಗು, ಹಾ.

ಕುಂಬಾರ್ತಿ : ಅಯ್ಯಾ ಚೆಲುವಾ, ನೀ ಸ್ವರ್ಗಾನೂ ನೋಡೀಯಾ?

ಕಿಟ್ಟಿ : ಸ್ವರ್ಗ ಅಲ್ಲ ಅದು ಗಿರ್ಗ ಅಂತ.

ಕುಂಬಾರ್ತಿ : ಹಾ ಗಿರ್ಗ, ಏನಪಾ, ನನ್ನ ಯಜಮಾನ ಅಲ್ಲಿಗೆ ಹೋಗಿ ಹತ್ತು ವರ್ಷ ಆಯ್ತು. ಅವನ್ನೇನಾದರೂ ನೋಡೀಯಾ?

ಕಿಟ್ಟಿ : *(ಪಕ್ಕಕ್ಕೆ ಕರೆದುಕೊಂಡು ಹೋಗಿ)* ಯಾವನು ಕುಂಬಾರ ತಾನೆ?

ಕುಂಬಾರ್ತಿ : ಹೂ.

ಕಿಟ್ಟಿ : ಎರಡು ಕಿವಿ ಇವೆ, ಎರಡು ಕಣ್ಣು, ಒಂದು ಮೂಗು, ಆದರೆ ಒಂದೇ ಬಾಯಿ, ಧೋತರ ಉಡತಾನಲ್ಲ?

ಕುಂಬಾರ್ತಿ : ಅಯ್ಯೊ ಅಯ್ಯೊ! ಅವನೇ ಕಣಪ್ಪ, ಮಾರಾಯ ನನ್ನೊಬ್ಬಳನ್ನೇ ಬಿಟ್ಟುಹೋದ. ಹ್ಯಾಗಿದಾನೆ? ನನ್ನ ನೆನಪಿಸಿಕೊಳ್ತಾನಾ?

ಕಿಟ್ಟಿ : ಅದೇನೋಮ್ಮ ಯಾಕೋ ಚಡಪಡಿಸ್ತಿದ್ದ ದೇವರ ಹತ್ತರ.

ಕುಂಬಾರ್ತಿ : ದೇವರ ಹತ್ತಿರ ಚಟಪಡಿಸ್ತಿದ್ದ? ಯಾಕೆ?

ಕಿಟ್ಟಿ : ನೀನೇನೊ ಕುಂಬಾರನ್ನ ಮರೆತು ಶೆಟ್ಟೀನ ನೋಡ್ತಾ ಇದ್ದೀಯಂತೆ!

ಕುಂಬಾರ್ತಿ : (ಸ್ವಗತ) ಆಂ? ಅಯ್ಯೋ ನನ್ನ ಶಿವನೆ! ನಾನು? ಇದೂ ಅವನಿಗೆ ಗೊತ್ತಾಗಿ ಬಿಡೋದೆ? (ಶೆಟ್ಟಿಯನ್ನು ಗಮನಿಸಿ) ಆಯ್ತು ಚೆಲುವಾ, ನಾನು ಆಮೇಲೆ ಬಂದು ನೋಡತೇನೆ. ಬೇಕಾದರೆ ಐದ ಪೈಸೆಗೇ ಮಡಕೆ ತಗೊಂಡ್ಹೋಗು, ಹಾ?

ಶೆಟ್ಟಿ : ತಾತ, ಅದಕ್ಕೆ ದೇವರು ಏನ್ಹೇಳಿದಾ?

ಕುಂಬಾರ್ತಿ : ಹಾ, ಅಂದ್ಹಾಗೆ ದೇವರು ಏನ್ಹೇಳಿದಾ?

ಕಿಟ್ಟಿ : ಏನ್ಹೇಳಿದಾ?

ಶೆಟ್ಟಿ, ಕುಂಬಾರ್ತಿ : ಹೂ, ಹೂ, ದೇವರು ಏನ್ಹೇಳಿದಾ?

ಕಿಟ್ಟಿ : ಏನೂ ಹೇಳಲಿಲ್ಲ.

ಶೆಟ್ಟಿ : ತಾತ, ನೀನೇ ದೇವರು ಅಂತಿಟ್ಟಿಕೊ -ನೀ ಏನ ಹೇಳತಿ?

ಕುಂಬಾರ್ತಿ : ಹೇಳಪಾ, ನೀನೇ ದೇವರು-ನೀ ಏನ ಹೇಳ್ತಿ ಹೇಳು.

ಕಿಟ್ಟಿ : ನೀನು ಕುಂಬಾರ ಅಂತ ಹೆಸರಿಟ್ಟುಕೊಂಡು, ನೀನು ಶೆಟ್ಟಜ್ಜಿ ಅಂತ ಹೆಸರಿಟ್ಟುಕೊಂಡು ಮದುವೆಯಾಗಿರಿ ಅಷ್ಟೆ.

ಇಬ್ಬರೂ : ದೇವರೂ ಅಂದರೆ ನೀನಪ್ಪ. ನಿನ್ನ ಹಾಗಿರಬೇಕು, ನೀನೊಬ್ಬ ಸಣ್ಣ ದೇವರಪ್ಪ.

ಶೆಟ್ಟಿ : ತಗೊ ತಗೊ ಅಕ್ಕಿ.

ಕುಂಬಾರ್ತಿ : ತಗೊ ತಗೊ ಮಡಕೆ.

ಕಿಟ್ಟಿ : ತಗೊ ಐದು ಪೈಸಾ, ತಗೊ ಐದು ಪೈಸಾ.

ಶೆಟ್ಟಿ : ಬಾರೆ ನನ್ನ ಶೆಟ್ಟಜ್ಜಿ.

ಕುಂಬಾರ್ತಿ : ಬಾರೊ ನನ್ನ ಕುಂಬಾರ.

*(ನಿರ್ಗಮನ)*

## ಮಡಕೆ ಹೋಗಿ ಟಗರು ಬಂತು

*(ಮಡಕೆ, ಅಕ್ಕಿ ಹಿಡಿದುಕೊಂಡು ಕುಣಿಯುತ್ತ ಕಿಟ್ಟಿ ಬರುತ್ತಾನೆ. ಮುದುಕಿಯೊಬ್ಬಳು ನೂಲುತ್ತ ಕುಳಿತಿದ್ದಾಳೆ. ಪಕ್ಕದಲ್ಲೇ ಟಗರು ಇದೆ.)*

ಮೇಳ : **ಐದು ಪೈಸೆಗಕ್ಕಿ ಬಂತು ಲಾ ಲಾ ಲಾ**
**ಐದು ಪೈಸೆಗೆ ಮಡಕೆ ಬಂತು ಲಾ ಲಾ ಲಾ ಲಾ||**

ಕಿಟ್ಟಿ : ಆಹಾ! ಈ ಟಗರು ಎಷ್ಟೊಂದು ಚೆನ್ನಾಗಿದೆ! ಎಷ್ಟು ಚೆನ್ನಾಗಿ ಹಾಡತ್ತದೆ. ಈ ಟಗರೇ ಇಷ್ಟು ಚೆನ್ನಾಗಿರಬೇಕಾದರೆ ಇದನ್ನು ಸಾಕಿದ ಮುದಕಿ ಎಷ್ಟು ಒಳ್ಳೆಯವಳಿರಬೇಕು! ಟಗರಜ್ಜೀ ಟಗರಜ್ಜೀ, ಈ ಟಗರು ನಿಂದೇ ತಾನೆ?

ಮುದಿಕಿ : ಹೌದಪ್ಪ ಮಗಾ, ನಂದೇ.

ಕಿಟ್ಟಿ : ನನಗ್ಗೊತ್ತಿತ್ತು. ಇಷ್ಟೊಂದು ಒಳ್ಳೆ ಟಗರು ನಿಂದೇ ಇರಬೇಕು ಅಂತ. ಇದಕ್ಕೆ ಮದುವೆ ಮಾಡೀಯಾ ಟಗರಜ್ಜಿ?
ಮುದಿಕಿ : ಟಗರಿಗೆ ಮದುವೆ? ಒಳ್ಳೇ ಹುಡುಗ! ಇನ್ನೂ ಮಾಡಿಲ್ಲಪ್ಪ. ಒಂದು ಹೆಣ್ಣು

ಸಿಕ್ಕಿದ ಮೇಲೆ ಮಾಡೋಣಾಂತ ಬಿಟ್ಟಿದ್ದೇನೆ.

ಕಿಟ್ಟಿ : ಆಹಾ ಏನು ಬುದ್ಧಿವಂತಿಕೆ! ಏನು ತಿಳುವಳಿಕೆ! ಇಷ್ಟು ಬುದ್ಧಿ ನಮ್ಮಜ್ಜಿಗಿದ್ದಿದ್ದರೆ ಇಲ್ಲಿಗ್ಯಾಕೆ ಬರತಿದ್ದೆ! ನೀನೇ ನನಗೆ ಅನ್ನ ಬೇಯಿಸಲಿಕ್ಕೆ ತಕ್ಕವಳು. ನೋಡು ಟಗರಜ್ಜಿ, ಅಕ್ಕೀ ಇದೆ, ಮಡಕೆ ಇದೆ, ಸ್ವಲ್ಪ ಅನ್ನಾ ಬೇಯಿಸಿ ಹಾಕತೀಯಾ? ನಿನ್ನ ಹತ್ತರಾನೇ ಯಾಕೆ ಬಂದೆ ಅಂತ ಕೇಳು.

ಮುದಿಕಿ : ಸರೀನಪ್ಪಾ, ನನ್ನ ಹತ್ತಿರಾನೇ ಯಾಕೆ ಬಂದೆ?

ಕಿಟ್ಟಿ : ನೋಡು, ನಾನು ಒಳ್ಳೆಯವರು ಬೇಯಿಸಿದ ಅನ್ನ ಮಾತ್ರ ಉಣ್ಣೋದು. ಈ ಊರಿನಲ್ಲಿರೋರೆಲ್ಲ, ಇಲ್ಲಾ ದಡ್ಡರು. ಇಲ್ಲಾ ಮೂರ್ಖರು. ನಿನ್ನ ನೋಡು-ನೀ ಮೂರ್ಖಳಾ?

ಮುದಿಕಿ : ಅಲ್ಲ.

ಕಿಟ್ಟಿ : ಧಡ್ಡಳಾ?

ಮುದಿಕಿ : ಅಲ್ಲಾ.

ಕಿಟ್ಟಿ : ಅದಕ್ಕೇ ನಿನ್ನ ಹತ್ತಿರ ಬಂದೆ. ಅನ್ನ ಬೇಯಿಸಿ ಹಾಕತೀಯಾ?

ಮುದಿಕಿ : ಇಷ್ಟೇನೊ? ನೀನೆಲ್ಲಿ ಟಗರು ಕೇಳ್ತೀಯೊ ಅಂತಿದ್ದೆ. ಕೊಡು ಬೇಯಿಸಿ ಹಾಕತೇನೆ.

ಕಿಟ್ಟಿ : ಹಾಗಿದ್ದರೆ ಟಗರಜ್ಜಿ, ನಾನು ನದೀಗೆ ಹೋಗಿ ಸ್ನಾನ ಮಾಡಿಕೊಂಡು ಬರ್ತೀನಿ. ಅಷ್ಟರಲ್ಲಿ ನೀ ಅನ್ನ ಬೇಯಿಸಿಡು. ಹಾ.....

*(ಮಡಕೆ, ಅಕ್ಕಿ ಕೊಟ್ಟು ಹೋಗುವನು)*

ಮುದಿಕಿ : ಬಲ್‌ನನ ಮಗಾ ಇವನು! ಒಳ್ಳೆಯವನು ಅಂತ ಹೊಗಳಿದರೆ ಉದ್ದಿನ ವಡೇ ತರ ಉಬ್ಬತಾಳೆ, ಅನ್ನಾ ಬೇಯಿಸಿ ಹಾಕತಾಳೆ-ಅಂದ್ಕೊಂಡಿದಾನೆ. ನಾನೆಷ್ಟು ಒಳ್ಳೆಯವಳು ಅಂತ ನನಗ್ಗೊತ್ತಿಲ್ಲವೆ? ಭಾಗವತರೇ,

ಭಾಗವತ : ಏನಮ್ಮಾ?

ಮುದಿಕಿ : ನಾನು ಯಾರೂಂತ ನಿಮಗೆ ಗೊತ್ತು ತಾನೆ?

ಭಾಗವತ : ಇಲ್ಲಮ್ಮ ಯಾರು ನೀನು? ಏನ್ನಿನ್ನ ಮಹಿಮೆ?

ಮುದಿಕಿ : **ಊರಿನಾಗೆ ಹಿರಿಯವಳು**
**ಹದ್ದಿನ ವಯಸ್ಸಿನವಳು**
**ಏನೆಲ್ಲ ಉಂಡವಳು ಕಂಡವಳು ಮಗನೆ**
**ಅಡಗೂಲಜ್ಜಿಯು ನಾನು||**

**ನಾನೆಂಬೊ ಪುಂಡರಿಗೆ**
**ಪಂಗನಾಮ ಹಚ್ಚಿದವಳು**
**ಠಕ್ಕರ ಲೆಕ್ಕಕ್ಕೆ ಕೊಕ್ಕೆ ಹಾಕಿದೆ ನಾನು**
**ಮಣ್ಣ ಮುಕ್ಕಿಸಿದವಳು||**

ತಿಳಿದ ಬಂತಾ ಭಾಗವತರೇ?

ಭಾಗವತ : ಆದೇನು ಚೆನ್ನಾಗಿ ತಿಳಿಸಿ ಹೇಳಮ್ಮಾ.

ಮುದಿಕಿ : ಹದ್ದಿಗಾದಷ್ಟು ವಯಸ್ಸಾಯ್ತು ನನಗೆ. ಏನೆಲ್ಲ ಕಂಡವಳು, ಉಂಡವಳು ನಾನೆಂಬೊ ಪುಂಡರಿಗೆ ಪಂಗನಾಮಾ ಹಚ್ಚಿದವಳು. ಠಕ್ಕರನ್ನ ಮಣ್ಣ ಮುಕ್ಕಿಸಿ ದವಳು. ಎಂಥೆಂಥವರನ್ನೋ ಲಾಗಾ ಹಾಕಿಸಿ ಹಣ್ಣಾದವಳು ನಾನು-ನನ್ನ ಎದುರಿಗೆ ಈ ಪುಟ್ಟ ಚಿಗುರೆ?

ಭಾಗವತ : ಛೇ ಛೇ, ಪಾಪ ಹುಡುಗ ನಿನ್ನನ್ನ ತಪ್ಪ ತಿಳಿದುಕೊಂಡಿದಾನೆ.

ಮುದಿಕಿ : ನಾನೇನ ಮಾಡ್ತೀನಿ ಗೊತ್ತಾ? ಕೊಟ್ಟದ್ದರಲ್ಲಿ ಅರ್ದಾ ಅಕ್ಕಿ ನಾ ಇಟ್ಟುಕೊಂಡು ಅರ್ಧಾ ಅಕ್ಕಿ ಬೇಯಿಸಿ ಹಾಕತೇನೆ. ನಾ ಇಟ್ಟಕೊಂಡದ್ದು ಇವನಿಗೆ ಹ್ಯಾಗೆ ತಿಳಿದೀತು? ಅಲ್ಲವಾ?

ಭಾಗವತ : ಭಲಾ ಮುದಿಕಿ ನೀನು.

ಮುದಿಕಿ : ಅವನ ಮುಂದೆ ಹೇಳಬೇಡಿ.

ಭಾಗವತ : ಇಲ್ಲಮ್ಮಾ.

*(ಅರ್ಧ ಅಕ್ಕಿ ಮುಚ್ಚಿಟ್ಟುಕೊಳ್ಳುವಳು. ಇನ್ನರ್ಧ ಬೇಯಿಸತೊಡಗುವಳು. ಕಿಟ್ಟಿಯ ಆಗಮನ. ಸಂಗೀತ)*

ಕಿಟ್ಟಿ : ಗೊತ್ತಾಯ್ತು, ಗೊತ್ತಾಯ್ತು, *(ಸಂಗೀತ)* ಗೊತ್ತಾಯ್ತೂ ಅಂದೆ. *(ಸಂಗೀತ)*
ಎಷ್ಟು ಸಲ ಹೇಳಿದರೂ ಅದೇ ಮಾತು, ಕೇಳಿಸಿ ಬಮತು ಅಂತ ಹೇಳಲಿಲ್ಲಾ?

ಮುದಿಕಿ : ಯಾರ ಜೊತೆ ಮಾತಾಡ್ತಿದಾನೆ? ಅಪ್ಪಾ ನನ್ನ ಕರೆದೆಯಾ?

ಕಿಟ್ಟಿ : ಇಲ್ಲಾ ಅಜ್ಜಿ?

ಮುದಿಕಿ : ಮತ್ತೇನೂ ಮಾತಾಡತಿದ್ದೆ?

ಕಿಟ್ಟಿ : ಈ ಮಡಕೆ ಏನೋ ಹೇಳ್ತಾ ಇತ್ತು. ಅದಕ್ಕೆ ಏನೊ ಹೇಳ್ತಾ ಇದ್ದೆ.

ಮುದಿಕಿ : ಮಡಕೆ ಏನೊ ಹೇಳ್ತಾ ಇತ್ತಾ? ಮಡಕೆ ಮಾತಾಡೀತೇನೊ ಮಗಾ?

ಕಿಟ್ಟಿ : ಹೌದು ಟಗರಜ್ಜಿ. ಈ ಮಡಕೆ ಮಾತಾಡತ್ತೆ.

ಮುದಿಕಿ : ಹೌದಾ? ಏನು ಮಾತಾಡಿತು?

ಕಿಟ್ಟಿ : ಆ? ಏನ ಹೇಳಿತು? ನಾನು ಅಕ್ಕಿ ಕದ್ದೆನಂತಾ? ಅಯ್ಯಯ್ಯೋ! *(ಸಮೀಪ ಬಂದು)* ನಾ ಅಕ್ಕಿ ಕದ್ದದ್ದೇನೊ ನಿಜ. ಆದರೆ ಏನ ಮಗಾ, ಮಡಕೆ ಮಾತಾಡೋದಂದರೇನು? ನಾ ಕದ್ದದ್ದು ಅದಕ್ಕೆ ತಿಳಿಯೋದಂದರೇನು? ಅಬ್ಬಬ್ಬಾ! ಮಗಾ-

ಕಿಟ್ಟಿ : ಆಂ?

ಮುದಿಕಿ : ಎಲ್ಲಿ ಸಿಗ್ತು ಮಗಾ ಈ ಮಡಕೆ? ಎಷ್ಟು ಕೊಟ್ಟೆ? ಬಾ ಊಟಾ ಮಾಡು ಊಟಾ... *(ತಿನ್ನಿಸುವಳು)*

ಕಿಟ್ಟಿ : ಅದನ್ನೆಲ್ಲ ಏನ್ಕೇಳ್ತಿ ಅಜ್ಜಿ? ಕೈತುಂಬ ದುಡ್ಡು ಕೊಟ್ಟು ದೂರದ ಊರಿನಿಂದ ತಂದೆ.

ಮುದಿಕಿ : ಮಗಾ, ನಾನೂ ಮುದಿಕಿ, ವಯಸ್ಸಾಯ್ತು. ನನಗೆ ಯಾರೂ ನಿನ್ನ ಹಾಗೆ ಮಕ್ಕಳಿಲ್ಲ ಮರಿಯಿಲ್ಲ. ಒಂದೇ ಒಂದು ಬಿದ್ದುಕೊಂಡಿದೇನೆ. ಸಾಯೋತನಕ ಕಾಲ ಕಳೆಯೋದೇ ಕಷ್ಟ. ಮಾತಾಡಿಕೊಂಡಿರ್ಲಿಕ್ಕೆ ಈ ಮಡಕೆ ಕೊಡ್ತೀಯಾ?

ಕಿಟ್ಟಿ : ಏನಂದೆ? ಈ ಮಾತಾಡೋ ಮಡಕೆ ನಿನಕ್ಕೊಡೋದೆ?

ಮುದಿಕಿ : ಪುಕ್ಕಟೆ ಬೇಡ. ನಿನಗೆ ಕೊಡೋದಕ್ಕೆ ನನ್ನ ಹತ್ತರ ಕೈತುಂಬ ದುಡ್ಡಿಲ್ಲ, ಇದೊಂದು ಟಗರು ಇದೆ. ಇದನ್ನೆ ತಗೊಂಡು ಆ ಮಡಕೆ ಕೊಡ್ತೀಯಾ?

ಕಿಟ್ಟಿ : ಅಜ್ಜಿ ಈ ಮಡಕೆ ಬೆಲೆ ಏನು? ಈ ಪಿಸ್ ಟಗರಿನ ಬೆಲೆ ಏನು? ಛೇ ಛೇ ನಿನ್ನ ಬಿಟ್ಟು ಇನ್ನು ಯಾರಾದರೂ ಈ ಮಾತು ಹೇಳಿದ್ದರೆ ರೇಗಿ ಬಿಡುತ್ತಿದ್ದೆ.

ಮುದಿಕಿ : ಮಗಾ, ನೀನೇ ನನ್ನ ಮೊಮ್ಮಗ ಆಗಿದ್ದರೆ ಹೀಗಂತಿದ್ಯಾ? ಅನ್ನಾ ಬೇಯಿಸಿ ಹಾಕಿದ್ದಕ್ಕಾದರೂ ಒಪ್ಪಿಕೊಳ್ಳಪಾ.

ಕಿಟ್ಟಿ : ಇನ್ನೇನ ಮಾಡಲಿಕ್ಕಾಗತ್ತಜ್ಜಿ? ಅನ್ನದ ಋಣ. ಇಲ್ಲಾ ಅಂದರೆ ಆಗತ್ತಾ? ನೀ ಬೇರೆಯಲ್ಲ. ನನ್ನಜ್ಜಿ ಬೇರೆಯಲ್ಲ. ಬೇರೆಯವರಾಗಿದ್ದರೆ ಇಂಥಾ ಹತ್ತು ಟಗರಿಗೂ ಈ ಮಡಕೆ ಕೊಡತಿರಲಿಲ್ಲ. ಹೋಗಲಿ ಮಡಕೆ ತಗೊ, ಟಗರು ಕೊಡು.

ಮುದಿಕಿ : ತಗೊ ತಗೊ (ಉತ್ಸಾಹದಿಂದ ಕೊಡುವಳು. ಕಿಟ್ಟಿ ಟಗರಿನೊಂದಿಗೆ ಹೊರಡು ವನು.) ಏನಮ್ಮಾ ಮಡಕೆಮ್ಮಾ? ಹ್ಯಾಗಿದ್ದಿ? ಚೆನ್ನಾಗಿದ್ದೀಯಾ? ಯಾಕೆ ಮಾತಾಡವೊಲ್ಲೆ? ಹುಡುಗ ಮಾರಿದನಂತ ಕೋಪವಾ ನಿಂಗೆ? ನೀನೇನೂ ಕಾಳಜಿ ಮಾಡಬ್ಯಾಡ, ಆತ ನಿನ್ನನ್ನು ಹ್ಯಾಗೆ ನೋಡಿಕೊಳ್ತಿದ್ದನೋ ನಾನೂ ಹಾಗೇ ನೋಡಿಕೊಳ್ತೇನೆ. ಆಯ್ತಾ? ಯಾಕೋ ಮಾತೇ ಆಡವೊಲ್ಲು. ಮಡಕೆಮ್ಮಾ ಚೆನ್ನಾಗಿದ್ದೀಯಾ? ಕಿವಿ ಕೇಳಿಸುತ್ತೋ ಇಲ್ಲವೋ. ನನ್ನ ಹಾಗೆ ಇದಕ್ಕೂ ವಯಸ್ಸಾಗಿದೆಯೋ ಏನೊ. ಏ ಮಡಕೆಮ್ಮಾ. (ಎತ್ತಿ ಕುಕ್ಕುವಳು. ಮಡಕೆ ಒಡೆಯುವುದು) ಆ? ಇದೂ ಎಲ್ಲಾ ಮಡಕೆ ಥರಾನೇ ಇದೆ. ಇದರಲ್ಲೇನಿದೆ? ನಾನು ಸೇರು ಅಂದರೆ ಆ ಪೋರ ನನಗೇ ಸವ್ವಾಸೇರು ಮಾಡಿಬಿಟ್ಟನೆ? ಎಲಾ ಎಲಾ ನನಮಗನೆ, ಇರು ನೋಡ್ತೇನೆ. ಎಷ್ಟುದೂರ ಓಡಿ ಹೋಗ್ತಿ ನನ್ನ ತಪ್ಪಿಸಿ? ಅಯ್ಯಾ ಭಾಗವತರೇ-

ಭಾಗವತ : ಏನಮ್ಮಾ ಕರೆದೆ?

ಮುದಿಕಿ : ನೋಡಿದಿರಾ ಈ ಹುಡುಗ ನನಗೇ ಸವ್ವಾಸೇರು ಮಾಡಿದ್ದು?

ಭಾಗವತ : ನೋಡಿದೆ. ಅದೇನೋ ಪುಂಡರು ಠಕ್ಕರಿಗೆಲ್ಲಾ ಮಣ್ಣು ಮುಕ್ಕಿಸಿದವಳು ಅಂತ ಹೇಳ್ತಿದ್ದೆ-

ಮುದಿಕಿ : ಇನ್ನೂ ನೋಡ್ತಾ ಇರಿ, ಸವ್ವಾಸೇರು ಯಾರೂಂತ ತಿಳೀತದೆ. ಭಾಗವತ : ಅಸಾಧ್ಯ ಹುಡುಗ, ಅಸಾಧ್ಯ ಹುಡುಗ!

*(ಹೊರಡುವಳು)*

## ದುಡ್ಡು ಹೋಗಿ ಕುದುರೆ ಬಂತು

ಮೇಳ : **ಮಡಕೆ ಹೋಗಿ ಟಗರು ಬಂತು ಲಾ ಲಾ ಲಾ**
**ಟಗರು ಹೋಗಿ ದುಡ್ಡು ಬಂತು ಲಾ ಲಾ ಲಾ**

(ಹಾಡುತ್ತ ಕಿಟ್ಟಿ ಕಾಡಿನಲ್ಲಿ ಬರುತ್ತಿದ್ದಾನೆ. ಕರಡಿ ಬರುತ್ತದೆ. ಅದರೊಂದಿಗೆ ಗುದ್ದಾಡಿ ಓಡಲು ಪ್ರಯತ್ನಿಸುತ್ತಾನೆ. ಕರಡಿ ಬಿಡುವುದಿಲ್ಲ. ದುಡ್ಡು ಕೆಳಗೆ ಬೀಳುತ್ತದೆ. ಗುದ್ದಾಡುತ್ತ)

ಕಿಟ್ಟಿ : ಅಯ್ಯೋ ಮನುಷ್ಯರಾದರೆ ಮೋಸ ಮಾಡಬಹುದಿತ್ತು. ಈ ಕರಡಿಗೆ ಹ್ಯಾಗಪ್ಪಾ ಮೋಸ ಮಾಡೋದು? ಆ ಭಾಗವತನಾದರೂ ಇದ್ದಿದ್ದರೆ ಚೆನ್ನಾಗಿರೋದು. ಏ ಕರಡಿ ಏ ಏ………

*(ದೂರದಿಂದ ಭಗವಂತನ ಹಾಡು)*

ಭಗವಂತ : **ಹುಡಿಗೇರೊಳಗೆ ಹುಡಿಗಿ ಚೆಂದ**
**ಹೇಮಮಾಲಿನಿ!**
**ಹುಡಿಗೇರೊಳಗೆ ಹುಡಿಗಿ ಚೆಂದ**
**ಹೇಮಮಾಲಿನಿ||**

ಕಿಟ್ಟಿ : ಇದ್ಯಾವನೋ ತಮಿಳು ಸಿನಿಮಾದ ಭಗವಂತನ ಹಾಗೆ ಬರ್ತಿದಾನೆ!

*(ಭಗವಂತನ ಕುದುರೆ ಹತ್ತಿ ಸಮೀಪ ಬರುವನು. ಕಿಟ್ಟಿ ಮತ್ತು ಕರಡಿಯ ಗುದ್ದಾಟ ನೋಡಿ ಆಶ್ಚರ್ಯದಿಂದ ನಿಲ್ಲುವನು.)*

ಕಿಟ್ಟಿ : ಭಗವಂತನಿಗೆ ನಮಸ್ಕಾರ.

ಭಗವಂತ : ಎಲಾ! ಇವನಿಗೆ ನನ್ನ ಹೆಸರು ಹ್ಯಾಗೆ ಗೊತ್ತಾಯ್ತು?

ಕಿಟ್ಟಿ : ನನಗೊತ್ತಿಲ್ಲದೇನು! ಈ ರೂಪ! ಈ ಕುದುರೆ! ಒಳ್ಳೆ ರಾಜೇಶ್ ಖನ್ನಾ ಥರಾ ಇದೀರಾ. ನಿಮ್ಮನ್ನ ಹೇಮಮಾಲಿನಿ ನೋಡಬೇಕು.

ಭಗವಂತ : ಎಲಾ ಎಲಾ! ನನಗೆ ಹೇಮಾಮಾಲಿನಿ ತುಂಬ ಇಷ್ಟ ಅಂತ ಇವನಿಗೆ ಹ್ಯಾಗೆ ಗೊತ್ತಾಯ್ತು? ಅಯ್ಯಾ, ಸೋತೆ. ನನ್ನ ಹೆಸರು ಭಗವಂತ ಹೌದು. ನನಗೆ ಹೇಮಾಮಾಲಿನಿ ತುಂಬ ಇಷ್ಟ ಹೌದು. *(ಕುದುರೆ ಇಳಿದು)* ಬೇಗನೆ ಹೇಳು-ಏನು ಮಾಡಿದರೆ ನನಗೆ ಹೇಮಾಮಾಲಿನಿ ಸಿಗತಾಳೆ?

ಕಿಟ್ಟಿ : ಅದಿರ್ಲಿ, ನೀವು ಹೀಗ್ಯಾಕೆ ಡ್ರೆಸ್ ಮಾಡಿಕೊಂಡೀರಿ ಅಂತ ಮೊದಲು ಹೇಳಿ.

ಭಗವಂತ : ಇಷ್ಟೆಲ್ಲಾ ಹೇಳಿದವನು ಅದು ಗೊತ್ತಿಲ್ಲವೆ ನಿನಗೆ? ಅದೇ ಆ 'ದಿಲ್ ಧಡಕಣ್' ಅಂತ ಪಿಚ್ಚರ್ ಇತ್ತಲ್ಲಾ-ಅದರಲ್ಲಿ ಹೇಮಾಮಾಲಿನಿ ಪಾರ್ಕ್‌ನಲ್ಲಿದ್ದಾಗ ರಾಜೇಶ್ ಖನ್ನಾ ಹೀಗೇ ಬರೋದಿಲ್ಲವೆ?

ಕಿಟ್ಟಿ : ಈಗಲೂ ಬರ್ತಾಳೇನೋ ಅಂತ ಬಂದಿರಿ.

ಭಗವಂತ : ಹೆಹ-ನಿನ್ನಿಂದ ಮುಚ್ಚಿಟ್ಕೊಳ್ಳೋದೇನಿದೆ?

ಕಿಟ್ಟಿ : ಇದೆಲ್ಲಾ ಖರ್ಚಿನ ಬಾಬತ್ತು ಭಗವಂತಾ. ನೀನ್ಯಾವುದೋ ಹಳ್ಳೀ ಗೌಡಾ. ನಿನ್ನ ನೋಡಿದರೆ ಎಸ್ಸೆಲ್ಸಿ ದಾಟಿಲ್ಲಾ ಅಂತ ಕಾಣಸ್ತೆ. ದುಡ್ಡು? ಸಿಕ್ಕಬಹುದು ವರ್ಷಕ್ಕೆ ಹತ್ತೆಂಟ ಸಾವಿರ. ಒಂದು ದಿನಕ್ಕೇ ಸಾವಿರ ಖರ್ಚಮಾಡೋ ಹುಡುಗಿ ಸಿಗತಾಳಾ?

ಭಗವಂತ : (ಸುತ್ತ ದುಡ್ಡನ್ನು ಗಮನಿಸಿ) ಅದಿರಲಿ, ಅದ್ಯಾಕೆ ಹೀಗೆ ಸುತ್ತ ದುಡ್ಡು ಬಿದ್ದಿದೆ? ಯಾಕೆ ಹೀಗೆ ಕರಡಿ ಜೊತೆ ಗುದ್ದಾಡ್ತಾ ಇದ್ದಿ? ನಿನ್ನ ವಿಷಯ ಹೇಳಲೇ ಇಲ್ಲಾ.

ಕಿಟ್ಟಿ : ಇದೊ ಈ ಕರಡಿ ಇದೆಯಲ್ಲ-ನಂದೆ. ದಿನಾಲು ಸಾವಿರ ರೂಪಾಯಿ ಕಕ್ಕತದೆ.ಈ ಹೊತ್ತು ಅದ್ಯಾಕೋ ಐನೂರು ರೂಪಾಯಿ ಮಾತ್ರ ಕಕ್ಕಿದೆ. ಅದಕ್ಕೆ ಇನ್ನಷ್ಟು ಹೊತ್ತು ಹಿಡಕೊಂಡು ಮಿಕ್ಕನಾದ ಐನೂರು ರೂಪಾಯಿ ಕಕ್ಕಸ್ತಾ ಇದೀನಿ.

ಭಗವಂತ : ಐಡಿಯಾ! ಗುರು! ನೀನೇ ಕಾಪಾಡಬೇಕು. ನನ್ನ ಹತ್ತಿರ ಇದೊಂದು ಕುದುರೆ ಇದೆ. ಇದನ್ನ ತಗೊಂಡು ಈ ಕರಡಿ ಕೊಟ್ಟು ಬಿಡು. ನಿನ್ನ ಹೆಸರು ಹೇಳಿ ಹೇಮಾಮಾಲಿನೀನ್ನ ಮದುವೆ ಮಾಡಿಕೊಳ್ಳುತ್ತೇನೆ.

ಕಿಟ್ಟಿ : ಛೇ, ಛೇ, ಇದೊಳ್ಳೆದಾಯ್ತಲ್ಲ. ದುಡ್ಡು ಕಕ್ಕೋ ಕರಡಿ ಇಲ್ಲಿದೇಂತ ತೋರಿಸಿದರೆ, ತೋರಿಸಿದ ಕೈನೇ ನುಂಗತಿ! ಹೋಗ್ಹೋಗು, ನನಗೇನೋ ಕಣ್ಣೀರಿಟ್ಟು ಅಳೋ ರನ್ನ ಕಂಡರೆ ವಪರೀತ ಕರುಣೆ ಬರತದೆ ನಿಜ. ದಯಮಾಡಿ ಅಳಬೇಡ, ಸುಮ್ಮನೆ ಹೊರಟ್ಹೋಗು.

ಭಗವಂತ : ಗುರು, ನನ್ನನ್ನ ನಿನ್ನ ಹಾಗೆ ತಿಳಿದವರು ಯಾರಿದ್ದಾರೆ? ನೀನು ಈ ಕರಡಿ ಕೊಟ್ಟು ಕಾಪಾಡದೆ ಹೊದರೆ ಹೇಮಾಮಾಲಿನಿ ನನಗೆ ಸಿಕ್ಕೋದಿಲ್ಲ. ಅವಳು ಸಿಕ್ಕದೆ ಹೋದರೆ ನಾನು ನೇಣು ಹಾಕಿಕೊಂಡು ಸಾಯೋದು ಖಂಡಿತ.

ಕಿಟ್ಟಿ : ಭಗವಂತಾ, ನೀ ಹೀಗೆಲ್ಲ ಹೇಳಬೇಡ, ನನಗಾಗಲೇ ಸ್ವಲ್ಪ ಸ್ವಲ್ಪ ಕರುಣೆ ಬರತಾ ಇದೆ. ಅಳಬೇಡ.

ಭಗವಂತ : ನಿನ್ನ ಕರುಣೆಗಾಗಿ ಹೇಳ್ತಾ ಇಲ್ಲ ಗುರು. ನನ್ನಾಣೆ, ನಿನ್ನಾಣೆ, ಕೂತವರಾಣೆ-ಹೇಮಮಾಲಿನಿ ಸಿಕ್ಕದೇ ಹೊದರೆ ನನಗೆ ಹುಚ್ಚೀ ಹಿಡೀತದೆ.

*(ಅಳತೊಡಗಿದನು)*

ಕಿಟ್ಟಿ : ಆಯ್ತಲ್ಲಾ, ಅತ್ತೇಬಿಟ್ಟೆಯಾ? ನಿನಗೆ ನಾ ಮೊದಲೇ ಹೇಳಿದ್ದೆ-ಅಳೋರನ್ನ ಕಂಡರೆ ನನಗೆ ಕರುಣೆ ಬರತದೆ ಅಂತ. ಬಂದೇ ಬಿಡ್ತಲ್ಲ. ಹಾಳಾಗಿ ಹೋಗು. ಬಾ ಈ ಕರಡಿ ಹೀಗ್ಹಿಡಿ.

*(ಕರಡಿಗೂ ಭಗವಂತನಿಗೂ ಗಂಟು ಹಾಕಿ ಹೊರಡುವನು.)*

ಕಿಟ್ಟಿ : ಭಾಗವತರೇ, ಏನಂತೀರಿ?

ಭಾಗವಂತ : ಅಯ್ಯಾ, ನಿನ್ನ ಮಹಿಮೆ ಆಗಾಧವಪ್ಪಾ. ನಮ್ಮ ಪಕ್ಷಾಂತರಿ ರಾಜಕಾರಣಿ ಗಳಿಗೂ ಇಷ್ಟು ಬುಧ್ಧಿಯಿಲ್ಲವಲ್ಲಯ್ಯ!

ಕಿಟ್ಟಿ : ಸಾಕು, ಸಾಕು, ಗುಟ್ಟು ಬಯಲಾಗೋದರಲ್ಲೇ ನಾ ಹೊರಡಬೇಕು. ಎಲ್ಲಿ ಸಂಗೀತ ಕೊಡಿ-

*(ಸಂಗೀತ, ಕಿಟ್ಟಿ ಹೋಗುವನು. ಭಗವಂತ ಕರಡಿಯೊಂದಿಗೆ ಹೋರಾಡುತ್ತಿರುವನು, ಸ್ವಲ್ಪ ಹೊತ್ತಾದ ಮೇಲೆ.)*

ಭಗವಂತ : ಏನಿದು! ಆಗಲೇ ಮೂರು ಘಂಟೆಯಾಯ್ತು. ಒಂದು ರೂಪಾಯೀನೂ ಕಕ್ಕಲಿಲ್ಲವೇ? ಅಬ್ಬಬ್ಬಾ ಎಂಥಾ ಒರಟು ಕರಡಿ ಇದು? ಮೈಯೆಲ್ಲಾ ಪರಚಿಬಿಟ್ಟಿತು. ಮೊದಲನೇ ದಿನವೇ ಹೀಗಾದರೆ ಮುಂದೆ ದಿನಾಲೂ ಹ್ಯಾಗಪ್ಪಾ ಮಾಡೋದು? ಸಾವಿರ ಕಕ್ಕಿಸಲಿಕ್ಕೆ ಹಗಲು ರಾತ್ರಿ ಈ ಕರಡಿ ಜೊತೆ ಗುದ್ದಾಡಿದರೆ ಹೇಮಾಮಾಲಿನಿ ಹತ್ತರ ಯಾವಾಗ ಹೋಗೊದು? ಅಯ್ಯಯ್ಯೊ! ಮೇಲೇ ಬರತಾ ಇದೆ! ಎಪ್ಪಾ, ಬರ್ಯೋ ಬರ್ಯೋ

*(ಮಗ, ಮುದುಕಿ ಬರುತ್ತಾರೆ. ಅವರನ್ನು ನೋಡಿ ಕರಡಿ ಭಗವಂತನನ್ನು ಬಿಟ್ಟು ಓಡಿ ಹೋಗುವುದು.)*

ಮಗ : ಹಾ ಇಲ್ಲಿದೆ ನನ್ನ ದುಡ್ಡಿನ ಚೀಲ!

ಭಗವಂತ : ಅಯ್ಯೊ, ನನ್ನ ಕರಡಿ ಒಡಿಹೋಯ್ತು. ದಿನಕ್ಕೆ ಸಾವಿರ ಕಕ್ಕೋ ಕರಡಿ ಹೇಮಾಮಾಲಿನಿ ಸಹಿತ ಓಡಿಹೋಯ್ತು. ರೀ ಯಾರೀ ಅದು? ನನಗಷ್ಟಾದರೂ ಉಳೀಲಿ ಬಿಡಿರಿ.

ಮಗ : ಇದು ನನ್ನ ದುಡ್ಡು.
ಭಗವಂತ : ಅಯ್ಯೋ ಸುಮ್ಮನೆ ಹೋಗರಿ.

ಮಗ : ರೀ, ಇಲ್ಲೊಬ್ಬ ಬುಶ್‌ಶರ್ಟ್ ಹಾಕಿದ ಹುಡುಗಾ ಬಂದಿದ್ನಾ?
ಭಗವಂತ : ಹೌದು.

ಮಗ : ಅವನೇ ತಾನೇ ನಿನಗೆ ಈ ದುಡ್ಡು ಕೊಟ್ಟದ್ದು?

ಭಗವಂತ : ಹೌದ್ಹೌದು, ನನ್ನ ಕುದುರೆ ತಕ್ಕೊಂಡು ಈ ಕರಡಿ ಬಿಟ್ಟು ಹೋದನಲ್ಲಾ! ಮದುವೆಯಾಗಿ ಹೇಮಾಮಾಲಿನಿ ಜೊತೆ ಗುದ್ದಾಡೋಣ ಅಂದರೆ ಈ ಕರಡಿ ಜೊತೆ ಗುದ್ದಾಡೋ ಹಾಗೆ ಮಾಡಿ ಹೋದ.
ಮುದಿಕಿ : ನೋಡಿದೆಯಾ ಇವನಿಗೂ ಮೋಸ ಮಾಡಿದಾನೆ! ನೋಡಪ್ಪಾ, ಆ ಹುಡುಗಾ ನಮಗೂ ಮೋಸ ಮಾಡಿದ್ದಾನೆ. ಬೇಕಾದರೆ ನೀನೂ ನಮ್ಮ ಜೊತೆ ಬಾ. ಅವನನ್ನ ಹಿಡೀಲಿಕ್ಕೇ ಹೊರಟಿದೇವೆ.

ಭಗವಂತ : ಹೌದಾ? ನಾನೂ ಬರತೀನಿ. ಅದೆಲ್ಲಿ ಹೋಗತಾನೋ ನೋಡೋಣ.

ಮಗ : ನಡೀರಿ.

*(ಸಂಗೀತ. ಎಲ್ಲರೂ ಹೋಗುವರು)*

# ಸಿಕ್ಕೆಯೋ ನನ್ನ ಸರದಾರ

ಮೇಳ : **ದುಡ್ಡ ಹೋಗಿ ಕುದುರೆ ಬಂತು ಲಾ ಲಾ ಲಾ**
**ಕುದುರೆ ಹೋಗಿ ಆನೆ ಬಂತು ಲಾ ಲಾ ಲಾ||**

(ಕಿಟ್ಟಿ ಆನೆಯೊಂದಿಗೆ ಪ್ರವೇಶಿಸುವನು)

ಕಿಟ್ಟಿ : ಇಲ್ಲೀತನಕ ಅವರಿವರನ್ನ ಮೋಸ ಮಾಡಿ ಆನೆಯಾಯ್ತು. ಈ ಆನೇನ್ನ ಮಾರಬಾರದು, ಇಟ್ಟಕೋಬಾರದು. ಮದುವೆ ಅಂತೂ ಆಗಲೇ ಇಲ್ಲ. ಇದು ಯಾವೂರು ಭಾಗವತರೇ, ಬಹಳ ವಿಚಿತ್ರವಾಗಿದೆ.

ಭಾಗವತ : ಇದು ಕುರಿಯೂರು ಅಂತ. ಇಲ್ಲಿ ಒಬ್ಬ ರಾಜ ಇದಾನೆ. ಅವನಿಗೆ ಒಬ್ಬಳು ಮಗಳಿದಾಳೆ. ಸುಂದರಿ. ನಿನಗೆ ತಕ್ಕವಳು, ಆದರೆ ಏನು ಮಾಡೋದು? ಮದುವೆ ಆಗೋದಿಲ್ಲ ಅಂತ ಹಟ ಹಿಡಿದಿದಾಳೆ.

ಕಿಟ್ಟಿ : ಯಾಕೆ?

ಭಾಗವತ : ಅವಳದ್ದೊಂದು ಶರ್ತ್ ಇದೆ.

ಕಿಟ್ಟಿ : ಅದೇನು ಭಾಗವತರೇ?

ಭಾಗವತ : ಹಿಂದೆ ಹಿಂಡು ಶಿಷ್ಯರಿರಬೇಕು. ಮುಂದೆ ಹಿಂಡು ಶಿಷ್ಯರಿರಬೇಕು. ವಯಸ್ಸು ಇಪ್ಪತ್ತಕ್ಕೆ ಮೀರಿರಬಾರದು. ಅಂಥಾ ಒಬ್ಬ ಸಣ್ಣ ಗುರು ಬಂದು ಬೆಟ್ಟ ಹಿಂದೋ ಡಿಸಬೇಕು. ಮುಂದೋಡಿಸಬೇಕು. ಹಾಗೆ ಮಾಡಬಲ್ಲ ಎಳೆಯ ಸ್ವಾಮಿಯನ್ನೇ ಮದುವೆಯಾಗುತ್ತೇನೆ ಅಂತ ಹಟ ಹಿಡಿದಿದ್ದಾಳೆ.

ಕಿಟ್ಟಿ : ಕಷ್ಟ ಬಂತಲ್ಲ ಭಾಗವತರೆ.

ಭಾಗವತ : ಇಲ್ಲೀತನಕ ಅನೇಕರು ಬಂದು, ಪ್ರಯತ್ನ ಮಾಡಿ, ಸೋತು, ಸೋತು ತಲೆ ಹೊಡಿಸಿಕೊಂಡು ಹೋದರು.

ಕಿಟ್ಟಿ : ತಲೆ ಹೊಡಿಸಿಕೊಂಡು?

ಭಾಗವತ : ಹೂ ಮತ್ತೆ. ರಾಜಕುಮಾರಿ ಸಿಗ್ತಾಳೇಂತ ಸಿಕ್ಕ ಸಿಕ್ಕವರು ಬಂದು ಪ್ರಯತ್ನ ಮಾಡಿದರೆ ಆಗ್ತದಾ? ದೊಡ್ಡ ದೊಡ್ಡ ಮಾಂತ್ರಿಕರು, ತಾಂತ್ರಿಕರಿಗೇ ಸಾಧ್ಯವಾಗಲಿಲ್ಲ.

ಕಿಟ್ಟಿ : ಸರಿ. ಈಗ ನಾನೊಬ್ಬ ಉಳಿದಿದೇನೆ ಅನ್ನಿ.

ಭಾಗವತ : ನಿನ್ನಿಷ್ಟವಪ್ಪ ಅದು.

ಕಿಟ್ಟಿ : ಹಾಗಾದರೆ ಹೊರಟು ಹೋಗೋದೇ ಒಳ್ಳೇದು. ಇಲ್ಲದಿದ್ದರೆ ರಾಜಕುಮಾರಿ ಮೇಲೆ ಮನಸ್ಸಾಗಿ ನಾನೂ ತಲೆ ಹೊಡಿಸ್ಕೊಂಡು ಹೋಗೋದಾಗಬಹುದು. ಮುಂದಿನೂರಿಗೆ ಹೋಗಿ, ಇರೋ ಆನೇನಾದರೂ ಮಾರಿ, ಸಿಕ್ಕಂಥ ಹೆಣ್ಣು ಮದುವೆ ಮಾಡಿಕೊಂಡು ಹೋಗಬಹುದು.

*(ಹೊರಡುವನು. ಅಷ್ಟರಲ್ಲಿ ಮುದುಕಿ, ಮಗ, ಭಗವಂತ, ಸೂಳೆ ನಾಲ್ವರೂ ಬರುವರು)*

ನಾಲ್ವರು : ಸಿಕ್ಕೆಯೋ ನನ್ನ ಸರದಾರ!

ಮುದುಕಿ : ಎಲ್ಲೋ ನನ್ನ ಟಗರು!

ಮಗ : ಎಲ್ಲೋ ನನ್ನ ದುಡ್ಡು?

ಭಗವಂತ : ಎಲ್ಲೋ ನನ್ನ ಕುದುರೆ?

*(ಕಿಟ್ಟಿ ತಬ್ಬಿಬ್ಬಾಗಿ ಅವರಿಗೆಲ್ಲ ಕೂತುಕೊಳ್ಳ ಹೇಳುವನು. ರಾಜಕೀಯ ಮುಖಂಡರ ಧಾಟಿಯಲ್ಲಿ)*

ಕಿಟ್ಟಿ : ಮಹನೀಯರೆ ಮತ್ತು ಮಹಿಳೆಯರೆ, ನಾನು ನಿಮಗೆ ಮೋಸ ಮಾಡಿದೆ ಅಂತ ನಿಮಗೂ ತಿಳಿದದ್ದು ಸಂತೋಷ, ಈಗಲಾದರೂ ನಿಮಗನಿಸಿರಬೇಕು-ನಾನು ಬಹಳ ಪ್ರಾಮಾಣಿಕ ಅಂತ. ಯಾಕೆಂದರೆ ನಾನು ನಿಮಗೆ ತಡವಾಗಿ ಯಾದರೂ ತಿಳಿಯುವ ಹಾಗೆ ಮೋಸ ಮಾಡಿದೆ. ನಮ್ಮ ಮಂತ್ರಿಗಳ ಹಾಗೆ ಕೊನೇತನಕ ನಿಮಗೆ ತಿಳಿಯದ ಹಾಗೆ ಮೋಸ ಮಾಡಬಹುದಿತ್ತು. ಆದರೆ ನಾನು ಹಾಗೆ ಮಾಡಲಿಲ್ಲ. ಹೌದಾ?

ಎಲ್ಲರೂ : ಹೌದು ಹೌದು.

ಕಿಟ್ಟಿ : ಅಷ್ಟೇ ಅಲ್ಲ, ನಾನು ಮಾಡಿದ ತಪ್ಪನ್ನ ಸರಿಪಡಿಸಬಲ್ಲೆ-ನಿಮಗೆಲ್ಲ ಸಂತೋಷವಾಗುವ ಹಾಗೆ.

ಎಲ್ಲರೂ : ಅದು ಹ್ಯಾಗಪ್ಪಾ?

ಕಿಟ್ಟಿ : ಹೀಗೆ: ಆನೆಯನ್ನು ಈ ನರ್ತಕಿಗೆ ಕೊಡತೇನೆ. ಅವಳು ಕುದುರೆ ಕೊಡತಾಳೆ. ಕುದುರೆ ಈ ಭಗವಂತನಿಗೆ ಕೊಡತೇನೆ. ಅವನು ದುಡ್ಡು ಕೊಡತಾನೆ. ದುಡ್ಡನ್ನ ಈ ಮಗನಿಗೆ ಕೊಡತೇನೆ. ಅವನು ಟಗರು ಕೊಡತಾನೆ. ಟಗರು ಈ ಮುದುಕಿಗೆ ಕೊಡತೇನೆ. ಆಯ್ತಾ?

ಎಲ್ಲರೂ : ಹೌದಲ್ಲ?

ಕಟ್ಟಿ : ಇಷ್ಟೆ, ಅದು ಇರೋದು ಇಷ್ಟೆ. ನಾ ಹೆಳೋದು ಇಷ್ಟೆ. ನೀವೆಲ್ಲ ದೊಡ್ಡವರು. ಅಂತಃಕರಣ ಇದ್ದವರು, ಆದರೆ ಮುಗ್ಧರು. ನಾನು ಇಷ್ಟೆಲ್ಲಾ ಕೊಟ್ಟರೆ ನಿಮಗೆ ನೆಮ್ಮದಿ ಸಿಕ್ಕೀತ? ಈ ಮುದುಕಿ ಸಾಯೋ ಕಾಲಕ್ಕೆ ಮಾತಾಡಿಕೊಂಡಿರಲಿಕ್ಕೆ ಸಂಗಾತಿ ಬೇಕು ಅಂದಳು. ಅವಳ ಟಗರು ಅವಳಿಗೆ ಸಿಕ್ಕರೆ ಸಂಗಾತಿ ಸಿಕ್ಕ ಹಾಗಾಯ್ತು? ಈತನ ತಂದೆ ತೀರಿ ಹೋದ. ದುಡ್ಡು ಸಿಕ್ಕರೆ ತೀರಿಹೋದ ತಂದೆ ಸಿಗ್ತಾನಾ? ಭಗವಂತಾ, ನಿನ್ನ ಕುದುರೆ ಸಿಕ್ಕರೆ ಹೇಮಮಾಲಿನಿ ಸಿಗತಾಳಾ? ನರ್ತಕಿಯಮ್ಮಾ ನಿನ್ನ ಆನೆ ನಿನಗೆ ಸಿಕ್ಕರೆ ಸಿನಿಮಾದಲ್ಲಿ ನಿನ್ನ ಸೊಂಟ ಮೂಡಿತಾ?

ಎಲ್ಲರೂ : ಹೌದಲ್ಲ! ಮುಂದೇನ್ಮಾಡೋಣ! ಏನಪ್ಪಾ ಮಾಡೋಣ? ನೀನೇ ಒಂದು ದಾರಿ ಹೇಳು.

ಕಿಟ್ಟಿ : ನೀವೆಲ್ಲ ನಾ ಹೇಳಿದ ಹಾಗೆ ಕೇಳಿದರೆ ನಿಮ್ಮ ಆಸೆಗಳನ್ನೆಲ್ಲಾ ಪೂರೈಸಬಲ್ಲೆ.

ಭಗವಂತ : ಕೇಳ್ತೀವಪ್ಪಾ, ನಾವೆಲ್ಲ ನಿನ್ನ ಕುರಿಗಳು ಅಂತ ತಿಳಿಕೊ. ಎಲ್ಲಿ ಎಲ್ಲರೂ ಒಂದು ಸಲ ಕುರಿಗಳ ಹಾಗೆ ಕೂಗ್ರಿ ನೊಡೋಣ.

ಎಲ್ಲರೂ : ಬ್ಯಾ ಬ್ಯಾ.

ಕಿಟ್ಟಿ : ನೀವೆಲ್ಲ ನನ್ನ ಶಿಷ್ಯರಾಗಬೇಕು. ನಮ್ಮ ಉಪಾಯ ಫಲಿಸಿ ನಾನು ರಾಜನಾದರೆ ನಿಮ್ಮ ಆಸೆಗಳೆಲ್ಲಾ ಫಲಿಸುತ್ತವೆ.

ಭಗವಂತ : ಹೇಮಾಮಾಲಿನಿ ಸಿಗತಾಳಾ?

ಸೂಳೆ : ಸಿನಿಮಾದಲ್ಲಿ ನನ್ನ ಸೊಂಟ ಮೂಡುತ್ತಾ?

ಕಿಟ್ಟಿ : ಅಗತ್ಯವಾಗಿ. ಭಾಗವತರೇ,

ಭಾಗವತ : ಯಾಕಪ್ಪ ಕರೆದೆ?

ಕಿಟ್ಟಿ : ನೀವು ಈ ಊರ ರಾಜನ ಬಳಿಗೆ ಹೋಗಿ-ನಾಳೆ ಬೆಳಿಗ್ಗೆ, ಸೂರ್ಯೋದಯಕ್ಕೆ ಮುಂಚೆ ಜಗದ್ಗುರು ಕಿಟ್ಟೂ ಸ್ವಾಮಿ ಶಿಷ್ಯ ಸಮೇತ ಬಂದು ಬೆಟ್ಟವನ್ನು ಹಿಂದಕ್ಕೆ ಮುಂದಕ್ಕೆ ಓಡಿಸ್ತಾರೆ ಅಂತ ತಿಳಿಸಿ.

ಭಾಗವತ : ಆಗಲಪ್ಪ.

ಕಿಟ್ಟಿ : ನಮ್ಮ ಆನೆ ಎಲ್ಲಿ? ಭಗವಂತ, ಈ ಆನೆಯ ಮೇಲೆ ಗಿಡ, ಮರ, ಬಳ್ಳಿ, ಮುಂತಾಗಿ ಕಾಡಿನ ಚಿತ್ರ ಬಿಡಿಸು, ಬೇಗ. ಮಾಡಬೇಕಾದ ಕೆಲಸ ಬೇಕಾದಷ್ಟಿದೆ!

*(ಹೋಗುವರು)*

## ಟಗರು ಹೋಗಿ ದುಡ್ಡು ಬಂತು

*(ಕಿಟ್ಟಿ ಟಗರಿನೊಂದಿಗೆ ಕುಣಿಯುತ್ತ ಬರುವನು. ಮಳೆ ಬರುತ್ತಿದೆ, ಒಂದು ಮನೆ, ಒಳಮನೆ, ಪಡಸಾಲೆ ಕಾಣುತ್ತಿದೆ. ಒಳ ಮನೆಯಲ್ಲಿ ಒಬ್ಬ ಮುದುಕ, ಅವನ ಮಗ.)*

ಮೇಳ : **ಮಡಕೆ ಹೋಗಿ ಟಗರು ಬಂತು ಲಾ ಲಾ ಲಾ**
**ಮಡಕೆ ಹೋಗಿ ಟಗರು ಬಂತು ಲಾ ಲಾ ಲಾ**
*(ಮುದುಕ ನರಳುತ್ತಾ ಮಲಗಿದ್ದಾನೆ. ಮಗ ಅತ್ತಿತ್ತ ಅಡ್ಡಾಡುತ್ತಿದ್ದಾನೆ. ಪಡಸಾಲೆಯಲ್ಲಿ ಕಿಟ್ಟಿ ಟಗರಿನೊಂದಿಗೆ ಬಂದು ಮಲಗುತ್ತಾನೆ)*

ಮುದುಕ : ಸಾಯತೇನೊ ಮಗಾ ಛಳಿ ಛಳಿ ಛಳಿ ಛಳಿ!
ಕಂಬಳಿ ಹೊಚ್ಚೊ ಮಗಾ ಛಳಿ ಛಳಿ ಛಳಿ!

ಮಗ : ಗಟ್ಟಿ ಜೀವ ಮಾಡಿಕೊಂಡು ಹೇಗೊ ಮಲಗಪ್ಪಾ, ಇನ್ನೇನು ಬೆಳಗಾಯ್ತು.

ಭಾಗವತ : ಯಾಕೆ, ಈ ಮುದುಕನಿಗೆ ಏನಾಗಿದೆ?

ಮಗ : ಏನ್ಹೇಳಲಿ ಭಾಗವತರೇ, ಮುದುಕ, ವಯಸ್ಸಾಗಿದೆ, ಛಳೀ ಸಹಿಸವೊಲ್ಲ.

ಭಾಗವತ : ಮುದುಕ ಅಂತಿ, ವಯಸ್ಸಾಗಿದೆ ಅಂತಿ, ಅದು ಹ್ಯಾಗೆ ಛಳಿ ತಡಕೊಂಡಾನು? ಇನ್ನೇನಾದರೂ ಇದ್ದರೆ ಹೊಚ್ಚು.

ಮಗ : ಎಲ್ಲಾ ಆಯ್ತು ಭಾಗವತರೇ, ಮನೆಯಲ್ಲಿರೋದೆಲ್ಲ ಹೊಚ್ಚಿಯಾಯ್ತು. ನಾನು ಉಟ್ಟಿರೋದು ಇದೊಂದು ಪಂಚೆ ಇದೆ.

ಭಾಗವತ : ಹಾ ಅದನ್ನೂ ಹೊಚ್ಚಿ ಬಿಡಬೇಡ. ಇಲ್ಲೆಲ್ಲಾ ಮಕ್ಕಳಿದ್ದಾರೆ.

*(ಹೊರಗಡೆ ಗೊರಕೆ ಶಬ್ದ)*

ಮಗ : ಹೊರಗಡೆ ಯಾರೋ ಗೊರಕೆ ಹೊಡೆಯೋ ಹಾಗೆ ಕೇಳ್ಳುಸ್ತಲ್ಲ ಯಾರು? ನೋಡೋಣ.

*(ಹೊರಗೆ ಬಂದು ನೋಡುತ್ತಾನೆ)*

ಏನಿದು! ಇಂಥಾ ಛಳಿಯಲ್ಲಿ ಈ ಹುಡುಗ ಏನೇನೂ ಖಬರಿಲ್ಲದೆ ಮಲಗಿದ್ದಾ ನಲ್ಲ! ಇದರ ರಹಸ್ಯ ತಿಳೀಲೇಬೇಕು. ಅಯ್ಯಾ ಯಾರು ನೀನು?

*(ಗೊರಕೆ)*
ಸುಖನಿದ್ದೆ ಹೊಡೀತಿದಾನೆ. ಅಯ್ಯಾ ಯಾರಪ್ಪಾ ನೀನು?

*(ಗೊರಕೆ)*
ಆಯ್ತಲ್ಲ, ನಿದ್ದೆ ಹೊಡೀತಾ ಇದ್ದೀಯಂತ ಗೊತ್ತಾಯ್ತು. ಇನ್ನು ಮೇಲಕ್ಕೇಳು.

ಕಿಟ್ಟಿ : *(ಆಕಳಿಸುತ್ತ)* ಯಾಕ್ರಿ ಎಬ್ಬಿಸ್ತೀರಿ? ಯಾರು ನೀವು?

ಮಗ : ಚೆನ್ನಾಗಿದೆ. ನನ್ನ ಮನೆಗೆ ಬಂದು, ನನ್ನನ್ನೇ ಯಾರು ನೀವು ಅಂತ ಕೇಳೋದೆ! ಅಯ್ಯಾ, ನಾನು ಈ ಮನೆ ಯಜಮಾನ. ಅಂದರೆ ನೀನೀಗ ಮಲಗಿರೋದು ನನ್ನ ಮನೆ ಚಾವಡಿ. ಆ ಟಗರು ಕಟ್ಟಿದ್ದೀ ನೋಡು-ಅದು ನನ್ನ ಮನೆ ಕಂಬ. ನೀನೀಗ ಎದ್ದು ಕೂತೀದಿ ನೋಡು, ಅದು ನನ್ನ ಮನೆ ನೆಲ. ಇಲ್ಲಿ ಮಲಗಬೇಕಾದರೆ ನನ್ನ ಪರವಾನಿಗಿ ಬೇಕು.

ಕಿಟ್ಟಿ : ಹೌದಾ? ನಮಸ್ಕಾರ ಯಜಮಾನರೆ.

ಮಗ : ನಮಸ್ಕಾರ.

ಕಿಟ್ಟಿ : ನೆಲದ ಯಜಮಾನರೆ, ಇದೊಂದು ರಾತ್ರಿ ನಾನಿಲ್ಲಿ ಮಲಗಬಹುದೇ?

ಮಗ : ಆಗಬಹುದು.

ಕಿಟ್ಟಿ : ಕಂಬದ ಯಜಮಾನರೆ, ಈ ರಾತ್ರಿ ಈ ಕಂಬಕ್ಕೆ ನನ್ನ ಟಗರು ಕಟ್ಟಬಹುದಾ?

ಮಗ : ಆಗಬಹುದು.

ಕಿಟ್ಟಿ : ಗುಡ್‌ನೈಟ್.

ಮಗ : ಇನ್ನೊಂದು ಮಾತು. ಅಯ್ಯಾ ಇಂಥಾ ಕೊರೆಯೋ ಛಳಿಯಲ್ಲಿ ಅಷ್ಟೊಂದು ನಿರಂಬಳವಾಗಿ ಒಂದೂ ಹೊದಿಕೆಯಿಲ್ಲದೆ ಮಲಗಿದ್ದೀಯಲ್ಲಾ-ಹೇಗೆ?

ಕಿಟ್ಟಿ : ಹೇಳಲೇಬೇಕಾ?

ಮಗ : ಹೌದು ಹೌದು.

ಕಿಟ್ಟಿ : ಹೇಳದಿದ್ದರೆ-

ಮಗ : ನಮ್ಮಪ್ಪ ಒಳಗೆ ಛಳಿಯಿಂದ ಸಾಯ್ತಿದಾನೆ. ನಾನು ಆಶ್ಚರ್ಯದಿಂದ ಸಾಯುತಾ ಇದೀನಿ-ಹೇಳಪ್ಪಾ.

ಕಿಟ್ಟಿ : ಹಾಗಿದ್ದರೆ ಹೇಳತೀನಿ.

ಮಗ : ಹೇಳು.

ಕಿಟ್ಟಿ : ಇದರಲ್ಲಿ ಹೇಳೋದೇನಿದೇರಿ? ಪಕ್ಕದಲ್ಲಿ ಟಗರು ಕಟ್ಟಿದೇನೆ. ಈ ಟಗರು ನನ್ನ ಮೈ ಛಳಿಯನ್ನೆಲ್ಲ ಮೇಯ್ತದೆ. ನಾನು ಆರಾಮಾಗಿ ಮಲಗತೇನೆ, ಅಷ್ಟೇ. ಇಲ್ಲಿ ನನಗೀಗ ಶಕೆ ಆಗತಾ ಇದೆ. ಸುಮ್ಮನೆ ಮರ್ಯಾದೆಗಂಜಿ ಸುಮ್ಕಿದೇನೆ

ಅಷ್ಟೆ.

ಮಗ : ಅಯ್ಯಾ, ನೀ ದೊಡ್ಡವನಪ್ಪಾ.

ಕಿಟ್ಟಿ : ಹೌದಾ? ಮದುವೆ ಆಗೋವಷ್ಟು ದೊಡ್ಡವನಾ?

ಮಗ : ಮದುವೆ? ಮಕ್ಕಳು ಹಡೆಯೋವಷ್ಟು ದೊಡ್ಡವನಯ್ಯಾ ನೀನು.

ಕಿಟ್ಟಿ : ಹೌದ? *(ದೇವರಂತೆ ನಿಂತು)* ನಿಮಗೇನು ವರ ಬೇಕೊ ಕೇಳ್ರಿ. ಕೊಡತೇನೆ.

ಮಗ : ಅಯ್ಯಾ ನನ್ನ ತಂದೆಗೆ ವಯಸ್ಸಾಗಿದೆ. ಛಳಿ ತಡೀಲಾರದೆ ಸಾಯ್ತಿದಾನೆ. ದಯಮಾಡಿ ನಿನ್ನ ಟಗರು ಕೊಟ್ಟು ಉಪಕಾರ ಮಾಡತೀಯಾ?

ಕಿಟ್ಟಿ : ಅಯ್ಯಯ್ಯೋ, ಸಿಕ್ಕಿಬಿದ್ದೆ. ಏನು ಸ್ವಾಮಿ? ವರ ಕೇಳಿಕೊ ಅಂದರೆ ಟಗರು ಕೇಳೊದೆ?

ಮಗ : ಮನೆಯಲ್ಲಿ ಹೆಣ್ಣುಮಕ್ಕಳೇ ಇಲ್ಲ. ವರ ತಗೊಂಡೇನು ಮಾಡಲಿ? ಇದೊಂದು ಟಗರು ಕೊಟ್ಟುಬಿಡು ಸಾಕು.

ಕಿಟ್ಟಿ : ಸ್ವಾಮಿ, ರೂಪಾಯಿ ನಾನೂರು ಕೊಟ್ಟು ಈ ಸ್ಪೆಶಲ್ ಟಗರು ಕೊಂಡೀನಿ. ನಿಮಗೆ ಕೊಡಲಾ?

ಮಗ : ಅಯ್ಯಾ, ನಾನೂರ ಮೇಲೆ ಒಂದು ನೂರು ಹೆಚ್ಚು ಕೊಡತೀನಿ. ಏನೊ ನನ್ನ ತಂದೆ ಸಾಯೋ ಕಾಲ್ದಲ್ಲಿ ನೆಮ್ಮದಿಯಿಂದ ಸಾಯಲಿ ಅಂತ ನನ್ನ ಆಸೆ, ದಯಮಾಡಿ ಇಲ್ಲೆನ್ನಬೇಡ. ರೂಪಾಯಿ ತರತೇನೆ....

*(ಒಳಗೆ ಹೋಗುವನು)*

ಕಿಟ್ಟಿ : ಏನು ಭಾಗವತರೇ, ಇಲ್ಲಿದ್ದೀರಿ-

ಭಾಗವತ : ನಿನ್ನ ಸಾಹಸಗಳಿಗೆಲ್ಲ ತಾಳ ಹಾಕಬೇಕಲ್ಲಪಾ!

ಕಿಟ್ಟಿ : ಅಡ್ಡಿಯಿಲ್ಲಪಾ?

ಭಾಗವತ : ಅಕೋ ಬಂದ.

ಮಗ : *(ಬಂದು)* ತಗೊಳ್ಳಪಾ ಐನೂರು ರೂಪಾಯಿ.

ಕಿಟ್ಟಿ : ಅದೇನೊ ಸರಿ. ಆದರೆ ಹ್ಯಾಗಪ್ಪಾ ಕೊಡಲಿ? ಈ ಭಾಗವತರು ಒಂದು ಮಾತು ಹೇಳಿದರೆ-

ಮಗ : ಹೇಳಿ ಭಾಗವತರೇ ಪ್ಲೀಸ್!

ಭಾಗವತ : ಛೇ ಛೇ ಕಿಟ್ಟೀ, ನೀನುಂಟು, ನಿನ್ನ ವ್ಯವಹಾರ ಉಂಟು. ಮಧ್ಯದಲ್ಲಿ ನನ್ನ ಸಿಗ ಹಾಕ್ಬೇಡ. ನಿನು ಓಡಿ ಹೋದ ಮೇಲೂ ಸ್ವಲ್ಪ ಹೊತ್ತು ನಾ ಇಲ್ಲೇ ಇರಬೇಕು.

ಕಿಟ್ಟಿ : ಸರಿ. ಆಗಲಿ, ನಿಮ್ಮ ತಂದೆ ನನಗೂ ತಂದೆ ಆದ ಹಾಗೆ. ಹ್ಯಾಗೂ ಸಾಯೋ ವಯಸ್ಸಿಗೆ ಬಂದಿದಾನೆ. ನೆಮ್ಮದಿಯಿಂದ ಸತ್ತರೆ ನಿಮ್ಮ ಹಾಗೆ ನನಗೂ ಸಂತೋಷ. ಕೊಡಿ ಕೊಡಿ.

*(ದುಡ್ಡು ಇಸಿದುಕೊಳ್ಳುವನು. ಮಗ ಟಗರು ತಕ್ಕೊಂಡು ಒಳಗೆ ಹೋಗುವನು.)*

ಕಿಟ್ಟಿ : ನಾನಿನ್ನು ಬರಲೆ?

ಮಗ : ಬೆಳತನಕ ಇದ್ದು ಹೊಗಪ್ಪಾ

ಕಿಟ್ಟಿ : ಸಾಧ್ಯವೆ? ಬರತೇನೆ. ಭಾಗವತರೇ, ತಾಳ ಹಾಕಿ.

*(ಸಂಗೀತ. ಕಿಟ್ಟಿ ಹೋಗುವನು. ಮಗ ಟಗರು ಒಯ್ದು ತಂದೆಯ ಬಳಿ ಕಾಲುದೆಸೆ ಕಟ್ಟುವನು. ಟಗರು ಮುದುಕನನ್ನು ಹಾಯುವುದು. ಛ ಳಿ ಮೇಯುತ್ತಿದೆಯೆಂದು ಮಗ ಭಾವಿಸುವನು.)*

ಮಗ : ನೋಡಿದಿರಾ ಭಾಗವತರೇ, ಟಗರು ಛಳಿ ಮೇಯಲಿಕ್ಕೆ ಸುರು ಮಾಡಿತು. ಐನೂರು ರೂಪಾಯಿ ಟಗರಿಗೆ ಹೆಚ್ಚೆ? ಆದರೆ ಮಾಡೋ ಕೆಲಸ! ಛೇ, ಛೇ ಸಾವಿರ ರೂಪಾಯಿ ಕೊಟ್ಟರೂ ಕಡಿಮೆ. ನೋಡಿ ಭಾಗವತರೇ, ನನ್ನ ತಂದೆಸುಮ್ಮನೆ ಮಲಗಿಬಿಟ್ಟನಲ್ಲ. ಆ ಟಗರು ಕೊಟ್ಟೋನ ಹೊಟ್ಟೆ ತಣ್ಣಗಿರಲಿ.

ಭಾಗವತ : ಅಯ್ಯಾ, ನಿನ್ನ ತಂದೆ ಯಾಕೋ ಸುಮ್ಮನಾದರು. ಏನಾಯ್ತು ನೋಡ ಹೋಗು.

ಮಗ : ಯಾಕೋ ಆರಾಮಾಗಿ ಮಲಗಿದಾನಲ್ಲ.

ಭಾಗವತ : ಆರಾಮಾಗಿ ಮಲಗಿದಾರೆ ನಿಜ. ಜೀವಂತವಾಗಿದಾರಾ-ಅಂತ.

ಮಗ : ಏನಂದಿರಿ?

*(ಗಡಿಬಿಡಿಯಿಂದ ಹೋಗಿ ನೋಡುವನು.)*

ಮೋಸವಾಯ್ತಲ್ಲ ಭಾಗವತರೇ, ನನ್ನ ತಂದೆ ಸತ್ತೇ ಹೋಗಿದಾನೆ. ಅಯ್ಯೋ ಐನೂರು ರೂಪಾಯಿ ಕೊಟ್ಟು ಕೈಯಾರೆ ಕೊಲ್ಲಿಸಿದ ಹಾಗಾಯ್ತಲ್ಲಾ! ಅವನೆಲ್ಲಿ ಹೋಗ್ತಾನೋ ನೋಡ್ತೀನಿ.

ಭಾಗವತ : ಅಯ್ಯಾ ಅಯ್ಯಾ ಈ ಹೆಣ?

ಮಗ : ಸತ್ತ ಹೋಯಿತು.

*(ಅವಸರದಲ್ಲಿ ಹೋಗುವನು, ಸಂಗೀತ)*

## ಕುದುರೆ ಹೋಗಿ ಆನೆ ಬಂತು

ಮೇಳ : **ಮಡಕೆ ಹೋಗಿ ಟಗರು ಬಂತು ಲಾ ಲಾ ಲಾ**
**ಟಗರು ಹೋಗಿ ದುಡ್ಡು ಬಂತು ಲಾ ಲಾ ಲಾ**
**ದುಡ್ಡು ಹೋಗಿ ಕುದುರೆ ಬಂತು ಲಾ ಲಾ ಲಾ**

*(ನರ್ತಿಸುತ್ತ ಕಿಟ್ಟಿ ಬರುತ್ತಾನೆ)*

ಕಿಟ್ಟಿ : ಇದೇನಪ್ಪಾ? ಯಾವೂರಿದು? ಯಾವ್ದೊ ಹಳೇ ಊರಿದ್ದಾಗಿದೆ. ಎಲ್ಲರೂ ಮಲಗಿದಾರೆ. ಆಗಲೇ ಅಷ್ಟೊಂದು ರಾತ್ರಿಯಾಯ್ತೆ? ಇಲ್ಲೇನೋ ಸಂಗೀತ ನಡೆದಿರೋ ಹಾಗಿದೆ.

*(ಸಂಗೀತ, ನರ್ತಕಿಯ ಮನೆ. ನಮ್ಮಿಬ್ಬರು ಕೂತಿದ್ದಾರೆ. ಅವರ ಮುಂದೆ ಇವಳ ನೃತ್ಯ. ಕಿಟ್ಟಿ ತನ್ನ ಕುದುರೆಯೊಂದಿಗೆ ಪ್ರವೇಶಿಸಿ ಪ್ರೇಕ್ಷಕರಲ್ಲಿ ಕೂರುವನು. ನೃತ್ಯ ಮುಗಿಯುವುದು. ನರ್ತಕಿ ಕೈ ಮುಗಿಯುತ್ತ ಬರುವಳು, ಅಲ್ಲೇ ಒಂದು ಆನೆ ಇದೆ.)*

ನರ್ತಕಿ : ಹ್ಯಾಗಿತ್ತು ನನ್ನ ನೃತ್ಯ, ಸಭ್ಯ ಗೃಹಸ್ಥರೇ?

ಜನರು : ನಿಂದೂ ಒಂದು ನೃತ್ಯವೆ? ಥೂ.

*(ಹೋಗುವರು. ನರ್ತಕಿ ಮುಖಭಂಗಿತಳಾಗಿ ನಿಲ್ಲುವಳು)*

ಕಿಟ್ಟಿ : ಇನ್ನೇನಿಲ್ಲ, ಚೆನ್ನಾಗಿತ್ತು ಅಂತ ಹೇಳುತ್ತಿದ್ದರು. ಸಭ್ಯ ಗೃಹಸ್ಥರೇ ಅಂದೆಯಲ್ಲ-ಮನೆ ನೆನಪಾಗಿ ಓಡಿಹೋದರು. ಹೇಗಿತ್ತು ನನ್ನ ನೃತ್ಯ ರಸಿಕರೇ ಅಂದಿದ್ದರೆ ಬಾಯಿ ತೆರೆದುಕೊಂಡು ಬಿದ್ದಿರುತ್ತಿದ್ದರು.

ನರ್ತಕಿ : ಹೋಗಲಿ, ನೀ ಯಾರೋ ಹೊಸಬ ಈ ಊರಿಗೆ. ನಿನಗೆ ನನ್ನ ನೃತ್ಯ ಹ್ಯಾಗನ್ನಿಸಿತು?

ಕಿಟ್ಟಿ : ನನಗೆ ? ಅಯ್ಯೊ! ಅಯ್ಯೊ! ಅಯ್ಯೋ-ಅದೇನ್ಹೇಳಲಿ? ನಿನ್ನ ನೃತ್ಯ ನೋಡಲಿಕ್ಕೆ ಎರಡು ಕಣ್ಣು ಸಾಲದು. ಸಂಗೀತ ಕೇಳಲಿಕ್ಕೆ ಎರಡು ಕಿವಿ ಸಾಲದು. ಅವೆರಡನ್ನೂ ಹೋಗಳಲಿಕ್ಕೆ ಒಂದು ನಾಲಗೆ ಸಾಲದು.

ನರ್ತಕಿ : ಹೆ, ಹೆ, ಹೆ, ಅಷ್ಟೊಂದು ಚೆನ್ನಾಗಿತ್ತಾ?

ಕಿಟ್ಟಿ : ಅಯ್ಯಯ್ಯೊ!

ನರ್ತಕಿ : ಇನ್ನಷ್ಟು ಹೊಗಳಪ್ಪಾ.

ಕಿಟ್ಟಿ : ಸಾಧ್ಯವೇ ಇಲ್ಲ.

ನರ್ತಕಿ : ಯಾಕೆ?

ಕಿಟ್ಟಿ : ಹೇಳಿದೆನಲ್ಲ ಒಂದು ನಾಲಗೆ ಸಾಲದು ಅಂತ.

ನರ್ತಕಿ : ಸಾಧ್ಯವಾದಷ್ಟು ಹೊಗಳಪ್ಪ.

ಕಿಟ್ಟಿ : ಅದೇನು ಸೊಂಟ ತರವತೀಯಾ, ತಿರವತೀಯಾ, ತಿರವತೀಯಾ! ಆ ಸೊಂಟ, ನಿಂದೇನಾ ತಾಯಿ?

ನರ್ತಕಿ : ಹೂನಪ್ಪಾ ನಂದೇ. ನೋಡು ನೋಡು. ಇನ್ನೇನು ಮಂದೀ ಸೊಂಟಾ ತಂದು ತಿರುವುಲಿಕ್ಕಾಗುತ್ತಾ?

ಕಿಟ್ಟಿ : ಆದರೂ ಆ ಸೊಂಟ ನಿಂದಲ್ಲ ಅನ್ನೋ ಹಾಗೆ ತಿರಿವಿದೀಯಲ್ಲ! ತಾಯಿ ಆ ಸೊಂಟ ಕೆಲಸಕ್ಕೆ ಬರುತ್ತಾ?

ನರ್ತಕಿ : ಓಹೊ!

ಕಿಟ್ಟಿ : ಭೇ ಭೇ! ನಿನ್ನಂಥ ಸೊಂಟವನ್ನು ಪಡೆದ ಆ ಭಾರತಾಂಬೆಯೇ ಧನ್ಯಳು! ಆದರೆ ನನಗೆ ದುಃಖ ಯಾಕೆ ಅಂದರೆ ಇಂಥಾ ಕಲೆ ಸವಿಯುವ ರಸಿಕರಿಲ್ಲದೆ ಹಳ್ಳಿಯ ಕೊಳ್ಳೀ ಬೆಳಕಿನಲ್ಲಿ ಹಾಳಾಗಿಹೋಗುವಂತಾಯಿತೆ? ಹಾಯ್, ವಿಧಿಯೆ! ನಿನ್ನ ಲೀಲೆ ಅಗಾಧವಾದದ್ದು.

ನರ್ತಕಿ : ಅವ್ವಯ್ಯ! ಏನ್ಚಂದ ಮಾತಾಡ್ತೀಯ! ನನಗೂ ಹಾಗೇ ಅನ್ನಿಸುತ್ತೆ. ಏನ ಮಾಡಲಿ? ಹಿಂದೆ ರಾಜರಿದ್ದರು. ಒಂದೇ ಸಲ ನನ್ನ ನೃತ್ಯ ನೋಡಿ ಬಹುಮಾನ ವಾಗಿ ಈ ಆನೆ ಕೊಟ್ಟರಪ್ಪ. ಅಂಥಾ ರಸಿಕರು ಈಗೆಲ್ಲಿದ್ದರೆ?

ಕಿಟ್ಟಿ : ನೀನ್ಯಾಕಮ್ಮ ಈ ಪರಿ ಚಿಂತಿ ಮಾಡತಿ? ಒಂದೇ ಸಿನಿಮಾದಲ್ಲಿ ಈ ಸೊಂಟ ತಿರುವು. ಕೂತವರೆಲ್ಲಾ ಒನ್ಸ್‌ಮೋರ್ ಅನ್ನದಿದ್ದರೆ ನನಗೆ ಬಂದು ಹೇಳು. ನಾನು ಒನ್ಸ್‌ಮೋರ್ ಅಂತೀನಿ.

ನರ್ತಕಿ : ಇದ್ದಾರಲ್ಲಪ್ಪಾ ಎಷ್ಟೋ ಜನ ನಟನಟಿಯರು. ನಾನು ವಯಸ್ಸಾದವಳು.

ಕಿಟ್ಟಿ : ಅದಕ್ಕೇ ಹೇಳೊದು ನಿನಗೆ-ಸೊಂಟದಲ್ಲಿರೋ ಬುದ್ಧಿ ತಲೆಯಲ್ಲಿಲ್ಲಾಂತ. ಸಿನಿಮಾದಲ್ಲೇನೋ ನಟಿಯರಿದ್ದಾರೆ ನಿಜ. ಆದರೆ ಇಂಥಾ ಸೊಂಟ ಇದ್ದವರು? ಸಾಧ್ಯವೇ ಇಲ್ಲ. ಹಾಗೇನಾದರೂ ವಯಸ್ಸಾಗಿದೆ ಅಂತ ಅನ್ನಿಸಿದರೆ ಸಿನಿಮಾ ದಲ್ಲಿ ಬರೀ ಸೊಂಟಾನೇ ತೋರಿಸಲಿ-ಮೂರು ಗಂಟೆ ಭರ್ಜರಿಯಾಗಿರುತ್ತೆ. ಬೇಕಾದರೆ 'ಸೊಂಟದ ಕಥೆ' ಅಂತಾನೇ ಹೆಸರಿಡಬಹುದು.

ನರ್ತಕಿ : ಅಯ್ಯೊ ಎನಾದರೂ ಮಾಡಿ ನಾ ಸಿನೆಮಾ ಸೇರಲೇಬೇಕಲ್ಲ, ಏನ್ಮಾಡಲಿ? ಕಿಟ್ಟಿ : ನೀನೇ ಒಂದು ಸಿನೆಮಾ ತೆಗೆದುಬಿಡು. ಎರಡು ಮೂರು ಲಕ್ಷ, ಅಷ್ಟೇ.

ನರ್ತಕಿ : ಎರಡು ಮೂರು ಲಕ್ಷ ರೂಪಾಯಿ! ಸಿನೆಮಾ ನಟನಟಿಯರೆಲ್ಲ ಅಷ್ಟೊಂದು ದುಡ್ಡು ಕೊಟ್ಟಿರತಾರಾ?

ಕಿಟ್ಟಿ : ಇಲ್ಲ. ಅವರಿಗೆ ಎರಡು ಮೂರು ಲಕ್ಷ ರೂಪಾಯಿ ಕೊಡತಾರೆ. ನಿನ್ನ ಕೇಸಿನಲ್ಲಾದರೆ ನೀನೇ ಕೊಡಬೇಕು. ಸಿನಿಮಾ ಬಂದ ಮೇಲೆ ನೋಡೋರಿಗೂ ಕೊಡಬೇಕಾದೀತು!

ನರ್ತಕಿ : ಸರಿ ಬಿಡಪ್ಪಾ. ನನಗೆ ಎರಡು ಲಕ್ಷ ರೂಪಾಯಿ ಸಿಕ್ಕು-ನಾನು ಸಿನೆಮಾದಲ್ಲಿ ಸೊಂಟ ಮೂಡಿಸಿ-ಅದೇನೋ ಅಂತಾರಲ್ಲ-ಹಾಗೆ.

*(ಹೊರಡುವಳು)*

ಕಿಟ್ಟಿ : ಅಮ್ಮಾ, ಇದೊಂದು ರಾತ್ರಿ ಇಲ್ಲಿ ಮಲಗಿದ್ದು ಬೆಳಿಗ್ಗೆದ್ದು ಹೋಗತೇನೆ, ಆಗಬಹುದಾ?

ನರ್ತಕಿ : ಅದಕ್ಕೇನಂತೆ ಇರಪ್ಪಾ. ನೀ ಅಲ್ಲಿ ಮಲಗಿಕೊ, ನಿನ್ನ ಕುದುರೆ ಅಲ್ಲಿ, ಆನೇ ಹತ್ತರ ಕಟ್ಟು. ಎರಡು ಮೂರು ಲಕ್ಷ! ನನ್ನ ಶಿವನೇ!

*(ಹೋಗುವಳು. ಕಿಟ್ಟಿ ಮಲಗುವನು)*

ಭಾಗವತ : ಓಹೋ! ನನಗಿಂತ ಮೊದಲೇ ನಮ್ಮ ಕಥಾನಾಯಕನ ಸವಾರಿ ಬಂದುಬಿಟ್ಟಿದೆ. ಮಹಾ ಆಸಾಮಿ! ಇಲ್ಲಿ ಬಂದವರಿಗೆಲ್ಲಾ ಈ ನರ್ತಕಿಯ ಮೇಲೆ ಕಣ್ಣಾದರೆ ಇವನಿಗೆ ಈ ಆನೇ ಮೇಲೆ ಕಣ್ಣು! ನೋಡಬೇಕು-ಹ್ಯಾಗೆ ಲಪಟಾಯಿಸ್ತಾನೆ ಅಂತ! ಆಗಲೇ ಬೆಳಗಾಯ್ತು. ಅದೇಕೊ ಏಳ್ತಿದಾನೆ! ಎದ್ದು ಕುದುರೆ ಕಾಲಲ್ಲಿ ದುಡ್ಡಿನ ಗುಂಪಿ ಹಾಕ್ತಿದಾನೆ! ಅಕೋ ಬಂದು ಮತ್ತೆ ಮಲಗಿದ! ಯಾಕಿದ್ದೀತು? ನೋಡೋಣ

*(ಕಿಟ್ಟಿ ಭಾಗವತ ಹೇಳಿದ ಹಾಗೆ ಎದ್ದು ಕುದುರೆ ಕಾಲಲ್ಲಿ ದುಡ್ಡಿನ ಗುಂಪಿ ಹಾಕಿ ಮತ್ತೆ ಮಲಗುವನು. ನರ್ತಕಿ ಎದ್ದು ಬರುವಳು. ಕುದುರೆ ಕಾಲಲ್ಲಿ ದುಡ್ಡು ನೋಡಿ.)*

ನರ್ತಕಿ : ಅಪ್ಪಯ್ಯಾ! ಇಷ್ಟೊಂದು ದುಡ್ಡು ಕುದುರೆ ಕಾಲಲ್ಲಿ ಬಿದ್ದಿದೆಯಲ್ಲ!

*(ಆ ಈ ಕಡೆ ನೋಡಿ, ಕಿಟ್ಟಿ ಮಲಗಿದ್ದನ್ನು ಗಮನಿಸಿ ದುಡ್ಡು ತೆಗೆದುಕೊಳ್ಳ ಹೋಗುವಳು, ಕಿಟ್ಟಿ ಏಳುವನು)*

ಕಿಟ್ಟಿ : ಹಾ ಹಾ ಹಾ! ಹಿಡೀಬೇಡಮ್ಮ, ಅದು ನನ್ನ ದುಡ್ಡು.

ನರ್ತಕಿ : ನಿನ್ನ ದುಡ್ಡು?

ಕಿಟ್ಟಿ : ಹೌದು, ನನ್ನ ಕುದುರೆ ದಿನಾಲು ದುಡ್ಡಿನ ಲದ್ದಿ ಹಾಕತದೆ. ದಿನಕ್ಕೆ ಹತ್ತು ಸಾವಿರ ಹಾಕತದೆ!

ನರ್ತಕಿ : ಆಂ!

ಕಿಟ್ಟಿ : ಅದರಲ್ಲೇನು ಬಮತು?

ನರ್ತಕಿ : *(ತನ್ನಷ್ಟಕ್ಕೆ)* ಒಂದು ದಿನಕ್ಕೆ ಹತ್ತ ಸಾವಿರ-ಹತ್ತ ದಿನಕ್ಕೆ ಒಂದು ಲಕ್ಷ-ಒಂದು ತಿಂಗಳು ಲದ್ದಿ ಹಾಕಿಸಿದರೆ-ಅಯ್ಯಯ್ಯೋ-ಸುಲಭವಾಗಿ 'ಸೊಂಟದ ಕಥೆ' ತೆಗೆದುಬಿಡಬಹುದಲ್ಲ! ಅಯ್ಯಾ! ನನ್ನ ಆನೆ ತಗೊಂಡು ಈ ಕುದುರೆ ಕೊಟ್ಟ ಬಿಡತೀಯಾ ನನಗೆ?

ಕಿಟ್ಟಿ : ಛೇ ಛೇ, ನನಗೇನೋ ಕಣ್ಣೀರ ಕಂಡರೆ ಕರುಣೆ ಬರತಿದೆ ನಿಜ. ಹಾಗಂತ ಇಂಥಾ ಕುದುರೆ ಕೊಟ್ಟುಬಿಡೋದೆ? ಸಾಧ್ಯವಿಲ್ಲ.

ನರ್ತಕಿ : ಅಪ್ಪಾ, ಇಷ್ಟ ವರ್ಷ ನೃತ್ಯ ಮಾಡಿದೆ. ಎಲ್ಲಾ ವ್ಯರ್ಥ. ಈಗ ನನ್ನಾಸೆ ಪೂರೈಸೋ ಹಾಗೆ ಕಾಣತಿದೆ. ದಯಮಾಡಿ ಕೊಡೋರಾಜಾ.

ಕಿಟ್ಟಿ : ನೋಡಮ್ಮಾ, ನನಗೆ ಕರುಣೆ ಬರತಾ ಇದೆ. ಇನ್ನು ಕೇಳಬೇಡ.

ನರ್ತಕಿ : ಅಪ್ಪಾ, ಇಷ್ಟೊಂದು ಅಂಗಲಾಚತಾ ಇದೇನೆ. ನನಗೂ ವಯಸ್ಸಾಯ್ತು. ಸಿನೆಮಾದಲ್ಲಿ ಇರೋದೊಂದು ಸೊಂಟಾನಾದರೂ ಮೂಡಿಸಿ ಸಾಯೋಣ ಅಂದರೆ ಹೀಗಂತಿಯಲ್ಲೊ-ನನ್ನ-ಶಿವನೇ-(ಅಳುವಳು).

ಕಿಟ್ಟಿ : ಸರಿ ಬಿಡಮ್ಮಾ. ನನ್ನನ್ನ ಹ್ಯಾಗೆ ಹಣ್ಣು ಮಾಡಬೇಕಂತ ನಿಮಗೆಲ್ಲಾ ತಿಳಿದಿರೋ ಹಾಗಿದೆ. ಆಯ್ತು ಕುದುರೆ ಕೊಟ್ಟೆ, ಆನೆ ಕೊಡು.

ನರ್ತಕಿ : ಹೌದಾ? ತಗೊಳ್ಳಪ್ಪಾ! ತಗೊ! ದೇವರು ನಿನಗೆ ಒಳ್ಳೇದನ್ನ ಮಾಡಲಿ.

*(ಕಿಟ್ಟಿ ಆನೆ ತಗೊಂಡು ಹೋಗುವನು)*

ಭಾಗವತ : ಏನಿದು ಬೆಳಗಾಗಿದೆ. ನಮ್ಮ ಕಥಾನಾಯಕ ಆನೆ ಮೇಲೆ ಕೂತುಕೊಂಡು ಹೋಗಿ ಆಗಲೇ ಒಂದು ದಿನ ಆಯ್ತು. ಈ ನರ್ತಕಿ ಕುದುರೆ ಕಾಲಲ್ಲೇ ಕೂತು ಅದು ಲದ್ದೀ ಹಾಕೋದನ್ನೇ ನೋಡ್ತಿದಾಳೆ. ನೋಡೋಣ, ಏನಾಗುತ್ತೋ!

ನರ್ತಕಿ : ಅಯ್ಯ! ಇಷ್ಟು ಹೊತ್ತಾಯ್ತು. ಈ ಕುದುರೆ ನಿಜವಾದ ಲದ್ದೀ ಹಾಕಿತೇ ಹೊರತು ರೂಪಾಯಿ ಹಾಕಲೇ ಇಲ್ಲ! ಈ ಹುಡುಗ ನನಗೇನಾದರೂ ಮೋಸ ಮಾಡಿರಬಹುದಾ? ಯಾಕಿರಬಹುದು?

*(ಮಗ, ಮುದುಕಿ, ಭಗವಂತ ಓಡುತ್ತೋಡುತ್ತ ಬರುವರು)*

ಭಗವಂತ : ಹಾ! ಇಲ್ಲಿದೆ ನನ್ನ ಕುದುರೆ!

ನರ್ತಕಿ : ಇದು ನನ್ನ ಕುದುರೆ, ನೀ ಯಾವನೋ? ದಿನಕ್ಕೆ ಹತ್ತ ಸಾವಿರ ರೂಪಾಯಿ ಲದ್ದೀ ಹಾಕೋ ಕುದುರೆ! ಆನೆ ಕೊಟ್ಟು ಕೊಂಡಿದೀನಿ?

ಮೂವರು : ಓಹೊ! ಇವಳಿಗೂ ಹಾಕಿದಾನೆ ನಾಮ!

ಭಗವಂತ : ಅಮ್ಮಾ, ಒಬ್ಬ ಬುಶ್‌ಶರ್ಟ್ ಹಾಕಿದ ಹುಡುಗ ಈ ಕುದುರೆ ಕೊಟ್ಟನಾ?

ನರ್ತಕಿ :ಹೌದು.

ಮಗ : ಸರಿ ಸರಿ ಅವನೇ.

ನರ್ತಕಿ : ಯಾಕೆ ಏನಾಯ್ತು?

ಭಗವಂತ : ನೋಡಮ್ಮಾ, ಈ ಕುದುರೆ ಲದ್ದೀ ಹಾಕೋದೇನೊ ನಿಜ, ಆದರೆ ರೂಪಾಯಿ ಹಾಕೋದಿಲ್ಲ. ಆ ಹುಡುಗ ನಿನಗೆ ಮೋಸ ಮಾಡಿದಾನೆ. ನಮಗೂ ಹೀಗೇ ಮೋಸಮಾಡಿ ಬಂದಿದಾನೆ. ಅವನ್ನ ಹಿಡೀಬೇಕು. ಹೊರಟಿದೇವೆ. ನೀನೂ ಬರೋದಿದ್ದರೆ ಬಾ.

ನರ್ತಕಿ : ಹೌದಾ! ನನಗನಿಸಿತ್ತು. ನಡೀರಿ ನಾನೂ ಬರತೇನೆ.

*(ಸಂಗೀತದೊಂದಿಗೆ ಎಲ್ಲರೂ ಹೋಗುವರು)*

# ಜಗದ್ಗುರು ಕಿಟ್ಟೂ ಮಹಾಸ್ವಾಮಿ

*(ಎಲ್ಲರೂ ನರ್ತಿಸುತ್ತ ಬರುತ್ತಾರೆ)*

ಮೇಳ : **ಬಂದಾನೊ ಬಂದಾನೊ**

**ಎಳಿಸ್ವಾಮಿ ಬಂದಾನೊ**

**ಕಿಟ್ಟು ಸ್ವಾಮಿ ಬಂದಾನೊ**

**ಮಣ ಮಣ ಮಂತ್ರವ**

**ಜಪಿಸುತ ನಿಂತಾನೊ**

**ಮಹಿಮೆಯ ತೋರಿಸುತ||**

**ಕಾವಿಯ ಹೊದ್ದಾನೊ**

**ಜಪಸರ ಹಿಡಿದಾನೊ**

**ಮಣ ಮಣ ಮಂತ್ರವ**

**ಗೊಣಗುತ ನಿಂತಾನೊ**

**ಜಗದೊಳಗೆ|**

**ಇರದಂಥ|**

**ಮಹಿಮೆಗಳ|**

**ಮೆರೆದಾನೊ||**

**ನಮೋ ನಮೋ ನಿನಗೆ**

**ಕಿಟ್ಟೂ ಸ್ವಾಮಿ**

**ನಮೋ ನಮೋ ನಿನಗೆ**

**ಕಿಟ್ಟೂ ಸ್ವಾಮಿ||**

**ಕಿಟ್ಟೂ ಮಹಾಸ್ವಾಮಿಗೆ ಜೈ ಜೈ ಜೈ||**

(ನರ್ತಿಸುತ್ತ ಈ ಹಾಡಾದ ಮೇಲೆ-ಹಿಂದೆ ಕಿಟ್ಟಿ ಸನ್ಯಾಸಿಯ ವೇಷದಲ್ಲಿ ನಿಂತಿದ್ದಾನೆ. ಒಂದು ಕಡೆ ರಾಜ, ರಾಜಕುಮಾರಿ, ಮತ್ತು ಪರಿವಾರ ಇದೆ. ಜಗದ್ಗುರು ಕಿಟ್ಟೂಗೆ ಜಯಕಾರವಾದ ಮೇಲೆ ಮ ಮಾ ಮಿ ಮೀ ಮು ಮೂ ಮೆ ಮೇ ಮೈ ಮೊ ಮೋ ಮೌ ಮಂ ಮಃ| ಎ ಬಿ ಸಿ ಡಿ ಇ ಎಫ್ ಜಿ ಎಚ್ ಐ ಜೆ ಕೆ ಎಲ್ ಎಮ್ ಎನ್ ಒ ಪಿ ಕ್ಯೂ ಆರ್ ಎಸ್ ಟೀ ಯೂ ವಿ ಡಬ್ಲು ಎಕ್ಸ್ ವಾಯ್ ಜಡ್ಡಃ| ಎಂದು ಮಂತ್ರ ಗುಣುಗಿ ಬೂದಿ ಊದುತ್ತಾನೆ. ಮೈ ಮೇಲೆ ಮರಗಿಡಗಳ ಚಿತ್ರಗಳನ್ನುಳ್ಳ ಆನೆ ಆಕಡೆ ಈಕಡೆ ಓಡುತ್ತದೆ. ರಾಜನ ಪರಿವಾರದವರು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಶಿಷ್ಯರ ಜಯಕಾರವಾಗುತ್ತದೆ. ಜನ ಅಡ್ಡ ಬೀಳುತ್ತಾರೆ. ರಾಜ 'ಹೋಗಮ್ಮಾ ಜಗದ್ಗುರು ಕಿಟ್ಟೂ ಸ್ವಾಮಿಗೆ ಮಾಲೆ ಹಾಕೆಂದು' ಹೇಳುತ್ತಾನೆ. ರಾಜಕುಮಾರಿ ಕಿಟ್ಟಿಗೆ ಮಾಲೆ ಹಾಕುತ್ತಾಳೆ. ಮತ್ತೆ ಜಯಕಾರವಾಗುತ್ತದೆ. ಅಷ್ಟರಲ್ಲಿ ಕಿಟ್ಟಿಯ ಅಜ್ಜಿ 'ಎಲ್ಲಿದೀಯೋ ಕಿಟ್ಟೀ'-ಎಂದು ಬರುತ್ತಾಳೆ. 'ನೋಡಜ್ಜಿ, ಹತ್ತ ಪೈಸಾದಲ್ಲೇ ಮದುವೆ ಮಾಡಿಕೊಂಡೆ, ಅದೂ ರಾಜಕುಮಾರೀನ!' ಎನ್ನುತ್ತಾನೆ ಕಿಟ್ಟಿ, ಮತ್ತೆ ಜಯಕಾರವಾಗುವಾಗ)-

-ತೆರೆ-

# ಪುಷ್ಪರಾಣಿ

## ಪಾತ್ರವರ್ಗ

| | |
|---|---|
| ಮೇಳ | ಮಹಾರಾಣಿ |
| ಸೂತ್ರಧಾರ | ಕನಿಷ್ಠಾ |
| ವನಪಾಲಕ | ವಿನಯೆ |
| ಮಂತ್ರಿ | ದಾಸಿಮರು |
| ರಾಜ | ಗಿಳಿ |
| ಸೇನಾಪತಿ | ಮರಕಟುಕರು |
| ಪುಷ್ಪರಾಣಿ | ಹಾಗೂ |
| ಗುಣವಂತ | ಸೇವಕರು |

## ದೃಶ್ಯ-೧

*(ಪರದೆಯ ಮೇಲೆ ಬರೆದ ಕಾಡಿನ ಚಿತ್ರ, ಅದರ ಮುಂದೆ ಮೇಳ.)*

ಮೇಳ : **ಕಾಡಿಗೇ ಕೈಕಾಲು ಮೂಡಿ**
**ನಾಡು ಮೂಡಿತು ನೆರಳಿನಲ್ಲಿ**
**ಕಾಡು ನಾಡು ತಾಯಿ ಮಕ್ಕಳು**
**ಬೇರೆ ಹೋಲಿಕೆ ಸಲ್ಲದು.**

**ಚಿಗುರು ಹೂಗಳ ತೊಟ್ಟಿಲಲ್ಲಿ**
**ಚಿಕ್ಕೆ ತಾರೆಯ ಗಿಲಕಿ ಹಿಡಿದು**
**ಹಕ್ಕಿಗೊರಳಲಿ ಹಾಡಿ ಜೋಗುಳ**
**ತಾಯಿ ಕೂಸನು ಪೊರೆವಳು.**

**ತುಂಟ ಕೂಸು ತಂಟೆ ಮಾಡಿ**
**ದಡ್ಡತನದಲಿ ಕಡ್ಡಿಗೀರಿ**
**ತಾಯ ಕರುಳಿಗೆ ಸುರಿದು ಬೆಂಕಿಯ**
**ಆತ್ಮಹತ್ಯೆಗೆ ನಲಿವುದು.**

**ಅಂಥ ಸಮಯದಿ ಮುಗಿಲ ಸ್ವಾಮಿ**
**ಮಳೆಯ ಸೊಳ್ಳೆಯ ಪರದೆಯಲ್ಲಿ**

**ತಾಯಿ ಮಕ್ಕಳ ಕೂಡಿ ಮಲಗಿಸಿ**
**ಹರಸುವನು ಸಂತಸದಲಿ.**

**ಕಾಡು ನೋಡದ ತಬ್ಬಲಿಗಳೇ**
**ಸಿಡುಕಬ್ಯಾಡಿರಿ ಸಿನಕ ಜನರೇ**
**ನಮ್ಮ ನಾಟಕ ನೋಡಿ ಕಲಿಯಿರಿ**
**ಕಾಡ ನೋಡುವ ಪರಿಯನು.**
**ಆಗಲೂ ಅದು ಸಾಧ್ಯವಾಗದೆ**
**ಹೋದರೂ ಮೈ ಪರಚಬೇಡಿರಿ**
**ಕಾಡು ಕಂಡವರಂತೆ ನಟಿಸಿರಿ**
**ಭಾರಿ ಬೆಲೆಯಿದೆ ನಟನೆಗೆ.**

ಸೂತ್ರಧಾರ : ಓಂಪ್ರಥಮದಲ್ಲಿ ಆದಿಗಾಧಾರವಾದ ಸಾವಳಗಿ ಶಿವಲಿಂಗ ದೇವರ ನೆನೆದು, ಸತ್ಯ ದೇವತೆಗಳನ್ನ ಚಿತ್ತದಲ್ಲಿ ಸ್ಮರಿಸಿ, ಉಚಿತವಾದ ಉಕ್ತಿಗಳಿಂದ ಕಥೆ ಮಾಡತೀವಿ, ಚಿತ್ತಗೊಟ್ಟು ನೋಡಬೇಕ್ರೀ, ಶಿವಾ. ಪರಿಸರ ರಕ್ಷಣೆ ಅಂತಾ ನೀವು ಕೇಳಿದ್ದೀರಿ...

ಮೇಳ : ಓದಿದ್ದೀರಿ.

ಸೂತ್ರಧಾರ : ಆದಿಕಾಲದಲ್ಲೂ ಈ ಬಗ್ಗೆ ಕಾಳಜಿ ಮಾಡಿದ್ದರು ಶಿವಾ. ಅಂಥಾದ್ದೊಂದು ಕಥೆ ಹೇಳತೀವಿ.

ಮೇಳ : ಹೇಳು ಗುರುವೆ.

ಸೂತ್ರಧಾರ : ಒಂದಾನೊಂದು ಕಾಲದಲ್ಲಿ ಜಂಬೂದ್ವೀಪದ ದಕ್ಷಿಣ ಕ್ಷೇತ್ರ. ಅಲ್ಲಿ ಸಹ್ಯಾದ್ರಿ ಕಾಡು, ಸದರಿ ಕಾಡು ಆಳ ಮತ್ತು ಅಗಲ ಮತ್ತು ಸದಾ ತುಂಬಿ ಹರಿವ ನದಿಗಳಿಂದ ಕೂಡಿತ್ತು. ಎತ್ತರ ಮತ್ತು ಸದಾ ಹಸಿರಾದ ಗುಡ್ಡ ಬೆಟ್ಟಗಳಿಂದ ಶೋಭಾಯಮಾನವಾಗಿತ್ತು. ಆ ಕಾಡಿನಲ್ಲಿ ತರುಮರಾದಿಗಳಿದ್ದವು.

ಮೇಳ : ತರುಮರಾದಿಗಳ ತಂಪು ನೆರಳಿನಲ್ಲಿ ಹಸಿರು ಹುಲ್ಲು. ಹುಲ್ಲಿನ ಮ್ಯಾಲೆಚೌರ್ಯಾಂಸಿಲಕ್ಷ ಜೀವರಾಶಿ ಚೆನ್ನಾಟವಾಡ್ತ ಇವೆ ಶಿವಾ.

ಸೂತ್ರಧಾರ : ಕಾಡಿಗಂಟಿ ನಾಡಿದೆ.

ಮೇಳ : ಅಂದರೆ ನಾಡಿಗಂಟೆ ಕಾಡಿದೆ. ತಾಯಿ ಮಕ್ಕಳಿದ್ದ ಹಾಗೆ, ಗಂಡ ಹೆಂಡತಿ ಹಾಗೆ.

ಸೂತ್ರಧಾರ : ಕಾಡಿಗೆ ಋತುಮಾನ ಬಂದರೆ ನಾಡಿಗೆ ಬಣ್ಣವೇರುತ್ತಿತ್ತು.

ಮೇಳ : ನಾಡು ತನ್ನ ಪಾಡಿಗೆ ತಾನು ಕೈಬಿಟ್ಟು ಆಡಿದರೆ ಕಾಡು ನಿರುಮ್ಮಳ ಮಲಗಿರುತ್ತಿತ್ತು.

ಸೂತ್ರಧಾರ : ಕಾಡಿನ ಮೂಗುತಿಯ ಹಾಗೆ ಅಲ್ಲಿ ನೋಡ್ರಿ ಒಂದು ಪಟ್ಟಣ. ಅದ್ಯಾವ ಪಟ್ಟಣ ಕಂದಾ?

ಮೇಳ : ಬೆಂಕಿ ಪೊಟ್ಟಣ ಗುರುವೆ.

ಸೂತ್ರಧಾರ : ಅಲ್ಲವೋ ಕಂದಾ, ಅದು ಶಿವಾಪುರ ಪಟ್ಟಣ. ಎತ್ತರದ ಬೆಟ್ಟದಲ್ಲಿ ಚಿತ್ತಾರದ ಅರಮನೆ. ಬೆಳ್ದಿಂಗಳಲ್ಲಿ ಬೆಳ್ಳಿ ಅರಮನೆ, ಬಿಸಿಲಿದ್ದರೆ ಬಂಗಾರದ ಅರಮನೆ. ಕೈ ಜಾರುವಂಥ ಕಲ್ಲಿನಲ್ಲಿ ಕಟ್ಟಿಸಿದ ಸಾವಿರದೆಂಟು ಕಂಬಗಳು ಆ ಅರಮನೆಗೆ, ಅವುಗಳ ಮ್ಯಾಲೆ ಚಂದ್ರ ನಿವಾಸ. ಅದರ ಮ್ಯಾಲೆ ಹದಿನೆಂಟು ರತ್ನದಕಳಸ. ಶಿವಾಪುರ ಪಟ್ಟಣಕ್ಕೆ ಧರೆಗೆ ದೊಡ್ಡವನಾದ ಸೋಮರಾಯನ ಒಡೆತನ. ಕಾಡಿಗೂ ರಾಜ, ನಾಡಿಗೂ ರಾಜ.

ಮೇಳ : ರಾಣಿಗೂ ರಾಜ.

ಸೂತ್ರಧಾರ : ಎಲ್ಲಾ ರಾಜನಂತೆ ಇವನೂ...

ಮೇಳ : ವೀರ ಧೀರ ಶೂರ ಮಾರ....

ಸೂತ್ರಧಾರ : ಹಿಂದೆ ಸಾವಿರ ದಂಡು, ಮುಂದೆ ಸಾವಿರ ದಂಡು, ಗೌಡಳಿಕೆ ಪಾಳೇಗಾರರ ನ್ನಿಟ್ಟುಕೊಂಡು ಸಕಲಸೌಭಾಗ್ಯ ಅಷ್ಟೈಶ್ವರ್ಯ ಐಭೋಗದಿಂದ ದರ್ಬಾರವನ್ನಾ ಳುವಾತ. ಚಂದ್ರ ನಿವಾಸದ ಮೇಲುಪ್ಪರಿಗೆಯಲ್ಲಿ ಕುಂತು ಕಿಡಕಿಗಳಿಂದ ನದಿ ಹಳ್ಳ ಕೊಳ್ಳ ಕಾಡು ಉಪವನ ಉದ್ಯಾನಗಳ ನೋಡುವುದರಲ್ಲಿ ಸುದೈವ ಕಂಡಾತ. ಸೂರ್ಯ ನಾರಾಯಣಸ್ವಾಮಿ ಹೆಚ್ಚು ಉದಾರವಾಗಿ ಇಲ್ಲಿಯ ಜನ ದನ ಸಸ್ಯಾದಿಗಳಿಗೆ ಹೆಚ್ಚಿನ ಚೇತನ ನೀಡುತ್ತಿದ್ದ. ರೈತರ ಹೊಲಗಳಲ್ಲಿ ಒಂದೊಂದು ಜೋಳದ ದಂಟಿಗೆ ಐದೈದು ತೆನೆ ಬಿಡುತ್ತಿದ್ದವು. ತೆನೆಗೊಂದು ಹಕ್ಕಿ ತೂಗಿ ತಿಂದರೂ, ಒಂದೊಂದು ತೆನೆಯಿಂದ ಮೊರದ ತುಂಬ ಚಿನ್ನದ ಧಾನ್ಯ ಉಳೀತಿದ್ದವು.

ಮೇಳ : ಮುಂದೇನಾಯ್ತು ಗುರುವೆ?

ಸೂತ್ರಧಾರ : ಹಿಂಗಿರಲಾಗಿ ಕಂದಾ, ಒಂದು ದಿನ ರಾಜನ ಉದ್ಯಾನ ಉಪವನದ ಮರ ಗಳನ್ನು ವೈರಿ ಸೈನಿಕರು ಕಡಿಯೋಕೆ ಸುರುಮಾಡಿದರು......

ಮೇಳ : ಎಲಾ ಇವರ! ಒಂದಾನೊಂದು ಕಾಲದಲ್ಲೂ ಕಾಡು ಕಡಿಯುತ್ತಿದ್ದರೇನು ಶಿವಾ?

ಸೂತ್ರಧಾರ : ಹೌಂದಪಾ ಕಂದಾ.

ಮೇಳ : ಒಂದಾನೊಂದು ಕಾಲದಲ್ಲೂ ಆತ್ಮಹತ್ಯೆ ಮಾಡಿಕೊಳ್ತಿದ್ದರೇನು ಶಿವಾ?

ಸೂತ್ರಧಾರ : ಹೌಂದಪಾ ಕಂದಾ, ಮುಂದೆ ಕೇಳು. ಸೂರ್ಯದೇವರು ಮೂಡಣದಲ್ಲಿ ಆಗಷ್ಟೇ ಮೂಡುತ್ತಿರಬೇಕಾದರೆ ಕರಿ ಹಸ್ತದ ಮೂರಾರು ಸೈನಿಕರು ಉಕ್ಕಿನ ಕೊಡಲೀ ಸಮೇತ ಕಾಡು ಹೊಕ್ಕು ಎಳೆಯ ಮರ ಕಡಿಯತೊಡಗಿದರು.

ಮೇಳ : (ಅಭಿನಯಿಸುತ್ತ)

**ಮರವ ಕಡಿದರೋ| ಹಸಿರು**
**ತಂಪು ಕಡಿದರೋ**
**ಮುಂಜಾನೆಯ ಮಂಜಿನಲ್ಲಿ**
**ಅದ್ದಿ ಒದ್ದೆಯಾದ ಹೂವ**
**ಚಿಗುರ ಒದ್ದು ತುಳಿದು ನಕ್ಕರೋ|**
**ರೆಕ್ಕೆ ಬಲಿಯದೆಷ್ಟೋ ಹಕ್ಕಿ**

**ಟೊಂಗೆಯಿಂದ ಜಾರಿ ಬಿದ್ದು**
**ಪಟ ಪಟಪಟ ಪುಟ್ಟ ರೆಕ್ಕೆ**
**ಬಡಿದು ಚೀರಿ ಉರುಳಿ ಬಿದ್ದವೋ|**

ಸೂತ್ರಧಾರ : ಈ ಕಡೆ ರಾಜರ ಅರಮನೆಯಲ್ಲಿ ಏನು ನಡೀತಿತ್ತಪ ಅಂದರೆ, ರಾಜನ ಸಮಸ್ತ ಪರಿವಾರ ದರ್ಬಾರು ಸೇರಿ ಮರಪರ್ವ ಆಚರಿಸುಲ್ಲಿ ವನಪಾಲಕ ಓಡಿಬಂದ. *(ರಾಜರ ದರ್ಬಾರು, ವನಪಾಲಕ ಓಡಿಬರುತ್ತಾನೆ)*

ವನಪಾಲಕ : ಕಾಪಾಡಬೇಕು ಪ್ರಭೂ ಕಾಪಾಡಬೇಕು.

ಮಂತ್ರಿ : ಯಾರದು?

ವನಪಾಲಕ : ನಾನು ವನಪಾಲಕ ಸ್ವಾಮಿ; ನೆರೆ ರಾಜ್ಯದ ಸೈನಿಕರು ಪ್ರಭುಗಳ ಉಪವನದ ಮರಗಳನ್ನು ಕಡಿದುಹಾಕುತ್ತಿದ್ದಾರೆ, ಕಾಪಾಡಬೇಕು.

ಮಹಾರಾಜ : ಹೌದು ಪ್ರಭು, ವೈರಿ ಸೈನಿಕರು ಇಂದು ಮುಂಜಾನೆ ಆಯುಧ ಸಮೇತ ತಮ್ಮ ಉಪವನದಲ್ಲಿ ನುಗ್ಗಿ ಎತ್ತರವಾದ, ನೀಳವಾದ ಮರಗಳನ್ನೆಲ್ಲ ಕಡಿದು ಹಾಕುತ್ತಿ ದ್ದಾರೆ. ಪ್ರತಿಭಟಿಸಿದೆ. ದಯಮಾಡಿ ಇಂಥ ಅಕಾರ್ಯ ನಿಲ್ಲಿಸಿ ಎಂದೆ. ಕೇಳಿ ಅಟ್ಟಹಾಸದಿಂದ ನಕ್ಕು ನನ್ನನ್ನು ತಳ್ಳಿ ತುಳಿದು ಮತ್ತೆ ಕಡಿಯಲಾರಂಭಿಸಿದರು. ತಾವು ಕಾಳಜಿಯಿಂದ ಬೆಳಸಿದ ಒಂದೊಂದು ಮರ ಉರುಳುವಾಗಲೂ ಪಕ್ಷಿಗಳು ಒದರಿ ಹಾರಾಡುತ್ತಿದ್ದವು. ವನ್ಯಜೀವಿ ಪ್ರಾಣಿಗಳು ದಿಕ್ಕಾಪಾಲಾಗಿ ಓಡಿಹೋದವು. ಆ ದೃಶ್ಯ ನೋಡಲಾಗುತ್ತಿರಲಿಲ್ಲ ಪ್ರಭು.

ಸೇನಾಪತಿ : ಇದೆಲ್ಲ ಕಾಲು ಕೆದರಿ ಜಗಳ ತೆಗಯುವ ಉಪಾಯವೇ ಸರಿ. ತಾವು ಅಪ್ಪಣೆ ಕೊಟ್ಟರೆ...

ಮಹಾರಾಜ : ಇದಕ್ಕೂ ಅಪ್ಪಣೆ ಬೇಕೆ? ಬೇಗ ಹೋಗಿ ಅವರಿಗೆ ಸರಿಯಾದ ಶಿಕ್ಷೆ ಕೊಡಿ; ನಾವೂ ಹಿಂದಿನಿಂದ ಬರುತ್ತೇವೆ.

*(ಸೇನಾಪತಿ ಹೊರಡುವನು, ಮೇಳ ಬರುವುದು)*

## ದೃಶ್ಯ-೨

ಮೇಳ : **ಹಿಂದೆ ಸಾವಿರ ಮುಂದೆ ಸಾವಿರ**
**ದಂಡು ದಳ ಸೇರಿ|**
**ಕದನಕೆ ಹೊರಟಳು ನೂರು ಗೌಡಳಿಕೆ|**
**ಮಾಂಡಳಿಕರು ಸೇರಿ||**

**ಕೊಂಬು ಕಹಳೆ ನೌಬತ್ತು ನಗಾರಿ|**
**ಹುರುಪಿನಿಂದ ಒದರಿ|**
**ಹೊಡೆದರು ಬಡಿದರು ಘೋರ ಕಾಳಗ**
**ಕೂಗು ಮುಗಿಲು ಮುಟ್ಟಿ||**

**ಗುರಿ ತಪ್ಪದ ಸಾವಿರ ಬಾಣ**
**ರಾಜ ತೆಗೆದುಕೊಂಡ||**

**ಬೆಟ್ಟದಂಥ ಬಿಳಿ ಕುದುರೆಯೇರಿ**
**ಬರುತಿರಲು ಹೊಯ್ಯ ಕಂಡ||**

*(ರಾಜ, ಮಂತ್ರಿ ಸಮೇತ ರಭಸದಿಂದ ಕಾಡಿನಲ್ಲಿ ಹೊರಟಿದ್ದಾಗ ಹುಡುಗಿ ಅತ್ತದ್ದು ಕೇಳಿಸುತ್ತದೆ. ಇಬ್ಬರೂ ಕುದುರೆಗಳಿಂದ ಇಳಿದು ನೋಡುತ್ತಾರೆ, ಯಾರೂ ಇಲ್ಲ. ಮತ್ತೆ ಬಿಕ್ಕು ಕೇಳಿಸುತ್ತದೆ.)*

ಮಹಾರಾಜ : ಯಾರದು ಅಳುತ್ತಿರೋದು? ಯಾರಲ್ಲಿ?

*(ವನಪಾಲಕ ಮರದ ಮರೆಯಿಂದ ಹೊರಗೆ ಬರುವನು)*

ಮಂತ್ರಿ : ಯಾರದು?

ವನಪಾಲಕ : ಕ್ಷಮಿಸಬೇಕು. ನಾನು ಮಹಾಪ್ರಭುಗಳ ವನಪಾಲಕ.

ಮಂತ್ರಿ : ಏನಯ್ಯ ಯುದ್ಧಕ್ಕೆ ಹೆದರಿ ಇಲ್ಲಿ ಅಡಗಿಕೊಂಡಿದ್ದೀಯಾ?

ವನಪಾಲಕ : ನನ್ನ ಮಗಳ ರಕ್ಷಣೆಗೆ ನಿಂತುಕೊಂಡಿದ್ದೆ ಸ್ವಾಮಿ.

ಮಂತ್ರಿ : ಮಗಳು ಎಲ್ಲಿದ್ದಾಳೆ?

ವನಪಾಲಕ : ವೈರಿ ಸೈನಿಕರಿಗೆ ಹೆದರಿ ಮರವಾಗಿದ್ದಾಳೆ ಸ್ವಾಮಿ.

ಮಹಾರಾಜ : ಮನುಷ್ಯರು ಮರವಾಗುವುದುಂಟೆ? ಕಟ್ಟು ಕಥೆ ಹೇಳುತ್ತಿದ್ದೀಯಾ?

ವನಪಾಲಕ : ಕಥೆಯಲ್ಲ, ಸತ್ಯಪ್ರಭು.

ಮಂತ್ರಿ : ಹ್ಯಾಗೆ ನಂಬುವುದು?

ವನಪಾಲಕ : ಇಗೋ ನೀವೇ ನೊಡಿ.

*(ವನಪಾಲಕ ಕೈಲಿದ್ದ ಒಂದು ಚಿಕ್ಕ ಕಲ್ಲನ್ನು ಒಂದು ಎಳೆಯ ಮರದ ಮೇಲೆ ಎಸೆಯುತ್ತಾನೆ. ಮರ ಹೋಗಿ ಅದು ಹುಡುಗಿಯಾಗುತ್ತದೆ)*

ಮೇಳ : **ನೋಡ ನೋಡುತಲೆ ಕಣ್ಣೆದುರಲ್ಲೆ**
**ಮರದ ರೂಪವಡಗಿ|**

**ಅವತರಿಸಿದಳ್ಕೆ ಕಾನನದೇವಿ**
**ಉಘೇ ಉಘೇ ತಾಯಿ||**

**ಋತುಮಾನಗಳ ಕೈಗೆ ಕೈ ಇಟ್ಟು**
**ನಡೆಯ ಕಲಿಸಿದಾಕೆ||**

**ಚಿಗುರು ಹಸಿರಿಗೆ ಪುಷ್ಪವಾಗುವ**
**ಗುಟ್ಟು ಹೇಳಿದಾಕೆ|**

**ಪಕ್ಷಿಕೋಟಿಗೆ ಸಾಮಗಾನ ಸಂ**
**ಗೀತ ಕಲಿಸಿದಾಕೆ|**

**ಮನದ ಕಾಳಿಕೆಯ ತೊಳೆದು ಹೊಳೆವ**
**ಬಿಳಿ ನಗೆಯ ನಗುವ ತಾಯೆ||**

*(ರಾಜ ಮತ್ತು ಮಂತ್ರಿಗೆ ಆಶ್ಚರ್ಯವಾಗುತ್ತದೆ)*

ಮಂತ್ರಿ : ಏನಯ್ಯಾ ಇದು ಭೂತಚೇಷ್ಟೆಯೋ? ಮಂತ್ರಗಾರಿಕೆಯೊ?

ವನಪಾಲಕ : ಭೂತಚೇಷ್ಟೆಯೂ ಅಲ್ಲ, ಮಂತ್ರಗಾರಿಕೆಯೂ ಅಲ್ಲ ಸ್ವಾಮಿ. ಈಕೆ ನನ್ನ ಮಗಳು. ಪುಷ್ಪರಾಣಿ ಅಂತ ಹೆಸರು. ಈಕೆ ತನಗೆ ಬೇಕಾದಾಗ ಮರವಾಗ ಬಲ್ಲಳು. ಬೇಡವಾದರೆ ಹೀಗೆ ಹುಡುಗಿಯೂ ಆಗಬಲ್ಲಳು. ವೈರಿ ಸೈನಿಕರ  ಕಣ್ಣಿಗೆ ಬೀಳದಿರಲೆಂದು ಹೀಗೆ ಮರವಾಗಿದ್ದಳು.

ಮಹಾರಾಜ : ನಿಜ ಹೇಳು, ಈಕೆ ನಿನ್ನ ಮಗಳೋ?

ವನಪಾಲಕ : ನಾನ್ಯಾಕೆ ಹೇಳಲಿ? ಕಾಡಿನಲ್ಲಿ ಸಿಕ್ಕ ಕೂಸನ್ನೇ ಮಗಳೆಂದು ಭಾವಿಸಿ ಸಾಕಿದೆ ಪ್ರಭು. ಆಮೇಲೆ ತಿಳಿಯಿತು, ಈಕೆ ವನದೇವತೆಯ ಮಗಳೆಂದು. ಅವಳೇ ನಾಲ್ಕು ಚಿಕ್ಕಕಲ್ಲು ಕೊಡುತ್ತಾಳೆ. ಒಂದೊಂದನ್ನೇ ಅವಳ ಮೇಲೆ ಎಸೆಯುತ್ತಾ ಹೋದರೆ ಒಂದರಿಂದ ಮರವಾಗುತ್ತಾಳೆ. ಇನ್ನೊಂದನ್ನೆಸೆದರೆ ಹೂ ಬಿಡುತ್ತಾಳೆ. ಮೂರನೆಯದರಿಂದ ಹೂ ಉದುರಿಸುತ್ತಾಳೆ. ನಾಲ್ಕನೆಯ ಕಲ್ಲು ಎಸೆದರೆ ಹೀಗೆ ಪುನಃ ಹುಡುಗಿಯಾಗುತ್ತಾಳೆ ಪ್ರಭು.

ಮಹಾರಾಜ ; ಈ ಪವಾಡವನ್ನು ನಾವೂ ನೋಡಬಹುದೆ?

ವನಪಾಲಕ : ಅಗತ್ಯವಾಗಿ. ಎಲ್ಲಿ ಪುಷ್ಪರಾಣಿ ನಾಲ್ಕು ಚಿಕ್ಕ ಕಲ್ಲು ಆರಿಸಿಕೊಡಮ್ಮ.

*(ಪುಷ್ಪರಾಣಿ ರಾಜನ ಕೈಗೆ ನಾಲ್ಕು ಚಿಕ್ಕ ಕಲ್ಲು ಆರಿಸಿಕೊಟ್ಟು ಮರಗಳಿಲ್ಲದಲ್ಲಿಗೆ ಹೋಗಿ ನಿಂತುಕೊಳ್ಳುತ್ತಾಳೆ. ರಾಜ ಮೆಲ್ಲಗೆ ಅವಳ ಮೇಲೆ ಒಂದು ಕಲ್ಲು ಎಸೆಯುತ್ತಾನೆ. ಮುಂದೆ ಹಾಡಿನಲ್ಲಿದ್ದಂತೆ ಅಭಿನಯಿಸಬೇಕು)*

ಮೇಳ : **ಕನ್ಯೆ ಇದ್ದವಳು ಕರಗಿ ಸಣ್ಣಮರ**
**ನಿಂತಿತಣ್ಣ ಎದುರ|**

**ಶಿವಲೋಕದ ತಂಗಾಳಿ ಬೀಸತಾವ**
**ತೂಗತಾವ ಹಸಿರ||**

**ರೆಂಬೆ ನೋಡದರ ಕೊಂಬಿ ನೊಡು**
**ಒಡಮುರಿಯತಾವ ಚಿಗುರ|**

**ಹಾರಿ ಬಂದ ಮರಿಹಕ್ಕಿ ಚಿಲಿಪಿಲಿ**
**ಹಾಡತಾವ ಮಧುರ||**

ಮಂತ್ರಿ ; ಆಶ್ಚರ್ಯ!

ಮಹಾರಾಜ : ಪರಮಾಶ್ಚರ್ಯ. ಈ ಪರಿ ಹಸಿರಾದ ಹಸಿರನ್ನ ನಾನು ಇದುವರೆಗೆ ಕಂಡಿರಲಿಲ್ಲ!

ಮಂತ್ರಿ : ಎಲ್ಲಿ ಪ್ರಭು. ಬೇಗ ಎರಡನೆಯ ಕಲ್ಲು ಎಸೆಯಿರಿ.

*(ರಾಜ ಇನ್ನೊಂದು ಕಲ್ಲು ಎಸೆಯುತ್ತಾನೆ. ಮೇಳದ ಹಾಡಿನ ಅಭಿನಯವಾಗಬೇಕು)*

ಮೇಳ : **ಅರಳಿದವಣ್ಣ ಸಾವಿರ ಹೂವ**
**ಮರದ ಮೈಯ ತುಂಬಾ|**
**ಸಾವಿರ ದೀಪ ಹಗಲ ದೀವಟಗಿ**
**ಅಗೋ ಚೈತ್ರ ಬಂದಾ||**

**ಹೂವಿನೆದೆಯ ಪರಿಮಳದ ಧೂಳಿಗೆ**
**ಕೆರತಾವ ದುಂಬಿ|**
**ಪ್ರೀತಿಗೆ ಯಾಕೆ ಬೇಕು ಪೀಠಿಕೆ**
**ಬರಲಿ ಹೃದಯ ತುಂಬಿ||**

ಮಹಾರಾಜ : ನಿಜ ಹೇಳುತ್ತೇನೆ-ನನ್ನ ಹೃದಯದಲ್ಲಿ ಅಮೃತದ ಮಳೆಯಾಗುತ್ತಿದೆ!

ಮಂತ್ರಿ : ಆಶ್ಚರ್ಯದಿಂದ ಒದ್ದಾಡುವ ಹೃದಯ ಬಿಟ್ಟು ನನಗೆ ಬೇರೇನೂ ತಿಳಿಯುತ್ತಿಲ್ಲ. ಪ್ರಭೂ, ಬೇಗ ಮೂರನೆ ಕಲ್ಲು ಎಸೆಯಿರಿ.

ಮಹಾರಾಜ : ಇಗೋ

*(ಮೂರನೆಯ ಕಲ್ಲು ಎಸೆಯುವನು)*

ಮೇಳ : **ಆಕಾಶದ ಮರ ಅಲುಗಿ ತಾರೆ**
**ಧರೆಗುರುಳಿದಂತೆ ಆಗಿ|**

**ಹೂಗಳುದುರಿದವು ಮಾಗಿಯ ಚಳಿಗೆ**
**ಹಣ್ಣೆಲೆಗಳು ನಡುಗಿ||**

**ನಮ್ಮ ಹಸಿರಿಗೆ ಅರಳಿದ ಹೂವ**
**ಯಾರೋ ಹರಿದರಲ್ಲ|**

**ನಮ್ಮ ಈ ಕಥೆಗೆ ಅರಳಿದ ಹಾಡನು**
**ಯಾರೋ ಕಿತ್ತರಲ್ಲ||**

ಮಂತ್ರಿ : ಈಗ ಆ ತಾಯಿಯನ್ನು ಕಣ್ಣಾರೆ ಕಾಣುವುದು ಕಣ್ಣಿಗೆ ಹಿತ. ಪ್ರಭು ನಾಲ್ಕನೆಯ ಕಲ್ಲನ್ನು ಎಸೆಯಿರಿ.

ಸೂತ್ರಧಾರ : ಕಂದಾ ಹುಟ್ಟಿದ ಪ್ರೀತಿಯನ್ನ ಯಾರಾದರೂ ತೊಟ್ಟಿಲಲ್ಲಿ ಇಟ್ಟು ಜೋಗುಳ ಹಾಡುತ್ತಾರೇನು?

ಮೇಳ : ಇಲ್ಲರಿ ಗುರುವೆ, ತೊಟ್ಟಲಾಗ ಹಾಕಿದರೂ ಹಾ ಅನ್ನೂದರಾಗ ಎದಿಮಟ ಎತ್ತರ ಬೆಳೆದಿರ್ತದೆ.

ಸೂತ್ರಧಾರ : ಇಲ್ಲೂ ಅದೇ ಆಯ್ತು-

ಮೇಳ : ಏನಂದಿರಿ?

*(ರಾಜ ನಾಲ್ಕನೆಯ ಕಲ್ಲನ್ನು ಎಸೆಯುವನು).*

ಮೇಳ : **ನೋಡ ನೋಡುತಲೆ ಕಣ್ಣೆದುರಲ್ಲೆ**
**ಮರದ ರೂಪವಡಗಿ**
**ಅವತರಿಸಿದಳೈ ಕಾನನದೇವಿ**
**ಉಘೇ ಉಘೇ ತಾಯಿ||**

*(ಈಗ ಪುಷ್ಪರಾಣಿ ಪುನಃ ರಾಜನ ಎದುರಿಗೆ ನಿಂತಿದ್ದಾಳೆ. ರಾಜನು ಆಶ್ಚರ್ಯದಿಂದ ಹುಚ್ಚನಾಗಿದ್ದಾನೆ. ಓಡಿಬಂದು ವನಪಾಲಕನ ಕೈ ಹಿಡಿದುಕೊಳ್ಳುತ್ತಾನೆ)*

ಮಹರಾಜ : ಅಯ್ಯಾ ನನಗೊಂದು ಉಪಕಾರ ಮಾಡುತ್ತೀಯಾ?

ವನಪಾಲಕ : ಪ್ರಭುಗಳಿಗೆ ನನ್ನಂಥ ವನಪಾಲಕ ಮಾಡುವ ಉಪಕಾರ ಏನಿದ್ದೀತು?

ಮಹಾರಾಜ : ಈ ಪುಷ್ಪರಾಣಿಯನ್ನು ನನಗೆ ಮದುವೆ ಮಾಡಿಕೊಡುತ್ತೀಯಾ?

ವನಪಾಲಕ : ಈ ಪ್ರಶ್ನೆಗೆ ನಿಂತ ಕಾಲ ಮೇಲೆ ಹ್ಯಾಗೆ ಉತ್ತರಿಸಲಿ ಪ್ರಭು?

ಮಂತ್ರಿ : ಕೇಳುವವರು ಮಹಾಪ್ರಭುಗಳೇ ಆಗಿರುವಾಗ ಯೋಚಿಸಿ ಹೇಳುವಂಥಾದ್ದೇ ನಿದೆ? ಭಾಗ್ಯ ಬಂದು ಬಾಗಿಲು ತಟ್ಟುವಾಗ ನಾಳೆ ಬಾ ಅಂದವರುಂಟೆ?

ವನಪಾಲಕ : ಸ್ವಾಮೀ ಬೆಳೆದ ಮಗಳನ್ನು ಯೋಗ್ಯ ವರನಿಗೆ ಮದುವೆ ಮಾಡಿಕೊಡಬೇಕಾದ್ದು ನನ್ನ ಕರ್ತವ್ಯ. ಆದರೆ ಇದಕ್ಕೆ ಪುಷ್ಪರಾಣಿಯ ಒಪ್ಪಿಗೆಯೂ ಬೇಕಲ್ಲವೆ?

ಮಂತ್ರಿ : ಎನಮ್ಮಾ ಪುಷ್ಪರಾಣಿ ಮಹಾರಾಜರ ರಾಣಿಯಾಗುವುದು ನಿನಗೆ ಒಪ್ಪಿಗೆಯಾ
ತಾಯಿ?

*(ಪುಷ್ಪರಾಣಿ ಹುಂ ಎಂದು ನಾಚಿಕೊಂಡು ವನಪಾಲಕನ ಹಿಂದೆ ಅಡಗುವಳು)*

ಮಂತ್ರಿ : ಇದು ಸಾಲದೆ ವನಪಾಲಕಾ?

ವನಪಾಲಕ : ಆದರೆ ಪುಷ್ಪರಾಣಿ ಅರಿಯದ ಅನೇಕ ವಿಷಯಗಳಿವೆ ಸ್ವಾಮಿ. ಅವಳು ತುಂಬಾ ಮರದು ಸ್ವಭಾವದವಳು. ನಗರದ ನಾಗರಿಕತೆ ಅರಿಯದವಳು. ಅರಮನೆಯ ಶಿಷ್ಟಾಚಾರ ಅವಳಿಗೆ ಗೊತ್ತಿಲ್ಲ. ಅಲ್ಲದೆ ಮಹಾಪ್ರಭುಗಳಿಗಾಗಲೇ ಮಹಾರಾಣಿಯವರಿದ್ದಾರೆ. ಸವತಿ ಅಂದರೇನೆಂಬುದನ್ನಾದರೂ ಅವಳಿಗೆ ತಿಳಿಸಿ ಹೇಳಬೇಕಲ್ಲವೆ?

ಮಹಾರಾಜ : ಚಿಂತೆ ಬೇಡ. ಇಲ್ಲಿಯತನಕ ಈಕೆ ಕಾಡಿನಲ್ಲಿದ್ದಳು. ಇನ್ನು ಮೇಲೆ ನನ್ನ ಹೃದಯದಲ್ಲಿರುತ್ತಾಳೆ. (ಪಕ್ಕದ ಬಳ್ಳಿಯಿಂದ ಒಂದು ಹೂಕಿತ್ತು ಪುಷ್ಪರಾಣಿಗೆ ಕೊಡುತ್ತ) ಇಕೋ ಈ ಹೂವು ಮತ್ತು ನನ್ನ ಹೃದಯಗಳನ್ನ ನಿನಗೆ ಅರ್ಪಿಸುತ್ತೇನೆ. ಅರ್ಪಿಸಿಕೋ ದೇವಿ.

*(ಪುಷ್ಪರಾಣಿ ನಾಚಿ ಮುಖ ಮುಚ್ಚಿಕೊಳ್ಳುತ್ತಾಳೆ)*

ಮಂತ್ರಿ : ಚಿಂತಿಸಬೇಡ ವನಪಾಲಕಾ. ನಮ್ಮ ಪ್ರಭುಗಳು ಪುಷ್ಪರಾಣಿಯ ತುಟಿಯಲ್ಲಿ ಅರಳಿದ ನಗೆಹೂವು ಎಂದೂ ಬಾಡದ ಹಾಗೆ ನೋಡಿಕೊಳ್ಳುತ್ತಾರೆ. ನೀನು ಒಪ್ಪಿದರೆ ನಾವೆಲ್ಲ ಬಹುಮಾನಿತರಂತೆ ಆನಂದಗೊಳ್ಳುತ್ತೇವೆ.

ವನಪಾಲಕ : (ದುಃಖ ತಡೆಯದೆ) ನನ್ನ ಹೃದಯದಲ್ಲಿ ನೆಟ್ಟಿರುವ ಈ ಪುಷ್ಪವನ್ನು ಕಷ್ಟಪಟ್ಟು ಕಿತ್ತುಕೊಡುತ್ತಿದ್ದೇನೆ. ಪ್ರಭು, ಗಾಯವಾದ ನನ್ನ ಹೃದಯಕ್ಕೆ ಇನ್ನುಮೇಲೆ ಸಾವಿನಲ್ಲೇ ಶಾಂತಿ ಸಿಗಬೇಕು.

ಮಹಾರಾಜ : ಹಾಗೆನ್ನಬೇಡ ವನಪಾಲಕಾ, ಪುಷ್ಪರಾಣಿ ಸಮೇತ ನಮ್ಮೆಲ್ಲರನ್ನು ನಿನ್ನ ಹೃದಯ ದಲ್ಲಿ ಇಟ್ಟುಕೋ. ಅಲ್ಲಿ ನಾವೆಲ್ಲ ಸುರಕ್ಷಿತರಾಗಿರುತ್ತೇವೆ.

*(ಪುಷ್ಪರಾಣಿ ಕಣ್ಣೀರು ಸುರಿಸುತ್ತ ವನಪಾಲಕನನ್ನು ತಬ್ಬಿ ಕೊಂಡು)*

ಪುಷ್ಪರಾಣಿ : ಅಂದರೆ ನಾನು ಈಗಲೇ ತಂದೆಯನ್ನು ಬಿಟ್ಟು ಹೊರಡಬೇಕೆ?

ಮಂತ್ರಿ : ಹೌದು ತಾಯಿ.

ಪುಷ್ಪರಾಣಿ : ಹೌದು. ಹೆಣ್ಣಿಗೆ ತೌರುಮನೆ ಕೊನೆಯಲ್ಲ ಮಗಳೆ. ಆಗಲೇ ದೊಡ್ಡವಳಾಗಿದ್ದೀ. ಮಹಾರಾಜರ ಅರಮನೆಗೆ ಬೆಳಕಾಗಿ, ಅವರ ವಂಶ ವಿಸ್ತರಿಸಿ, ಉದ್ಧಾರ ಮಾಡು. ನೀನು ವನದೇವತೆಯ ಮಗಳಾದ್ದರಿಂದ ಹ್ಯಾಗೂ ಬೆಳೆದು ದೊಡ್ಡವ ಲಾಗುತ್ತಿದ್ದೆ. ಆದರೆ ನಿನಗೆ ತಂದೆ ತಾಯಿ ಆಗುವ ಎರಡು ಭಾಗ್ಯಗಳನ್ನು ನನಗೆ ದಯಮಾಡಿ ಕೊಟ್ಟೆ ತಾಯಿ. ನೀನು ನನ್ನ ಕಾಳಜಿ ಬಿಟ್ಟು ಅರಮನೆಯಲ್ಲಿ ಸುಖವಾಗಿರು. ನನಗೆ ಜೊತೆಗಾರನಾಗಿ ಈ ಹಸಿರಿದೆ. ನಿನ್ನ ಅಗಲಿಕೆಯ ಕಣ್ಣೀರಿವೆ.

*(ಪುಷ್ಪರಾಣಿ ದುಃಖ ಒತ್ತರಿಸಿ)*

ಪುಷ್ಪರಾಣಿ : ನನ್ನ ಪ್ರೀತಿಯ ಮರಗಳೇ, ಪ್ರಾಣಿಗಳೇ, ಪಕ್ಷಿಗಳೇ, ನನ್ನ ವೃದ್ಧತಂದೆಯನ್ನು ಚೆನ್ನಾಗಿ ನೋಡಿಕೊಳ್ಳಿ. ನನ್ನನ್ನ ಕಣ್ತುಂಬ ಕಂಡಲ್ಲದೆ ಬಾಯಲ್ಲಿ ನೀರು ಕೂಡ ಹಾಕುತ್ತಿರಲಿಲ್ಲ. ನನ್ನ ನೆನಪೇ ಅವನಿಗೆ ಸಂಜೀವಿನಿ. ಆದ್ದರಿಂದ ಅವನಿಗೆ ದಿನಾ ನನ್ನ ಯೋಗಕ್ಷೇಮದ ವರದಿ ಒಪ್ಪಿಸಿ. ಬೆಳಗಿನ ಚಳಿಗೆ ಅವನ ಪಕ್ಕ ಮರೆಯದೆ ಒಂದಿಷ್ಟು ಬೆಂಕಿ ಮಾಡಿಕೊಡಿ.

ಮೇಳ : **ತೌರಮನೆ ಎಂಬುವುದು ನಾರಿಗೆ ಕೊನೆಯಲ್ಲ**
**ವಾರಿಗೆ ಪತಿಪುರುಷನೊಲಿದು| ಬಂದಾಗ**
**ಎರವಾದೆ ಮಗಳೆ ತೌರಿಗೆ||**

**ಹೆತ್ತಂತ ತೌರಿಗೆ ಏನಂತ ಹರಸಲಿ**
**ಹಸಿರು ನಗುತಿರಲಿ ಅನವರತ| ನಿನ ಹಾಡು**
**ತುಳುಕಿರಲಿ ನಾಡಿನ ತನಕ.**

## ದೃಶ್ಯ-೩

ಸೂತ್ರಧಾರ : ಈಗ ನೋಡ್ರಿ ಶಿವ, ನಮ್ಮ ಕಥೆ ಅರಮನೆಯಲ್ಲಿ ಚಿಗುರಿಕೊಳ್ತಾಯಿದೆ. ರಾಜನ ರಾಣಿ ಮಹಾರಾಣಿ. ದಡೀಸೀರೆಯ ಒಡತಿ. ಸಿಂಗಾರದ ನಿರಿಗೆ ಒದ್ದು, ಕಡಗದ ಕೈ ತಿರುವಿ ಅರಮನೆಯಂಗಳದಲ್ಲಿ ಕುಂತಾಳ್ರೀ. ಮುಂದೇನಪಾ ತಮ್ಮಾ.

ಮೇಳ : ಅದೇ ಗಿಣಿ ಗಿಡುಗನ ಆಟ.

ಸೂತ್ರಧಾರ : ಕಾಡಿನ ಥರಾವರಿ ಹಕ್ಕಿ ಪಕ್ಷಿಗಳನ್ನ ಹಿಡಿಸಿ ಅವುಗಳನ್ನು ಕೆಳಗಡೆಯಿಂದ ಹಾರಿಬಿಟ್ಟು ಟರಮನೆ ಮ್ಯಾಲಿಂದ ಗಿಡುಗನನ್ನು ಬಿಡೋದು-ಗಿಡುಗ ಪುಟ್ಟ ಪುಟ್ಟ ಹಕ್ಕಿಗಳ ಮ್ಯಾಲೆ ಎರಗಿ, ಕೊಕ್ಕಿನಿಂದ ಕುಕ್ಕಿ ಸೊಕ್ಕಿದ ಬೇಟೆ ಆಡುತ್ತಿದ್ದರೆ, ಮಹಾರಾಣಿ ಹಾ ಅಂತ ಆನಂದಪಡುತ್ತಿದ್ದಳು. ಕಂದಾ, ನಿನ್ನ ಹಕ್ಕಿ ಬಿಟ್ಟೆಯಾ? ನನ್ನ ಗಿಡುಗ ರೆಡಿ.

*(ಮೇಳದವರು ಗಿಳಿ ಗಿಡುಗರಾಗಿ ಅಭಿನಯಿಸುವರು)*

ಮೇಳ : **ಬ್ಯಾಡ ಬ್ಯಾಡ ಹೋಗಬ್ಯಾಡ**
**ನಮ್ಮ ಗುರಿ| ಗೂಡಬಿಟ್ಟು ಹೋಗಬ್ಯಾಡ**
**ಕಟ್ಟಿದಾವ ದಟ್ಟ ಮೋಡ**
**ಮೋಡದಾಗ| ತೂಗ್ಯಾಡತಾವ ಕರಿ ನೆರಳ||**

**ಮ್ಯಾಲ ನೋಡ ಹಾಳ ಗಿಡುಗ**
**ಗಿಡುಗನ ಕಣ್ಣು ಹರಿದಾಡತಾವ ನಿನ್ನ ಮ್ಯಾಗ**

*(ಹಾಡು ಮುಗಿಯುವಷ್ಟರಲ್ಲಿ-ಅಂತಃಪುರ ಮಹಾರಾಣಿ ಮತ್ತು ವಿನಯೆ-ಗುಣವಂತನ ಪ್ರವೇಶ)*

ಗುಣವಂತ : ಮಹಾರಾಣಿಗೆ ಜಯವಾಗಲಿ.

ಮಹಾರಾಣಿ : ಯಾರದು? ನೀನು ನಮ್ಮ ತಂದೆಯ ನಿಷ್ಠಾವಂತ ಸೇವಕನಾಗಿದ್ದ ಗುಣವಂತ ಅಲ್ಲವೆ?

ಗುಣವಂತ : ಹೌದು ಮಹಾರಾಣಿ.

ಮಹಾರಾಣಿ : ಏನು ಬಂದೆ?

ಗುಣವಂತ : ವಿಷಯ ಗೊತ್ತಾಯಿತೆ ಮಹಾರಾಣಿ?

ಮಹಾರಾಣಿ : ಗೊತ್ತಾಗದೇನು? ಮಹಾರಾಜರು ಉಪವನದಿಂದ ಬರುತ್ತಿದ್ದಾರೆ, ಸರಿತಾನೆ?

ಗುಣವಂತ : ಅಷ್ಟೇ ಅಲ್ಲ.

ಮಹಾರಾಣಿ : ವೈರಿಗಳನ್ನು ಸದೆಬಡಿದು ಜಯಶಾಲಿಗಳಾಗಿ ಬರುತ್ತಿದ್ದಾರೆ. ಸರಿತಾನೆ?

ಗುಣವಂತ : ಅಷ್ಟೇ ಅಲ್ಲ.

ಮಹಾರಾಣಿ : ಇನ್ನೇನು? ನನಗೋಸ್ಕರ ಗಿಳಿಮರಿ ಹಿಡಿದು ತರುತ್ತಿದ್ದಾರೆಯೇ?

ಗುಣವಂತ : ಇಕೋ ನಾನೇ ತಮದಿದ್ದೇನೆ ಮಹಾರಾಣಿ. ಇದು ಸಾಮಾನ್ಯ ಹಸಿರು ಗಿಳಿಯಲ್ಲ, ಪಂಚರಂಗಿ ಗಿಳಿ. *(ಕೊಡುವನು)*

ಮಹಾರಾಣಿ : ಅಬ್ಬ! ಎಷ್ಟು ಚೆನ್ನಾಗಿದೆ. ಇದಿನ್ನೂ ಮರಿ ಅಲ್ಲವೇ?

ಗುಣವಂತ : ಹೌದು ಮಹಾರಾಣಿ, ಇದಿನ್ನೂ ದೊಡ್ಡದಾಗಬೇಕು. ಅಂದರೇನೇ ಇದರ ಬೇಟೆ ಚೆಂದ.

ಮಹಾರಾಣಿ : ಇದರ ಜೊತೆ ಇದೇ ವಯಸ್ಸಿನ ಗಿಡುಗ ಸಿಕ್ಕಿದ್ದರೆ ಚೆನ್ನಾಗಿತ್ತು. ಕೆಳಕ್ಕೆ ಬಣ್ಣದ ಚಿಟ್ಟೆಯಂತೆ ಇದು ಹಾರಬೇಕು. ಮೇಲಿನಿಂದ ಕೇಳಕ್ಕೆ, ಇದರ ಮೇಲಕ್ಕೆ ಗಿಡುಗ ಎಗರಿ ಬೇಟೆಯಾಡುತ್ತಿದ್ದರೆ ನೋಡುವುದಕ್ಕೆ ಎಷ್ಟು ಚೆನ್ನಾಗಿರುತ್ತದೆ!

ಗುಣವಂತ : ಇದು ಬಾರೀ ಬೆರಿಕಿಪಕ್ಷಿ ಮಹಾರಾಣಿ. ಒಮ್ಮೊಮ್ಮೆ ಗಿಡುಗನನ್ನೇ ಎದುರಿಸುತ್ತದೆ.

ಮಹಾರಾಣಿ : ಹಾಗಿದ್ದರೆ ಇನ್ನೂ ಒಳ್ಳೆಯದಾಯಿತಲ್ಲಾ, ಪರಸ್ಪರ ಬೇಟೆಯಾಡುವ ದೃಶ್ಯ!

ಗುಣವಂತ : ಹಾಗಲ್ಲ ಮಹಾರಾಣಿ. ಈ ಹಕ್ಕಿಗೆ ರಣಹದ್ದು ವೈರಿ. ಇದರ ಮೈ ಬಣ್ಣ ದೂರದ ಅದರ ಕಣ್ಣಿಗೆ ಹಸಿ ಮಾಂಸದಂತೆ ಕಾಣುವುದಂತೆ.

ಮಹಾರಾಣಿ : ಅದಕ್ಕೇನಂತೆ? ರಣಹದ್ದಿನಿಂದಲೇ ಬೇಟೆ ಆಡಿಸಿದರಾಯ್ತು. ವಿನಯೆ-(ವಿನಯೆ ಬರುವಳು) ಇದನ್ನು ಒಯ್ದು ಪಂಜರದಲ್ಲಿಡು. ಅದಾಗಲೇ ಕತ್ತು ಚೆಲ್ಲಿದೆ. ಹಸಿದಿದೆಯೋ ಏನೋ? ಕೂಡಲೆ ಹಣ್ಣು ಹಾಲು ಉಣ್ಣಿಸು. ಗುಣವಂತಾ ಇದಕ್ಕೊಂದು ರಣಹದ್ದಿನ ವ್ಯವಸ್ಥೆಯಾಗಲಿ. ಗಿಳಿಮರಿ ತಂದುದಕ್ಕೆ ಇಕೋ ಬಹುಮಾನ.

*(ಆತನ ಕಡೆಗೆ ಎಸೆಯುವಳು. ಅವನು ಹಣ ತೆಗೆದುಕೊಂಡು ಹಾಗೇ ನಿಲ್ಲುವನು.)*

ಮಹಾರಾಣಿ : ಇನ್ನೇನಾದರೂ ಹೇಳಲಿಕ್ಕೆ ಇದೆಯೇ ಗುಣವಂತಾ?

ಗುಣವಂತ : ಹೌದು ಮಹಾರಾಣಿ. ಆಘಾತದ ಸುದ್ದಿ. ಮಹಾರಾಜರು ಕಾಡಿನಲ್ಲಿ ಸಿಕ್ಕ ಒಂದು ಹುಡುಗಿಯನ್ನು ಗಾಂಧರ್ವ ವಿಧಿಯಿಂದ ಮದುವೆ ಮಾಡಿಕೊಂಡರು.

ಮಹಾರಾಣಿ : *(ಆಗಾತಹೊಂದಿ)* ಏನೆಂದೆ? ನೀನು ಹೇಳುತ್ತಿರುವುದು ನಿಜವೆ?

ಗುಣವಂತ : ನಿಜ ಹೇಳುತ್ತಿದ್ದೇನೆ ಮಹಾರಾಣಿ. ಚಿಕ್ಕರಾಣಿಯವರ ಹೆಸರು ಪುಷ್ಪರಾಣಿಯಂತೆ. ಮಾಯ ಮಾಟ ಬಲ್ಲವರಂತೆ. ಬೇಕು ಬೇಕಾದಾಗ ಮರವಾಗುತ್ತಾರೆ; ಹೂವಾಗಿ ಬೀಗುತ್ತಾರೆ! ಬೇಡವಾದಾಗ ಪುನಃ ಹುಡುಗಿಯಾಗುತ್ತಾರೆ!

ಮಹಾರಾಣಿ : ಇದನ್ನೆಲ್ಲ ನಿನಗೆ ಯಾರು ಹೇಳಿದರು? ಮಹಾರಾಜರು ಯುದ್ಧಕ್ಕೆ ಬರಲಿಲ್ಲವೆ?

ಗುಣವಂತ : ನಾವು ಹೋಗಬೇಕಾದ ಅಗತ್ಯ ಬೀಳಲಿಲ್ಲ ಮಹಾರಾಣಿ. ಮರ ಕಡಿಯುತ್ತಿದ್ದ ವೈರಿ ಸೈನಿಕರನ್ನು ನಮ್ಮವರು ಸುಲಭವಾಗಿ ಓಡಿಸಿದರು. ಮಧ್ಯೆ ಉಪವನದಲ್ಲಿ ಹೊಸರಾಣಿಯವರ ಕಥೆ ನಡೆದುಹೋಯಿತು. ಹೊಸರಾಣಿಯ ಸ್ವಾಗತದ ಸಿದ್ಧತೆಯಾಗಲೆಂದು ತಮಗೆ ತಿಳಿಸಲು ಮಹಾರಾಜರು ನನ್ನನ್ನು ಅಟ್ಟಿದ್ದಾರೆ.

ಮಹಾರಾಣಿ : ಇಲ್ಲಿಗೂ ಬಂತೆ ನನ್ನ ದುರ್ದೈವ! ಈ ದುಃಖವನ್ನು ಯಾರೆದುರು ತೋಡಿ ಕೊಳ್ಳಲಿ? ಈ ಬಗ್ಗೆ ಇನ್ನೊಬ್ಬರ ಮುಂದೆ ಆಡಿಕೊಳ್ಳುವುದಕ್ಕೂ ನನಗೆ ನಾಚಿಕೆ ಆಗುತ್ತದೆ. ಯಾಕೆಂದರೆ ನಾನು ಮತ್ತು ನನ್ನ ಆಸೆ ಇಬ್ಬರೂ ಬಂಜೆಯರು. ಇವಳ್ಯಾರೋ ಕೊಂಚದವಳಲ್ಲ. ಮದ್ದು ಮಾಟಾ ಮಾಡಿ ಮಹಾರಾಜರನ್ನು ವಶೀಕರಣ ಮಾಡಿಕೊಂಡಿದ್ದಾಳೆ ಎಂದಾಯ್ತು. ಇಲ್ಲಿಯತನಕ ಬಂಜೆತನದ ಒಂದೇ ಸಂಕಟವಾಗಿತ್ತು. ಈಗ ಇವಳು ಬೇರೆ ಸೇರಿಕೊಂಡಳು. ವಿನಯೆ, ಕನಿಷ್ಠಾ-

*(ಇಬ್ಬರು ಸೇವಕಿಯರ ಪ್ರವೇಶ)*

ಮಹಾರಾಜರು ಅದ್ಯಾವಳೋ ಮಾಯಾವಿಯನ್ನು ಕಟ್ಟಿಕೊಂಡು ಬರುತ್ತಿದ್ದಾರಂತೆ, ಸ್ವಾಗತದ ಸಿದ್ಧತೆಯಾಗಲಿ.

*(ಇಬ್ಬರೂ ಸೇವಕಿಯರ ನಿರ್ಗಮನ)*

## ದೃಶ್ಯ-೪

ಮೇಳ : **ಗಂಧದ ವಾಸನೆ ಗಮ್ಮಂತ ಬಂದಾವು**
**ಬೀದಿಯಲಿ ಬರುವವರು ಯಾರು?**
**ಹಂಬಲದ ಹೂವುಗಳ ಜಡೆ ತುಂಬ ಮುಡಿದಾಕೆ**
**ಪುಷ್ಪರಾಣಿಯು ಹೌದೆ ಇವಳು?**
**ಹವಳದ ಹಲ್ಲೋಳು ಗಿಳಿಬಾಯ ತುಟಿಯವಳು**
**ದ್ವಾರಕ್ಕೆ ಬಂದವರು ಯಾರು?**
**ಸಾಲುಮುಖ ಮೊಗ್ಗರಳಿ ಹೂವಾಗಿ ನಗುತಾವೆ**
**ಪುಷ್ಪರಾಣಿಯು ಹೌದೆ ಇವಳು?**

*(ಹಾಡು ಮುಗಿಯುವಷ್ಟರಲ್ಲಿ ರಾಜ ಪರಿವಾರ ಸಮೇತ ಪುಷ್ಪರಾಣಿಯನ್ನ ಕರೆದುಕೊಂಡು ಅರಮನೆಯ ಮುಖ್ಯ ದ್ವಾರಕ್ಕೆ ಬರುವನು. ಮ ಹಾರಾಣಿ ದಾಸಿಯರ ಸಮೇತ ಎದುರುಗೊಳ್ಳಲು ಬಂದಿದ್ದಾಳೆ.)*

ಮಹಾರಾಜ : ಮಹಾರಾಣಿ ನಿನಗೊಬ್ಬ ತಂಗಿಯನ್ನು ತಂದಿದ್ದೇನೆ.

*(ಮಹಾರಾಣಿ ಎದುರುಗೊಳ್ಳುತ್ತ ಶಾಸ್ತ್ರ ಮಾಡುವಳು. ಪುಷ್ಪರಾಣಿಯನ್ನು ಒಳಕ್ಕೆ ಕರೆದೊಯ್ಯುವಳು)*

ಮೇಳ : **ಹೂವಿನ ರಾಣಿಯು ಸಂತೋಷಪಟ್ಟರೆ**
**ಅರಮನೆಗೆ ಜೀವ ಬಂತಲ್ಲ!**
**ಕಿರುಬೆವರು ಸೂಸುವ ಮುಖ ಎತ್ತಿ ನಕ್ಕರೆ**
**ಅರಮನೆ ಬೆಳಕಾಯಿತಲ್ಲ!**

*(ಅರಮನೆ ನೋಡಿ ಪುಷ್ಪರಾಣಿಗೆ ಭಾರೀ ಆಶ್ಚರ್ಯವಾಗಿದೆ. ಮುಗ್ಧ ಬೆರಗಿನಿಂದ ದಾಸಿಯರ ಸೀರೆ ಒಡವೆಗಳನ್ನು ಪರೀಕ್ಷಿಸುತ್ತಾಳೆ. ಆನಂದಪಡುತ್ತಾಳೆ. ಮಹಾರಾಣಿ ದೂರದಲ್ಲಿ ತನ್ನಷ್ಟಕ್ಕೇ ತಾನು ಮಾತಾಡಿಕೊಳ್ಳುತ್ತಾ ನಿಂತಿದ್ದಾಳೆ. ದಾಸಿಯರು ಪುಷ್ಪರಾಣಿಯ ಪೆದ್ದುತನಕ್ಕೆ ನಗುತ್ತಿದ್ದಾರೆ)*

ಪುಷ್ಪರಾಣಿ : *(ಕನಿಷ್ಠಳ ಆಭರಣ ತೋರಿಸಿ)* ನನಗೂ ಇದನ್ನ ಕೊಡೆ.

ಕನಿಷ್ಠಾ : ಅಯ್ಯಯ್ಯೋ ಇದೆಲ್ಲ ದಾಸಿಯರು ಧರಿಸುವಂಥಾದ್ದು, ನಿಮಗಲ್ಲ.

ಪುಷ್ಪರಾಣಿ : ದಾಸಿ ಅಂದರೇನು? *(ದಾಸಿಯರು ನಗುವರು)*

ಮಹಾರಾಣಿ : *(ತನ್ನಲ್ಲಿ ತಿರಸ್ಕಾರದಿಂದ)* ಇವಳೇ ಇನ್ನು ಮೇಲೆ ಮಹಾರಾಣಿ!

ಪುಷ್ಪರಾಣಿ : *(ವಿನಯೆಯ ಸೀರೆ ತೋರಿಸಿ)* ನನಗೂ ಇಂಥಾದ್ದು ಬೇಕು.

ವಿನಯೆ : ಆಹಾ ಇದು ಸೇವಕಿಯರು ಧರಿಸುವಂಥಾದ್ದು ನಿಮಗಲ್ಲ.

ಪುಷ್ಪರಾಣಿ : ಸೇವಕಿ ಅಂದರೇನು? *(ದಾಸಿಯರು ನಗುವರು)*

ವಿನಯೆ : *(ಪುಷ್ಪರಾಣಿಯನ್ನು ತೋರಿಸಿ)* ನೀವು ಮಹಾರಾಣಿ *(ತನ್ನನ್ನು ತೋರಿಸಿಕೊಳ್ಳುತ್ತ)*ನಾನು ಸೇವಕಿ.

*(ದಾಸಿಯರು ಭಾರೀ ನಗುವರು)*

ಮಹಾರಾಣಿ : *(ತನ್ನಲ್ಲಿ)* ನಗರೇ, ನಗರೇ ನನಗೆ ಮೋಸಮಾಡಿ ಇಂಥ ಮೃಗವನ್ನು ಕಟ್ಟಿ ಕೊಂಡವರಲ್ಲ ರಾಜರು, ಅವರನ್ನು ನೋಡಿ ನಗಿರಿ. *(ಪುಷ್ಪರಾಣಿ ದಾಸಿಯರನ್ನು ಬಿಟ್ಟು ಅರಮನೆಯ ವಿವರಗಳನ್ನು ನೋಡುತ್ತ ಚಲಿಸುತ್ತಿದ್ದಾಳೆ. ನೋಡ ನೋಡುತ್ತ ಮಡಕೆಯ ಅಡಕಲನ್ನು ಬೀಳಿಸಿ ಪೆಚ್ಚಾಗುವಳು. ದಾಸಿಯರು ಇನ್ನೂ ನಗುವರು. ರಾಜ ಪ್ರವೇಶಿಸುವನು)*

ರಾಜ : ಅದೇನು ಹಾಗೆ ಕಿವಿಯಿಂದ ಕಿವಿಯತನಕ ನಗುತ್ತಿದ್ದೀರಿ? ಮುಗ್ಧೆಯನ್ನು ಕಂಡು ನಗುವುದು ಅನಾಗರಿಕತೆ ಎಂದು ಗೊತ್ತಾಗುವುದಿಲ್ಲವೆ? ಇವಳು ಈ ರಾಜ್ಯದ ರಾಣಿ ಎನ್ನುವುದು ತಿಳಿಯದಿರಲಿ. ವಿನಯೆ, ಕನಿಷ್ಠಾ. ಪುಷ್ಪರಾಣಿಯನ್ನು ಕರೆದು ಕೊಂಡು ಹೋಗಿ ರಾಣಿಯ ವೇಷಭೂಷಣ ತೊಡಿಸಿ ಅರಮನೆಯ ಶಿಷ್ಟಾಚಾರ ಕಲಿಸಿರಿ. ಹೊರಡಿ.

*(ದಾಸಿಯರು ಪುಷ್ಪರಾಣಿಯನ್ನು ಕರೆದೊಯ್ಯುವರು. ರಾಜ ನಿರ್ಗಮಿಸುವನು)*

ಮಹಾರಾಣಿ : *(ತಿರಸ್ಕಾರದಿಂದ ತನ್ನಲ್ಲಿ)* ಮಹಾಮುಗ್ಧತೆ! ಅದರಲ್ಲಿ ತನ್ನೆಲ್ಲ ಮದ್ದುಮಾಟದ ದುರ್ಗುಣ ಮುಚ್ಚಿ ಬೀಗ ಹಾಕಿದ್ದಾಳೆಂದು ನನಗೆ ಗೊತ್ತಿಲ್ಲವೆ? *(ಹೋಗುವಳು)*

# ದೃಶ್ಯ-೫

*(ಅಂತಃಪುರ-ವಿನಯೆ, ಕನಿಷ್ಠಾ)*

ವಿನಯೆ : ಚಿಕ್ಕರಾಣಿ ಎಂಥಾ ಮುಗ್ಧರಪ್ಪಾ. ಏನು ಅಂದರೆ ಏನೂ ತಿಳಿಯುವುದಿಲ್ಲ ಅವರಿಗೆ. ಕೂಸಿನ ಕನವರಿಕೆ ಹಾಗೆ ಏನೇನೋ ಮಾತಾಡುತ್ತಾರೆ. ಕೇಳೋದಕ್ಕೆ ಆನಂದವಾಗುತ್ತದೆ, ಆದರೆ ಅರ್ಥವೇ ಆಗುವುದಿಲ್ಲ. ಅವರು ನಡೆದಾಡುವಾಗ
ಕೂಡ ಯಾವುದೋ ಹಾಡಿಗೆ ಕುಣಿತದ ಹೆಜ್ಜೆ ಹಾಕಿದಂತೆ ಇರುತ್ತದೆ.

ಕನಿಷ್ಠಾ : ಚಿಕ್ಕರಾಣಿಯ ನುಡಿ ಗಿಳಿಯಂತೆ. ನಡೆ ಹಂಸದಂತೆ, ನಿಂತರೆ ನವಿಲಂತೆ, ಕೂತರೆ ಕರಡಿಯಂತೆ-ಇದೇ ತಾನೇ ನೀನು ಹೇಳೋದು? ಈ ಎಲ್ಲ ನಯನ ಅಭಿನಯದ ಹಿಂದೆ ಯಾವುದೋ ಮಾಯೆ ಇದೆ ಕಣೆ.

ವಿನಯೆ : ಅದೇನು ಮಾಯೆ ಕಂಡಿಯೇ ಮಾರಾಯಳೆ?

ಕನಿಷ್ಠಾ : ಮಾಯೆ ಅಲ್ಲದಿದ್ದರೆ ಜಡೆ ಹಾಕಲಿಕ್ಕೂ ಬಾರದ ಕಾಡು ಹುಡುಗಿ ರಾಣಿಯಾಗು ವುದು ಸಾಧ್ಯವಿತ್ತೆ ಹೇಳು? ಮದ್ದು ಮಾಟ ಅನ್ನೋದು ಅದಕ್ಕೇ. ನಾನಿನ್ನೂ ನೋಡಿಲ್ಲ ನಿಜ. ಆದರೆ ಚಿಕ್ಕರಾಣಿ ಬಯಸಿದಾಗ ಮರವಾದುದನ್ನು ಮಂತ್ರಿಗಳೇ
ಕಣ್ಣಾರೆ ಕಂಡರಂತೆ. ಇನ್ನೂ ಏನೇನಾಗುತ್ತಾಳೋ.

ವಿನಯೆ : ಓಹೋ ಅದಕ್ಕೇ ಇರಬೇಕು ಪುಷ್ಪರಾಣಿ ಎಲ್ಲೇ ಹೋಗಲಿ, ಕೂರಲಿ, ನಿಂತಿರಲಿ, ಮಹಾರಾಣಿ ದೂರದಲ್ಲಿ ಅಡಗಿ ನಿಂತು ಗಮನಿಸುತ್ತಾರೆ. ಒಬ್ಬರ ಬಗ್ಗೆ ಅನುಮಾನ ಬಂದರಾಯಿತು. ಅವರಿಗೆ ಕೋರೆಹಲ್ಲು, ಕೊಂಬು, ಮೂಡಿದಂತೆಯೇ ಕಾಣಿಸುತ್ತದೆ. ಅದಕ್ಕೇ ನನಗೆ ಭಯವಾಗುವುದು.

ಕನಿಷ್ಠಾ : ಹಾಗೆ ಇದ್ದಿರಲೂಬಹುದನ್ನು. ಊಟದ ಮಧ್ಯೆ ಯಾರೋ ನಿನ್ನ ತಟ್ಟೆ ಕದ್ದೊಯ್ದರೆ ನಿನಗೇನಾಗುತ್ತದೆ ಹೇಳು?

ವಿನಯೆ : ಹಾಗಂತ ಅಷ್ಟು ದೊಡ್ಡವರು ತಾಳ್ಮೆ ಕಳೆದುಕೊಳ್ಳಬಹುದೇನೆ?

ಕನಿಷ್ಠಾ : ಅದು ನಿನ್ನ ಭ್ರಮೆ. ಮಹಾರಾಣಿಯವರು ಒಮ್ಮೆಯಾದರೂ ತಾಳ್ಮೆ ಕಳೆದು ಕೊಂಡಿದ್ದನ್ನು ನೋಡಿದ್ದೀಯಾ?

ವಿನಯೆ : ಚಿಕ್ಕರಾಣಿ ಕಣ್ಣ ಮುಂದೆ ಇದ್ದಾಗ ತಾಳ್ಮೆ ಕಳೆದುಕೊಂಡಿಲ್ಲಾ ನಿಜ. ಆದರೆ ದೂರದಿಂದ ಚಿಕ್ಕರಾಣಿಯನ್ನು ಕಂಡಾಗಗೆಲ್ಲ ತಮ್ಮ ವಸಡು ತಾವೇ ತಿನ್ನುತ್ತಾರೆ. ಬೈದರೂ ಬೈಗುಳೊಂದೂ ಚಿಕ್ಕರಾಣಿಗೆ ತಿಳಿಯೋದಿಲ್ಲವಲ್ಲಾ. ತಿಳಿಯದ್ದಕ್ಕೆ ನಗುತ್ತಾರೆ. ಮಹಾರಾಣಿ ಅಣಕಿಸಿ ನಕ್ಕರೆ ನಿಜವಾದ ನಗೆ ಅಂತಲೇ ನಂಬಿ ಅದಕ್ಕೆ ಚಿಕ್ಕರಾಣಿ ಸಂತೋಷ ಪಡುತ್ತಾರೆ. ನನಗಂತೂ ಅವರನ್ನು ಕಂಡು ಅಯ್ಯೋ ಪಾಪ ಅನಿಸುತ್ತದೆ.

ಕನಿಷ್ಠಾ : ನನಗೂ ಮಹಾರಾಣಿಯನ್ನು ಕಂಡು ಅಯ್ಯೋ ಅನಿಸುತ್ತದೆ. ಮಹಾರಾಣಿಯವರಲ್ಲಿ ಇಲ್ಲದ ಯಾವ ವಿಶೇಷ ಚಿಕ್ಕರಾಣಿಯಲ್ಲಿದೆ ಹೇಳು; ಮದ್ದು ಮಾಟಾ ಬಿಟ್ಟರೆ. ಒಂದು ನಯವೇ? ಒಂದು ವಿನಯವೇ? ಒಂದು ಸಂಗೀತವೇ? ಒಂದು ಸಂಸ್ಕೃತಿಯೇ? ಯಾವುದರಲ್ಲಿ ಚಿಕ್ಕರಾಣಿ ಮಹಾರಾಣಿಗೆ ಸಮ ಹೇಳು?

ವಿನಯೆ : ಮಾತಿನಲ್ಲಿ ವಿವೇಕವಿರಲಿ ಕನಿಷ್ಠಾ. ಸದ್ಯಕ್ಕೆ ಇಬ್ಬರು ರಾಣಿಯವರನ್ನೂ ದೇವರು ಮತ್ತು ಮಹಾರಾಜರು ಕಾಪಾಡಲಿ. (ಹೋಗುವರು)

## ದೃಶ್ಯ-೬

ಮೇಳ : **ಕೋಪದ ಬೆಂಕಿಯ ಮಾಡಿದಳು ರಾಣಿ**
**ಶಾಪದ ಸೀಮೆಎಣ್ಣೆಯ ಸುರಿದಳು**
**ಬುದ್ಧಿ ವಿವೇಕದ ಕೈಕಾಲು ಕಟ್ಟಿ**
**ಬೆಂಕಿಗೆ ಚೆಲ್ಲಿ ಸಂತಸಪಟ್ಟಳು!!**

ಮಹಾರಾಣಿ : ಸವತಿ ಮತ್ಸರದಿಂದ ನನ್ನ ಆತ್ಮ ಸುಡುತ್ತಿದೆ. ಪುಷ್ಪರಾಣಿ ಅರಮನೆ ಪ್ರವೇಶಿಸಿ ದಾಗಿನಿಂದಲೂ ನನ್ನ ಕಣ್ಣುರೆಪ್ಪೆಯ ಕಡೆಗೆ ನಿದ್ದೆ ಸುಳಿಯದಾಗಿದೆ. ಅವಳ ಮದ್ದು ಮಾಟದ ಕೋಟೆ ದಾಟಿ ಮಹಾರಾಜರನ್ನು ಹಿಡಿಯಬೇಕೆಂಬ ನನ್ನ ಆಸೆಗಳೂ ತಲೆಬಾಗಿ ಹಿಂದಿರುಗುತ್ತಿವೆ.

*(ವಿನಯೆ ಪ್ರವೇಶಿಸುವಳು)*

ವಿನಯೆ : ಮಹಾರಾಣಿ, ನಾಳೆಯ ಗಿಳಿ-ಗಿಡುಗನ ಆಟಕ್ಕೆ ರಣಹದ್ದು ಸಿದ್ಧವಾಗಿದೆಯಂತೆ, ಒಂದು ಬಾರಿ ತಾವು ನೋಡುತ್ತೀರಾ ಎಂದು ಗುಣವಂತ ಕೇಳುತ್ತಿದ್ದಾನೆ.

ಮಹಾರಾಣಿ : ಅಗತ್ಯವಿಲ್ಲ. ಈ ದಿನ ರಣಹದ್ದು ಉಪವಾಸವಿರಲೆಂದು ಹೇಳು.

ವಿನಯೆ : ಆದರೆ ಮಹಾರಾಣಿ ತಮ್ಮ ನಿನ್ನೆಯ ಆಜ್ಞೆಯಂತೆ ಅದಕ್ಕಾಗಲೇ ಅವನು ಒಂದು ಹಾವು ಬಡಿದು ಹಾಕಿದ್ದಾಗಿದೆ.

ಮಹಾರಾಣಿ : ಸರಿ ಬಿಡು. ಆ ನಿನ್ನ ಕಾಡುಮೃಗ ಎಲ್ಲಿ?

ವಿನಯೆ : *(ತಿಳಿಯದೆ)* ಮಹಾರಾಣಿ,

ಮಹಾರಾಣಿ : ಅಂದರೆ ಚಿಕ್ಕರಾಣಿ ಎಲ್ಲಿದ್ದಾಳೆ?

ವಿನಯೆ : ಗೊತ್ತಿಲ್ಲ ಮಹಾರಾಣಿ.

ಮಹಾರಾಣಿ : ಈಗ ಎಲ್ಲಿದ್ದಾಳೆ ಅವಳು? ಮಹಾರಾಜರ ಹೃದಯ ಪಂಜರದಲ್ಲೋ? ಅರಮನೆಯ ನೆಲದ ಮೇಲೋ?

*(ನಗುತ್ತಿರುವಾಗ ಕನಿಷ್ಠಾ ಬರಿದಾದ ಪಂಜರ ತಂದು ರಾಣಿಯ ಮುಂದಿರಿಸುವಳು)*

ಮಹಾರಾಣಿ : ಏನೇ ಅದು ಕನಿಷ್ಠಾ? ಖಾಲಿ ಪಂಜರ ತರುತ್ತಿದ್ದೀಯಾ. ಗಿಳಿಮರಿ ಏನಾಯ್ತು?

ಕನಿಷ್ಠಾ : ಅದನ್ನೇ ಹೇಳುವುದಕ್ಕೆ ಬಂದೆ ಮಹಾರಾಣಿ. ಚಿಕ್ಕರಾಣಿಯವರು ಹುಲ್ಲೆಮರಿ ಥರಾ ನೆಗೆಯುತ್ತಾ ಪಂಜರದ ಬಳಿಗೆ ಬಂದರು. ಗಿಳಿಮರಿಯನ್ನು ನೋಡಿದ್ದೆ -"ನೀನು ಉಪವನದಲ್ಲಿರೊ ಪಂಚರಂಗಿ ಮಗಳು ಹಣ್ಣು ಕುಟುಕಿ ಅಲ್ಲವೇನೆ"

ಅಂದರು. ಅದೇನೊ ಹೇಳ್ತು. ಆವಾಗಿವರು “ಲೇ ಹಣ್ಣು ಕುಟುಕಿ ನಿಮ್ಮಮ್ಮ ನಿನ್ನೆಯಷ್ಟೆ ಸಿಕ್ಕಿದ್ದಳು. ದಿನಾ ನಿನ್ನ ನೆನಸಿಕೊಂಡು ಅಳುತ್ತಾಳೆ” ಅಂತಂದಾಗ ಅದೂ ಅಳುವುದಕ್ಕೆ ಶುರುಮಾಡಿತು. ಇವರು ಸಮಾಧಾನ ಮಾಡಿದಷ್ಟೂ ಅದರ ಅಳು ಜೋರಾಯ್ತು. ಆಮೇಲೆ ಇಬ್ಬರೂ ಏನೇನೋ ತುಂಬ ಹೊತ್ತು ಮಾತಾಡಿಕೊಂಡರು. ಗಿಳಿಮರಿ ನಾಳೆಯ ಗಿಳಿ ಮತ್ತು ಗಿಡುಗನ ಆಟದ ವಿಷಯ ಹೇಳಿತೆಂದು ತೋರುತ್ತದೆ. ಆಗಂತೂ ಚಿಕ್ಕರಾಣಿ ಅಸಮಾಧಾನದಿಂದ ಇದೆಂಥಾ ಅನಾಗರಿಕ ಆಟವೆ ಅಂದರು.

ಮಹಾರಾಣಿ : ಏನು, ಅನಾಗರಿಕ ಆಟ ಅಂದಳೆ?

ಕನಿಷ್ಠಾ : ಹೌದು, ಮಹಾರಾಣಿ.

ಮಹಾರಾಣಿ : ಈ ಆಟ ಆಡಿಸುವವಳು ನಾನು ಮಹಾರಾಣಿ ಅಂತ ಹೇಳಲಿಲ್ಲವೆ?

ಕನಿಷ್ಠಾ : ಹೇಳಬೇಕೆಂದು ಮುಂದೆ ಬಂದೆ. ಆದರೆ ಅವರಿಬ್ಬರ ಸಂಭಾಷಣೆಯಲ್ಲಿ ನನಗೆ ಪ್ರವೇಶ ಸಿಕ್ಕಲಿಲ್ಲ. ಯಾಕೆಂದರೆ ನನಗೆ ಅವರ ಮಾತಿನ ಸ್ವಲ್ಪಾಂಶ ಮಾತ್ರ ಅರ್ಥವಾಯ್ತು.

ಮಹಾರಾಣಿ : ಸರಿ ಮುಂದೆ ಹೇಳು.

ಕನಿಷ್ಠಾ : ಆಮೇಲೆ ಚಿಕ್ಕರಾಣಿ ಪಂಜರದ ಬಾಗಿಲು ತೆಗೆದು ಮರಿಗಿಳಿಯನ್ನು ಹಾರಿಸಿ ಬಿಟ್ಟರು.

ಮಹಾರಾಣಿ : ಎಲಾ ಇವಳ ದುರಹಂಕಾರವೆ? ನನ್ನ ಆನಂದಗಳನ್ನು ಅರಮನೆಯಿಂದ ಹಾರಿಸಲಿಕ್ಕೆ ಇವಳ್ಯಾರು? ಇದು ಅತಿಯಾಯ್ತು. ಅರಮನೆಯಲ್ಲಿ ಅವಳಿರ ಬೇಕು ಇಲ್ಲಾ ನಾನಿರಬೇಕು. (ಪಂಜರ ಒದೆಯುವಳು) ಈಗ ಮಹಾರಾಜರೆಲ್ಲಿ? (ಹೊರಡುವಳು)

## ದೃಶ್ಯ-೭

ಮಹಾರಾಜ : ಪುಷ್ಪರಾಣಿ ಮಹಾರಾಣಿಯ ಗಿಳಿಮರಿಯನ್ನು ನೀನು ಹಾರಿಸಿ ಬಿಟ್ಟಿದ್ದು ತಪ್ಪಲ್ಲವೇ?

ಪುಷ್ಪರಾಣಿ : ಇದರಲ್ಲಿ ತಪ್ಪೇನಿದೆ ಪ್ರಭು? ಅದು ಅವಾಚ್ಯ ಶಬ್ದಗಳಿಂದ ನಿಮಗೂ ಅಕ್ಕನಿಗೂ ಶಾಪ ಹಾಕುತ್ತಿತ್ತು. ಅದರ ಮಾತು ತಿಳಿದಿದ್ದರೆ ನೀವು ಅದನ್ನು ಒಂದು ಕ್ಷಣವೂ ಅರಮನೆಯಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ.

ಮಹಾರಾಜ : ಅಂದರೆ? ಆ ಗಿಳಿ ನಿನಗೆ ಗೊತ್ತೆ?

ಪುಷ್ಪರಾಣಿ : ಹೌದು. ಅದು ನಮ್ಮ ಉಪವನದ ಗಿಳಿಮರಿ. ಅದರ ತಾಯಿಯೂ ನನಗೆ ಗೊತ್ತು. ಅಲ್ಲಿ ಉಪವನದಲ್ಲಿ ತಾಯಿಹಕ್ಕಿ, ಇಲ್ಲಿ ಮರಿಹಕ್ಕಿ ಇದ್ದರೆ ಹ್ಯಾಗೆ? ತಾಯಿಮಕ್ಕಳನ್ನು ಅಗಲಿಸಬಾರದು ಪ್ರಭು.

ಮಹಾರಾಜ : ಹೋಗಲಿ. ಪಂಜರ ತರಿಸಿಕೊಡುತ್ತೇನೆ. ಇನ್ನೊಂದು ಗಿಳಿಯನ್ನು ಹಿಡಿದು ಕೊಡುತ್ತೀಯಾ?

ಪುಷ್ಪರಾಣಿ : ಪಂಜರ ಯಾಕೆ ಬೇಕು ಪ್ರಭು? ನೀವು ಬಯಸಿದಾಗ ಅದೇ ನಿಮ್ಮಲ್ಲಿಗೆ ಬಂದು ಹಾಡಿ ಹೋಗುತ್ತದೆ. ಸಾಲದೆ? ಇವತ್ತು ಬೆಳಿಗ್ಗೆ ನಿನ್ನೆ ಬಿಟ್ಟ ಮರಿ  ಮತ್ತು ತಾಯಿಹಕ್ಕಿ ಎರಡೂ ಬಂದಿದ್ದವು. ಮರಿಯಂತೂ ಆಗಲೇ ಭತ್ತದ ತೆನೆ ಬಗ್ಗೆ ಒಂದು ಹಾಡು ಕಟ್ಟಿತ್ತು. ಅದನ್ನು ಕೇಳಿ ಎಷ್ಟು ಆನಂದವಾಯ್ತು ಅಂದರೆ..........

ಮಹಾರಾಜ : ನಿನಗೆ ಪಕ್ಷಿಗಳ ಭಾಷೆ ಅರ್ಥವಾಗುವುದೇ ದೇವಿ?

ಪುಷ್ಪರಾಣಿ : ಹೌದು.

ಮಹಾರಾಜ : ಒಂದು ದಿನ ನನಗೂ ಕೇಳಿಸುತ್ತೀಯಾ?

ಪುಷ್ಪರಾಣಿ : ಖಂಡಿತ.

*(ಹೊರಡುವರು.)*

## ದೃಶ್ಯ-೮

*(ಉದ್ಯಾನ. ಪುಷ್ಪರಾಣಿ ರಾಜನಿಗೆ ಹಕ್ಕಿ ಮತ್ತು ಮರಗಳನ್ನು ಪರಿಚಯಿಸುತ್ತ ಬರುವಳು)*

ಪುಷ್ಪರಾಣಿ : ಅದು ಪರಪುಟ್ಟ, ನನ್ನ ಸ್ನೇಹಿತ. ಚೆನ್ನಾಗಿ ಹಾಡುತ್ತಾನೆ. ನಿಮಗೆ ಶುಭವಾಗಲಿ ಎನ್ನುತ್ತಿದ್ದಾನೆ.

ಮಹಾರಾಜ : ಆಶ್ಚರ್ಯ! ಹಾಗಾದೆ ನಿನ್ನ ಸ್ನೇಹಿತನಿಗೆ ನನ್ನ ವಂದನೆ ಹೇಳು.

ಪುಷ್ಪರಾಣಿ : ಪ್ರಭು ಇವಳು ಪಂಚರಂಗಿ.

ಪಂಚರಂಗಿ : *(ಕೂಗುತ್ತದೆ)*

ಪುಷ್ಪರಾಣಿ : ಯಾಕೆ ಹಾಗೆ ಹೇಳುತ್ತಿರುವೆ?

ಪಂಚರಂಗಿ : *(ಕೂಗುತ್ತದೆ)*

ಪುಷ್ಪರಾಣಿ : ಅರಮನೆಯ ಸೆರೆಮನೆಯಲ್ಲಿದ್ದಳಂತೆ. ಅಕ್ಕನ ಬಗ್ಗೆ ನನ್ನಲ್ಲಿ ತಕರಾರು ಹೇಳುತ್ತಿದ್ದಾಳೆ.

ಪಂಚರಂಗಿ : *(ಕೂಗುತ್ತದೆ)*

ಪುಷ್ಪರಾಣಿ : ಇನ್ನು ಮೇಲೆ ಯಾರನ್ನೂ ಸೆರೆಯಲ್ಲಿಡಬಾರದಂತೆ. ಹಾಗಂತ ನಿಮ್ಮಲ್ಲಿ ವಿನಂತಿಯಂತೆ.

ಮಹಾರಾಜ : ವಿನಂತಿಯಲ್ಲ, ಆಜ್ಞೆಯಾಗಿ ಸ್ವೀಕರಿಸಿದ್ದೇನೆಂದು ಹೇಳು ದೇವಿ.

ಪುಷ್ಪರಾಣಿ : ಪ್ರಭು, ಅಲ್ಲಿ ನೋಡಿ ಹುಣಸೇಮರ. ಅಷ್ಟು ದೂರ ಇದ್ದರೂ ಇಲ್ಲಿ ನನ್ನ ಬಾಯಲ್ಲಿ ನೀರೂರುತ್ತಿದೆ. ಬನ್ನಿ ಅಲ್ಲಿರೋ ತಿಳಿಹಸಿರೆ ಕರೆಯುತ್ತಿದೆ.

*(ಹೋಗುವರು)*

ಪುಷ್ಪರಾಣಿ : ಲೇ ತಿಳಿಹಸಿರೆ, ಒಬ್ಬಳೇ ಕೂತ್ಕೊಂಡು ಏನು ಮಾಡ್ತಾ ಇದ್ದೀಯಾ?

ಗಿಳಿ : *(ಕೂಗುತ್ತದೆ)*

ಪುಷ್ಪರಾಣಿ : ನನಗೊಂದು ಹಣ್ಣು ಎಸೀತೀಯಾ?

ಗಿಳಿ : *(ಕೂಗುತ್ತದೆ)*

ಪುಷ್ಪರಾಣಿ : ಪ್ರಭು ಇದು ನನ್ನ ಗೆಳತಿ, ತಿಳಿಹಸಿರೆ. ಹುಣಸೇಹಣ್ಣು ತಿನ್ನೋದಕ್ಕೆ ಇಲ್ಲೀತನಕ ಬಂದಿದೆ. ನಿಮಗೆ ಅಭಿನಂದನೆ ಹೇಳುತ್ತಿದ್ದಾಳೆ.

ಮಹಾರಾಜ : ಅಭಿನಂದನೆ? ಯಾಕಾಗಿ ಹೇಳ್ತಾ ಇದ್ದಾಳೆ?

ಗಿಳಿ : *(ಕೂಗುತ್ತದೆ ಪುಷ್ಪರಾಣಿ ನಾಚಿ ಮುಖ ಮುಚ್ಚಿಕೊಳ್ಳುತ್ತಾಳೆ)*

ಮಹಾರಾಜ : ದೇವಿ. ಗಿಳಿ ಏನು ಹೇಳಿತು?

ಪುಷ್ಪರಾಣಿ : ಹೋಗಿ ಪ್ರಭು ನನಗೆ ನಾಚಿಕೆ.

ಮಹಾರಾಜ : ವಿಷಯವೇನೇಂಬುದೇ ತಿಳಿಯಲಿಲ್ಲವಲ್ಲ.

ಪುಷ್ಪರಾಣಿ : *(ನಾಚಿಕೆಯಿಂದ)* ಪ್ರಭು ನೀವು ಕೆಲವೇ ತಿಂಗಳಲ್ಲಿ ಯುವರಾಜನ ತಂದೆಯಾಗುತ್ತೀರಂತೆ.

ಮಹಾರಾಜ : ಹೌದೆ? ನನಗೆ ಯಾಕೆ ಹೇಳಲಿಲ್ಲ ನೀನು?

ಪುಷ್ಪರಾಣಿ : ನನಗೂ ಗೊತ್ತಿರಲಿಲ್ಲ. ಗಿಳಿ ಹೆಳಿದ್ದರಿಂದಲೇ ಗೊತ್ತಾಯಿತು. (ಪುನಃ ನಾಚಿಕೊಳ್ಳುವಳು. ರಾಜ ಅವಳನ್ನು ಪ್ರೀತಿಯಿಂದ ಕರೆದೊಯ್ಯುವನು. ಇಲ್ಲೀಯತನಕ ಅಡಗಿ ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ಮಹಾರಾಣಿ ಹೊರಬರುವಳು)

ಮಹಾರಾಣಿ : ಅಯ್ಯೋ ಅಯ್ಯೋ ಅಯ್ಯೋ! ಕೂದಲು ಕಿತ್ತುಕೊಳ್ಳಲೆ? ತಲೆಬುರುಡೆ ಜಜ್ಜಿಕೊಳ್ಳಲೆ? ಇನ್ನಿವಳನ್ನು ಹಿಡಿಯುವವರುಂಟೆ? ಮೊದಲೇ ಮದ್ದು ಮಾಟದ ಚೆಲುವೆ? ಇದೂ ಸಾಲದೆಂದು ನನ್ನ ಹೊಟ್ಟೆ ಉರಿಸೋಕೆ ಗರ್ಭಿಣಿ ಬೇರೆ
ಆಗಿಬಿಟ್ಟಳು. ಇನ್ನೂ ಕೇಳಬೇಕೆ? ಅಯ್ಯೋ ಅಯ್ಯೋ!

*(ಕೈಯಲ್ಲಿಯ ಹೂವಿನ ಮಾಲೆಯನ್ನು ಹಿಸುಕಿ ಎಸೆಯುತ್ತಾಳೆ.)*

ಸೂತ್ರಧಾರ : ಹಿಸುಕಬಾರದು ಹೂವ ಹಿಂಡಬಾರದು ದಂಡೆ. ದೇವರು ನಿಮಗೂ ಒಳ್ಳೆಯದನ್ನೂ ಮಾಡಲಿ ಮಹಾರಾಣಿ.

ಮಹಾರಾಣಿ : ದೇವರು ಇಂಥವಳಿಗೂ ಒಳ್ಳೆಯದನ್ನು ಮಾಡುತ್ತಾನೆಂದರೆ ನನಗವನ ಒಳ್ಳೆಯ ತನವೇ ಬೇಡ.

ಸೂತ್ರಧಾರ : ಏನೆಂದೆ ಮಹಾರಾಣಿ?

ಮಹಾರಾಣಿ : ಮನುಷ್ಯನಿಗೆ ಬರುವ ರೋಗಗಳೆಲ್ಲಾ ಇವಳ ಗರ್ಭಕ್ಕೆ ಬರಲಿ.

ಸೂತ್ರಧಾರ : ಶಾಂತಳಾಗು. ಕೋಪದಲ್ಲಿ ವಿವೇಕವನ್ನು ಸುಟ್ಟುಹಾಕಬೇಡ ತಾಯಿ.

ಮಹಾರಾಣಿ : ತಾಯಿ?

ಸೂತ್ರಧಾರ : ಹೌದು ತಾಯಿ. ಶಾಂತಳಾಗು ತಾಯಿ.

ಮಹಾರಾಣಿ : ಇನ್ನೆಲ್ಲಿಯ ಶಾಂತಿ. ದೇವರು ಮಾಡಿದ ಈ ಅನ್ಯಾಯವನ್ನು ನಾನಾದರೂ ಸರಿಪಡಿಲೇಬೇಕು.

*(ಹೊರಡುವಳು)*

ಮೇಳ : ಅಂದರೆ ಮಹಾರಾಣಿಯವರ ಸಿಟ್ಟಿನ್ನೂ ಕಡಿಮೆಯಾಗಿಲ್ಲವೆ?

ಸೂತ್ರಧಾರ : ಅದಾಗಲೇ ದೊಡ್ಡ ಪ್ರಾಣಿಯಾಗಿ ಬೆಳೆದು ಬೇಟೆಗೆ ಸಿದ್ದವಾಗಿದೆ. ಯಾರ್ಯಾರ ರಕ್ತ ಹೀರಲಿದೆಯೊ.....

ಮೇಳ : ಅಲ್ಲೀತನಕಾ ಬೇಕಾದಷ್ಟು ಸಮಯವಿದೆ. ಬನ್ನಿ.

## *ದೃಶ್ಯ-೬*

*(ರಾತ್ರಿ ಅಂತಃಪುರ. ಮಹಾರಾಣಿ ಹೊಟ್ಟೆಕಿಚ್ಚಿನಿಂದ ಉರಿಯುತ್ತಿದ್ದಾಳೆ. ವಿನಯೆಯ ಮುಖದಲ್ಲೂ ಆತಂಕವಿದೆ)*

ವಿನಯೆ : ಎಂದಿನಂತೆ ನಿಮ್ಮ ಮುಖ ಇಂದುಮಂಡಲದಂತೆ ಕಾಣುವುದಿಲ್ಲ.

ಮಾಹಾರಾಣಿ : ವಿಕಾರವಾಗಿದ್ದೇನೆಂದು ತಾನೆ ನೀನು ಹೇಳುವುದು? ದೀಪ ಚಿಕ್ಕದು ಮಾಡು.

ವಿನಯೆ : *(ದೀಪ ಸಣ್ಣದು ಮಾಡುತ್ತ)* ಇತ್ತೀಚೆಗೆ ನೀವು ಚೆನ್ನಾಗಿ ಊಟವನ್ನೇ ಮಾಡುತ್ತಿಲ್ಲ. ಹೀಗೆ ನಿಮ್ಮಲ್ಲಿ ನೀವೆ ಸಣ್ಣಗಾದರೆ ಹ್ಯಾಗೆ, ಮಹಾರಾಣಿ?

ಮಹಾರಾಣಿ : ಪುಷ್ಪರಾಣಿ ಗರ್ಭಿಣಿಯಾದಾಗಿನಿಂದ ನನ್ನ ಹಸಿವೆಯಷ್ಟೇ ಅಲ್ಲ, ನಿದ್ದೆಕೂಡ ಹಾರಿಹೋಗಿದೆ.

ವಿನಯೆ : ದೇವರು ಕಣ್ಣು ತೆರೆದರೆ ತಾವೂ ಕೂಡ-

ಮಹಾರಾಣಿ : ಅವನು ಕಣ್ಣು ತೆರೆಯೋತನಕ ಕಾಯೋಳಲ್ಲ ನಾನು. ಅವನ ಕಣ್ಣಿಗೆ ಈಗಲೇ ಬೆಂಕಿ ಸುರಿಯುತ್ತೇನೆ. ಅಗೊ ಕನಿಷ್ಠಾ ಬಂದಳೆಂದು ಕಾಣುತ್ತದೆ. ಬಂದನೇನೆ?

ಕನಿಷ್ಠಾ : *(ಬಂದು)* ಹೌದು ಮಹಾರಾಣಿ. *(ಗುಣವಂತ ಬರುವನು)*

ಮಹಾರಾಣಿ : ನೀನು ನಮ್ಮ ತಂದೆಯ ನಿಷ್ಠಾವಂತ ಸೇವಕನಾಗಿದ್ದೆ. ಸರಿತಾನೆ?

ಗುಣವಂತ : ಹೌದು ಮಹಾರಾಣಿ.

ಮಹಾರಾಣಿ : ಆದ್ದರಿಂದಲೇ ನಾನು ಹೆಣೆಯುತ್ತಿರುವ ಬಲೆಯಲ್ಲಿ ಒಂದು ಗಂಟಾಗುವ ಅವಕಾಶವನ್ನು ನಿನಗೆ ಕೊಡುತ್ತಿರೋದು.

ಗುಣವಂತ : ಸೇವಕ ಸಿದ್ಧನಿದ್ದೇನೆ ಮಹಾರಾಣಿ.

*(ಮಹಾರಾಣಿ ಸನ್ನೆ ಮಾಡುವಳು. ವಿನಯೆ, ಕನಿಷ್ಠಾ ಹೋಗುವರು)*

ಮಹಾರಾಣಿ : ಇದು ಗುಪ್ತ ವಿಚಾರ. ಗುಟ್ಟು ಕಾಪಾಡಬೇಕು. ಯಾರಿಗಾದರೂ ತಿಳಿದರೆ ತಲೆದಂಡ ತೆರಬೇಕಾಗುತ್ತದೆ.

ಗುಣವಂತ : ತಾವು ನನ್ನನ್ನು ನಂಬಬಹುದು, ಮಹಾರಾಣಿ.

ಮಹಾರಾಣಿ : ಇವತ್ತೇ ನನ್ನ ತಂದೆಯ ಬಳಿಗೆ ಹೋಗು. ಸ್ನೇಹಿತ ರಾಜರನ್ನು ಸೇರಿಸಿ ಈ ರಾಜ್ಯದ ಮೇಲೆ ದಂಡೆತ್ತಿ ಬಾ ಅಂತ ಹೇಳು.

ಗುಣವಂತ : *(ಆಶ್ಚರ್ಯದಿಂದ)* ಆದರೆ, ಮಹಾರಾಣಿ-

ಮಹಾರಾಣಿ : ಚಿಕ್ಕರಾಣಿ ಗರ್ಭಿಣಿಯಾದಾಗಿನಿಂದ ರಾಜನು ನನ್ನನ್ನು ತಿರಸ್ಕರಿಸಿದ್ದಾರೆ. ಅಷ್ಟೇ ಅಲ್ಲ, ಅವಳ ಮಾತು ಕೇಳಿಕೊಂಡು ನನ್ನನ್ನು ನೀರಿಗೆ ತಳ್ಳುವ ಯೋಚನೆ ಕೂಡ ಮಾಡುತ್ತಿದ್ದಾರೆಂದು ಹೇಳು. ತಡ ಮಾಡಿದರೆ ನನ್ನ ಹೆಣ ಕೂಡ ತಂದೆತಾಯಿಗಳಿಗೆ ಸಿಕ್ಕಲಾರದು ಅಂತ ಹೇಳು.

ಗುಣವಂತ : ಆದರೆ,

ಮಹಾರಾಣಿ : ಹೆದರಿಕೆಯೋ? ತಗೊ. *(ಹಣದ ಚೀಲವನ್ನು ಎಸೆಯುವಳು).* ಇದು ನಿನಗೆ ಬೇಕಾದಷ್ಟು ಧೈರ್ಯ ಕೊಡುವುದು. ಕೆಲಸವಾದ ಮೇಲೆ ಇನ್ನೂ ಬಹುಮಾನ ಇದೆ.

ಗುಣವಂತ : ರಾಜ್ಯದ ಮೇಲೆ ದಂಡೆತ್ತಿ ಬಂದರೆ ಏನು ಪ್ರಯೋಜನ ಎಂದು ರಾಜರು ಕೇಳಿದರೆ-

ಮಹಾರಾಣಿ : ಪ್ರಯೋಜನ ಏನು ಮತ್ತು ಅದನ್ನು ಹ್ಯಾಗೆ ಪಡೆಯಬೇಕೆಂದು ನನಗೆ ಗೊತ್ತು. ಇದರಲ್ಲಿ ಎಲ್ಲಾ ಬರೆದಿದ್ದೇನೆ. ಇದನ್ನ ತೆಗೆದುಕೊಂಡು ಹೋಗು.

*(ಪತ್ರಕೊಡುವಳು. ಗುಣವಂತ ಹೋಗುವನು)*

## ದೃಶ್ಯ-೧೦

ಸೂತ್ರಧಾರ : ಕಂದಾ ಮುಂದೇನಾಯ್ತುಪಾ ಅಂದರೆ-

ಮೇಳ : ಗೊತ್ತಾಯ್ತು ಬಿಡಿ,

ಸೂತ್ರಧಾರ : ಏನು ಗೊತ್ತಾಯ್ತು?

ಮೇಳ : ಯುದ್ಧ ಆಗಲಿಲ್ಲ.

ಸೂತ್ರಧಾರ : ಅಂದ್ರೆ?

ಮೇಳ : ಹೌದು ಗುರುವೆ. ಮಗಳು ತಂದೆಗೆ ಕಾಗದಾ ಬರೆದು ಗಂಡನ ಮೇಲೆ ದಂಡೆತ್ತಿ ಬಾ ಅಂದರೆ ಯಾವ ದಡ್ಡ ತಂದೆ ಬರತಾನೆ?

ಸೂತ್ರಧಾರ : ಹೌದೇನಪಾ?

ಮೇಳ : ಇಷ್ಟು ತಿಳಿಯೋಲ್ವೆ ಗುರುವೆ? ಗಂಡನ ಮೇಲೆ ದಂಡೆತ್ತಿ ಬಾ ಅಂತ ಯಾವ ಹೆಂಡತಿ ಹೇಳ್ತಾಳೆ? ಅವರಪ್ಪಾ ಅಂದುಕೊಳ್ಳುತ್ತಾನೆ; ಗಂಡಾ ಹೆಂಡಿರು ಜಗಳಾಡಿದ್ದಾರೆ. ಗಂಡ ಹೆಂಡಿರ ಜಗಳ ಉಂಡು ಮಲಗೋ ತನಕ. ಅಂದರೆ ಈ ಪತ್ರ ಕೈಸೇರಿರೋ ಹೊತ್ತಿಗೆ ಇಬ್ರೂ ಉಂಡು ಮಲಗಿರ್ತಾರೆ. ಜಗಳ ಮರೀತಾರೆ ಅಂದು ನಗಾಡ್ತಾನೆ ಅಷ್ಟೇ.

ಸೂತ್ರಧಾರ : ಕಂದಾ ಹಂಗಾಗಲಿಲ್ಲಪ್ಪಾ. ತಂದೆ ಮಗಳ ಪತ್ರ ಓದಿದ. ಮಗಳಿಗಾದ ಅನ್ಯಾಯ ನೆನೆದ. ಕರಂ ಕರಂ ಹಲ್ಲು ಕಡಿದ, ದವಡೆ ತಿಂದ, ಗೌಡಳಿಕೆ ಪಾಳೆಯಗಾರರು ಮಾಂಡಳಿಕ ಮಾನ್ಯರನ್ನು ಕರೆದ. ನಡೀರಯ್ಯಾ ಯುದ್ಧಕ್ಕೆ ಅಂದ. ಅಂದು ತಾನೂ ಬಂದೇಬಿಟ್ಟ.

ಮೇಳ : ಗುರುವೆ ಇದಕ್ಕೆ ನನ್ನ ತೀವ್ರವಾದ ವಿರೋಧ ಇದೆ ಅಂತ ಮಹಾರಾಣಿಯ ತಂದೆಗೆ ಹೇಳಲೇಬೇಕು.

ಸೂತ್ರಧಾರ : ನೀನು ಹೇಳೋದರಿಂದ ಅವನು ವಾಪಸ್ ಹೋಗೋದಿಲ್ಲಪ್ಪಾ.

ಮೇಳ : ಹಾಗಾದರೆ ಕೊನೆ ಪಕ್ಷ ನನ್ನ ವಿರೋಧವನ್ನು ನಿಮ್ಮ ಕಥೆಯಲ್ಲಿ ದಾಖಲಾದ್ರೂ ಮಾಡಿಕೋಬೇಕು. ಐ ವಾಂಟ್ ಜಸ್ಟೀಸ್.

ಸೂತ್ರಧಾರ : ಆಯ್ತುಪಾ ಮಾಡಿಕೊಳ್ಳೋಣ. ಮುಂದಿನ ಕತೆ ಕೇಳು. ಈ ಕಡೆ ಶಿವಾಪಟ್ಟಣದ ಮಹಾರಾಜರಿಗೆ ಆಶ್ಚರ್ಯವಾಗಿದೆ. ಎಲಾ ಮಂತ್ರಿ-

ಮೇಳ : ಮಹಾಪ್ರಭೂ.

ಸೂತ್ರಧಾರ : ಯಾವ ಸುಳಿವೂ ನೀಡದೆ ಮಾಂಡಲೀಕರು ಹೀಗೆ ದಂಡೆತ್ತಿ ಬರಬಹುದೇನಯ್ಯಾ ಮಂತ್ರಿ?

ಮೇಳ : ಬಂದಾಯಿತಲ್ಲಾ ಪ್ರಭೂ. ಆದರೆ ಇದು ಮಾಂಡಲೀಕರ ತಲೆ ಅಲ್ಲ. ಅವರ ತಲೆ ಹಿಂದೆ ಇನ್ಯಾರದೊ ತಲೆ ಇದೆ.

ಸೂತ್ರಧಾರ : ದಂಗೆ ಏಳಲಿಕ್ಕೆ ಅವರ ತಲೆ ಕಾರಣವಾಗಿರಲಿ ಇಲ್ಲಾ ಬಾಲ ಕಾರಣವಾಗಿರಲಿ ಈಗ ಯುದ್ಧ ಒಂದೇ ಉಪಾಯ. ಬೇಗನೆ ಸೈನ್ಯ ಸಜ್ಜಾಗಲಿ.

ಮೇಳ : ಆಗಲಿ ಪ್ರಭೂ.

ಸೂತ್ರಧಾರ : ಅಂತಾ ಹೇಳಿ ರಾಜರು ಪುಷ್ಪರಾಣಿಯಲ್ಲಿಗೆ ಹೊರಟು ನಿಂತರು. ಪುಷ್ಪರಾಣಿ ತುಂಬು ಬಸುರಿ. ಅರಮನೆ ಅಂಗಳದಲ್ಲಿ ತಂಗಾಳಿಯಾಗಿ ಆಡುವ ಕಂದ ಇಂದು ಬಂದಾನು ನಾಳೆ ಬಂದಾನು ಅಂತ ಕೂತಿರುವಲ್ಲಿಗೆ ಮಹಾರಾಜರು ಬಂದರು.

*(ಅಂತಃಪುರ, ಪುಷ್ಪರಾಣಿ, ಮಹಾರಾಣಿ ಇದ್ದಾರೆ. ಮಹಾರಾಜ ಬರುವನು)*

ಮಹಾರಾಜ : ಏಳಬೇಕಾದ ಅಗತ್ಯವಿಲ್ಲ ದೇವಿ. ಮಹಾರಾಣಿ ಇಲ್ಲೇ ಇದ್ದುದು ಅನುಕೂಲವೇ ಆಯ್ತು. ಮಾಂಡಳೀಕರು ನನ್ನ ಮೇಲೆ ದಂಡೆತ್ತಿ ಬಂದಿದ್ದಾರೆ. ಹೋಗಿ ಸದೆ ಬಡಿದು ಬೇಗನೇ ಬರುತ್ತೇನೆ. ಅಲ್ಲಿಯತನಕ ಪುಷ್ಪರಾಣಿಯನ್ನು ನಿಮ್ಮ ಕೈಗೆ ಒಪ್ಪಿಸಿದ್ದೇನೆ. ನಿಮ್ಮ ಜೀವದ ಹಾಗೆ ಇವಳನ್ನು ಕಾಪಾಡಬೇಕು.

ಮಹಾರಾಣಿ : ತಂಗಿಯ ಯೋಗಕ್ಷೇಮವನ್ನು ಅಕ್ಕನಿಗೆ ವಹಿಸಿಕೊಡೋದೇನು ಬಂತು ಪ್ರಭು? ಅದು ನನ್ನ ಕರ್ತವ್ಯ. ತಾವು ನಿಶ್ಚಿಂತರಾಗಿ ಹೋಗಿ.

ಪುಷ್ಪರಾಣಿ : *(ಆತಂಕದಿಂದ)* ಪ್ರಭು ನೀವು ಯುದ್ಧಕ್ಕೆ ಹೋಗಲೇ ಬೇಕೆ?

ಮಹಾರಾಣಿ : ಅದೇನು ಹಾಗೆ ಆತಂಕಪಡುತ್ತೀ ತಂಗೀ? ನಿನ್ನ ಸೌಭಾಗ್ಯ ಆತಂಕಗಳಲ್ಲಿ
ಭಾಗಿಯಾಗಲು ನಾನಿಲ್ಲವೆ? ಅಥವಾ ನೀನು ಬಯಸಿದರೆ ನಿನ್ನ ತೌರಿಗೂ
ಎರಡು ದಿನ ಹೋಗಿ ಬರಬಹುದು.

ಮಹಾರಾಜ : ಎಲ್ಲಿಗೂ ಹೋಗುವುದು ಬೇಡ. ಒಂದೆರಡು ದಿನಗಳಲ್ಲಿ ಬಂದು ಬಿಡುತ್ತೇನೆ.

*(ಕಣ್ಣೀರು ಸೂಸುವ ಪುಷ್ಪರಾಣಿಯನ್ನು ಸಂತೈಸಿ ರಾಜ ಹೊರಡುವನು. ಮಹಾರಾಣಿಯ ಮುಖದಲ್ಲಾಗಲೇ ಗೆಲುವು ಮೂಡಿದೆ.)*

## ದೃಶ್ಯ-೧೧

ಮೇಳ : **ಪಂಜರದ ಗಿಳಿಯೊಂದು ರಾಮ ರಾಮಾ ಎಂದು**
**ಒದರಿತ್ತು ಪಟಪಟ ರೆಕ್ಕೆ ಬಡಿದು**
**ಸೂರಿನಲಿ ಸುಳಿದಿತ್ತು ಸೀಳು ನಾಲಗೆ ಚಾಚಿ**
**ಹಸಿದಂಥ ಕಾಳಘಟಸರ್ಪವೊಂದು||**

**ಕಣ್ಣನೋಟದಲೇನೊ ಜೇಡಬಲೆ ಹೆಣೆದಿತ್ತು**
**ಹಲ್ಲಿ ಲೊಚಗುಡುತ್ತಿತ್ತು ಹೆದರಿಕೆಗೆ**
**ಉಸಿರುಗಟ್ಟಿದ ಗಾಳಿ ದೀಪ ಅಲುಗಿರಲಿಲ್ಲ**
**ಕಣ್ಣೊಳಗೆ ಬರೆದಿತ್ತು ಖಾಲಿ ಸೊನ್ನೆ||**

ಪುಷ್ಪರಾಣಿ : ಅಕ್ಕಾ ಮಹಾರಾಜರಿಂದ ಏನೂ ಸುದ್ದಿ ಬರುತ್ತಿಲ್ಲ. ನನಗೆ ತುಂಬಾ ಚಿಂತೆಯಾಗಿದೆ.

ಮಹಾರಾಣಿ : ಚಿಂತೆ ಮಾಡುತ್ತ ಕೂತರೇನು ಬಂತು? ಮಹಾರಾಜರು ಗೆಲ್ಲೋದರಲ್ಲಿ ಸಂದೇಹವೇ ಇಲ್ಲ. ಕನಿಷ್ಠಾ ವಿನಯೇ ನೀವಿಬ್ಬರೂ ತಂಗಿಯೊಡನೆ ಆಟ ಆಡಿ ಏನಾದರೂ ಮನರಂಜನೆ ಮಾಡಬಾರದೆ?

ಕನಿಷ್ಠಾ : ಅವರು ಯಾವುದಕ್ಕೂ ಒಪ್ಪುತ್ತಿಲ್ಲ ಮಹಾರಾಣಿ.

ಮಹಾರಾಣಿ : ತಂಗಿ ನೀನು ಬಯಸಿದಾಗ ಮರವಾಗುತ್ತೀಯಂತೆ, ಹೂಬಿಡುತ್ತೀಯಂತೆ. ಆ ಆಟವನ್ನಾದರೂ ನಮಗೆ ತೋರಿಸಬಾರದೆ?

ಪುಷ್ಪರಾಣಿ : ಬನ್ನಿ ತೋರಿಸುತ್ತೇನೆ.

*(ಮುಂದೆ ನಡೆಯುತ್ತಿರುವ ಪುಷ್ಪರಾಣಿಗೆ ಮೇಳ ಅಡ್ಡ ಬಂದು)*

ಮೇಳ : **ನೀಲಿಗಿಂತಾ ಹೆಚ್ಚು ನೀಲಿಯಾಗಿದೆ ಬಾನು**
**ಒಂದ್ಯಾಕೆ ಹೀಗೆಂದು ತಿಳಿಯಲಿಲ್ಲ|**
**ಬಿಳಿಚಿಕೊಂಡಿದೆ ಹಸಿರು ಭಾರವಾಗಿದೆ ನೆರಳು**
**ಹೋಗಬ್ಯಾಡಿರಿ ತಾಯಿ ಇಂದು ಮಾತ್ರಾ||**

ಮಹಾರಾಣಿ : ತುಂಬು ಗರ್ಭಿಣಿಯಾದ ನನ್ನ ತಂಗಿಯ ಸುಂದರ ಮುಖ ನೋಡಿ ಮುಗಿಲು ನೀಲಿಯೇರಿದೆ. ಎಳೆ ಬಿಸಿಲಿಗೆ ಹಸಿರು ಬಿಳಿಚಿಕೊಂಡಿದೆ. ಆದ್ದರಿಂದ ಹಾಗೆ ಕಾಣುವುದು ಸಹಜ. ಇವರ ಮಾತೇನು ಕೇಳುವುದು? ನಡೆ ತಂಗಿ ಹೋಗೋಣ.

*(ಮುಂದೆ ನಾಲ್ಕು ಹೆಜ್ಜೆ ಬರುವರು)*

ಮೇಳ : **ಗುರಿ ತಪ್ಪಿಸುವ ದಾರಿ ಕೈಮಾಡಿ ಕರೆಯುವದು**
**ನಿಟ್ಟುಸಿರು ಬಿಡುತಾವೆ ಗಾಳಿ|**
**ಮರಿ ಹಕ್ಕಿ ಇಂದ್ಯಾಕೋ ಅಡ್ಡ ಬರತಿದೆ ಕಿರುಚಿ**
**ಹೋಗಬ್ಯಾಡಿರಿ ತಾಯಿ ಮುಂದೆ||**

ಮಹಾರಾಣಿ : ಮನಸು ವಕ್ರ ಇದ್ದವರಿಗೆ ದಾರಿ ಗುರಿ ತಪ್ಪಿಸುತ್ತದೆ. ತಾಯಿ ಹಕ್ಕಿ ಇನ್ನೂ ಬಂದಿಲ್ಲವಾದ್ದರಿಂದ ಮರಿ ಹಕ್ಕಿ ಕಿರುಚುತ್ತಿದೆ. ಇವರ ಮಾತೇನು ಕೇಳುವುದು? ನಡಿ ತಂಗಿ ಹೋಗೋಣ.

*(ನಾಲ್ಕು ಹೆಜ್ಜೆ ಮುಂದೆ ಬರುವಳು)*

ಮೇಳ : **ನಮಗೆ ಬೇಕಾದಷ್ಟು ಗಾಯವಾಗಿದೆ ಎಂದು**
**ನಿಮಗೆ ಹೇಳಿರುವರೇ ಯಾರಾದರೂ|**
**ಈಗಲಾದರೂ ಕಾಡು ದಯಮಾಡಿ ಕಳುಹಿಸಲಿ**
**ಔಷಧಿಯ ಗಾಳಿಗಳ ನಾಲ್ಕು ಐದು||**

*(ಮುಂದೆ ಬರುವರು. ಮೇಳ ಹಿಂದೆ ಸರಿಯುವುದು)*

ಪುಷ್ಪರಾಣಿ : ಅಕ್ಕಾ ನಿನ್ನ ಕೈಗೆ ನಾಲ್ಕು ಹರಳು ಕೊಟ್ಟಿರುತ್ತೇನೆ. ಅವುಗಳಲ್ಲಿ ಒಂದನೇ ಕಲ್ಲನ್ನು ಎಸೆದರೆ ನಾನು ಮರವಾಗುತ್ತೇನೆ. ಎರಡನೆಯದನ್ನು ಎಸೆದರೆ ಮರ ಹೂ ಬಿಡುತ್ತದೆ. ಮೂರನೆಯದನ್ನು ಎಸೆದರೆ ಹೂಗಳು ಉದುರುತ್ತವೆ. ನಾಲ್ಕನೆಯದನ್ನು ಎಸೆದರೆ ಪುನಃ ನಿನ್ನ ತಂಗಿಯಾಗುತ್ತೇನೆ.

ಮಹಾರಾಣಿ : ಎಲ್ಲಿ ನೋಡೋಣ

*(ಪುಷ್ಪರಾಣಿ ದೂರದಲ್ಲಿ ನಿಲ್ಲುತ್ತಾಳೆ. ಮಹಾರಾಣಿ ಅವಳ ಮೇಲೊಂದು ಕಲ್ಲು ಎಸೆಯುತ್ತಾಳೆ. ಈಗ ಮೇಳ ಹಿಂದೆ ಹಾಡಿದ ಹಾಡನ್ನೇ ದುಃಖದಿಂದ ಹಾಡುತ್ತದೆ)*

**ತಾಯಿ ಆದವಳು ಕರಗಿ ಸಣ್ಣ ಮರ**
**ನಿಂತಿತಣ್ಣ ಎದುರು**
**ಶಿವಲೋಕದ ತಂಗಾಳಿ ಬೀಸತಾವ**
**ತೂಗತಾವ ಹಸಿರು||**

**ರೆಂಬೆ ನೋಡದರ ಕೊಂಬೆ ನೋಡ**
**ಒಡಮುರಿಯುತಾವ ಚಿಗುರ**
**ಹಾರಿಬಂದ ಮರಿ ಹಕ್ಕಿ ಚಿಲಿಪಿಲಿ**
**ಹಾಡತಾವ ಮಧುರ||**

ಕನಿಷ್ಠಾ : ನೋಡಿದಿರಾ ಮಹಾರಾಣಿ ಎಂಥಾ ಮದ್ದುಮಾಟದ ಚೆಲುವೆ.

ವಿನಯೆ : ಇಷ್ಟು ಸುಂದರವಾದ ಮರವನ್ನು ನಾನು ಇದುವರೆಗೆ ನೋಡಿಲ್ಲ. ಎಲ್ಲಿ ಮಹಾರಾಣಿ ಎರಡನ್ನೇ ಕಲ್ಲನ್ನು ಎಸೆಯಿರಿ.

*(ಮಹಾರಾಣಿ ಎರಡನೆಯ ಕಲ್ಲನ್ನು ಎಸೆಯುವಳು)*

ಮೇಳ : **ಅರಳಿದವಣ್ಣ ಸಾವಿರ ಹೂವ**
**ಮರದ ಮೈಯ ತುಂಬಾ**
**ಸಾವಿರ ದೀಪದ ಹಗಲ ದೀವಟಿಗಿ**
**ಅಕೋ ಚೈತ್ರ ಬಂದಾ||**

**ಹೂವಿನೆದೆಯ ಪರಿಮಳದ ಧೂಳಿಗೆ**
**ಕೆರಳತಾವ ದುಂಬಿ**
**ಪ್ರೀತಿಗೆ ಯಾಕೆ ಬೇಕು ಪೀಠಿಕೆ**
**ಬರಲಿ ಹೃದಯ ತುಂಬಿ||**

ವಿನಯೆ : ಅಬ್ಬಾ ನನ್ನ ಹೃದಯ ಕಾಡು ಹೂಗಳ ಹಾಗೆ ಅರಳಿದೆ. ಮಹಾರಾಣಿ ಮೂರನೆ ಕಲ್ಲು ಎಸೆಯಿರಿ.

*(ಮಹಾರಾಣಿ ಮೂರನೆ ಕಲ್ಲನ್ನು ಎಸೆಯುವಳು)*

ಮೇಳ : **ಆಕಾಶದ ಮರ ಅಲುಗಿ ತಾರೆ**
**ಧರೆಗುರುಳಿಧಾಂಗ ಆಗಿ|**
**ಹೂಗಳುದುರಿದುವು ಮಾಗಿಯ ಚಳಿಗೆ**
**ಹಣ್ಣೆಲೆಗಳು ನಡುಗಿ||**

**ನಮ್ಮ ಹಸಿರಿಗೆ ಅರಳಿದ ಹೂವ**
**ಯಾರೊ ಹರಿದರಲ್ಲ|**
**ನಮ್ಮ ಈ ಕಥೆಗೆ ಅರಳಿದ ಹಾಡನು**
**ಯಾರೊ ಕಿತ್ತರಲ್ಲ||**

ವಿನಯೆ : ಆನಂದದಿಂದ ಆತುರ ತಾಳದೆ ಹೇಳುತ್ತಿದ್ದೇನೆ. ಪುಷ್ಪರಾಣಿ ನಮ್ಮನ್ನು ಅಮೃತದ ಕೊಳದಲ್ಲಿ ಅದ್ದಿಬಿಟ್ಟಳು. ಬೇಗನೆ ಕೊನೆಯ ಕಲ್ಲು ಎಸೆಯಿರಿ ಮಹಾರಾಣಿ.

ಮಹಾರಾಣಿ : ನನಗೇ ಆಜ್ಞೆ ಮಾಡುತ್ತೀಯೇನೆ? ಎಲ್ಲಿ ಯವಾಗ ಏನು ಮಾಡಬೇಕೆಂದು ನನಗೆ ತಿಳಿಯದೆ? ಮದ್ದುಮಾಟ ಮಾಡಿ ಮಹಾರಾಜರನ್ನು ವಶೀಕರಣ ಮಾಡಿಕೊಂಡಿದ್ದಳಲ್ಲವೆ? ಅದ್ಯಾರು ಇವಳನ್ನ ಪುನಃ ಪುಷ್ಪರಾಣಿಯನ್ನಾಗಿ ಪರಿವರ್ತನೆ ಮಾಡುತ್ತಾರೋ ನೋಡೋಣ. ಕನಿಷ್ಠಾ ಮರಕಟುಕರನ್ನು ಕರೆಸಿ ಈ ಮರ ಕಡಿಸಿಬಿಡು.

ಮೇಳ : **ಚೀರಿದವೊ ಶಿವನೆ ಚೀರಿದವೊ**
**ಬೆಳೆಚಿದ್ದ ಕಾಡು ಕಿರುಚಿದವೊ**
**ನಂಬಿಕೆಯ ಮೈಲಿಗೆಗೊಳಿಸಿದ ದುಷ್ಟರಿಗೆ**
**ಶಿಕ್ಷೆ ಇಲ್ಲವೆ ಎಂದು ಕಿರುಚಿದವೊ||**

**ಬೀಸಿದವೊ ಗಾಳಿ ಬಿಸಿದವೊ**
**ನಿಟ್ಟುಸಿರ ಬಿಸಿಗಾಳಿ ಬಿಸಿದವೊ**
**ಗಾಳಿಯಲಿ ವಿಷಬೆರಸಿ ಕೊಲ್ಲುವ ಮಂದಿಗೆ**
**ಶಿಕ್ಷೆ ಇಲ್ಲವೆ ಎಂದು ಬಿಸಿದವೊ||**

**ಕೂಗಿದವೊ ದಿಕ್ಕು ಕೂಗಿದವು**
**ತಲೆ ಮ್ಯಾಲೆ ಕೈ ಹೊತ್ತು ಶಿವಾ ಎಂದವೊ**
**ಮಲ್ಲಿಗಿ ಹೂವನ್ನು ಮುಳ್ಳಿನ ಬೇಲಿಯಲಿ**
**ತುರುಕಿದ್ದು ನ್ಯಾಯವೆ ಹೇಳೆಂದವೊ||**

## ದೃಶ್ಯ-೧೨

ಮೇಳ : *(ಈ ಹಾಡನ್ನು ಮರಕಟುಕರು ಅಭಿನಯಿಸುತ್ತಾರೆ)*

**ಕೊಡಲಿ ಹಿಡಿದು ಕಡಿಯ ಬಂದರೋ**
**ಮರಕಟುಕರು ಓಡಿ**
**ಕಿಡಿಯ ಕಾರಿದರು ಕಣ್ಣೊಳಗಿಂದ**
**ಹಸಿರು ಮರವ ನೋಡಿ||**

**ಕೊಡಲಿಯ ಝಳಪಿಸಿ ಗುರಿಯ ಹಿಡಿದರೊ**
**ಮರವ ಕಡಿಯಲಿಕ್ಕೆ**
**ಎಲ್ಲೆಲ್ಲಿದ್ದವೋ ಹಕ್ಕಿ ಸಾವಿರ**
**ಬಂದವು ಹಿಂಡಾಗಿ||**

**ಕುಕ್ಕತಾವ ಮ್ಯಾಲೆರಗತಾವ ಅರೆ**
**ಮರಕಟುಕರ ನೆತ್ತಿ**
**ಹೊಂಚತಾವ ಹೊಡಮರಳಿ ನೋಡಿ**
**ಮ್ಯಾಲಕ್ಕೆ ಕೆಳಗೆ ಹಾರಿ**

*(ಅಂತಃ-ಮಹಾರಾಣಿ, ಮರಕಟುಕರು ಓಡಿ ಬರುತ್ತಾರೆ)*

ಮರಕಟುಕ ೧ : ಮಹಾರಾಣಿ, ಮಹಾರಾಣಿ ಕಾಪಾಡಬೇಕು, ಕಾಪಾಡಬೇಕು.

ಮಹಾರಾಣಿ : ಯಾರದು?

ಮರಕಟುಕ ೨ : ಮಹಾರಾಣಿ ಕಾಪಾಡಬೇಕು. ನೀವು ಹೇಳಿದ ಮರ ಕಡಿಯಲಿಕ್ಕೆ ಹೋದೊಡನೆ ಸಾವಿರಾರು ಕ್ರೂರ ಪಕ್ಷಿಗಳು ಬಂದು ನಮ್ಮ ನೆತ್ತಿಯನ್ನು ಕುಕ್ಕುತ್ತಿವೆ. ಮ್ಯಾಲಕ್ಕೆ ಏರಿ ವಿಚಿತ್ರ ಶಬ್ದ ಮಾಡುತ್ತ ನಮ್ಮನ್ನು ಸಿಕ್ಕಸಿಕ್ಕಲ್ಲಿ ಗಾಯ ಮಾಡುತ್ತಿವೆ.

ಮರಕಟುಕ ೧ : ಮರದಡಿ ಕಾಡಿನ ಕ್ರೂರ ಪ್ರಾಣಿಗಳೆಲ್ಲ ಕೂಡಿ, ಅದರ ಸಮೀಪಕ್ಕೆ ನಾವು ಬರದ ಹಾಗೆ ಹೆದರಿಸುತ್ತಿವೆ. ಓಡಿ ಆಸರೆಯ ಮರೆಗೆ ನಿಂತರೆ, ದೂರದಲ್ಲಿ ನಿಂತು ಎರಗುವುದಕ್ಕೆ ಹೊಂಚುತ್ತಿವೆ. ಮರ ಕಡಿಯುವದಿರಲಿ ಅರಮನೆಗೆ ಓಡಿ ಬರುವುದೇ ಕಷ್ಟಕರವಾಯಿತು. ನೀವೇ ಕಾಪಾಡಬೇಕು.

ಮಹಾರಾಣಿ : ಹಕ್ಕಿಗಳಿಗೆ ಹೆದರುವಂಥವರು ನೀವೆಂಥ ಮರಕಟುಕರು?

ಮರಕಟುಕ ೧ : ಪಕ್ಷಿಗಳು ನಮ್ಮನ್ನು ಜೀವಂತವಾಗಿ ಬಿಡುವ ಹಾಗೆ ಕಾಣೆವು ಮಹಾರಾಣಿ. ನಾವು ಅವುಗಳ ವೈರಿಗಳೆಂಬಂತೆ ಕ್ರೂರವಾಗಿ ಕೊಕ್ಕು ತೆರೆದು ಇರಿಯುವ ದೃಷ್ಟಿಗಳನ್ನು ಬೀರಿ ನಮ್ಮನ್ನು ಹೆದರಿಸುತ್ತಿವೆ. ಕಾಪಾಡಬೇಕು. ನಮ್ಮನ್ನು ಹೊರಕ್ಕೆ ತಳ್ಳಿ ನಮ್ಮ ಜೀವದ ಜೊತೆ ಆಟವಾಡಬೇಡಿ ತಾಯಿ.

ಮಹಾರಾಣಿ : ಪುಕ್ಕಲು ಹೃದಯಿಗಳು ನೀವು. ಮರಕಡಿಯದೆ ಹೇಡಿಗಳಾಗಿ ಓಡಿಬಂದನಿಮಗೆ ಆಸರೆ ನೀಡುವುದು ಅರಮನೆಗೆ ಅವಮಾನ. ಹೊರಡಿ.

*(ಮರಕಟುಕರು ಹೋಗುವರು)*

## ದೃಶ್ಯ-೧೩

ಸೂತ್ರಧಾರ : ಆಯಿತಲ್ಲಪ್ಪಾ ಕಂದಾ. ಕಾಡಿನ ಪ್ರಾಣಿ ಪಕ್ಷಿಗಳು ಈಗ ಅರಮನೆಯ ಸುತ್ತ

ಘೇರಾವೋ ಮಾಡಿವೆ. ಒಳಗಿದ್ದವರು ಹೊರಕ್ಕೆ ಹೋಗುವ ಹಾಗಿಲ್ಲ; ಹೊರಗಿದ್ದವರು ಒಳಕ್ಕೆ ಹೋಗುವ ಆಗಿಲ್ಲ.

ಮೇಳ : ಗೃಹಬಂಧನ ಅನ್ನಿ.

ಸೂತ್ರಧಾರ : ಅರಮನೆಯಲ್ಲಿ ಮಹಾರಾಜರಿಲ್ಲ. ಪಟ್ಟಣದಲ್ಲಿ ಮಂತ್ರಿ ಸೇನಾಪತಿ ಸೈನಿಕರಿಲ್ಲ. ಅಂದರೆ ಒಳಗೂ ಹೊರಗೂ ಹೇಳಕೇಳವ್ರು ಯಾರೂ ಇಲ್ಲ. ಮಹಾರಾಣಿ ಇದ್ದರೂ ಆಕೆಯ ಮಾತು ಕೇಳೋದಕ್ಕೆ ಪಶುಪಕ್ಷಿ ತಯಾರಿಲ್ಲ. ಈಗ ಕಥೆ ಹ್ಯಾಗಪ್ಪ ಮುಂದುವರಿಸೋದು?

ಮೇಳ : ಅದೂ ನಿಜವೇ. ಗುರುವೆ, ನೀವೇ ಹೋಗಿ ಅವುಗಳಿಗೆ ಬುದ್ಧಿ ಹೇಳಬಹುದಲ್ಲ?

ಸೂತ್ರಧಾರ : ಹೌದಪ್ಪ, ಪುಷ್ಪರಾಣಿಯನ್ನು ಮರಮಾಡಿ ಹೋಗುವಾಗ ನೀವ್ಯಾಕೆ ಸುಮ್ಮನಿದ್ದಿರಿ ಅಂದರೆ?

ಮೇಳ : ನಾವೆಲ್ಲಿ ಸುಮ್ಮನಿದ್ದೆವು? ಕರುಳು ಕಿತ್ತು ಬರುವ ಹಾಗೆ ಹಾಡು ಹೇಳಿದೆವಲ್ಲ?

ಸೂತ್ರಧಾರ : ನೀನು ಹಾಡು ಹೇಳೋದರಿಂದ ಮರವಾದ ಪುಷ್ಪರಾಣಿ ಮನುಷ್ಯಳಾಗಲಿಲ್ಲವಲ್ಲ?

ಮೇಳ : ಅದು ನಮ್ಮ ಕೈಯಲ್ಲಿ ಇಲ್ಲವಲ್ಲ ಗುರುವೇ?

ಸೂತ್ರಧಾರ : ಹಾಗಾದರೆ ಹಿಂದೆ ಸರಿ.

ಮೇಳ : ಹಾಗೂ ಪಶು ಪಕ್ಷಿಗಳು ನಮ್ಮನ್ನು ಬಿಡಬೇಕಲ್ಲ ಗುರುವೆ? ನಮ್ಮನ್ನೇ ತಿನ್ನುವ ಹಾಗೆ ನೋಡ್ತಾ ಇವೆ!

ಸೂತ್ರಧಾರ : ಇರು ಇರು. ಒಂದು ಗಿಳಿಮರಿ ಸಂಧಾನಕ್ಕಾಗಿ ನಮ್ಮ ಕಡೆ ಬರುವಂತಿದೆ. ಏನು ಹೇಳುವುದೋ ಕೇಳೋಣ.

*(ಗಿಳಿಮರಿಯ ಪ್ರವೇಶ)*

ಗಿಳಿಮರಿ : ನಮಸ್ಕಾರ. ಪುಷ್ಪರಾಣಿಗೆ ನೀವು ಸಂಬಂಧಪಟ್ಟವರಾ?

ಮೇಳ : ಹೌದು. ನಾವೇ ಆಕೆಯ ಕಥೆ ಹೇಳುವ ಕಥೆಗಾರರು.

ಗಿಳಿಮರಿ : ಹಾಗಿದ್ದರೆ ಕೇಳಿ: ಪುಷ್ಪರಾಣಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಸಂಬಂಧಪಟ್ಟವರಿಗೆ ತಿಳಿಸಿ.

ಸೂತ್ರಧಾರ : ಸಿಹಿ ತಿಂದಷ್ಟು ಸಂತೋಷವಾಯಿತಪ್ಪ ಗಿಣಿರಾಮ. ಕಂದಾ ಕಥೆಗಾರರಾದ ನಮಗೇ ಇಷ್ಟು ಸಂತೋಷವಾಗಬೇಕಾದರೆ, ರಾಜ ರಾಣಿಯರಿಗೆ ಎಷ್ಟು ಸಂತೋಷವಾಗಬೇಡ! ಪ್ರಜೆಗಳಿಗೆಷ್ಟು ಸಂತೋಷವಾಗಬೇಡ!

ಮೇಳ : ಇಲ್ಲೇ ನೀವು ತಪ್ಪೋದು ಗುರುವೆ. ಈ ಸಂತೋಷ ಯಾರಿಗೂ ಬೇಡ ಅಂತ ತಾನೇ ಮಹಾರಾಣಿ ಪುಷ್ಪರಾಣಿಯನ್ನು ಮರ ಮಾಡಿದ್ದು?

ಸೂತ್ರಧಾರ : ಆದರೆ, ಮಹಾರಾಣಿಯೂ ಹೆಂಗಸಲ್ಲವೇನಪ್ಪ?

ಮೇಳ : ಅದಕ್ಕೇ ಸವತಿ ಮತ್ಸರ ಬಂದಿರೋದು.

ಸೂತ್ರಧಾರ : ಆಕೆಯೂ ತಾಯಿ ಅಲ್ವೇನಪ್ಪ?

ಮೇಳ : ಅದಲ್ಲದ್ದಕ್ಕೇ ಇಷ್ಟೆಲ್ಲಾ ಕಥೆ ನಡೆದಿರೋದು.

ಸೂತ್ರಧಾರ : ಕಂದಾ-ನಮ್ಮ ಕಥೆ ತಪ್ಪು. ಆಕೆ ಬಂಜೆತನದಿಂದ ಮೇಲೆ ತಾಯಿತನದ ಅಪೇಕ್ಷೆ ಆಕೆಯಲ್ಲಿ ಎರಡು ಪಟ್ಟು ಇರುತ್ತದೆ.

ಮೇಳ : ಅದು ಎರಡು ಪಟ್ಟು ಕೆರಳಿಯೇ ನಿಮ್ಮ ಕಥೆ ಹೀಗಾಯಿತು.

ಸೂತ್ರಧಾರ : ಕಂದಾ, ಇಲ್ಲಿಯತನಕ ಆಕೆಯಲ್ಲಿ ಸವತಿ ಮತ್ಸರ ಮಾತ್ರ ಕೆರಳಿತ್ತು. ಈಗ ಎರಡು ಪಟ್ಟು ತಾಯ್ತನ ಕೆರಳಿಸಬೇಕು.

ಮೇಳ : ಅಂದರೆ ಆಕೆಗೆ ಜವಳಿ ಮಕ್ಕಳಾಗಬೇಕು?

ಸೂತ್ರಧಾರ : ಕೊಡೋನು ಶಿವಲಿಂಗಸ್ವಾಮಿ. ನಾವು ಅವನ ಸೀಮೆ ಪ್ರವೇಶ ಮಾಡೋದು ಬೇಡ. ನಾವು ಒಂದು ಟ್ರಿಕ್ ಮಾಡೋಣ. ಪುಷ್ಪರಾಣಿಯ ಮಗನನ್ನೇ ಆಕೆ ತನ್ನ ಮಗ ಎಂದು ಒಪ್ಪಿಕೋಬೇಕು.

ಮೇಳ : ಹ್ಯಾಗೆ?

ಸೂತ್ರಧಾರ : ಹೀಗೆ: ಮಹಾರಾಣಿ ಒಂದು ಸುಂದರವಾದ ಕನಸು ಕಾಣೋ ಹಾಗೆ ಮಾಡೋಣ. ಕನಸಿನಲ್ಲಿ ಆಕೆಗೆ ಇಷ್ಟವಾದ ಗಿಳಿಗಿಡುಗನ ಆಟ ಆಡಲಿ. ಗಿಣಿರಾಮ ಆಕೆಯ ಕನಸಿನಲ್ಲಿ ನಿನಗೂ ಒಂದು ಪಾತ್ರ ಇದೆ, ಮರೆಯಬೇಡಪ್ಪಾ.

ಗಿಳಿಮರಿ : ಓಹೊ.

ಸೂತ್ರಧಾರ : ಕನಸಿನಲ್ಲಿ ಮಹಾರಾಣಿಯ ತಾಯ್ತನ ಕೆರಳುವ ಹಾಗೆ ಮಾಡಬೇಕು. ಕಂದಾ ರಾತ್ರಿಯಾಯ್ತು ಮಹಾರಾಣಿಯವರು ಮಲಗಿರುವರೋ ನೊಡು.

ಮೇಳ : *(ನೋಡಿ)* ಓಹೊ.

ಸೂತ್ರಧಾರ : ಈಗ ಗಿಳಿಗಿಡುಗ ನಾಟಕದ ಕನಸು-ಸುರು ಮಾಡಿ………….

ಮೇಳ : **ಬ್ಯಾಡ ಬ್ಯಾಡ ಹೋಗಬ್ಯಾಡ| ನಮ್ಮ ಮರಿ|**
**ಗೂಡ ಬಿಟ್ಟು ಹೋಗಬ್ಯಾಡ**
**ಕಟ್ಟಿದಾವ ದಟ್ಟ ಮೋಡ| ಮೋಡದಾಗ|**
**ತೂಗ್ಯಾಡತಾವ ಕರಿನೆರಳ**
**ಮ್ಯಾಲನೋಡ ಹಾಳ ಗಿಡುಗ| ಗಿಡುಗನ ಕಣ್ಣು|**
**ಹರಿದಾಡತಾವ ನಿನ್ನ ಮ್ಯಾಗ.**

*(ಅರಮನೆಯಂಗಳ-ಮಹಾರಾಣಿ, ಕನಿಷ್ಠಾ)*

ಕನಿಷ್ಠಾ : ಮಹಾರಾಣಿ ಮಹಾರಾಣಿ, ಅದೋ ನೋಡಿ ಅಂಗಳದಲ್ಲಿ ರೆಕ್ಕೆ ಬಲಿಯದ ಎರಡು ಗಿಳಿಮರಿ ಹಾರಲಿಕ್ಕೆ ಕಲಿಯುತ್ತಿವೆ.

ಮಹಾರಾಣಿ : ಅಗೋ ಮ್ಯಾಲೆ ನೋಡೇ, ಗಿಡುಗ ನೀಲಿ ಆಕಾಶದಲ್ಲಿ ಮೊರದಂಥ ರೆಕ್ಕೆ ಕೆದರಿ ಹೊಂಚುತ್ತ ಹಾರುತ್ತಿದೆ.

ಕನಿಷ್ಠಾ : ತಾಯಿ ಗಿಳಿ ಮತ್ತು ಉಳಿದ ಹಕ್ಕಿಗಳು ಮರಿಗಳನ್ನು ಕಾಪಾಡಲಿಕ್ಕಾಗದೆ ಗಿಡುಗನನ್ನು ಎದುರಿಸಲಿಕ್ಕೂ ಆಗದೆ, ಹತಾಶೆಯಿಂದ ಹ್ಯಾಗೆ ಕಿರುಚುತ್ತಿವೆ ನೋಡೇ!

ಮಹಾರಾಣಿ : ಅಗೋ ಅಗೋ ಎರಗುತ್ತಿದೆ!

ಕನಿಷ್ಠಾ : ಅಗೋ ಎರಗಿತು!

ಮಹಾರಾಣಿ : ಅಬ್ಬಾ! ನಾವು ಸಾಕಿದ ಗಿಡುಗ ಕೂಡಾ ಇಷ್ಟು ರಭಸ ಮತ್ತು ವೀರಾವೇಶದಿಂದ ಎರಗುತ್ತಿರಲಿಲ್ಲ.

ಮಹಾರಾಣಿ : ಗಿಡುಗ ಯಾಕೆ ಇನ್ನೂ ಗಿಳಿಮರಿಯನ್ನು ಹಿಡಿಯುತ್ತಿಲ್ಲ?

ಕನಿಷ್ಠಾ : ಎರಡು ಮರಿ ಇರೋದರಿಂದ ಯಾವುದನ್ನು ಮೊದಲು ಹಿಡಿಯಬೇಕೆಂದು ಅದಕ್ಕೂ ಗೊಂದಲವಾಗಿದೆ. ಅಗೋ ಮರಿಗಳು ನಿಮ್ಮ ಕಡೆಗೇ ಬರುತ್ತಿವೆ. ನೋಡಿ, ನೋಡಿ, ಬಂದೇಬಿಟ್ಟವು.

*(ಗಿಳಿಮರಿಗಳೆರಡೂ ಮಹಾರಾಣಿಯ ತೊಡೆಯ ಮೇಲೇರುತ್ತವೆ.)*

ಮಹಾರಾಣಿ : ಅರೆ, ಎರಡೂ ಬಂದು ನನ್ನ ತೊಡೆಯ ಮೇಲೇ ಕೂತವಲ್ಲ!

ಕನಿಷ್ಠಾ : ಮಹಾರಾಣಿ ಅದೋ ಗಿಡುಗ ದೂರದಲ್ಲಿ ಕೂತು ಹೊಂಚುತ್ತಿವೆ. ನೀವೇ ಒಂದೊಂದನ್ನೇ ಹಿಡಿದು ಗಿಡುಗನತ್ತ ಎಸೆಯಿರಿ.

ಮಹಾರಾಣಿ : ಹೌದು, ಇಗೋ.

*(ಅವಳು ಎಸೆಯಬೇಕೆನ್ನುವಷ್ಟರಲ್ಲಿ)*

ಗಿಳಿ ೧ : ಅಮ್ಮಾ!

ಮಹಾರಾಣಿ : ಏನು?

ಗಿಳಿ ೨ : ಅಮ್ಮಾ!

ಮಹಾರಾಣಿ : ಆಶ್ಚರ್ಯ!

ಗಿಳಿ ೧ : ಅಮ್ಮಾ ನಮ್ಮನ್ನು ಕಾಪಾಡು ತಾಯಿ.

ಗಿಳಿ ೨ : ಅಮ್ಮಾ ನಮ್ಮನ್ನು ಈ ಗಿಡುಗನಿಂದ ಕಾಪಾಡವ್ವ.

ಮಹಾರಾಣಿ : ಆಶ್ಚರ್ಯ! ಮಕ್ಕಳ ಹಾಗೆ ತೊದಲಿ ನನಗೇ'ಅಮ್ಮಾ' ಎನ್ನುತ್ತಿವೆ. ಕೇಳಿದೆಯೇನೆ ಕನಿಷ್ಠಾ?

ಕನಿಷ್ಠಾ : ನನಗೆ ಕೇಳಿಸಲೇ ಇಲ್ಲವಲ್ಲ?

ಮಹಾರಾಣಿ : ನಿನ್ನ ಹೃದಯ ಬತ್ತಿ ಹೋಗಿದೆಯೇನೆ? ಕೇಳು.

ಗಿಳಿ : ಅವ್ವಾ ನಮ್ಮನ್ನು ಕಾಪಾಡುತಾಯಿ.

ಕನಿಷ್ಠಾ : ಅರಮನೆ ಸಹವಾಸದಿಂದ ಮನುಷ್ಯರ ಮಾತು ಕಲಿತಿವೆ. ಅಗೋ ಗಿಡುಗ ಹೊಂಚಿ ಹೊಂಚಿ ನಿರಾಶೆ ಹೊಂದಿ ಹಾರಿ ಹೋಗುವ ಮೊದಲೇ ಮತ್ತೆ ಆಟ ಶುರು ಮಾಡಿ ಮಹಾರಾಣಿ.

ಮಹಾರಾಣಿ : ಆಟ ಶುರು ಮಾಡು ಅಂತೀಯಾ?

ಗಿಳಿ : ಅಮ್ಮಾ

ಮೇಳ : **ಅಮ್ಮಾ ತಾಯಿ ಹಡೆದಮ್ಮ**
**ಮಕ್ಕಳು ನಮ್ಮ ಪೊರೆಯಮ್ಮ**

ಮಹಾರಾಣಿ : ಗಿಳಿಮರಿಗಳ ನುಡಿಗಳಿಗೆ ನನ್ನ ಹೃದಯದ ಮೊಗ್ಗರಳಿ ಹೂವಾದ ಅನುಭವವಾಗುತ್ತಿದೆ. ಗಿಳಿಮರಿಗಳ ಹಸಿರಾದ ಹಾಡಿನಲ್ಲಿ ನಾನು ಮುಳುಗಿ ಹೋಗುತ್ತಿದ್ದೇನೆಂದು ಅನ್ನಿಸುತ್ತಿದೆ
ಮೇಳ : **ಅಮ್ಮಾ ತಾಯಿ ಹಡೆದಮ್ಮ**
**ಮಕ್ಕಳು ನಮ್ಮ ಪೊರೆಯಮ್ಮ**

ಮಹಾರಾಣಿ : ನನ್ನ ಮೇಲೆ ಆನಂದದ ಮಳೆ ಸುರಿಯುತ್ತಿದೆ! ಹೂತು ಹೋದದ್ದು ಹೊರಬಂದು ಗೋಚರವಾಗುತ್ತಿದೆ. ಹೋದ ಜನ್ಮದಲ್ಲಿ ಇವು ನನ್ನ ಮಕ್ಕಳಾಗಿದ್ದುವೇ? ಎಂದು ಅನುಮಾನ ಬರುತ್ತಿದೆ!

ಮೇಳ : **ಅಮ್ಮಾ ತಾಯಿ ಹಡೆದಮ್ಮ**
**ಮಕ್ಕಳು ನಮ್ಮ ಪೊರೆಯಮ್ಮ**

ಮಹಾರಾಣಿ : ನೀವು ಯಾರ ಮಕ್ಕಳೇ?

ಗಿಳಿ ೧ : ಅಮ್ಮಾ

ಮಹಾರಾಣಿ : ಹೌದು ನನ್ನ ಮಕ್ಕಳೇ. ನನಗೆ 'ಅಮ್ಮಾ' ಎನ್ನುತ್ತಿವೆ. ಇದೇನು ಹಕ್ಕಿಗಳು ನನ್ನ ಕಡೆ ಹೀಗೆ ನೋಡುತ್ತಿವೆ. ಇಲ್ಲ, ಇಲ್ಲ. ಈ ಮರಿಗಳನ್ನು ನಾನು ಗಿಡುಗನಿಗೆ ಕೊಡೋದಿಲ್ಲ, ಹೆದರಬೇಡಿ.

ಹಕ್ಕಿಗಳು : **ಅಮ್ಮಾ ತಾಯಿ ಹಡೆದಮ್ಮಾ**
**ಮಕ್ಕಳು ನಮ್ಮ ಪೊರೆಯಮ್ಮಾ**

ಮಹಾರಾಣಿ : ಅಯ್ಯೋ ದೇವರೇ! ಹಕ್ಕಿಗಳು ಈ ಪರಿ ಸಂತೋಷ ಪಡುವುದನ್ನು ನಾನು ಕಂಡೇ ಇರಲಿಲ್ಲ. ಹಕ್ಕಗಳೇ, ಇಕೋ ನಿಮ್ಮ ಮರಿಗಳನ್ನು ತೆಗೆದುಕೊಳ್ಳಿ.

ಗಿಳಿ ೧ : ನಾನೇನೋ ಹಕ್ಕಿಯೇ ಸರಿ. ಆದರೆ ಆ ಮರಿ ನಿಮ್ಮ ಮಗು ತಾಯಿ!

ಮಹಾರಾಣಿ : ನಿಜವಾಗಿಯೂ?

ಗಿಳಿ : ನಿಜವಾಗಿ ಅವನು ನಿಮ್ಮ ಮಗ ತಾಯಿ.

ಮಹಾರಾಣಿ : ಅದು ಹ್ಯಾಗೆ? ಅಕ್ಕಪಕ್ಕ ಯಾರಾದರೂ ದೇವತೆಗಳಿದ್ದರೆ ವಿವರಿಸಿಯಪ್ಪ.

ಸೂತ್ರಧಾರ : ನಿಜ ತಾಯಿ ಅವನು ನಿಮ್ಮ ಮಗ. ಪುಷ್ಪರಾಣಿಯ ಮಗನಾದರೂ, ಈಗಷ್ಟೆ ತೊದಲಿ ಅವನು ನಿಮಗೇ ಪ್ರಪ್ರಥಮವಾಗಿ ಅಮ್ಮಾ ಎಂದಿದ್ದಾನೆ.

ಮಹಾರಾಣಿ : ಅಂದರೆ?

ಸೂತ್ರಧಾರ : ಪುಷ್ಪರಾಣಿ ವನದೇವತೆಯ ಮಗಳು ತಾಯಿ. ಅದಕ್ಕೇ ಅವಳು ಮನಸ್ಸು ಬಂದಾಗ ಮರವಾಗಬಲ್ಲಳು. ಅವಳ ಪುತ್ರನಾದ ಇವನು ಅಜ್ಜಿಯ ಆಶೀರ್ವಾದದಿಂದ ಹೀಗೆ ಹಕ್ಕಿಯಾಗಿ ನಿಮ್ಮ ತೊಡೆಯೇರಿದ್ದಾನೆ.

ಕನಿಷ್ಠಾ : ಇಂತಹ ಅಪರೂಪದ ಅವಕಾಶ ಇನ್ನೊಮ್ಮೆ ಸಿಗಲಾರದು ಮಹಾರಾಣಿ. ಗಿಳಿಮರಿಯ ಕತ್ತು ಹಿಸುಕಿದರೆ ನಿಮ್ಮ ಸಂಕಟಗಳೆಲ್ಲ ಪರಿಹಾರವಾಗುತ್ತವೆ.
ತಡಮಾಡಬೇಡಿ.

*(ಮಹಾರಾಣಿ ಎಚ್ಚರಾಗುವಳು)*

ಮಹಾರಾಣಿ : ನಿಜ ಕನಿಷ್ಠಾ ಇಂತಹ ಅಪರೂಪದ ಅವಕಾಶ ಇನ್ನು ಸಿಕ್ಕಲಾರದು. (ಎದ್ದು ನಿಂತು) ಪಕ್ಷಗಳೇ, ನನ್ನ ಹೃದಯದಲ್ಲಿ ಕತ್ತಲು ತುಂಬಿ ಏನು ಮಾಡುತ್ತಿದ್ದೇನೆಂದು ಅರಿಯದೇ ಪುಷ್ಪರಾಣಿಯನ್ನು, ಮರವಾಗಿಸಿದ್ದೇನೆ. ನಾಲ್ಕನೆಯ ಕಲ್ಲು ಎಲ್ಲೋ ಎಸೆದಿದ್ದೇನೆ. ಕೈ ಮುಗಿದು ಕೇಳಿಕೊಳ್ಳುತ್ತೇನೆ. ಮರವಾಗಿರುವ ನನ್ನ ತಂಗಿಯನ್ನು ಪುನಃ ಮನುಷ್ಯಳಾಗಿ ಪಡೆಯುವ ಉಪಾಯವನ್ನು ನೀವಾದರೂ ಹೇಳಿಕೊಡಿ.

ಸೂತ್ರಧಾರ : ನೀವು ಎಸೆದ ನಾಲ್ಕನೆಯ ಕಲ್ಲು ಗಿಳಿಮರಿಯ ತಾಯಿ ಬಳಿ ಇದೆ. ಅದಿಲ್ಲಿ ಇಲ್ಲ; ಬಾ ತಾಯಿ ಹೋಗೋಣ.

## ದೃಶ್ಯ-೧೪

ಮೇಳ : **ಯುದ್ಧ ಗೆದ್ದರೂ ಸಂತಸವಾಗದೆ**
**ಮಹಾರಾಜ ಬಂದ**
**ಎದುರುಬದುರಿನಲಿ ಮಾವ ಭಾವರು**
**ಯಾಕಿದ್ದರು ಎಲ್ಲ||**

**ನಡುವೆ ದಾರಿಯಲಿ ಸುದ್ದಿ ಬಂದಿತೋ**
**ಶಿವಾಪಟ್ಟದಿಂದ**
**ಮರೆಯಾಗಿರುವಳು ಕಿರಿಯ ರಾಣಿ**
**ಇನ್ನೆಲ್ಲಿ ಇರುವಳೆಂದ||**

ಮಹಾರಾಜ : ನೀನು ಹೇಳುತ್ತಿರುವುದೇನು?

ಸೇವಕ : ಹೌದು ಪ್ರಭು. ಚಿಕ್ಕರಾಣಿಯವರು ಅರಮನೆಯಲ್ಲಿ ಇರಲಿಲ್ಲ. ವಿಚಾರಿಸಲಾಗಿ ಉಪವನಕ್ಕೆ ಹೊಗಿದ್ದಾರೆಂದು ತಿಳಿಯಿತು.

ಮಹಾರಾಜ : ಯುದ್ಧಕ್ಕೆ ಹೋದರೆ ಮಹಾರಾಣಿಯ ತಂದೆ, ಸಹೋದರರೇ ಎದುರು ನಿಂತು ಕಾದಾಡಿದರು! ಅರಮನೆಯಲ್ಲಿ ಪುಷ್ಪರಾಣಿ ಇಲ್ಲ. ಎಲ್ಲವೂ ವಿಚಿತ್ರವಾಗಿದೆ. ಮಂತ್ರಿಗಳೇ ನೀವು ಸೈನ್ಯ ಸಮೇತ ಅರಮನೆಗೆ ಹೊರಡಿ. ನಾವು ಉಪವನಕ್ಕೆ ಹೋಗಿ ಬರುತ್ತೇವೆ.

ಮಂತ್ರಿ : ಹಾಗೇ ಆಗಲಿ ಪ್ರಭು.

ಮೇಳ : **ದೌಡ ದೌಡ ದೌಡಾಯಿಸಿ ನಡೆದರು**
**ಉದ್ಯಾನದ ಕಡೆಗೆ|**
**ತಾಯಿಗಿಳಿಯೊಂದು ಮ್ಯಾಲೆ ಹಾರಿ**
**ಬರುತ್ತಿತ್ತು ತನ್ನ ಜೊತೆಗೆ||**

ಮಹಾರಾಜ : ಇದೇನಿದು? ಈ ಗಿಳಿ ಒಂದೇ ಸುಮ್ಮನೆ ಕೂಗುತ್ತಾ ನನ್ನ ಜೊತೆಗೇ ಹಾರಿ ಬರುತ್ತಿದೆ. ಅಥವಾ ಆ ದಿನ ಹುಣಸೇ ಮರದಲ್ಲಿ ಕೂತು ನನಗೆ ಅಭಿನಂದನೆ ಹೇಳಿದ ಗಿಳಿ ಇದೇ ಇರಬಹುದೆ? ಹಾಗಿದ್ದರೆ ನನಗೆ ಇದೇನನ್ನೋ ಕೂಗಿ ಹೇಳುತ್ತಿದೆ. ಅದರ ಕೂಗಿನ ಅವಸರ ಮತ್ತು ತೀವ್ರತೆ ನೋಡಿದರೆ ಯಾವುದೋ ಆತಂಕದ ವಿಷಯವನ್ನು ಅದು ಹೇಳುತ್ತಿರುವಂತಿದೆ.

ಮೇಳ : **ಮತ್ತೆ ಮತ್ತೆ ದೌಡಾಯಿಸಿ ನಡೆದರು**
**ಉದ್ಯಾನದ ಕಡೆಗೆ**
**ಗಿಳಿಯು ಹಾರಿಬರುತ್ತಿತ್ತು ಜೊತೆಯಲ್ಲಿ**
**ಸಂದೇಶದ ಜೊತೆಗೆ||**

## ದೃಶ್ಯ-೧೫

ಮಹಾರಾಜ : ವನಪಾಲಕ

ವನಪಾಲಕ : ಪ್ರಭು

ಮಹಾರಾಜ : ಪುಷ್ಪರಾಣಿ ಎಲ್ಲಿ?

ವನಪಾಲಕ : ಅರಮನೆಯಲ್ಲಿ. ಯಾಕೆ ಪ್ರಭು ನನ್ನ ಮಗಳು ಅಲ್ಲಿಲ್ಲವೆ?

ಮಹಾರಾಜ : ತೌರಿಗೆ ಬಂದಿರುವಳಂತೆ.

ವನಪಾಲಕ : *(ಕಣ್ಣೀರು ಸುರಿಸುತ್ತ)* ಉಪವನದ ಮರಗಳು ಬಾಡಿದಾಗಲೇ ಇಂಥದೇನೋ ಅನಾಹುತ ಆಗಿದೆ-ಅಂತ ನನಗೆ ಗೊತ್ತಾಯ್ತು. ಪುಷ್ಪರಾಣಿ ಖಂಡಿತವಾಗಿಯೂ ಬರಲಿಲ್ಲ. ಪ್ರಭು, ಹೃದಯದಲ್ಲಿಟ್ಟುಕೊಂಡು ಕಾಪಾಡುತ್ತೇನೆ ಅಂತ ಹೇಳಿದ್ದಿರಿ.

ಮಹಾರಾಜ : ಖಂಡಿತ ಇಲ್ಲೇನೊ ದ್ರೋಹ ನಡೆದಿದೆ. ನಾನೂ ಈ ದ್ರೋಹಕ್ಕೆ ಗುರಿಯಾಗಿದ್ದೇನೆ. ಏನು ಮಾಡಲಿ ವನಪಾಲಕಾ?

ವನಪಾಲಕ : ತಾವು ಯುದ್ಧಕ್ಕೆ ಹೋದಾಗಿನಿಂದಲೂ ಈ ರಾಜ್ಯದಲ್ಲಿ ಅಪಶಕುನಗಳಾಗುತ್ತಿವೆ ಪ್ರಭು. ಹೆದರಿದ ಹಾಗೆ ಮೋಡಗಳು ಓಡುತ್ತಿವೆ. ಕೆರೆ ಬಾವಿಗಳು ಬತ್ತುತ್ತಿವೆ. ಹಕ್ಕಿ ಪಕ್ಷಿಗಳು ಅಸಹಜ ದನಿಯಲ್ಲಿ ಕಿರುಚುತ್ತ ಹಾರಾಡುತ್ತಿವೆ ಪ್ರಭು.

ಮಹಾರಾಜ : ವನಪಾಲಕಾ, ಈ ಗಿಳಿ ಮಾತ್ರ ನಾನು ಯುದ್ಧದಿಂದ ಹಿಂದಿರುಗಿ ಬಂದಾಗಿ

ನಿಂದಲೂ ಕೂಗುತ್ತಾ ನನ್ನನ್ನು ಹಿಂಬಾಲಿಸುತ್ತಿದೆ. ಇದರ ಭಾಷೆ ನಿನಗೆ ಅರ್ಥವಾಗುತ್ತದೆಯೆ?

ವನಪಾಲಕ : ಸ್ವಲ್ಪ ಸ್ವಲ್ಪ. ಮಗಳು ಅಷ್ಟಿಷ್ಟು ಹೇಳಿಕೊಟ್ಟಿದ್ದಳು.

ಮಹಾರಾಜ : ಕೇಳು.

*(ಗಿಳಿ ಕೂಗುತ್ತದೆ. ವನಪಾಲಕ ಲಕ್ಷ್ಯ ವಿಟ್ಟು ಕೇಳಿಸಿಕೊಳ್ಳುತ್ತಾನೆ)*

ವನಪಾಲಕ : *(ಆಘಾತ ಹೊಂದಿ)* ಘಾತವಾಯಿತು ಪ್ರಭು. ಮಹಾರಾಣಿಯವರು ಮೋಸಮಾಡಿ ನನ್ನ ಮಗಳನ್ನು ಮರವಾಗಿ ಪರಿವರ್ತಿಸಿದ್ದಾರೆ. ಸಾಲದ್ದಕ್ಕೆ ಮರಕಟುಕರನ್ನು ಕಳಿಸಿದ್ದರಂತೆ. ಆದರೆ ಪಕ್ಷಿಗಳು ಅವರನ್ನೋಡಿಸಿ ಪುಷ್ಪರಾಣಿಯ ಜೀವ ಕಾಪಾಡಿಕೊಂಡಿವೆ ಪ್ರಭು. ಮಹಾರಾಣಿ ನಾಲ್ಕನೇ ಕಲ್ಲನ್ನು ಪುಷ್ಪರಾಣಿಯ ಮೇಲೆ ಎಸೆಯದೆ ಬೇರೆ ಕಡೆ ಎಸೆದುಹೋದರಂತೆ. ದೇವರ ದಯೆ ಈ ಗಿಳಿ ಈ ಕಲ್ಲನ್ನು ಕಚ್ಚಿಕೊಂಡು ಓಡಾಡುತ್ತಿದೆ.

*(ಗಿಳಿ ಕೂಗುತ್ತದೆ)*
ಹಾಗಾದರೆ ಕೊಡು ತಾಯಿ.
*(ಉಡಿ ಒಡ್ಡುತ್ತಾನೆ, ಉಡಿಯಲ್ಲಿ ಚಿಕ್ಕ ಕಲ್ಲು ಬೀಳುತ್ತದೆ)*
ತಾಯಿ, ಮರ ಎಲ್ಲಿದೆಯೆಂದು ತೋರಿಸುತ್ತೀಯಾ?
ತಾಯಿಗಿಳಿ ಕೂಗುತ್ತದೆ
ಬನ್ನಿ ಪ್ರಭು.

(ಇಬ್ಬರೂ ಓಡುತ್ತಾರೆ)

## ದೃಶ್ಯ-೧೭

ಮೇಳ : **ಮತ್ತೆ ಮತ್ತೆ ದೌಡಾಯಿಸಿ ನಡೆದರು**
**ಮರ ಇರುವ ಕಡೆಗೆ**
**ಬಂದು ನೋಡಿದರೆ ಮಗನ ತಬ್ಬಿಕೊಂಡಿದ್ದಳು ಮಹಾರಾಣಿ.**

ಮಹಾರಾಣಿ : ಬನ್ನಿ ಪ್ರಭು. ನನ್ನ ದುಷ್ಟತನಕ್ಕೆ ಬಲಿಯಾಗಿ ಪುಷ್ಪರಾಣಿ ಮರವಾಗಿದ್ದಾಳೆ. ನಾಲ್ಕನೆಯ ಕಲ್ಲು ಎಲ್ಲಿ ಎಸೆದೆನೆಂದು ತಿಳಿಯುತ್ತಿಲ್ಲ. ನಿಮ್ಮನ್ನು ಯುದ್ಧಕ್ಕೆ ಅಟ್ಟಿದವಳು ನಾನೇ. ಪುಷ್ಪರಾಣಿಯನ್ನು ಬಲಿ ತೆಗೆದುಕೊಂಡವಳೂ ನಾನೇ. ಈ ಪಾಪಕೃತ್ಯಕ್ಕೆ ಕೊನೆಯ ಪಕ್ಷ ಗಲ್ಲು ಶಿಕ್ಷೆಯಾದರೂ ಆಗಬೇಕು. ಇಗೋ ಸಾವಿನ ಕಡೆಗೆ ಹೋಗುತ್ತಿದ್ದೇನೆ. ದಯಮಾಡಿ ನೀವು ಮತ್ತು ಪುಷ್ಪರಾಣಿ ನನ್ನನ್ನು ಕ್ಷಮಿಸಬಿಡಿ.

ಮಹಾರಾಜ : ತಡೆ ಮಹಾರಾಣಿ, ನಾಲ್ಕನೆಯ ಕಲ್ಲು ಇಲ್ಲಿದೆ. ಇದನ್ನು ನೀನೇ ಎಸೆಯಬೇಕು.

ಮಹಾರಾಣಿ : ದೇವರ ದಯೆ. ನಾನೀಗ ಸಣ್ಣ ತೃಪ್ತಿಯಿಂದಲಾದರೂ ಸಾಯಬಹುದು. ಕೊಡಿ ಪ್ರಭು.

*(ಕಲ್ಲು ಕೊಡುವನು. ಮಹಾರಾಣಿ ನಾಲ್ಕನೆಯ ಕಲ್ಲನ್ನು ಮರದ ಮೇಲೆ ಎಸೆಯುವಳು)*

ಮೇಳ : **ನೋಡ ನೋಡುತಲೆ ಕಣ್ಣೆದುರಲ್ಲೆ**
**ಮರದ ರೂಪವಡಗಿ**
**ಅವತರಿಸಿದಳೈ ಕಾನನದೇವಿ**
**ಉಘೇ ಉಘೇ ತಾಯಿ**

**ಋತುಮಾನಗಳ ಕೈಗೆ ಕೈ ಇಟ್ಟು**
**ನಡೆಯ ಕಲಿಸಿದಾಕೆ**
**ಚಿಗುರು ಹಸಿರಿಗೆ ಪುಷ್ಪವಾಗುವ**
**ಗುಟ್ಟು ಹೇಳಿದಾಕೆ**

**ಹೂವಿನೆದೆಯ ಪರಿಮಳದ ಧೂಳಿಗೆ**
**ಕೆರಳತಾವ ದುಂಬಿ**
**ಪ್ರೀತಿಗೆ ಯಾಕೆ ಬೇಕು ಪೀಠಿಕೆ**
**ಬರಲಿ ಹೃದಯ ತುಂಬಿ.**
*(ಪುಷ್ಪರಾಣಿ ಮಗು ಸಮೇತ ಪ್ರತ್ಯಕ್ಷಳಾಗುವಳು)*

ಪುಷ್ಪರಾಣಿ : ಅಕ್ಕಾ, ಪ್ರಭು, ಇವನು ನಮ್ಮ ಕಂದ.

ಮಹಾರಾಜ : ಇದಕ್ಕೆಲ್ಲ ಕಾರಣಳಾದ ಮಹಾರಾನಿಗೆ ಶಿಕ್ಷೆಯಾಗಲೇಬೇಕು.

ಮಹಾರಾಣಿ : ಹೌದು ಪ್ರಭು.

ಮಗು : ಅಮ್ಮಾ.

ಸೂತ್ರಧಾರ : ಪ್ರಭು, ಇವನು ಮಹಾರಾಣಿಯ ಮಗ. ಯಾಕೆಂದರೆ ಆಕೆಗೇ ಇವನು ಪ್ರಪ್ರಥಮವಾಗಿ ಕನಸಿನಲ್ಲಿ 'ಅಮ್ಮಾ' ಅಂದದ್ದು. ತಾಯಿ ಮಕ್ಕಳನ್ನು ಅಗಲಿಸ ಬಾರದು ಪ್ರಭು.

ಪುಷ್ಪರಾಣಿ : ಹೌದು ಪ್ರಭು. ತಾಯಿಗೆ ಮಗ, ನನಗೆ ಅಕ್ಕ ಮತ್ತು ನೀವು ಸಿಕ್ಕ ಸಂದರ್ಭದಲ್ಲಿ ದಂಡ ಶಿಕ್ಷೆ ಯಾಕೆ ಬೇಕು?

ಮಹಾರಾಣಿ : ನನ್ನನ್ನು ಧನ್ಯಳಾಗಿಸಿದೆ ತಂಗಿ.

ಮಹಾರಾಜ : ದೇವಿ, ನಿನ್ನ ಮತ್ತು ನಮ್ಮ ಮಗುವಿನ ಜೀವ ಕಾಪಾಡಿದ ಈ ಪಕ್ಷಿಗಳಿಗೆ ಹ್ಯಾಗೆ ಕೃತಜ್ಞತೆ ಹೇಳಲಿ?

ಪುಷ್ಪಾರಾಣಿ : ಅವುಗಳ ಪಾಡಿಗೆ ಅವನ್ನು ಬಿಟ್ಟು ಬಿಡಿ ಪ್ರಭು. ನೀವು ಅರಣ್ಯನಾಶ ಮಾಡದೆ ಹೋದರೆ ಸಾಕು. ನಿಮಗೂ ಅವು ಕೃತಜ್ಞವಾಗಿರುತ್ತವೆ.

ಎಲ್ಲರೂ : **ಶರಣು ಶರಣು ಶರಣಾರ್ಥಿ ಕಾಡಿಗೂ**
**ಕಾಡ ಪಕ್ಷಿಗಳಿಗೂ**
**ಕಾಡನಪ್ಪುವ ರಾಜ ಪ್ರಜರಿಗೂ**
**ಮಕ್ಕಳಿಗೂ ಶರಣು.**

## ಬೇಡರ ಹುಡುಗ ಮತ್ತು ಗಿಳಿ ಮತ್ತು ಇತರ ಮಕ್ಕಳ ಕತೆಗಳು:

## ಬೇಡರ ಹುಡುಗ ಮತ್ತು ಗಿಳಿ

ಒಂದು ಅಡವಿಯಲ್ಲಿ ಒಬ್ಬ ಬೇಡರ ಹುಡುಗನಿದ್ದ. ಅವನು ಗಿಳಿಗಳನ್ನು ಹಿಡಿದು ಪಟ್ಟಣದಲ್ಲಿ ಮಾರಿ ಉಪಜೀವನ ಸಾಗಿಸುತ್ತಿದ್ದ. ಒಂದು ಸಲ ಅವನ ಬಲೆಯಲ್ಲಿ ಒಂದು ಅಪರೂಪದ ಗಿಳಿ ಸಿಕ್ಕಿಬಿತ್ತು. ಇನ್ನೇನು, ಆ ಗಿಳಿಯನ್ನು ಹಿಡಿಯಬೇಕೆನ್ನುವಷ್ಟರಲ್ಲಿ ಆ ಗಿಳಿ ಮನುಷ್ಯರಂತೆ ಮಾತಾಡಿತು: "ಹುಡುಗಾ ಹುಡುಗಾ ನನ್ನನ್ನು ಹಿಡೀಬೇಡ. ನಿನಗೆ ಮುಂದೆ ಒಳ್ಳೆಯದಾದೀತು." ಆಗ ಆ ಹುಡುಗ ಹೇಳಿದ. "ಅದೇನೋ ಸರಿ. ಆದರೆ ನಿನ್ನನ್ನು ಬಿಟ್ಟರೆ ಈ ದಿನ ನಾನು ಉಪವಾಸ ಇರಬೇಕಾಗುತ್ತದಲ್ಲಾ-"



"ಹಾಗೋ! ನಿನ್ನ ಈ ಬಲೆ ಇನ್ನೊಂದು ಗಳಿಗೆ ಹೀಗೇ ಇರಲಿ. ಇಷ್ಟರಲ್ಲೇ ಇಲ್ಲಿಗೊಂದು ಪಂಚವರ್ಣದ ಗಿಳಿ ಬರುತ್ತದೆ. ಅದನ್ನೊಯ್ದು ರಾಜನಿಗೆ ಕೊಡು. ರಾಜ ನಿನಗೆ ಬೇಕಾದಷ್ಟು ಮರ್ಯಾದೆ ಮಾಡುತ್ತಾನೆ."

ಈ ಮಾತು ಕೇಳಿ ಹುಡುಗ ಗಿಳಿಯನ್ನು ಬಿಟ್ಟ. ಒಂದರ್ಧ ಗಳಿಗೆ ಬಲೆ ಹಾಕಿ ಹಾಗೆಯೇ ಕೂತ. ಅಷ್ಟರಲ್ಲಿ ಪಂಚವರ್ಣದ ಗಿಳಿ ಹಾರಿ ಬಂದು ಬಲೆಯಲ್ಲಿ ಸಿಕ್ಕಿಬಿತ್ತು. ಹುಡುಗನಿಗೆ ಸಂತೋಷವಾಯಿತು. ಅದನ್ನು ಮಾರುವುದಕ್ಕಾಗಿ ರಾಜನ ಬಳಿಗೆ ಹೋದ. ರಾಜನಿಗೂ ಆ ಗಿಳಿಯನ್ನು ನೋಡಿ ಆನಂದವಾಯಿತು. ಕೂಡಲೇ ಆ ಹುಡುಗ ಕೇಳಿದಷ್ಟು ಬೆಲೆ ತೆತ್ತು, ಮೇಲೆ ಬಹುಮಾನವನ್ನೂ ಕೊಟ್ಟ. ಪಂಚವರ್ಣದ ಗಿಳಿಗಾಗಿ ಒಂದು ಬಂಗಾರದ ಪಂಜರ ಮಾಡಿಸಿದ. ದಿನದಿನಕ್ಕೆ ಆ ಗಿಳಿಯು ಮಾತು ಕೂಡ ಕಲಿತಿತ್ತು. ಆಗಂತೂ ರಾಜನ ಆನಂದಕ್ಕೆ ಪಾರವೇ ಇಲ್ಲದಾಯಿತು. ಸಮಯ ಸಿಕ್ಕಾಗಲೆಲ್ಲ ಆತ ಅದರೊಂದಿಗೆ ಸರಸದಲ್ಲಿ ಕಾಲಕಳೆಯುತ್ತಿದ್ದ.



ಆ ರಾಜನಿಗೊಬ್ಬ ಧೂರ್ತ ಮಂತ್ರಿ ಇದ್ದ. ಒಬ್ಬ ಯಃಕಶ್ಚಿತ್ ಬೇಡರ ಹುಡುಗ ಹೇರಳ ಹಣ ಒಯ್ದದ್ದು, ಅವನು ಕೊಟ್ಟ ಗಿಳಿಯೊಂದಿಗೆ ರಾಜ ಹಗಲೂ ರಾತ್ರಿ ಚಕ್ಕಂದವಾಡುವುದು ಮಂತ್ರಿಯ ಮನಸ್ಸಿಗೆ ಹಿಡಿಸಲಿಲ್ಲ. ರಾಜನಂತೂ ದಿನ ಬಿಟ್ಟು ದಿನ ಆ ಬೇಡರ ಹುಡುಗನ ಯೋಗಕ್ಷೇಮ ವಿಚಾರಿಸುತ್ತಿದ್ದ. ಏನು ಮಾಡಿದರೆ ರಾಜ ಆ ಹುಡುಗನನ್ನು ಮರೆತಾನು? ಅವನನ್ನು ಕೊಲ್ಲಿಸುವುದೂ ಸಾಧ್ಯವಿರಲಿಲ್ಲ. ಕೊನೆಗೊಂದು ದಿನ ಸಂದರ್ಭ ನೋಡಿಕೊಂಡು ಮಂತ್ರಿ ರಾಜನ ಕಿವಿಯಲ್ಲಿ ಊದಿದ! "ರಾಜರೇ, ಇಂಥ ಪಂಚವರ್ಣದ ಗಿಳಿಗೆ ಬರೀ ಒಂದು ಬಂಗಾರದ ಪಂಜರವೆಂದರೆ ನಿಮಗೆ ಶೋಭೆ ತರುವ ಮಾತಲ್ಲ. ಗಿಳಿಗೂ ಶೋಭೆಯಲ್ಲ. ಇದಕ್ಕೊಂದು ದಂತದ ಮಂಟಪ ಕಟ್ಟಿ ಅದರಲ್ಲಿಟ್ಟರೆ ಚಂದ. ಅದರಿಂದ ನಿಮ್ಮ ಕೀರ್ತಿಯೂ ಹೆಚ್ಚುತ್ತದೆ."

"ಅದೇನೋ ನಿಜ. ಒಂದೋ ಎರಡೋ ದಂತ ಸಿಕ್ಕಾವು. ಆದರೆ ಒಂದು ಮಂಟಪಕ್ಕೆ ಆಗುವಷ್ಟು ದಂತ ಎಲ್ಲಿ ಸಿಕ್ಕಾವು?"

"ಯಾಕೆ ಯೋಚನೆ ಮಾಡುತ್ತೀರಿ? ಆ ಬೇಡರ ಹುಡುಗ ಇದ್ದಾನಲ್ಲಾ. ಆತ ಮಹಾ ಗಟ್ಟಿಗ. ಅವನಿಗೆ ಈ ಕೆಲಸ ವಹಿಸಿದರೆ ಖಂಡಿತಾ ತರುತ್ತಾನೆ."

ರಾಜನಿಗೆ ಸರಿಯೆನ್ನಿಸಿತು. ಮಂತ್ರಿಯ ಮೂಲಕ ಹುಡುಗನಿಗೆ ಆಜ್ಞೆ ಕಳಿಸಿದ. ಮಂತ್ರಿ ಹುಡುಗನ ಬಳಿ ಹೋಗಿ,

"ನೋಡೋ ಹುಡುಗ. ಪಂಚವರ್ಣದ ಗಿಳಿಗೆ ಒಂದು ದಂತದ ಮಂಟಪ ಕಟ್ಟಿಸಬೇಕಾಗಿದೆ. ಒಂದು ಹುಣ್ಣಿಮೆ, ಒಂದು ಅಮವಾಸ್ಯೆ ಮುಗಿಯುವುದರೊಳಗೆ ಮಂಟಪಕ್ಕೆ ಸಾಕಾಗುವಷ್ಟು ದಂತ ತರಬೇಕು. ತಂದುಕೊಟ್ಟರೆ ನೀನು ಬದುಕಿದೆ, ಇಲ್ಲಾ ಸತ್ತೆಯೆಂದು ತಿಳಿ" ಎಂದು ಹೇಳಿದ. ಹುಡುಗ ಕೈ ಮುಗಿದು,

"ಸ್ವಾಮಿ, ಒಂದೋ ಎರಡೋ ದಂತ ತಂದೇನು, ಮಂಟಪಕ್ಕೆ ಸಾಕಾಗುವಷ್ಟು ದಂತ ಎಲ್ಲಿಂದ ತರಲಿ?" ಎಂದ.

"ಎಲ್ಲಿಂದಾದರೂ ಸರಿ ನನಗೆ ಅದೆಲ್ಲ ಗೊತ್ತಿಲ್ಲ. ರಾಜರ ಆಜ್ಞೆ ಹೇಳುವುದಷ್ಟೇ ನನ್ನ ಕೆಲಸ" ಎಂದು ಹೇಳಿ ಸರ್ರನೆ ಮಂತ್ರಿ ಬಂದುಬಿಟ್ಟ.

ಬೇಡರ ಹುಡುಗ ತಲೆಯ ಮೇಲೆ ಕೈಹೊತ್ತು ಕುಳಿತ. ಯಾಕಾದರೂ ಆ ಪಂಚವರ್ಣದ ಗಿಳಿಯನ್ನು ದೊರೆಗೆ ಕೊಟ್ಟೆನೊ, ಇನ್ನು ತನಗೆ ಒಂದು ತಿಂಗಳಷ್ಟೆ ಆಯುಷ್ಯವೆಂದುಕೊಂಡ. ಅಷ್ಟರಲ್ಲಿ ಇವನ ಕೈಯಿಂದ ಮೊದಲು ಪಾರಾಗಿ ಹೋದ ಗಿಳಿ ಎಲ್ಲಿಂದಲೋ ಹಾರಿ ಬಂದು ಇವನ ಮುಂಗೈ ಮೇಲೆಯೇ ಕುಳಿತು,

"ಯಾಕೆ ಚಿಂತೆ ಮಾಡುತ್ತಿ?" ಎಂದಿತು.

"ನನ್ನ ಕಥೆ ಏನು ಹೇಳಲಿ? ಮೊದಲು ಗಿಳಿ ಮಾರಿ ಉಪಜೀವನ ಸಾಗಿಸುತ್ತ ಸುಖದಿಂದದ್ದೆ. ಅಷ್ಟರಲ್ಲಿ ಆ ಪಂಚವರ್ಣದ ಗಿಳಿಯನ್ನು ನೀನು ತಂದುಕೊಟ್ಟೆ. ಅದನ್ನು ರಾಜರಿಗೆ ಮಾರಿ ಸುಖದಿಂದ ಇರೋಣ ಅಂದರೆ, ಇಂದು ರಾಜರೇ ಆಜ್ಞೆ ಕೊಟ್ಟಿದ್ದಾರೆ. ಒಂದು ಹುಣ್ಣಿಮೆ

ಒಂದು ಅಮಾವಾಸ್ಯೆ ಮುಗಿಯುವುದರೊಳಗೆ ಒಂದು ಮಂಟಪಕ್ಕಾಗುವಷ್ಟು ದಂತ ತರಬೇಕು - ಅಂತ. ಅಷ್ಟೊಂದು ದಂತವನ್ನು ಎಲ್ಲಿಂದ ತರಲಿ? ಆಗುವುದಿಲ್ಲ ಎಂದರೆ ಕೊಲ್ಲುತ್ತಾರೆ."

"ಚಿಂತೆ ಬಿಡು ಹುಡುಗಾ, ಪೂರ್ವದಿಕ್ಕಿಗೆ ಹೋಗು. ಅಲ್ಲೊಂದು ಕಾಡಿದೆ. ಕಾಡಿನ ಮಧ್ಯೆ ಒಂದು ಕೆರೆಯಿದೆ. ಕಾಡಿನ ಆನೆಗಳೆಲ್ಲ ಮೇದು ನೀರು ಕುಡಿಯಲು ಅಲ್ಲಿಗೇ ಬರುತ್ತವೆ. ಅವುಗಳಲ್ಲೊಂದು ಮುದಿ ಆನೆ ಇದೆ. ಅದೇ ಗಜರಾಜ. ಅದರ ಕಾಲು ಹಿಡಿ. ನಿನ್ನ ಕೆಲಸವಾಗುತ್ತದೆ. ಹೋಗು" ಎಂದಿತು ಆ ಗಿಳಿ.

ಮರುದಿನ ಹುಡುಗ ಪೂರ್ವದಿಕ್ಕಿಗೆ ಪ್ರಯಾಣ ಮಾಡಿದ. ಗಿಳಿ ಹೇಳಿದಂತ ಕಾಡು ಸಿಕ್ಕಿತು. ಕಾಡಿನಲ್ಲಿದ್ದ ಕೆರೆ ಸಿಕ್ಕಿತು. ಮಧ್ಯಾಹ್ನದ ಹೊತ್ತಿಗೆ ಆನೆಗಳು ಮೇದು ಬಂದು ನೀರಲ್ಲಿ ಚೆಲ್ಲಾಟವಾಡಿದವು. ಇಳಿ ಹೊತ್ತಾದ ಮೇಲೆ ಅವೆಲ್ಲ ಎದ್ದು ಮತ್ತೆ ಮೇಯಲು ಹೊರಟವು. ಎಲ್ಲವೂ ಮುಂದೆ ಹೋಗಿ ಹಿಂದೆ ಮುದಿಯ ಗಜರಾಜ ಒಂದೇ ಉಳಿಯಿತು. ಹುಡುಗ ಹೋಗಿ ಅದರ ಕಾಲು ಹಿಡಿದು "ಗಜರಾಜ ಕಾಪಾಡು" ಎಂದ. ಗಜರಾಜ "ತಮ್ಮಾ, ಯಾರು ನೀರು? ಯಾಕೆ ಕಾಲುಹಿಡಿದೆ?" ಎಂದು ಕೇಳಿತು. ಹುಡುಗ ತನ್ನ ಸಮಾಚಾರವನ್ನೆಲ್ಲ ಹೇಳಿದ. ತಾನು ಬಂದ ಕಾರಣ ತಿಳಿಸಿ ಕಾಪಾಡಬೇಕೆಂದು ಕೈ ಮುಗಿದ. ಅದಕ್ಕೆ ಗಜರಾಜ,

"ನೋಡು ತಮ್ಮಾ, ಈ ಕಾಡಿನಲ್ಲೊಂದು ಸಿಂಹ ಇದೆ. ಅದು ದಿನಾಲು ನಮ್ಮ ಹಿಂದಿನ ಒಂದೊಂದು ಆನೆ ಕೊಲ್ಲುತ್ತಿದೆ. ಅದರ ಕಾಟದಿಂದ ನಮ್ಮನ್ನು ಪಾರುಮಾಡು; ದಂತ ಕೊಡುತ್ತೇನೆ" ಎಂದಿತು.

ಹುಡುಗನಿಗೆ ಏನು ಮಾಡಬೇಕೆಂದು ತಿಳಿಯದಾಯ್ತು. ನಿಂತು ನಿಂತು ನೀರಡಿಕೆಯಾಯಿತು. ನೀರು ಕುಡಿಯಬೇಕೆಂದು ಕೆರೆಗೆ ಹೋದ. ನೀರಲ್ಲಿ ಮೂಡಿದ ತನ್ನ ಪ್ರತಿಬಿಂಬ ನೋಡಿದೊಡನೆ ಅವನಿಗೆ ಒಂದು ಉಪಾಯ ಹೊಳೆಯಿತು. ಊರಿಗೆ ಹೋಗಿ ದೊಡ್ಡ ಎರಡು ಕನ್ನಡಿಗಳನ್ನು ಮಧ್ಯೆ ಸ್ಥಳಬಿಟ್ಟು ಎದುರು ಬದುರಾಗಿಟ್ಟ. ಪಕ್ಕದಲ್ಲಿ ಹಾಡುತ್ತ ಕುಳಿತ.

ಮನುಷ್ಯರ ವಾಸನೆ ಹಿಡಿದು ಸಿಂಹ ಗರ್ಜಿಸುತ್ತ ಬಂತು. ಹುಡುಗ ಹೆದರದೆ ಹಾಡುತ್ತ ಕುಳಿತಿದ್ದ. ಸಿಂಹಕ್ಕೆ ಆಶ್ಚರ್ಯವಾಯಿತು.

"ಯಾಕೋ ಸೊಕ್ಕಿನ ಹುಡುಗಾ, ನನ್ನನ್ನು ನೋಡಿ ನಾ-ನೀ ಎಂಬಂಥ ವೀರಾಧಿವೀರರೂ ಗಡಗಡ ನಡುಗುತ್ತಾರೆ. ನಿನಗೆ ಹೆದರಿಕೆಯೇ ಇಲ್ಲವೇನು?" ಎಂದು ಕೇಳಿತು.

ಹುಡುಗ ಹೆದರದೆ ಹೇಳಿದ -

"ನಿನ್ನಂಥಾ ಸಾವಿರಾರು ಸಿಂಹಗಳನ್ನು ಹಿಡಿದು ಪಂಜರದಲ್ಲಿಟ್ಟವ ನಾನು. ನಾನು ಯಾಕೆ ಹೆದರಲಿ?"

ಸಿಂಹಕ್ಕೆ ಸಿಟ್ಟು ಬಂತು. ಅಡವಿಗೆ ಅಡವಿಯೇ ನಡುಗುವ ಹಾಗೆ ಗರ್ಜನೆ ಮಾಡಿತು.

"ಸುಳ್ಳು ಹೇಳಿ ನನ್ನಿಂದ ಪಾರಾದೇನೆಂದು ಭಾವಿಸಿದೆಯೇನೋ ಹುಚ್ಚು ಹುಡುಗಾ?"

"ಸುಳ್ಳು ಯಾಕೆ? ಇಲ್ಲೇ ಇವೆ. ಬೇಕಾದರೆ ಬಂದು ನೋಡಬಹುದಲ್ಲ."

"ನಿನ್ನ ಆಯುಷ್ಯ ತೀರಿತೆಂದು ತಿಳಿ" ಎನ್ನುತ್ತ ಸಿಂಹ ಬಂದು ಎರಡೂ ಕನ್ನಡಿಗಳ ಮಧ್ಯೆ ನಿಂತು ನೋಡಿತು. ಎರಡೂ ಕನ್ನಡಿಗಳಲ್ಲಿ ಅಸಂಖ್ಯ ಸಿಂಹಗಳ ಬಿಂಬ ಮೂಡಿ ಇದನ್ನೇ ನೋಡುತ್ತಿದ್ದವು. ಈಗ ಮಾತ್ರ ಸಿಂಹದ ಜಂಘಾಬಲ ಉಡುಗಿ ಹೋಯಿತು. ಸತ್ತೇನೋ ಬದುಕಿದೆನೋ ಎಂದು ಸಿಂಹ ತಿರುಗಿ ಕೂಡ ನೋಡದೆ ಆ ಕಾಡನ್ನು ಬಿಟ್ಟು ಬೇರೆಲ್ಲಿಗೋ ಓಡಿಹೋಯಿತು.

ಸಿಂಹದ ಗುಡುಗಾಟ ಕೇಳಿ ಆನೆಗಳೆಲ್ಲಾ ಗುಂಪುಗೂಡಿದ್ದವು. ಸಿಂಹ ಓಡಿಹೋದುದನ್ನು ನೋಡಿ ಸಂತೋಷದಿಂದ ಕುಣಿದಾಡಿದವು. ಗಜರಾಜ ಜಾಣತನ ಹೊಗಳಿತು. ಈವರೆಗೆ ಸಿಂಹ ಆನೆಗಳನ್ನು ತಿಂದು ತಿಂದು ಗವಿಯಲ್ಲಿ ದಂತದ ರಾಶಿ ಹಾಕಿತ್ತು. ಗಜರಾಜ ಅದನ್ನು ತೋರಿಸಿ ದೊಡ್ಡ ದೊಡ್ಡ ಹೊರೆ ಕಟ್ಟಿ ನಾಲ್ಕೈದು ಆನೆಗಳ ಮೇಲೆ ಹೇರಿ ಹುಡುಗನೊಂದಿಗೆ ಕಳಿಸಿಕೊಟ್ಟಿತು.

ದಂತಹೊತ್ತ ಆನೆಗಳೊಂದಿಗೆ ಬೇಡರ ಹುಡುಗ ಬಂದು ರಾಜನೆದುರಿಗೆ ಹಾಜರಾದ. ರಾಜನಿಗೆ ಸಂತೋಷವೂ ಮಂತ್ರಿಗೆ ಹೊಟ್ಟೆಕಿಚ್ಚೂ ಆಯಿತು. ರಾಜ ಆ ಹುಡುಗನನ್ನು ಅನೇಕ ರೀತಿಯಿಂದ ಸನ್ಮಾನಿಸಿದ. ಅವನನ್ನು ಗಜಪತಿಯನ್ನಾಗಿ ನಿಯಮಿಸಿಕೊಂಡ. ಚತುರರಾದ ಶಿಲ್ಪಿಗಳಿಂದ ದಂತದ ಮಂಟಪ ಕಟ್ಟಿಸಿದ. ಅದರಲ್ಲಿ ಅ ಪಂಚವರ್ಣದ ಗಿಳಿಯನ್ನು ಬಿಟ್ಟರು. ಆದರೆ ಮಂತ್ರಿಯ ಲೆಕ್ಕಾಚಾರವೆಲ್ಲ ತಲೆಕೆಳಗಾಗಿತ್ತು. ಮಂಟಪಕ್ಕಾಗುವಷ್ಟು ದಂತ ತರುವುದೇನು ಸಾಮಾನ್ಯವೇ? ತರಲಾರದೆ ಹುಡುಗ ಶಿಕ್ಷೆ ಅನುಭವಿಸುತ್ತಾನೆಂದು ಅವನ ಎಣಿಕೆಯಾಗಿತ್ತು. ಆದರೆ ಆ ಹುಡುಗ ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದ್ದ. ಈ ಬೇಡನನ್ನು ಏನಾದರೂ ಮಾಡಿ ಮುಗಿಸಲೇಬೇಕೆಂದು ಮಂತ್ರಿ ಮತ್ತೆ ಯುಕ್ತಿ ಹುಡುಕಲಾರಂಭಿಸಿದ.

ರಾಜ ಪಂಚವರ್ಣ ಗಿಳಿಯೊಂದಿಗೆ ಮಾತಾಡುತ್ತ ಸಂತೋಷದಿಂದ ಇದ್ದ ಸಮಯ ನೋಡಿದಾಗ ಆ ಮಂತ್ರಿಯ ತಲೆಯಲ್ಲಿ ದುರಾಲೋಚನೆ ಹೊಳೆಯಿತು.

“ರಾಜರೇ, ಇಷ್ಟೊಂದು ಚಂದ ಮಾತಾಡುವ ಗಿಳಿ ಹಾಡುವುದಿಲ್ಲ ಎಂದರೇನರ್ಥ?”

“ಬಹುಶಃ ಇದಕ್ಕೆ ಹಾಡಲಿಕ್ಕೆ ಬರುವುದಿಲ್ಲವೇನೋ.”

“ಗಿಳಿಗೆ ಹಾಡಲು ಬರುವುದಿಲ್ಲವೆಂದರೆ ಹೇಗೆ ನಂಬಲಾದೀತು? ಮೊದಲು ಸಾಕಿದವರು ಮುಂದೆ ಬಂದರೆ ಹಾಡು ಮರೆತ ಹಕ್ಕಿಯೂ ಹಾಡುತ್ತದೆಂದು ಹಿರಿಯರು ಹೇಳುತ್ತಾರೆ. ಮೊದಲು ಸಾಕಿದವರನ್ನು ಕರೆಸಿದರೆ ಗೊತ್ತಾದೀತು.”

ರಾಜನಿಗೆ ಚಿಂತೆಯಾಯಿತು.

“ನಿಜ, ಇದನ್ನು ಮೊದಲು ಸಾಕಿದದವರು ಯಾರೆಂದು ಗೊತ್ತಿಲ್ಲವಲ್ಲ.”

“ನಮ್ಮ ಗಜಪತಿಗೆ, ಅಂದರೆ ಅದೇ ಆ ಬೇಡರ ಹುಡುಗನಿಗೆ ಇದು ತಿಳಿದಿರಲೇಬೇಕು.”

ರಾಜನಿಗೆ ಹೌದು ಎನಿಸಿತು. ಮಂತ್ರಿಯ ಮೂಲಕ ಬೇಡರ ಹುಡುಗನಿಗೆ ಮತ್ತೆ ಆಜ್ಞೆ ಕಳುಹಿಸಿದ. ಮಂತ್ರಿ ಆ ಹುಡುಗನ ಹತ್ತಿರ ಹೋಗಿ –

“ನೋಡಪ್ಪ, ಒಂದೇ ಹುಣ್ಣಿಮೆ, ಒಂದು ಅಮಾವಾಸ್ಯೆ ಮುಗಿಯುವುದರೊಳಗೆ ಆ ಪಂಚವರ್ಣದ ಗಿಳಿಯನ್ನು ಮೊದಲು ಯಾರು ಸಾಕಿದ್ದರೋ, ಅವರನ್ನು ಕರೆತರಬೇಕು. ಕರೆದು ತಂದರೆ ಬದುಕಿದೆ. ಇಲ್ಲದಿದ್ದರೆ ಸತ್ತೆಯೆಂದು ತಿಳಿ” ಎಂದು ಹೇಳಿದ. ಹುಡುಗ ತಬ್ಬಿಬ್ಬಾದ.

“ಸ್ವಾಮೀ, ನಾನದನ್ನು ತಂದದ್ದು ಕಾಡಿನಿಂದ, ಮೊದಲು ಸಾಕಿದವರು ಯಾರೆಂದು ನನಗೆ ತಿಳಿಯದು.”

“ಅದೆಲ್ಲ ನನಗೆ ಗೊತ್ತಿಲ್ಲ. ರಾಜರ ಆಜ್ಞೆ ತಿಳಿಸುವುದಷ್ಟೇ ನನ್ನ ಕೆಲಸ” ಎಂದು ಹೇಳಿ ಮಂತ್ರಿ ಹೋಗಿಯೇ ಬಿಟ್ಟ.

ಹುಡುಗ ಚಿಂತೆ ಮಾಡುತ್ತ ತನ್ನ ಮನೆಯ ಹೊಸ್ತಿಲ ಮೇಲೆ ಕುಳಿತುಕೊಂಡ. ಹಿಂದೊಂದು ಸಲ ಹೇಗೋ ಪಾರದದ್ದಾಯ್ತು. ಈಗೇನು ಮಾಡುವುದು? ಇಂದಿಗೆ ಈ ನೆಲದ ಋಣ ತೀರಿತೆಂದು ಚಿಂತಿಸುತ್ತಿದ್ದಾಗ ಮತ್ತೆ ಹಿಂದಿನ ಗಿಳಿಯೇ ಹಾರಿ ಬಂದು ಇವನ ತೊಡೆಯ ಮೇಲೆ ಕುಳಿತುಕೊಂಡಿತು.

'ಏನು ಚಿಂತೆ?' ಎಂದು ಕೇಳಿತು.

'ಏನಂತ ಹೇಳಲಿ? ಆ ಪಂಚವರ್ಣದ ಗಿಳಿಯನ್ನು ಮೊದಲು ಯಾರು ಸಾಕಿದ್ದರೋ ಅವರನ್ನು ಕರೆದು ತರಬೇಕೆಂದು ರಾಜರ ಆಜ್ಞೆಯಾಗಿದೆ. ಒಂದು ತಿಂಗಳಲ್ಲಿ ಕರೆತರದಿದ್ದರೆ ನನ್ನನ್ನು ಮುಗಿಸುತ್ತಾರಂತೆ. ಏನು ಮಾಡಲಿ?' ಅಂದ.

'ಹೀಗೋ? ಹಾಗಿದ್ದರೆ ಬಾ' ಎಂದು ಹೇಳಿ ಗಿಳಿ ಹಾರತೊಡಗಿತು. ಹುಡುಗ ಹಿಂದಿನಿಂದ ಅದರ ಬೆನ್ನು ಹತ್ತಿದ. ಇಬ್ಬರೂ ಕಾಡಿನಲ್ಲಿಯ ಒಂದು ದೇವಸ್ಥಾನಕ್ಕೆ ಬಂದರು. ಅಲ್ಲಿ ಒಂದು ಕೀಲುಕುದುರೆ ಇತ್ತು. ಗಿಳಿ ಹೇಳಿತು:

ಈ ಕುದುರೆಯನ್ನು ಏರು. ಅದು ಹಾರುತ್ತದೆ. ಸಮುದ್ರದ ಮೇಲೆ ಹಾರಾಡುವಾಗ ಕೆಳಗಡೆ ಒಂದು ಚಂದದ ದ್ವೀಪ ಕಾಣಿಸುತ್ತದೆ. ಅಲ್ಲಿ ಕುದುರೆಯನ್ನು ಇಳಿಸು. ಆ ಕೂಡಲೇ ಅಲ್ಲಿಯ ದಾಸಿಯರು ಇದನ್ನು ನೋಡಲಿಕ್ಕೆ ಓಡಿ ಬರುತ್ತಾರೆ. ಅವರಿಗೆ ಕುದುರೆ ಹತ್ತುವುದು ಹೇಗೆ, ಹಾರುವುದು ಹೇಗೆ, ಇಳಿಸುವುದು ಹೇಗೆ - ಎಂದು ತೋರಿಸು. ಕುದುರೆ ಹತ್ತಿಸಿಕೊಂಡು ಅಷ್ಟಿಷ್ಟು ಹಾರಿಸಿ ತೋರಿಸು. ಆಮೇಲೆ ಅವರ ಒಡತಿ ರಾಜಕುಮಾರಿ ಕುದುರೆಯನ್ನು ನೋಡುವುದುಕ್ಕೆ ಬರುತ್ತಾಳೆ. ಅವಳು ಇದರ ಮೇಲೆ ಹತ್ತುವುದಷ್ಟೇ ತಡ ಕುದುರೆ ಮೇಲೇರಿಸಿ ಕರೆದುಕೊಂಡು ಬಾ' - ಎಂದು, ಕೀಲುಕುದುರೆ ಹತ್ತುವ, ಅದನ್ನು ಮೇಲೆ ಏರಿಸುವ, ಇಳಿಸುವ ವಿಧಾನ ಹೇಳಿಕೊಟ್ಟಿತು. ಬೇಡರ ಹುಡುಗ ಅದನ್ನು ಹತ್ತಿ ಸಾಗಿದ.



ಆಕಾಶದಲ್ಲಿ ಹಾರಾಡುವಾಗ, ಆ ಗಿಳಿ ಹೇಳಿದಂಥ ದ್ವೀಪ ಕಾಣಿಸಿತು. ಕುದುರೆಯನ್ನು ಇಳಿಸಿದ. ದಾಸಿಯರೆಲ್ಲ ನೋಡಬಂದರು. ಅವರಿಗೆ ಅಷ್ಟಿಷ್ಟು ಏರಿಸಿ, ಹಾರಿಸಿ, ಇಳಿಸಿ ತೋರಿಸಿದ. ಕೊನೆಗೆ ರಾಜಕುಮಾರಿ ಬಂದಳು. ಅವಳು ಕೀಲು ಕುದುರೆ ಹತ್ತಿದೊಡನೆ ಕುದುರೆಗೆ ಕೀಲಿಕೊಟ್ಟು ತಿರುಗಿಸಿ ಹಾರಿಸಿದ. ರಾಜಕುಮಾರಿ ಮೊದಮೊದಲು ಇದು ಬರೀ ವಿನೋದವೆಂದು ಎಣಿಸಿದಳು. ಕೊನೆಗೆ ಹೆದರಿ ಚೀರಿ ಅತ್ತರೂ ಪ್ರಯೋಜನವಾಗಲಿಲ್ಲ. ಅವಳನ್ನು ಕರೆದುಕೊಂಡು ರಾಜನ ಅರಮನೆಗೇ ಬಂದ. ಪಂಚವರ್ಣದ ಗಿಳಿ ಈ ರಾಜಕುಮಾರಿಯನ್ನು ನೋಡಿದೊಡನೆ ಹಾಡಲಾರಂಭಿಸಿತು. ರಾಜ ಸಂತೋಷದಿಂದ ಕುಣಿದಾಡಿದ. ರಾಜನನ್ನು ರಾಜಕುಮಾರಿಯೂ ರಾಜಕುಮಾರಿಯನ್ನು ರಾಜನೂ ನೋಡಿ ಪರಸ್ಪರ ಮೆಚ್ಚಿದರು. ಕೆಲ ದಿನಗಳಲ್ಲಿಯೇ ಅವರು ಮದುವೆಯಾದರು. ಬೇಡರ ಹುಡುಗನನ್ನು ರಾಜ ಸನ್ಮಾನಿಸಿ ಈ ಸಲ ತನ್ನ ಸೇನಾಪತಿಯಾಗಿ ನಿಯಮಿಸಿಕೊಂಡ. ಮಂತ್ರಿಯ ಹೊಟ್ಟೆಕಿಚ್ಚು ಹೆಚ್ಚಾಗಿ ಇನ್ನೂ

ಸಂಕಟವಾಯಿತು. ಕಾಡಿನಲ್ಲಿ ಅಲೆದಾಡುವ ಬೇಡರ ಹುಡುಗ ಗಜಪತಿಯಾದ. ಈಗ ಸೇನಾಪತಿಯಾದ; ಇನ್ನು ಮುಂದೆ ಮಂತ್ರಿಯೂ ಆದಾನು, ಇವನನ್ನು ಹೀಗೆಯೇ ಬಿಟ್ಟರೆ ತನಗೆ ಅಪಾಯವೆಂದು ಲೆಕ್ಕ ಹಾಕಿದ.

ಹೀಗೆಯೇ ಕೆಲವು ದಿನ ಕಳೆದ ಬಳಿಕ ಆ ದ್ವೀಪದ ರಾಜಕುಮಾರಿಗೆ ಹೊಟ್ಟೆ ನೋವು ಬಂತು. ರಾಜವೈದ್ಯರೆಲ್ಲ ಚಿಕಿತ್ಸೆ ನಡೆಸಿ ಸೋತರು. ರಾಜ ರೇಗಾಡತೊಡಗಿದ. ಆಗ ವೈದ್ಯರು, 'ರಾಜರೇ, ತಮ್ಮ ರಾಣಿಯವರು ನಮ್ಮ ನಿಮ್ಮಂಥ ಮನುಷ್ಯ ವ್ಯಕ್ತಿ ಅಲ್ಲವೆಂದು ತೋರುತ್ತದೆ. ಯಾರೋ ದೇವಲೋಕದವರೇ ಇರಬೇಕು. ಅದಕ್ಕೆ ನಮ್ಮ ಔಷಧಿಗಳು ಅವರ ದೇಹದ ಮೇಲೆ ಏನೂ ಪರಿಣಾಮ ಮಾಡಲಿಲ್ಲ. ಅವರಿದ್ದ ದ್ವೀಪದವರೇ ಯಾರಾದರೂ ಬಂದರೆ ಅವರ ಹೊಟ್ಟೆನೋವು ವಾಸಿಯಾದೀತು' ಎಂದರು. ಮಂತ್ರಿ ಇದೇ ಅವಕಾಶವೆಂದು,

'ವೈದ್ಯರು ಹೇಳಿದ್ದು ನಿಜ ರಾಜರೇ' ಅಂದ.

'ಹಾಗಾದರೆ ಆ ದ್ವೀಪಕ್ಕೆ ಹೋಗುವವರು ಯಾರು?'

'ಅದಕ್ಕೆ ಯಾಕಿಷ್ಟು ಚಿಂತೆ? ನಮ್ಮ ಸೇನಾಪತಿ, ಆ ಬೇಡರ ಹುಡುಗ ಇದ್ದಾನಲ್ಲಾ, ಅವನನ್ನೇ ಕಳುಹಿಸಿ.'

ರಾಜ ಮತ್ತೆ ಬೇಡರ ಹುಡುಗನನ್ನು ದ್ವೀಪಕ್ಕೆ ಕಳುಹಿಸಲು ಸಿದ್ಧನಾದ. ಆಗ ದ್ವೀಪದ ರಾಣಿ, 'ಅಯ್ಯೋ, ಅಲ್ಲಿಗೆ ಹೋದರೂ ಪ್ರಯೋಜನವಿಲ್ಲ. ಈ ಹೊಟ್ಟೆನೋವಿಗೆ ಔಷಧಿ ಗೊತ್ತಿದ್ದವಳು - ನನ್ನ ಸಖಿ ಮಾತ್ರ. ಆಕೆ ಗಿಳಿಯಾಗಲೆಂದು ಮುಂಗೋಪದಿಂದ ನಾನು ಶಾಪ ಹಾಕಿದ್ದೆ. ಗಿಳಿಯಾಗಿ ಎಲ್ಲೆಲ್ಲೋ ಕಾಡಿನಲ್ಲಿ ಹಾರಾಡುತ್ತಿರುವ ಅವಳು ಇನ್ನೆಲ್ಲಿ ಸಿಗುತ್ತಾಳೆ? - ಇನ್ನು ನನಗೆ ಸಾವೇ ಗತಿ' ಎಂದು ನಿರಾಸೆಯಿಂದ ಹೇಳಿದಳು.

ಬೇಡರ ಹುಡುಗ ತಮ್ಮ ಮನೆಗೆ ಬಂದು 'ರಾಣಿಯನ್ನು ಹೇಗೆ ಉಳಿಸುವುದು?' ಎಂದು ಚಿಂತೆ ಮಾಡುತ್ತಾ ಕುಳಿತ. ಆಗ ಮತ್ತೆ ಮೊದಲಿನ ಗಿಳಿಯು ಹಾರಿ ಬಂದು ಅವನ ಮುಂಗೈ ಮೇಲೆ ಕುಳಿತುಕೊಂಡಿತು.

'ಚಿಂತೆ ಯಾಕೆ?' - ಎಂದು ಕೇಳಿತು.

'ಏನು ಹೇಳಲಿ? ದ್ವೀಪದ ರಾಣಿಗೆ ಹೊಟ್ಟೆನೋವು ಬಂದಿದೆ. ಆ ನೋವಿಗೆ ಔಷಧಿ ಗೊತ್ತಿದ್ದದ್ದು ಅವಳ ಸಖಿಗೆ ಮಾತ್ರವಂತೆ. ಆ ಸಖಿ ಗಿಳಿಯಾಗಲೆಂದು ರಾಣಿ ಶಾಪ ಹಾಕಿದ್ದರಿಂದ ಅವಳು ಎಲ್ಲೋ ಕಾಡಿನಲ್ಲಿ ಗಿಳಿಯಾಗಿ ಹಾರಾಡುತ್ತಿರಬಹುದು. ತನಗಿನ್ನು ಸಾವೇ ಗತಿ ಎಂದು ರಾಣಿ ದುಃಖಿಸುತ್ತಿದ್ದಾಳೆ. ರಾಜರೂ ಅಷ್ಟೆ. ಪಾಪ, ಅವರಿಗೆ ಹೇಗೆ ಸಹಾಯ ಮಾಡಬೇಕೆಂಬುದೇ ನನಗೆ ತಿಳಿಯುತ್ತಿಲ್ಲ.'

'ಹಾಗೋ? ಹಾಗಾದರೆ ನನ್ನನ್ನೇ ಅಲ್ಲಿಗೆ ಕರೆದುಕೊಂಡು ಹೋಗು' ಎಂದು ಗಿಳಿ ಹೇಳಿತು.

ಗಿಳಿಯ ಮಾತಿನಂತೆ ಅದನ್ನು ಅರಮನೆಗೆ ಕರೆದುಕೊಂಡು ಹೋದ. ರಾಣಿಯ ಸುತ್ತ ರಾಜನೂ ಪರಿವಾರದವರೂ ಆಕೆಯ ಸಂಕಟ ನೋಡಲಾರದೆ ದುಃಖತಪ್ತರಾಗಿ ನಿಂತಿದ್ದರು. ಬೇಡರ ಹುಡುಗ ಒಯ್ದ ಗಿಳಿಯನ್ನು ನೋಡಿದೊಡನೆ ರಾಣಿ, ತನ್ನ ಸಖಿ ಇವಳೇ ಎಂದು ಗುರುತಿಸಿ ಕೂಡಲೇ ಅವಳನ್ನು ಮನುಷ್ಯಳನ್ನಾಗಿ ಮಾಡಿದಳು. ಆ ಸಖಿ ಬಹಳ ಚೆಲುವೆಯಾಗಿದ್ದಳು. ಬೇಡರ ಹುಡುಗ ಮೆಚ್ಚುಗೆಯಿಂದ ಇವಳನ್ನೇ ನೋಡುತ್ತಿದ್ದ. ಆ ಸಖಿ ಔಷಧಿ ಮಾಡಿ ರಾಣಿಗೆ ಕುಡಿಸಿದಳು. ರಾಣಿಗೆ ಗುಣವಾಯಿತು. ಆಗ ರಾಜ ಆ ಬೇಡರ ಹುಡುಗನನ್ನೇ ಮಂತ್ರಿಯನ್ನಾಗಿ ಮಾಡಿದ. ಹಾಗೂ ತನ್ನ ರಾಣಿಯ ಸಖಿಯೊಂದಿಗೆ ಮದುವೆ ಮಾಡಿದ. ಮೊದಲಿದ್ದ ಮಂತ್ರಿಯ ದುಷ್ಟ ಬುದ್ಧಿಯನ್ನರಿತು ಅವನನ್ನು ಗಡೀಪಾರು ಮಾಡಿದ. ಅವರೆಲ್ಲ ಅಲ್ಲಿ ಸುಖವಾಗಿದ್ದರು. ನಾವಿಲ್ಲಿ ಹೀಗಿದ್ದೇವೆ.

# ಅನ್ನದಾನ

ಒಂದೂರಲ್ಲಿ ತಾಯಿ ಮಗ ಇದ್ದರು. ತಾಯಿ ಅವರಿವರ ಮನೆಯ ಕಸಮುಸರೆ ತೊಳೆದು ತಂದುದರಲ್ಲಿ ಮನೆಗೆ ಬಂದವರಿಗೆ ದಾನ ಮಾಡಿ, ಉಳಿದುದನ್ನು ಇಬ್ಬರೂ ತಿನ್ನುತ್ತಿದ್ದರು. ಒಂದೊಂದು ದಿನ ಬಹಳ ಮಂದಿ ಭಿಕ್ಷೆಗೆ ಬಂದರೆ ಮಗನಿಗಷ್ಟು ಇಟ್ಟು ತನ್ನ ಪಾಲಿನ ಅನ್ನವನ್ನೂ ದಾನ ಮಾಡುತ್ತಿದ್ದಳು. ಮಗ ಹೀಗೇ ಬೆಳೆದು ದೊಡ್ಡವನಾದ. ವಯಸ್ಸಿಗೆ ಬಂದ. ತಾಯಿ ಬರೇ ಅನ್ನದಾನವೊಂದನ್ನು ಬಿಟ್ಟಿದ್ದರೆ ಅವರು ದೊಡ್ಡ ಶ್ರೀಮಂತರಾಗಬೇಕಿತ್ತು. ಆಗಲಿಲ್ಲ. ತಾಯಿ ಹೀಗೇಕೆ ಮಾಡುತ್ತಿರಬಹುದೆಂದು ಮಗನಿಗೆ ಯೋಚನೆಯಾಯಿತು. ಒಂದು ದಿನ ಮಗ,



'ತಾಯಿ, ಇದೇಕೆ ಹೀಗೆ ಅನ್ನದಾನ ಮಾಡುತ್ತೀ? ಒಂದೊಂದು ದಿನ ನೀನೇ ಉಪವಾಸವಿದ್ದು ಬೇರೆಯವರಿಗೆ ಅನ್ನದಾನ ಮಾಡುತ್ತೀ, ಅನ್ನದಾನವೊಂದನ್ನು ಬಿಟ್ಟದ್ದರೆ ನಾವು ಎಷ್ಟೊಂದು ಶ್ರೀಮಂತರಾಗುತ್ತಿದ್ದೆವು. ಅದೇನು ಅನ್ನದಾನದ ಮಹತ್ವ? ಹೇಳು' ಎಂದ. ಅದಕ್ಕೆ ತಾಯಿ,

'ಮಗೂ, ದಾನಗಳಲ್ಲಿ ಅನ್ನದಾನವೇ ಹೆಚ್ಚಿನದು. ಬಡತನ ಶ್ರೀಮಂತಿಕೆ ಕೊನೆತನಕ ಇರುವುದಿಲ್ಲ. ಆದರೆ ಅನ್ನದಾನದ ಪುಣ್ಯ ಕೊನೆತನಕ ಇರುವಂಥಾದ್ದು' ಎಂದಳು.

'ಆ ಪುಣ್ಯ ಯಾವುದು?' ಪ್ರಶ್ನಿಸಿದ ಮಗ.

'ಅದನ್ನು ಹೇಳುವುದು ನಮ್ಮಂಥ ನರಮನುಷ್ಯರಿಂದ ಹೇಗಾದೀತು? ಅದು ಶಿವನಿಗೆ ಗೊತ್ತು. ಅವನನ್ನೇ ಹೋಗಿ ಕೇಳು' ಎಂದು ತಾಯಿ ಹೇಳಿದಳು.

ಸರಿ, ಅದರಂತೆ ಮಗ ತಾಯಿಯ ಅಪ್ಪಣೆ ಪಡೆದುಕೊಂಡು ಶಿವನ ಬಳಿಗೆ ಹೊರಟ.

ಹೋಗುತ್ತ ಹೋಗುತ್ತ ದೊಡ್ಡದೊಂದು ಅಡವಿ ಬಂತು. ಅಲ್ಲಿ ಗಿಡಮರ ದಟ್ಟವಾಗಿ ಬೆಳೆದಿದ್ದವು. ಇವನು ಬೆಟ್ಟ ಹತ್ತಿ ಇಳಿಯುವಷ್ಟರಲ್ಲಿ ಸಂಜೆಯಾಯಿತು. ಮುಂದೆ ಏನು ಮಾಡಬೇಕೆಂದು ಹೊಳೆಯದಾಯಿತು. ಆಗ ಅಲ್ಲಿಗೊಬ್ಬ ಬೇಡ ಬಂದ. ಈ ಹುಡುಗನನ್ನು ನೋಡಿ ಅವನಿಗೆ ಕರುಣೆ ಬಂತು. ಹೀಗೇ ಬಿಟ್ಟರೆ ಹುಡುಗ ಹುಲಿ ಸಿಂಹಗಳ ಬಾಯಿಗೆ ಬೀಳುತ್ತಾನೆಂದುಕೊಂಡು,

‘ಏ ಹುಡುಗಾ, ಸಂಜೆ ಸಮಯದಲ್ಲಿ ಹೀಗೆ ಕಾಡಿನಲ್ಲಿ ಅಡ್ಡಾಡಿದರೆ ಏನು ಗತಿಯಾದೀತು? ಇದು ಹುಲಿ-ಸಿಂಹಗಳಿರುವ ಸ್ಥಳ. ಇಂದು ರಾತ್ರಿ ನಮ್ಮ ಗುಡಿಸಿನಲ್ಲಿದ್ದು ನಾಳೆ ಹೋದೀಯಂತೆ ಬಾ’ ಅಂದ. ಹುಡುಗನಿಗೂ ಅಷ್ಟೇ ಬೇಕಾಗಿತ್ತು. ಬೇಡನೊಂದಿಗೆ ಹೋದ.

ಗುಡಿಸಿಲಿಗೆ ಹೋಗಿ ಬೇಡ ಹೆಂಡತಿಗೆ ಹೇಳಿದ. ‘ಅಲೆದಾಡುತ್ತಿದ್ದ, ನಾನೇ ಕರೆದುತಂದೆ. ಇಂದಿದ್ದು ನಾಳೆ ಹೋಗುತ್ತಾನೆ. ಹಸಿದಿದ್ದಾನು, ಹಣ್ಣು ಹಾಲು ಕೊಡು.’ ಅವಳು ‘ಅದೆಲ್ಲಾ ನನ್ನಿಂದ ಆಗದು. ಬೇಕಿದ್ದರೆ ನಿನ್ನ ಪಾಲಿನ ಹಣ್ಣು ಹಾಲು ಕೊಡು. ಇಲ್ಲದಿದ್ದರೆ ಬಿಡು’ ಎಂದಳು. ಬೇಡ ತನ್ನ ಪಾಲಿನ ಹಣ್ಣು, ಹಾಲು ಕೊಟ್ಟ. ‘ಹುಡುಗಾ, ದಣಿದಿದ್ದೀಯಪ್ಪ, ಮಲಗು’ ಅಂದು ಕರುಣೆಯಿಂದ ಹುಡುಗನ ಕಾಲು ತಿಕ್ಕಿದ. ಹಾಸಿಗೆ ಹಾಸಿ ಮಲಗಿಸಿದ. ತನಗೆ ಮಲಗಲು ಸ್ಥಳ ಇರದದ್ದರಿಂದ ಬಾಗಿಲ ಹೊರಗೆ ಕಾಲು ಚಾಚಿ ಒಳಗೆ ತಲೆಯಿಟ್ಟು ಬಾಗಿಲು ತೆರೆದೇ ಮಲಗಿದ. ಆದರೆ ರಾತ್ರಿ ಹುಲಿ ಬಂದು ಹೊರಗರ್ಧ ಒಳಗರ್ಧ ಮಲಗಿದ್ದ ಬೇಡನನ್ನು ಕೊಂದು ತಿಂದುಹಾಕಿತು. ರಕ್ತದ ರುಚಿ ಹತ್ತಿ ಒಳಗೆ ಹೋಗಿ ಅವನ ಹೆಂಡತಿಯನ್ನೂ ತಿಂದು ಹಾಕಿತು. ಹೊಟ್ಟೆ ತುಂಬಿದ ಹುಲಿ ಆ ಹುಡುಗನನ್ನು ನೋಡದೆ ಹಾಗೇ ಹೋಯಿತು. ಮುಂಜಾನೆ ಇವನೆದ್ದು ನೋಡಿದರೆ ಇಬ್ಬರ ಎಲುಬುಗಳನ್ನು ಬಿಟ್ಟು ಬೇರೇನೂ ಇರಲಿಲ್ಲ. ಪಾಪ ಬಹಳ ಅನ್ಯಾಯವಾಯಿತೆಂದು ಹಳಹಳಸಿ ಮತ್ತೆ ಪ್ರಯಾಣ ಮಾಡಿದ.

ದಾರಿಯಲ್ಲಿ ಒಬ್ಬ ರಾಜ ತಲೆಯ ಮೇಲೆ ಕೈ ಹೊತ್ತು ಕೂತಿದ್ದ. ಇವನನ್ನು ನೋಡಿ –

‘ಹುಡುಗಾ, ಎಲ್ಲಿ ಹೊರಟಿರುವೆ?’ ಅಂದ.

‘ಒಂದು ಪ್ರಶ್ನೆಯಿದೆ. ಅದನ್ನು ಕೇಳಲು ಶಿವನ ಬಳಿಗೆ ಹೋಗುತ್ತಿದ್ದೇನೆ’ ಎಂದ.

‘ಹಾಗಿದ್ದರೆ ನನ್ನದೂ ಒಂದು ಪ್ರಶ್ನೆ ಇದೆ. ಕೇಳಿಕೊಂಡು ಬರುತ್ತೀಯಾ?’ ಎಂದ ರಾಜ.

‘ಏನದು?’

‘ಕೋಟಿ ಹಣ ಖರ್ಚು ಮಾಡಿ ಒಂದು ಕೆರೆ ಕಟ್ಟಿಸಿದೆ. ತಟ್ಟಂತ ಒಂದು ಹನಿ ನೀರಿಲ್ಲ. ಯಾಕೆಂದು ಕೇಳಿಕೊಂಡು ಬರುತ್ತೀಯಾ’.

ಆಗಲೆಂದು ಹುಡುಗ ಮುಂದೆ ಹೊರಟ.

ಮುಂದೆ ಹೋಗುವಷ್ಟರಲ್ಲಿ ಒಬ್ಬ ಕುಂಟ ಕುಳಿತಿದ್ದ. ಅವನೂ, ‘ತಮ್ಮಾ, ನನ್ನ ಕುಂಟುತನಕ್ಕೆ ಏನು ಕಾರಣವೆಂದು ಕೇಳಿಕೊಂಡು ಬಾ’ ಅಂದ. ಆಗಲೆಂದು ಹುಡುಗ ಮುಂದೆ ಹೊರಟ.

ಮುಂದೆ ದಾರಿಯಲ್ಲಿ ಒಂದು ಹುತ್ತ ಸಿಕ್ಕಿತು. ಅದರಲ್ಲಿ ಅರ್ಧ ಒಳಗೂ ಸಿಕ್ಕಿಕೊಂಡು ಹಿಂದಕ್ಕೂ ಮುಂದಕ್ಕೂ ಚಲಿಸಲಾರದ ಒಂದು ಸರ್ಪವಿತ್ತು. ಅದಕ್ಕೂ ತನ್ನ ಪ್ರಯಾಣದ ಉದ್ದೇಶ ಹೇಳಿದ. ಅದು ‘ನನ್ನ ಇಂಥ ಸ್ಥಿತಿಗೆ ಏನು ಕಾರಣ ಕೇಳಿಕೊಂಡು ಬಾ’ ಎಂದಿತು. ಹುಡುಗ ಆಗಲೆಂದು ಹೇಳಿ ಮುಂದಕ್ಕೆ ಹೊರಟ.



ಹೋದ, ಹೋದ. ಸೀದಾ ಕೈಲಾಸ ಪರ್ವತಕ್ಕೇ ಹೋದ. ಅಲ್ಲಿ ಶಿವ ಪಾರ್ವತಿ ಕುಳಿತಿದ್ದರು. ಹೋಗಿ ನಮಸ್ಕರಿಸಿದ. 'ಶಂಭೋ, ಅನ್ನದಾನದ ಪುಣ್ಯ ಏನು? ಹೇಳಬೇಕು' ಎಂದ. ಅದಕ್ಕೆ ಶಿವನು,

'ನೋಡು ಮಗು, ನೇಪಾಳ ದೇಶದ ರಾಜನ ಹೆಂಡತಿ ಗರ್ಭವತಿಯಾಗಿದ್ದಾಳೆ. ನೀನು ಹೋಗಿ ನಾನು ಕೊಟ್ಟ ಪ್ರಸಾದ ಕೊಡು. ಹಡೆಯುತ್ತಾಳೆ. ಹುಟ್ಟಿದ ಆ ಕೂಸನ್ನು ಕೇಳಿದರೆ ಅದು ನಿನಗೆ ಅನ್ನದಾನದ ಪುಣ್ಯ ಏನೆನ್ನುವುದನ್ನು ಹೇಳುತ್ತದೆ' ಎಂದ.

ಹಾಗೆಯೇ ರಾಜನ ಕೆರೆಯಲ್ಲಿ ನೀರು ಬೀಳದಿರುವ ಕಾರಣ ಕೇಳಿದ. ಅದಕ್ಕೆ ಶಿವನು ಹೇಳಿದ –

'ರಾಜನಿಗೆ ಬೆಳೆದ ಒಬ್ಬ ಮಗಳಿದ್ದಾಳೆ. ಅವಳನ್ನು ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಿದರೆ ಕೆರೆಯಲ್ಲಿ ನೀರು ತುಂಬುತ್ತದೆ.'

'ಹಾಗೆ ಕುಂಟನ ಕಾಲು ಯಾಕೆ ಹೋಗಿವೆ?'

'ತನಗೆ ತಿಳಿದ ವಿದ್ಯೆಯನ್ನು ಆತ ಯಾರಿಗಾದರೂ ಯೋಗ್ಯನಿಗೆ ದಾನ ಮಾಡಿದರೆ ಹೋದ ಕಾಲು ಬರುತ್ತವೆ.'

'ಸರ್ಪವೊಂದು ಹುತ್ತದ ಒಳಗೂ ಹೋಗದೆ ಹೊರಗೂ ಬರಲಾರದೆ ಸಿಕ್ಕಿಕೊಂಡಿದೆಯಲ್ಲ. ಏನು ಕಾರಣ?'

'ತನ್ನ ನೆತ್ತಿಯ ರತ್ನವನ್ನು ಯಾರಾದರೂ ಯೋಗ್ಯನಿಗೆ ದಾನ ಮಾಡದಲ್ಲಿ ಅದು ಸರಿದಾಡಬಹುದು.'

– ಹೀಗೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೇಳಿಕೊಂಡು ಶಿವಪಾರ್ವತಿಯರಿಗೆ ನಮಸ್ಕರಿಸಿ, ಪ್ರಸಾದ ತೆಗೆದುಕೊಂಡು ತಿರುಗಿ ಬಂದ.

ಬರುವಾಗ ದಾರಿಯಲ್ಲಿ ಮೊದಲು ಸರ್ಪ ಸಿಕ್ಕಿತು. 'ಹುಡುಗಾ, ಕೇಳಿದೆಯಾ ನನ್ನ ಪ್ರಶ್ನೆ?' ಎಂದಿತು.

'ಹೌದು ಕೇಳಿದೆ. ನಿನ್ನ ನೆತ್ತಿಯಲ್ಲೊಂದು ರತ್ನ ಇದೆಯಂತೆ. ಅದನ್ನು ಯೋಗ್ಯನಿಗೆ ದಾನ ಮಾಡಿದರೆ ನೀನು ಸರಿದಾಡಬಹುದಂತೆ' ಎಂದ.

'ಹಾಗಿದ್ದರೆ ಇಕೊ, ನಿನಗೇ ಅದನ್ನು ದಾನ ಮಾಡುತ್ತೇನೆ. ತಕೋ' ಎಂದು ತನ್ನ ನೆತ್ತಿಯ ರತ್ನವನ್ನು ಹುಡುಗನಿಗೆ ಕೊಟ್ಟಿತು. ಆ ಕೂಡಲೇ ಅದಕ್ಕೆ ಸರಿದಾಡುವ ಶಕ್ತಿ ಬಂದು, ಆನಂದದಿಂದ ಹೆಡೆ ತೆಗೆದು ಆಡಲಾರಂಭಿಸಿತು. ಹುಡುಗ ಮತ್ತೆ ತನ್ನ ದಾರಿ ಹಿಡಿದ.

ಮುಂದೆ ಬರುವಷ್ಟರಲ್ಲಿ ಕುಂಟ ಸಿಕ್ಕಿದ. 'ಹುಡುಗಾ, ನನ್ನ ಪ್ರಶ್ನೆ ಕೇಳಿದೆಯಾ?' ಎಂದು ಕೇಳಿದ.

'ಕೇಳಿದೆ. ನಿನ್ನ ಹತ್ತಿರ ಇರುವ ವಿದ್ಯೆಯನ್ನೆಲ್ಲ ಒಬ್ಬ ಯೋಗ್ಯನಿಗೆ ದಾನ ಮಾಡಿದರೆ ನಿನ್ನ ಕಾಲು ಬರುತ್ತವಂತೆ." ಎಂದ ಹುಡುಗ.

'ಹಾಗಿದ್ದರೆ ನಿನ್ನಂತ ಯೋಗ್ಯ ಯಾರಿದ್ದಾರು? ಇಕೊ, ನನಗೆ ಗೊತ್ತಿರುವ ವಿದ್ಯೆಯನ್ನು ನಿನಗೆ ದಾನ ಮಾಡುತ್ತೇನೆ.'

– ಎಂದು ಹೇಳಿ ಕುಂಟ ತನ್ನ ಅರವತ್ತ ನಾಲ್ಕು ವಿದ್ಯೆಗಳನ್ನೆಲ್ಲ ಇವನಿಗೆ ಧಾರೆಯೆರದ. ಅವನಿಗೆ ಕಾಲು ಬಂದವು. ಆನಂದದಿಂದ ಕುಣಿದಾಡಿದ. ಹುಡುಗ ಮತ್ತೆ ತನ್ನ ದಾರಿಯನ್ನು ಹಿಡಿದು ಹೊರಟ.

ಇನ್ನಷ್ಟು ಮುಂದೆ ಬಂದ. ತಲೆಯ ಮೇಲೆ ಕೈ ಹೊತ್ತಿದ್ದ ರಾಜ ಸಿಕ್ಕಿದ. ಇವನನ್ನು ಕಂಡೊಡನೆ 'ಹುಡುಗಾ, ನನ್ನ ಮಾತನ್ನು ಕೇಳಿದೆಯಾ?' ಎಂದ.

'ಹೌದು, ಕೇಳಿದೆ. ನಿನ್ನ ಬೆಳೆದ ಮಗಳನ್ನು ಒಬ್ಬ ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಿದರೆ ಕೆರೆಯಲ್ಲಿ ನೀರು ತುಂಬುತ್ತದಂತೆ'.

'ನಿನಗಿಂತ ಯೋಗ್ಯ ವರ ಇನ್ನಾರಿದ್ದಾರು! ಬಾ' ಎಂದು ಹೇಳಿ ರಾಜ ತನ್ನ ಮಗಳನ್ನು ಆ ಹುಡುಗನಿಗೆ ಮದುವೆ ಮಾಡಿಕೊಟ್ಟ. ಬೆಳಗಾಗುವಷ್ಟರಲ್ಲಿ ಕೆರೆ ನೀರಿನಿಂದ ತುಂಬಿ ತುಳುಕಲಾರಂಭಿಸಿತು.

ಹುಡುಗ ಹೆಂಡತಿಯನ್ನು ಕರೆದುಕೊಂಡು ನೇಪಾಳ ದೇಶಕ್ಕೆ ಬಂದ. ಆ ದೇಶದ ರಾಜನ ಹೆಂಡತಿ ದಿನ ತುಂಬಿದ್ದರೂ ಹಡೆಯಲಾರದೆ ಸಂಕಟ ಪಡುತ್ತಿದ್ದಳು. ಹುಡುಗ ಹೋಗಿ ಶಿವನ ಪ್ರಸಾದ ಕೊಟ್ಟ. ಅವಳು ಆ ಕ್ಷಣವೇ ಬಂಗಾರದಂಥ ಮಗನನ್ನು ಹಡೆದಳು. 'ಆ ಕೂಸಿಗೊಂದು ಪ್ರಶ್ನೆ ಕೇಳಬೇಕಾಗಿದೆ. ದರ್ಬಾರಿಗೆ ತರಿಸಬೇಕು' ಎಂದು ಹುಡುಗ ಹೇಳಿದ. ಎಲ್ಲರಿಗೂ ಆಶ್ಚರ್ಯವಾಯಿತು. ಆದರೂ ಕೂಸನ್ನು ದರ್ಬಾರಿಗೆ ತಂದು ಬಂಗಾರದ ತಟ್ಟೆಯಲ್ಲಿಟ್ಟರು. ಹುಡುಗ ಹೇಳಿದ –

'ಮಗು, ಶಿವ ನನ್ನನ್ನು ನಿನ್ನ ಬಳಿ ಕಳಿಸಿದ್ದಾನೆ. ಅನ್ನದಾನದ ಪುಣ್ಯ ಯಾವುದು?'

ಈ ಮಾತನ್ನು ಕೇಳಿ ತಟ್ಟೆಯಲ್ಲಿದ್ದ ಮಗು ಪಕ ಪಕ ನಕ್ಕು ಮಾತಾಡಿತು.

'ಅಯ್ಯ, ಶಿವನನ್ನು ಕಂಡು ಬಂದರೂ ನಿನಗೆ ಈ ವಿಚಾರ ತಿಳಿಯಲಿಲ್ಲವೆ? ನೀನು ಶಿವನನ್ನು ಕಾಣುವುದಕ್ಕೆ ಹೊರಟಿದ್ದಿ. ಅಡವಿಯಲ್ಲಿ ದಾರಿ ತಪ್ಪಿ ಅಲೆದಾಡುತ್ತಿದ್ದಿ. ಆಗ ಒಬ್ಬ ಬೇಡ ಬಂದು ನಿನ್ನನ್ನು ತನ್ನ ಗುಡಿಸಿಲಿಗೆ ಕರೆದೊಯ್ದು ಹಣ್ಣು ಹಾಲು ಕೊಟ್ಟದ್ದು ನೆನಪಿದೆಯೆ?'

'ಹೌದು.'

'ಹಾಗೆ ಮಾಡಿದ ಬೇಡ ನಾನೇ. ಅಂದೆ ನನ್ನನ್ನೂ ನನ್ನ ಹೆಂಡತಿಯನ್ನೂ ಹುಲಿ ತಿಂದಿತು; ಅನ್ನದಾನ ಮಾಡಿದ್ದಕ್ಕೆ ನಾನಿಂದು ರಾಜಕುಮಾರನಾಗಿ ಹುಟ್ಟಿದ್ದೇನೆ. ನನ್ನ ಹೆಂಡತಿ ಕೊಡಲು ಒಪ್ಪಲಿಲ್ಲ. ಅವಳು ಇದೇ ಊರಿನಲ್ಲಿ ಹಂದಿಯಾಗಿ ಹುಟ್ಟಿದ್ದಾಳೆ. ಬೇಕಾದರೆ ಹೋಗಿ ನೋಡು' ಎಂದು ಆ ಮಗು ಹೇಳಿತು.

ಆಗ ಈ ಹುಡುಗ ತಿರುಗಿ ತನ್ನ ತಾಯಿಯ ಬಳಿಗೆ ಬಂದು ತಾನೂ ಅನ್ನದಾನ ಮಾಡುತ್ತ ಸುಖದಿಂದ ಇದ್ದ.

* * *

# ಹುಚ್ಚಯ್ಯ

ಒಂದೂರಿನಲ್ಲಿ ಮೂರು ಜನ ಅಣ್ಣತಮ್ಮಂದಿದ್ದರು. ಕೊನೆಯವನೇ ಹುಚ್ಚಯ್ಯ. ಅವನ ಹೆಸರು ಏನಿತ್ತೋ, ಅವನು ಹುಚ್ಚನಾದ್ದರಿಂದ ಜನ ಅವನನ್ನು ಹುಚ್ಚಯ್ಯನೆಂದೇ ಕರೆಯುತ್ತಿದ್ದರು. ಹಾಗೆಂದು ಕರೆದರೆ ಅವನಿಗೂ ಸಿಟ್ಟಿಲ್ಲ. ಹುಚ್ಚಯ್ಯ ಮುಚ್ಚಿ ಆಡುವ ಮನುಷ್ಯನಲ್ಲ. ರಹಸ್ಯವೆಂಬುದು ಅವನಿಗೆ ಗೊತ್ತೇ ಇಲ್ಲ. ಕೆಲವರು ಊರಲ್ಲಿ ಹಬ್ಬಬೇಕಾದ ಸುದ್ದಿಗಳನ್ನು ಹುಚ್ಚಯ್ಯನಿಗೆ ಹೇಳಿ, 'ಯಾರ ಮುಂದೆಯೂ ಹೇಳಬೇಡ ಹುಚ್ಚಯ್ಯ' ಎಂದು ಹೇಳುತ್ತಿದ್ದರು. ಹುಚ್ಚಯ್ಯ ಊರಿನ ಪ್ರತಿಯೊಬ್ಬರಿಗೂ ಆ ಸುದ್ದಿ ಹೇಳಿ, 'ಯಾರ ಮುಂದೂ ಹೇಳಬೇಡ' ಎಂದು ಹೇಳುತ್ತಿದ್ದ.

ಅವನ ಇಬ್ಬರೂ ಅಣ್ಣಂದಿರಿಗೆ ಮದುವೆಯಾಗಿತ್ತು. ಆದ್ದರಿಂದ ಇಬ್ಬರೂ ಅಣ್ಣಂದಿರು ಆಸ್ತಿ ಹಂಚಿಕೊಂಡು ಬೇರೆ ಆದರು. ಈ ಹುಚ್ಚಯ್ಯನೊಬ್ಬ ಇಬ್ಬರಲ್ಲಿಯೂ ಉಂಡಾಡಿಕೊಂಡಿರಲಿ ಎಂದುಕೊಂಡರು. ಆದರೆ ಹುಚ್ಚಯ್ಯ ಬಿಡಬೇಕಲ್ಲ-

'ಅಣ್ಣಗಳಿರಾ, ನೀವು ಅನ್ಯಾಯ ಮಾಡುತ್ತಿದ್ದೀರಿ. ನಾನೂ ನಮ್ಮಪ್ಪನಿಗೇ ಹುಟ್ಟಿದವನು. ನನಗೂ ಪಾಲು ಬೇಕು'

- ಎಂದು ಹಟ ಹಿಡಿದ. ಇಬ್ಬರು ಅಣ್ಣಂದಿರೂ 'ನಿನಗೆ ಏನು ಬೇಕು, ಹೇಳು ಹುಚ್ಚಯ್ಯ?' ಎಂದರು. ಈಗ ಮಾತ್ರ ಏನು ಕೇಳಬೇಕೆಂದು ಅವನಿಗೆ ತಿಳಿಯದಾಯಿತು. ಕೊನೆಗೆ ಏನೂ ತಿಳಿಯದೆ 'ನನಗೆ ಈ ಎತ್ತು ಬೇಕು'ಎಂದು ಹೇಳಿದ. ಅವರ ಮನೆಯಲ್ಲೊಂದು ದುಡಿಯಲಾರದ ಎತ್ತು ಇತ್ತು. ಅದನ್ನು ಸಂತೋಷದಿಂದ ಕೊಟ್ಟರು.

ಅಣ್ಣಂದಿರ ಮನೆಯಲ್ಲಿ ಊಟ ಮಾಡಿದರೂ ತಾನು ಬೇರೆ ಇದ್ದೇನೆಂದೇ ಅವನ ತರ್ಕ. ಯಾಕೆಂದರೆ ಅಂದಿನಿಂದ ತನ್ನ ಎತ್ತಿನೊಂದಿಗೆ ಹಿತ್ತಲಲ್ಲಿಯೇ ಇರತೊಡಗಿದ. ಅದರ ಮೈ ತಿಕ್ಕುವುದೇನು! ಮೇವು ತಿನ್ನಿಸುವುದೇನು! ನೀರು ಕುಡಿಸುವುದೇನು! ಒಂದು ಕೂಸಿನಂತೆ ಅದರ ರಕ್ಷಣೆ ಮಾಡುತ್ತಿದ್ದ. ಸಾಲದ್ದಕ್ಕೆ ಅದರೊಂದಿಗೆ ಮಾತುಕತೆ ಆಡುತ್ತಿದ್ದ. ಇವನು ಹೇಳಿ ಕೇಳಿದ್ದಕ್ಕೆ ಅದು ಕತ್ತು ಅಲುಗಿಸಿದರೇ ಕಿವಿಯಿಂದ ನೊಣ ಹೊಡೆದುಕೊಂಡರೆ, ಬಾಲ ಅಲುಗಿಸಿದರೆ ಅದಕ್ಕೊಂದು ಅರ್ಥ ಹಚ್ಚಿ, ಅದನ್ನೂ ತಾನೇ ಹೇಳಿಕೊಡುತ್ತಿದ್ದ. ಆ ಎತ್ತು ಮೇವು ಇಲ್ಲದ್ದಕ್ಕೆ ಇವನ ಮೈ ನೆಕ್ಕಿದರೆ, 'ದನದಂಥ ದನಕ್ಕೂ ಏನು ಪ್ರೀತಿ!' ಎಂದು ಹೋಗಿ ಬರುವವರಿಗೆ ಹೇಳುತ್ತಿದ್ದ. ಸಾಲದೆಂದು ಬಸವಕುಮಾರ ಎಂದು ಅದಕ್ಕೆ ಹೆಸರು ಇಟ್ಟಿದ್ದ. ಒಂದೆಂಟು ದಿನಗಳಂತೂ, 'ನಮ್ಮ ಬಸವಕುಮಾರ ಈ ದಿನ ಯಾಕೋ ನೀರು ಕುಡಿಯಲಿಲ್ಲ', 'ಇಂದು ಯಾಕೋ ಬಾಲ ಅಲುಗಿಸಿಲ್ಲ', 'ಈ ಹೊತ್ತು ಒದರಲಿಲ್ಲ' ಎಂದು ಅದರ ತಾಯಿಗೆ ಹಾಗೆ ಹೇಳುತ್ತಿದ್ದ. ಆ ಮುದಿ ಎತ್ತಿಗೆ ಇವನ ಭಾಷೆ ತಿಳಿಯಲಿಲ್ಲ. ಒಂದು ಸಲ ಹುಚ್ಚಯ್ಯ ಅದರ ಬಾಲ ಹಿಡಿದು, 'ಬಸವಾ ಕುಮಾರಾ, ಬಾಲವನ್ನೇಕೆ ಅಲುಗಿಸುತ್ತಿಲ್ಲ?' ಎನ್ನುತ್ತ ಕೈಯಾಡಿಸಿದ. ಎತ್ತು ಬಿದ್ದುಬಿಟ್ಟಿತು. ಹುಚ್ಚಯ್ಯನಿಗೆ ಆ ಕ್ಷಣವೇ ಎತ್ತಿನ ಬಗ್ಗೆ ವೈರಾಗ್ಯ ಹುಟ್ಟಿತು.

ಅಣ್ಣಂದಿರ ಬಳಿ ಎರಡು ಹಸುಗಳಿದ್ದವು. ಅಡಚಣೆಗಾಗಿ ಅವರು ಪಕ್ಕದ ಊರಿಗೆ ಹೊಡೆದುಕೊಂಡು ಹೋಗಿ ಮಾರಿ ಬಂದರು. ಹುಚ್ಚಯ್ಯ ಇದನ್ನು ನೋಡಿ ತಾನೂ ತನ್ನ ಮುದಿ ಎತ್ತನ್ನು ಮಾರಬೇಕೆಂದು ಪಕ್ಕದ ಊರಿನ ಸಂತೆಗೆ ಹೋದ. ಆದರೆ ಇವನದು ಮುದಿ ಎತ್ತು. ಯಾರು ಕೊಳ್ಳುತ್ತಾರೆ? ಸಾಯಂಕಾಲದ ತನಕ ನಿಲ್ಲಿಸಿಕೊಂಡು ಮಾರಲಿಲ್ಲವೆಂದು ವಾಪಸು ಬರುತ್ತಿದ್ದ. ದಾರಿಯಲ್ಲಿ ಒಗಿದ ಮರ ಗಾಳಿಗೆ ಅಲುಗಿ, 'ಗಿರಕ್ ಗಿರಕ್' ಎಂದು ಶಬ್ದ ಮಾಡಿತು. ಇವನು ಹೇಳಿ ಕೇಳಿ ಹುಚ್ಚಯ್ಯ. ಅಷ್ಟೇ ಸಾಕು,



‘ಏನು ಮರಪ್ಪ, ಈ ಎತ್ತಿಗೆ ಏನು ಬೆಲೆ ಎಂದು ಕೇಳಿದೆಯೋ?’ ಎಂದ. ಮರ ಮತ್ತೂ ಹಾಗೆ ಸಪ್ಪಳ ಮಾಡಿತು. ಹುಚ್ಚಯ್ಯ ಹೇಳಿದ. ‘ಇದಕ್ಕೆ ಕೊನೇಪಕ್ಷ ಇಪ್ಪತ್ತೈದು ರೂಪಾಯಿ ಇಲ್ಲದೆ ಕೊಡೋದಿಲ್ಲ ನೋಡು’ ಅಂದ. ಮರ ‘ಗಿರಕ್ ಗಿರಕ್’ ಎಂದು ಸಪ್ಪಳ ಮಾಡಿತು. ‘ಏನು? ಇಪ್ಪತ್ತೈದು ರೂಪಾಯಿ ಕೊಡುತ್ತೇನೆಂದೆಯಾ?’ ಮರ ‘ಗಿರಕ್’ ಎಂದಿತು. ‘ಸರಿ ಅಂದೆಯಾ? ತಗೊ ಹಾಗಾದರೆ, ನನ್ನ ರೂಪಾಯಿ ಕೊಡು’ ಎಂದ. ಮರ ‘ಗಿರಕ್ ಗಿರಕ್’ ಎಂದಿತು. ಹುಚ್ಚಯ್ಯ, ‘ಆಯ್ತು ಬಿಡು’ ಅಂದವನೇ ಹೋಗಿ ತನ್ನ ಮುದಿ ಎತ್ತನ್ನು ಆ ಮರಕ್ಕೆ ಕಟ್ಟಿಹಾಕಿದ. ಮರ ಮತ್ತೆ ‘ಗಿರಕ್ ಗಿರಕ್’ ಎಂದಿತು. ‘ಏನಂತೆ? ದುಡ್ಡ ನಾಳೆ ಕೊಡುತ್ತೀಯಾ? ಕೊಡು. ಹಾಗೇ ಆಗಲಿ’ ಎಂದು ಹೇಳಿ ಮನೆಗೆ ಹೋದ.

ಮನೆಯಲ್ಲಿ ಊಟಕ್ಕೆ ಕುಳಿತಾಗ ಅಣ್ಣಂದಿರು, ‘ನಿನ್ನ ಎತ್ತು ಎಲ್ಲಿ ಹುಚ್ಚಯ್ಯ?’ ಎಂದು ಕೇಳಿದರು.

‘ಮಾರಿ ಬಂದೆನಲ್ಲ.’

‘ಎಷ್ಟಕ್ಕೆ?’

‘ಇಪ್ಪತ್ತೈದು ರೂಪಾಯಿಗೆ.’

ತಮ್ಮ ಪರವಾಯಿಲ್ಲ. ಆ ಮುದಿ ಎತ್ತನ್ನೂ ಇಪ್ಪತ್ತೈದಕ್ಕೆ ಮಾರಿದನಲ್ಲಾ ಎಂದುಕೊಂಡರು. ‘ರೂಪಾಯಿ ಎಲ್ಲಿ?’ ಎಂದರೆ ‘ನಾಳೆ ಕೊಡುತ್ತೇನೆಂದ’ ಎಂದು ಹೇಳಿ ಊಟ ಮುಗಿಸಿ ಎದ್ದ. ಇದ್ದರೂ ಇರಬಹುದೆಂದು ಅವರೂ ಸುಮ್ಮನಾದರು.

ಮಾರನೇ ದಿನ ಹುಚ್ಚಯ್ಯ ಆ ಮರದ ಬಳಿಗೆ ಹೋದ. ಎತ್ತನ್ನು ಯಾರೋ ಬಿಚ್ಚಿಕೊಂಡು ಹೋಗಿದ್ದರು. ‘ಏನಪ್ಪಾ ಮರಪ್ಪಾ, ಕೊಡು ನನ್ನ ಹಣ’ ಅಂದ. ಮರ ಆಗೂ ‘ಗಿರಕ್ ಗಿರಕ್’ ಎಂದೇ ಧ್ವನಿ ಮಾಡಿತು. ‘ಏನಂತೆ? ನಾಳೆ ಕೊಡುವೆಯಾ? ನಾಳೆ ತಪ್ಪಿಸಬೇಡ. ಮತ್ತೆ ನಾಳೆ ಬಾ, ನಾಡಿದ್ದು ಬಾ - ಇಂಥಾದ್ದೆಲ್ಲ ವ್ಯವಹಾರವೇ ಅಲ್ಲ. ಏನೋ ಬಾಯಿಬಿಟ್ಟು ಕೇಳಿದ್ದೀಯಾ, ಇದೊಮ್ಮೆ ಆಗಲಿ’ ಅಂದುಕೊಂಡು ಮನೆಗೆ ಬಂದ. ಆ ದಿನವೂ ಅಣ್ಣಂದಿರು, ‘ಹಣ ಎಲ್ಲಿ’ ಎಂದು ಕೇಳಿದರು. ‘ಇಲ್ಲ ನಾಳೆ ಕೊಡುತ್ತಾನಂತೆ’ ಎಂದ.

‘ಹೋಗಲಿ, ಮಹಾರಾಯಾ, ಯಾರಿಗೆ ಮಾರಿದೆ ಹೇಳು.’

‘ದಾರಿಯ ಬದಿಯ ಮರಕ್ಕೆ.’

ಅಣ್ಣಂದಿರು ಇದನ್ನು ಕೇಳಿ, 'ಎಂದಿಗೆ ಇವನಿಗೆ ಬುದ್ಧಿ ಬಂದೀತೋ!' ಎಂದು ಬೈದರು. 'ಪಾಪ ಬಹಳ ಒತ್ತಾಯ ಮಾಡಿದ. ಮನಸ್ಸು ಕರಗುವ ಹಾಗೆ ಕೇಳಿಕೊಂಡ. ಅದಕ್ಕೆ ಕೊಟ್ಟೆ' ಎಂದು ಹುಚ್ಚಯ್ಯ ಹೇಳಿದ. ಅದು ಮೊದಲೇ ಮುದಿ ಎತ್ತಾದ್ದರಿಂದ ಹೊತ್ತು ಹುಗಿಯುವ ತೊಂದರೆ ತಪ್ಪಿತಲ್ಲಾ ಎಂದು ಅವರೂ ಸುಮ್ಮನಾದರು.

ಮಾರನೇ ದಿನ ಹುಚ್ಚಯ್ಯ ಕೊಡಲಿ ಹಿಡಿದುಕೊಂಡೇ ಮರದ ಬಳಿ ಬಂದ. 'ಇಂದಾದರೂ ಹಣ ಕೊಡುತ್ತೀಯೋ ಇಲ್ಲೋ' ಎಂದ. ಮರ ಎಂದನಂತೆ 'ಗಿರಕ್ ಗಿರಕ್' ಎಂದಿತು. 'ನಿನ್ನ ಗಿರಕ್ಕೂ ಇಲ್ಲ. ಪರಕ್ಕೂ ಇಲ್ಲ. ನಾ ಕೇಳೋದಿಲ್ಲ. ನನ್ನ ಇಪ್ಪತ್ತೈದು ರೂಪಾಯಿ ಕೊಡಬೇಕು. ಇಲ್ಲಾ ಇಪ್ಪತ್ತೈದು ಸಲ ಈ ಕೊಡಲಿಯಿಂದ ಏಟು ತಿನ್ನಬೇಕು; ಏನಂತಿ?"

ಮರ 'ಗಿರಕ್ ಗಿರಕ್' ಎಂದಿತು. ಹುಚ್ಚಯ್ಯ ಸಿಟ್ಟಿಗೆದ್ದು, ಒಂದು, ಎರಡು, ಮೂರು ಎಣಿಸುತ್ತ ಕೊಡಲಿಯಿಂದ ಏಟು ಹಾಕಲಾರಂಭಿಸಿದ. ಅದು ಮೊದಲೇ ಒಣಗಿದ ಮರ. ಇವನು ಹತ್ತೆಂಟು ಏಟು ಹಾಕುವುದರಲ್ಲಿ ಬಿದ್ದು ಬಿಟ್ಟಿತು. ಆದರೆ ಯಾರೋ ಕಳ್ಳರು ಕದ್ದ ಬೆಳ್ಳಿ, ಬಂಗಾರವನ್ನು ಅದರ ಪೊಟರೆಯೊಳಗೆ ಸಂಗ್ರಹಿಸಿ ಇಟ್ಟಿದ್ದರು. ಅದೀಗ ಹೊರಗೆ ರಾಶಿಯಾಗಿ ಬಿದ್ದಿತು. ಹುಚ್ಚಯ್ಯ ಅಷ್ಟಿಷ್ಟು ಕಟ್ಟಿಕೊಂಡು ಮನೆಗೆ ಓಡಿಹೋಗಿ, ಊಟಕ್ಕೆ ಕೂತ ಅಣ್ಣಂದಿರ ಮುಂದೆ ಸುರುವಿಟ್ಟ. ಅಣ್ಣಂದರಿಗೆ ಸಂತೋಷ ಆಶ್ಚರ್ಯ ಎರಡೂ ಆದವು.

'ಎಲ್ಲಿಯದೋ ಹುಚ್ಚಯ್ಯ?' ಎಂದರು ಅವರು.

'ನಾನು ಹೇಳಿರಲಿಲ್ಲವೆ. ಮರಕ್ಕೆ ಎತ್ತು ಮಾರಿದ್ದೇನೆ ಅಂತ? ಅದು ರೂಪಾಯಿ ಕೊಡಲಿಲ್ಲ. ಬೆಳ್ಳಿ ಬಂಗಾರ ಕೊಟ್ಟಿತು. ಇನ್ನೂ ಅದರ ಹತ್ತಿರ ಬಹಳ ಬೆಳ್ಳಿ ಬಂಗಾರ ಬಿದ್ದಿದೆ' ಅಂದ. 'ನಡೆ ಹಾಗಾದರೆ' ಎಂದು ಇಬ್ಬರೂ ಅಣ್ಣಂದಿರು ಅವನೊಂದಿಗೆ ಓಡಿ ಹೋದರು.

ಹುಚ್ಚಯ್ಯನ ಮಾತಿನಂತೆ ಅಲ್ಲಿ ಬೆಳ್ಳಿ ಬಂಗಾರದ ಹೇರಳ ರಾಶಿಯಿತ್ತು. ಅಷ್ಟನ್ನು ಬಳಿದು ಕಟ್ಟಿಕೊಂಡರು. ಹುಚ್ಚಯ್ಯನ ಮೇಲೆ ಸಣ್ಣದೊಂದು ಗಂಟು ಹೊರೆಸಿದರು. 'ನಮಗೆ ಬೆಳ್ಳಿ ಬಂಗಾರ ಸಿಕ್ಕಿದ್ದನ್ನ ಬೇರೆಯವರಿಗೆ ಹೇಳಬೇಡ ಹುಚ್ಚಯ್ಯ?' ಎಂದರು. ಆಗಲೆಂದ,

ಮೂವರೂ ಅವಸರದಿಂದ ಮನೆಯ ಕಡೆಗೆ ಬರುತ್ತಿರುವಾಗ ದಾರಿಯಲ್ಲಿ ಯಾವುದೋ ಊರಿಗೆ ಹೋಗಿದ್ದ ಆ ಊರಿನ ಪುರೋಹಿತರು ಸಿಕ್ಕಿದರು. 'ಏನ್ರಯ್ಯಾ, ತಲೆಯ ಮೇಲೆ ಏನು ಹೊತ್ತುಕೊಂಡು ಹೊರಟಿದ್ದೀರಿ?' ಅಂದರು. ಹಿರಿಯಣ್ಣ, 'ಏನಿಲ್ಲ, ಜೋಳ, ಕಾಳು ಹೊತ್ತುಕೊಂಡು ಹೊರಟಿದ್ದೇವೆ' ಅಂದ. ಹುಚ್ಚಯ್ಯ, 'ಏ ಅಣ್ಣಾ, ಪುರೋಹಿತರ ಮುಂದೆಯೂ ಸುಳ್ಳು ಹೇಳೋದೆ? ಪುರೋಹಿತರೇ, ಬೆಳ್ಳಿ ಬಂಗಾರ ಹೊತ್ತುಕೊಂಡು ಹೊರಟಿದ್ದೇವೆ. ಬೇಕಾದರೆ ನೋಡಿ' ಎಂದು ಗಂಟು ಬಿಚ್ಚಿ ಬೊಗಸೆಯಷ್ಟು ಬಂಗಾರವನ್ನು ತಮ್ಮ ಜೋಳಗೆಗೆ ಇಳಿಸಿದರು. ಹುಚ್ಚಯ್ಯ ರೇಗಿ 'ಭಲಾ' ಎಂದು ಹೇಳಿ ಕೈಯಲ್ಲಿಯ ಸಲಿಕೆಯಿಂದ ಪುರೋಹಿತರ ತಲೆ ಕುಕ್ಕಿದ ಪುರೋಹಿತರು ಅಲ್ಲೇ 'ಶಿವಾ' ಎಂದರು. ಅಣ್ಣಂದಿರು ಮರುಗಿ ಹುಚ್ಚಯ್ಯನ ಮೇಲೆ ಸಿಟ್ಟು ಮಾಡಿ ಹೆಣವನ್ನು ಒಂದು ತಗ್ಗಿನಲ್ಲಿ ಎಸೆದು ಹೊರಟುಹೋದರು.

ಆದರೆ ಅದೇ ದಿನರಾತ್ರಿ ಹುಚ್ಚಯ್ಯನಿಗೆ ಗೊತ್ತಾಗದಂತೆ ಆ ಹೆಣ, ಆ ತಗ್ಗಿನಲ್ಲೊಂದು ಸತ್ತ ಹೋತವನ್ನು ಎಸೆದು ಹೊರಟುಹೋದರು.

ಒಂದೆರಡು ದಿನ ಬಿಟ್ಟು ಪುರೋಹಿತ ಕಾಣಿಯಾಗಿದ್ದಾರೆ ಎಂದು ಜನಗಳಲ್ಲಿ ಹುಯ್ಯಲೆದ್ದಿತು. ಹುಚ್ಚಯ್ಯ, 'ಹೌದು, ಹೌದು, ಅವರನ್ನೇ ನಾನೇ ಸಲಿಕೆಯಿಂದ ಹೊಡೆದು ಕೊಂದು ತಗ್ಗಿನಲ್ಲಿ ಹಾಕಿ ಬಂದೆ' ಎಂದ. ಜನ 'ಎಲ್ಲಿ ನೊಡೋಣ' ಎಂದು ಬಂದರು. ಹುಚ್ಚಯ್ಯ ಪುರೋಹಿತರನ್ನು ಎಸೆದ ತಗ್ಗಿಗೆ ಜನರನ್ನು ಕರೆದುತಂದು,

'ಹೌದು.'

‘ಪುರೋಹಿತರ ತಲೆಯ ಮೇಲೆ ಎರಡು ಕೊಂಬಿದ್ದುವಲ್ಲ?’ ಅಂದರ ಇವನು ಮೊದಲೇ ಹುಚ್ಚನೆಂದುಕೊಂಡು ಬಂದು ನೋಡಿದರೆ ಅಲ್ಲಿ ಸತ್ತ ಹೋತವಿತ್ತು. ‘ಆಯಿತು ಹುಚ್ಚಯ್ಯನಿಗೊಂದು ಬುದ್ಧಿ ಇಲ್ಲವೆಂದರೆ ಅವನ ಮಾತು ನಂಬಿ ನಾವೂ ಬುದ್ಧಿ ಕಳೆದುಕೊಂಡೆವು’ ಎಂದು ಅವರೆಲ್ಲ ಹಳಹಳಸಿ ತಿರುಗಿ ಹೋದರು. ಮುಂದೆ ಹುಚ್ಚಯ್ಯ ತಮಗೆ ಮರ ಬೆಳ್ಳಿ ಬಂಗಾರ ಕೊಟ್ಟಿತೆಂದು ಹೇಳಿದರೂ ಯಾರೂ ಅವನ ಮಾತನ್ನು ನಂಬಲಿಲ್ಲ. ಅಣ್ಣಂದಿರು ಹುಚ್ಚಯ್ಯನೊಂದಿಗೆ ಸುಖವಾಗಿದ್ದರು.

ಅವರಲ್ಲಿ. ನಾವಿಲ್ಲಿ.

* * *

## ಕಾಗೆ ಮತ್ತು ಜಿಂಕೆ

ಒಂದು ಕಾಡಿನಲ್ಲಿ ಒಂದು ದೊಡ್ಡ ಮರವಿತ್ತು. ಅದರಲ್ಲಿ ಬಹಳ ದಿನಗಳಿಂದ ಒಂದು ಕಾಗೆ ವಾಸಮಾಡಿಕೊಂಡಿತ್ತು. ಮರದ ಕೆಳಗೆ ವಾಸ ಮಾಡಲಿಕ್ಕೆ ಹಿಂಡಿನಿಂದ ತಪ್ಪಿಸಿಕೊಂಡ ಒಂದು ಜಿಂಕೆಯೂ ಬಂತು. ಕೆಲವು ದಿನಗಳಲ್ಲಿಯೇ ಕಾಗೆಗೂ ಜಿಂಕೆಗೂ ಗೆಳೆತನ ಬೆಳೆಯಿತು. ಬೆಳಿಗ್ಗೆ ಎದ್ದರೆ ಒಂದರ ಮುಖ ಒಂದು ನೋಡುತ್ತಿದ್ದವು. ಪರಸ್ಪರ ನಮಸ್ಕಾರ ಮಾಡುತ್ತಿದ್ದವು. ಆಹಾರಕ್ಕಾಗಿ ಬೇರೆ ಕಡೆಗೆ ಹೋಗುತ್ತಿದ್ದವು. ರಾತ್ರಿ ಮತ್ತೆ ಕೂಡಿ ಸುಖ ದುಃಖ ಮಾತಾಡಿಕೊಳ್ಳುತ್ತಿದ್ದವು. ಹೀಗೆ ಎಷ್ಟೋ ದಿವಸ ನಡೆದುಬಂತು.

ಜಿಂಕೆ ಮೇಯುತ್ತಿದ್ದಾಗ ಆ ಕಾಡಿನಲ್ಲಿದ್ದ ಒಂದು ನರಿ ಅದನ್ನು ನೋಡಿತು. ಜಿಂಕೆಯ ದಷ್ಟಪುಷ್ಟವಾದ ದೇಹ ನೋಡಿ ನರಿಯ ಬಾಯಲ್ಲಿ ನೀರು ಬಂತು. ಏನಾದರೂ ಮಾಡಿ ಈ ಜಿಂಕೆಯ ಮಾಂಸ ತಿನ್ನಬೇಕೆಂದು ಹೊಂಚುಹಾಕಿತು. ಕೊನೆಗೆ ಒಂದು ಉಪಾಯ ಮಾಡಿತು. ಒಂದು ದಿನ ಜಿಂಕೆ ಮೇಯುವಾಗ ನರಿ ಅದರ ಹತ್ತಿರ ಹೋಗಿ ಸುಮ್ಮನೇ ಕಣಿರು ಸುರಸಲಾರಂಭಿಸಿತು. ಜಿಂಕೆಗೂ ಕೆಡುಕೆನಿಸಿ, ‘ಯಾಕೆ ಅಳುತ್ತೀ ನರಿಯಣ್ಣ, ಅಂಥದ್ದೇನಾಯಿತು?’ ಎಂದು ಕೇಳಿತು.

‘ಏನು ಹೇಳಲಿ? ಎಷ್ಟೊಂದು ಜನ ಅಣ್ಣ ತಮ್ಮಂದಿರಿದ್ದೆವು. ಎಲ್ಲರನ್ನೂ ಕಳೆದುಕೊಂಡು ಈಗ ಏಕಾಕಿಯಾಗಿದೆನೆ. ಬೇಜಾರಾಗಿದೆ’ ಎಂದಿತು ನರಿ. ಜಿಂಕೆಗೆ ಈ ಮಾತನ್ನು ಕೇಳಿ ಮರುಕ ಉಂಟಾಯಿತು. ‘ಆದದ್ದು ಆಯ್ತಲ್ಲ; ನನ್ನ ಜೊತೆ ಇದ್ದುಬಿಡು. ಇಬ್ಬರೂ ಕೂಡಿ ಇರೋಣ’ ಎಂದು ಹೇಳಿತು. ಆ ದಿನ ರಾತ್ರಿ ಜಿಂಕೆ ನರಿಯನ್ನು ತನ್ನ ಜೊತೆಗೆ ಆಲದ ಮರಕ್ಕೆ ಕರೆದು ತಂದಿತು. ಇವರಿಬ್ಬರ ಸ್ನೇಹ ನೋಡಿ ಕಾಗೆಗೆ ಚಿಂತೆಯಾಯಿತು. ‘ಇದೆಂಥ ಹುಚ್ಚತನ ಈ ಜಿಂಕೆಯದು’ ಎಂದುಕೊಂಡು ಸುಮ್ಮನಾಯಿತು. ನರಿ ಇಲ್ಲದ ಸಂದರ್ಭ ನೋಡಿ ಹೇಳಿಯೂ ಬಿಟ್ಟಿತು: ‘ಜಿಂಕೆ, ಎಂಥ ಹುಚ್ಚಿ ನೀನು. ನರಿಯ ಸ್ನೇಹ ಒಳ್ಳೆಯದಲ್ಲ. ಇದು ಅಡವಿಯ ಸಣ್ಣ ಇರುವೆಗೂ ಗೊತ್ತು. ನಿನಗಿಷ್ಟೂ ತಿಳಿಯಬಾರದೆ?’

‘ಅದನ್ನು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಂಡು ಕೊರಗಬೇಡ ಕಾಗಣ್ಣ. ಪಾಪ, ಅದೂ ಒಂದು ಪ್ರಾಣಿ. ಬಂಧುಬಳಗ ಕಳೆದುಕೊಂಡಿದ್ದಾನೆ. ಹಿಂದೆ ಮುಂದೆ ತನಗೆ ಯಾರೂ ಇಲ್ಲ ಅಂತ ನನ್ನ ಮುಂದೆ ಅತ್ತ, ನನ್ನ ಮನಸ್ಸೂ ಕರಗಿತು ಸ್ನೇಹಿತರಾಗಿದ್ದೇವೆ. ಇದರಲ್ಲಿ ತಪ್ಪೇನಿದೆ?’

ಆಗ ಏನು ಹೇಳಬೇಕೆಂದು ಕಾಗೆಗೆ ಹೊಳೆಯಲಿಲ್ಲ. ಆದರೆ ಜಿಂಕೆಯ ಬಗ್ಗೆ ಚಿಂತೆಯಾಯಿತು. ನರಿ, ಜಿಂಕೆಯ ಸ್ನೇಹ ದಿನದಿನಕ್ಕೆ ಹೆಚ್ಚಾಯಿತು. ಬರುಬರುತ್ತ, ಅವು ಕೂಡಿಯೇ ಮೇಯಲಿಕ್ಕೆ ಹೋಗುತ್ತಿದ್ದವು.



ಹೀಗಿರುತ್ತ ನರಿ ಒಂದು ದಿನ, 'ಜಿಂಕೆ, ಇಲ್ಲೇ ಸಮೀಪದಲ್ಲಿ ಒಂದು ಸೌತೇಕಾಯಿ ಹೊಲವಿದೆ. ಸುತ್ತೂ ಹಸಿರಾದ ಗರಿ ಗರಿ ಹುಲ್ಲಿದೆ. ಹೋಗೋಣ ಬಾ' ಎಂದಿತು. ಎರಡೂ ಕೂಡಿ ಹೋದವು. ನರಿ ನಿಜ ಹೇಳಿತ್ತು. ಅಲ್ಲೊಂದು ಸೌತೆಕಾಯಿ ತೋಟವಿತ್ತು. ನರಿ ತನಗೆ ಬೇಕಾದಷ್ಟು ಸೌತೇಕಾಯಿ ತಿಂದಿತು. ಜಿಂಕೆ ಹೊಟ್ಟೆ ತುಂಬಾ ಹುಲ್ಲು ಮೇಯಿತು. ಅವೆರಡೂ ಈಗ ಪ್ರತಿದಿನ ಅದೇ ಹೊಲಕ್ಕೆ ಮೇಯಲು ಹೋಗುತ್ತಿದ್ದವು. ನರಿ ಜಿಂಕೆಯೊಂದಿಗೆ ಹೋಗುತ್ತಿದ್ದರೂ ಮರುದಿನದಿಂದ ಸೌತೇಕಾಯಿ ತಿನ್ನದೆ ಬೇರೆಲ್ಲಿಯೋ ಹೋಗಿ ಹೊಟ್ಟೆ ತುಂಬಿಸಿಕೊಂಡು, ಬರುವಾಗ ಜಿಂಕೆಯೊಂದಿಗೆ ಸೇರುತ್ತಿತ್ತು. ಜಿಂಕೆ ಸ್ವಚ್ಛಂದವಾಗಿ ಆ ಹೊಲದ ಸುತ್ತಲಿನ ಹುಲ್ಲಲ್ಲಿ ಮೇದು ಬರುತ್ತಿತ್ತು. ಹೀಗೆ ಕೆಲ ದಿನ ಸಾಗಿತು. ಹೊಲದ ಒಡೆಯನಿಗೆ ಹೆಜ್ಜೆ ಗುರುತು ಹತ್ತಿ ಪ್ರತಿದಿನ ಇಲ್ಲೊಂದು ಜಿಂಕೆ ಮೇಯಲಿಕ್ಕೆ ಬರುತ್ತಿದೆ - ಎಂದು ತಿಳಿಯಿತು. ಆತ ಒಂದು ದಿನ ಜಿಂಕೆಯನ್ನು ಹಿಡಿಯಲು ಬಲೆ ಹಾಕಿದ. ಎಂದಿನಂತೆ ಜಿಗಿಯುತ್ತ ಬಂದ ಜಿಂಕೆ ಬಲೆಯಲ್ಲಿ ಸಿಕ್ಕಿಬಿತ್ತು.

ಜಿಂಕೆ ಬಲೆಯಲ್ಲಿ ಬಿದ್ದು ಒದ್ದಾಡುವುದನ್ನು ನರಿ ಮರೆಯಲ್ಲಿ ನಿಂತು ನೋಡಿತು. ಇಷ್ಟು ದಿನ ಹೊಂಚಿದ್ದಕ್ಕೆ ಇಂದು ಪ್ರತಿಫಲ ಸಿಕ್ಕಿತೆಂದು ಸಂತೋಷಪಟ್ಟಿತು. ಜಿಂಕೆಯ ಹತ್ತಿರ ಹೋಗಿ ಸಂತಾಪಗೊಂಡವರಂತೆ ನಟಿಸುತ್ತ ಹೀಗಾಯಿತಲ್ಲಾ ಎಂದು ಕೈ ಕೈ ಹೊಸಕಿತು. ಜಿಂಕೆ ಒದ್ದಾಡುತ್ತ, 'ಸ್ನೇಹಿತನೇ, ಸರಿಯಾದ ಸಮಯಕ್ಕೆ ಬಂದೆ, ಬೇಗನೇ ಈ ಬಲೆಯನ್ನು ಕಡಿದು ಹಾಕಿ ನನ್ನನ್ನು ಪಾರುಮಾಡು' ಎಂದಿತು.

'ಅದೇನೋ ನಿಜ. ಆದರೆ ಈ ದಿನ ನನ್ನದೊಂದು ವ್ರತ ಇದೆ. ನಾನು ಏನನ್ನೂ ಬಾಯಿಂದ ಕಚ್ಚುವ ಹಾಗಿಲ್ಲ. ನಾಳೆ ಬೆಳಗಾಗಲಿ. ಈ ಬಲೆ ಕಡಿದು ಹಾಕಿ ನಿನ್ನನ್ನು ಪಾರುಮಾಡುತ್ತೇನೆ-' ಎಂದು ಹೇಳಿ ನರಿ ಅಲ್ಲಿಂದ ಕಾಲ್ದೆಗೆಯಿತು. ಪಕ್ಕದ ಒಂದು ಪೊದೆಯಲ್ಲಿ ಅಡಗಿಕೊಂಡು ಜಿಂಕೆ ಒದ್ದಾಡಿ ಸಾಯುವುದನ್ನೇ ಕಾಯಲಾರಂಭಿಸಿತು.

ಆ ದಿನ ರಾತ್ರಿ ಜಿಂಕೆ ಬಾರದಿದ್ದನ್ನು ಕಂಡು ಕಾಗೆಗೆ ಕಳವಳವಾಯಿತು. ಬೆಳಗಿನ ತನಕ ಅದಕ್ಕೆ ನಿದ್ರೆಯೇ ಬರಲಿಲ್ಲ. ಬೆಳಿಗ್ಗೆ ಎದ್ದೊಡನೆಯೇ ಅದು ಜಿಂಕೆಯನ್ನು ಹುಡುಕುತ್ತ ಹೋಯಿತು. ಕೊನೆಗೆ ಜಿಂಕೆ ಬಲೆಯಲ್ಲಿ ಸಿಕ್ಕಿಬಿದ್ದು ಕಾಣಿಸಿತು. ಅಲ್ಲೇ ಪಕ್ಕದಲ್ಲಿ ಪೊರೆಯ ಮರೆಗೆ ನರಿ ಹೊಂಚಿ ಅಡಗಿ ಕುಳಿತದ್ದೂ ಕಂಡಿತು. ಕಾಗೆ ಜಿಂಕೆಯ ಬಳಿ ಬಂದು 'ಯಾಕೆ ಹೀಗಾಯಿತು?' ಎನ್ನುತ್ತ ಕುಳಿತುಕೊಂಡಿತು. 'ಏನು ಹೇಳಲಿ, ಅಂದೇ ನಿನ್ನ ಮಾತನ್ನು ಕೇಳಿ ಈ ಠಕ್ಕ ನರಿಯ ಸಹವಾಸ ಬಿಟ್ಟಿದ್ದರೆ ನನಗೆ ಈ ಗತಿ ಬರುತ್ತಿರಲಿಲ್ಲ. ಈಗೇನು ಮಾಡೋದು?' ಎಂದು ಜಿಂಕೆ ತನ್ನ ಸಂಕಟ ತೋಡಿಕೊಂಡಿತು.



‘ಧೈರ್ಯಗೆಡಬೇಡ. ಆ ನರಿಗೂ ಯೋಗ್ಯ ಪ್ರತಿಫಲ ಸಿಕ್ಕೀತು. ಇಲ್ಲೇ ಪೊದೆಯ ಮರೆಗೆ ಹೊಂಚಿಕೊಂಡು ಕೂತಿದ್ದಾನೆ.’

‘ಅದು ಹೋಗಲಿ ಮಹಾರಾಯ. ನಾನು ಈಗ ಪಾರಾಗುವ ಬಗೆ ಹೇಗೆ?’

‘ಹೀಗೆ: ಇನ್ನೇನು ರೈತ ಬರುವ ಹೊತ್ತಾಯಿತು. ನೀನು ಹೊಟ್ಟೆ ಉಬ್ಬಿಸಿ, ಕಾಲು ಸೆಟೆಸಿ ಸತ್ತವರ ಹಾಗೆ ಬಿದ್ದುಬಿಡು. ನೀನು ಹೇಗೂ ಸತ್ತಿದ್ದೀಯಲ್ಲಾ ಅಂತ ತಿಳಿದು ರೈತ ನಿನ್ನ ಬಲೆ ಬಿಚ್ಚುತ್ತಾನೆ. ಅದೇ ಸಮಯಕ್ಕೆ ನಾನು ಕಾಕಾ ಎಂದು ಕೂಗುತ್ತೇನೆ. ತಕ್ಷಣ ಎದ್ದವನೇ ಓಡಿಬಿಡು.’-ಎಂದು ಹೇಳಿ ಪಕ್ಕದ ಗಿಡದ ಮೇಲೆ ಹಾರಿ ಕೆಳಗೆ ಕೂಡುಕೊಂಡಿತು.

ಜಿಂಕೆ ಸತ್ತ ಹಾಗೆ ಬಿದ್ದುಕೊಂಡಿತು. ರೈತ ಬಂದು ನೋಡಿ ಅದು ಸತ್ತಿದೆಯೆಂದೇ ತಿಳಿದು ಬಲೆ ಬಿಚ್ಚಿದ ಕೂಡಲೇ ಕಾಗೆ ಕಾಕಾ ಎಂದು ಕೂಗಿತು. ಜಿಂಕೆ ತಕ್ಷಣವೇ ಎದ್ದು ಓಡಿತು. ಅದು ಓಡುವುದನ್ನು ನೋಡಿದ ರೈತ ‘ಎಲಾ ಕಳ್ಳ ಜಿಂಕೆ!’ ಎಂದವನೇ ಕೈಯಲ್ಲಿಯ ಕೋಲನ್ನು ಅದರ ಕಡೆಗೆ ಬೀಸಿ ಎಸೆದ. ಅದು ನಿರಾಶೆಯಿಂದ ಪೊದೆಯ ಮರೆಯಿಂದ ಹೊರಗೆ ಬರುತ್ತಿದ್ದ ನರಿಗೆ ತಾಗಿ ಅದು ಅಲ್ಲಿಯೇ ಪ್ರಾಣಬಿಟ್ಟಿತು.

ಗೆಳೆಯರಿಬ್ಬರೂ ಆಮೇಲೆ ಸುಖದಿಂದ ಇದ್ದರು. ನಾವಿಲ್ಲಿ ಹೀಗಿದ್ದೇವೆ.

* * *

## ರಾಜಶೇಖರ

ಒಂದೂರಲ್ಲಿ ಒಬ್ಬ ರಾಜನಿದ್ದ. ಅವನಿಗೊಬ್ಬ ಮಗಳಿದ್ದಳು. ಅವಳು ಬಹಳ ಸುಂದರಿ. ಅನೇಕ ರಾಜಕುಮಾರರು ಅವಳನ್ನು ಮದುವೆಯಾಗುವುದಕ್ಕೆ ಪ್ರಯತ್ನ ಮಾಡಿದರು. ಆದರೆ ರಾಜ ಮಗಳನ್ನು ಕೊಡಲೊಪ್ಪದೆ ಏನಾದರೊಂದು ನೆಪ ಹೇಳಿ ಇಲ್ಲವೆನ್ನುತ್ತಿದ್ದ. ಮನುಷ್ಯರಿಗೆ ನೀಗದ ಶರ್ತುಗಳನ್ನು ಹಾಕುತ್ತಿದ್ದ. ತಂದೆಯ ಇಂಥ ಸ್ವಭಾವದಿಂದ ಮಗಳಿಗೂ ನೋವಾಗುತ್ತಿತ್ತು. ಆದರೆ ತಂದೆ ಹೇಳಿದ ಹಾಗೆ ಕೇಳಿಕೊಂಡಿರಬೇಕಲ್ಲ; ಹಾಗೆಯೇ ಇದ್ದಳು.

ಒಂದು ಸಲ ಒಬ್ಬ ಗಟ್ಟಿಮುಟ್ಟಾದ ರಾಜಕುಮಾರನೇ ಬಂದ. ಅವನ ಹೆಸರು ರಾಜಶೇಖರ. ಗುಣ, ರೂಪ, ವಿದ್ಯೆ - ಯಾವುದರಲ್ಲೂ ತೆಗೆದುಹಾಕುವಂತಿಲ್ಲ. ರಾಜಕುಮಾರಿಗೂ ರಾಜಶೇಖರನ ಮೇಲೆ ಮೋಹವುಂಟಾಯಿತು. ಬಾಯಿಬಿಟ್ಟು ತಂದೆಗೆ ಹೇಳಲಾರಳು. ಕೊನೆಗೆ ಉಪಾಯ ಮಾಡಿ ಒಂದು ಪತ್ರ ಬರೆದು ಗೋಪ್ಯವಾಗಿ ತನ್ನ ಸೇವಕಿಯ ಮೂಲಕ ರಾಜಶೇಖರನಿಗೆ ಕಳುಹಿಸಿದಳು. ಆದರೆ

ಆ ಪತ್ರವನ್ನು ಒಯ್ಯುತ್ತಿದ್ದ ಸೇವಕಿ ರಾಜನ ಕೈಯಲ್ಲಿ ಸಿಕ್ಕಿಬಿದ್ದಳು. ರಾಜನಿಗೆ ತನ್ನ ಮಗಳ ಇಂಗಿತ ಗೊತ್ತಾಯಿತು. ಆತ ರಾಜಶೇಖರನನ್ನು ತನ್ನ ಅರಮನೆಗೇ ಕರೆಸಿದ.

ರಾಜಶೇಖರನನ್ನು ಅರಮನೆಗೆ ಕರೆಸಿ ನಾನಾ ವಿಧವಾಗಿ ಸನ್ಮಾನ ಮಾಡಿದ. ತನ್ನ ಮಗಳನ್ನೂ ಕರೆಸಿ ಅವಳ ಎದುರಿನಲ್ಲಿಯೇ ಅವನ ಪರೀಕ್ಷೆ ಆಗಬೇಕೆಂದು ಏರ್ಪಾಟು ಮಾಡಿದ. ಅಂತಿಂಥ ವಿದ್ಯೆಗಳ ಬಗ್ಗೆ ಕೇಳಿದರೆ ರಾಜಶೇಖರ ಗೊತ್ತಿದೆಯೆನ್ನುತ್ತಾನೆ. ಇವನಿಗೆ ಗೊತ್ತಿಲ್ಲದ ವಿದ್ಯೆ ಕೇಳಿದರೆ ಏನು ಹೇಳುತ್ತಾನೆ?- ಎಂದುಕೊಂಡು ರಾಜ,

'ಅಯ್ಯಾ, ನಿನಗೆ ಕಳ್ಳತನ ಗೊತ್ತೆ?' - ಅಂದ.

ಈ ಹುಡುಗ ಬುದ್ಧಿವಂತ ನಿಜ. ಆದರೆ ಸಭ್ಯ, ಕಳ್ಳತನ ಮಾಡಿದವನಲ್ಲ, 'ಇಲ್ಲ' ಅಂದ. ರಾಜನಿಗೆ ಅಷ್ಟೇ ಸಾಕಾಯಿತು - 'ಹೋಗೋ ಹುಚ್ಚಾ, ವಿದ್ಯೆಗಳಲ್ಲೆಲ್ಲ ಕಳ್ಳತನವೇ ಹೆಚ್ಚಿನದು; ಅದೇ ಗೊತ್ತಿಲ್ಲವೆಂದ ಮೇಲೆ ನೀನು ಹೇಗೆ ರಾಜ್ಯವಾಳಬಲ್ಲೆ. ಕಳ್ಳರನ್ನು ಹೇಗೆ ಹಿಡಿಯಬಲ್ಲೆ ಹೇಗೆ ಶಿಕ್ಷಿಸಬಲ್ಲೇ' ಅಂದ, ರಾಜ. ರಾಜಶೇಖರನ ಮರ್ಮಕ್ಕೆ ಈ ಮಾತು ನಾಟಿತು. ಮುಖ ತಗ್ಗಿಸಿಕೊಂಡು ಆತ ಹೊರಗೆ ಬಂದ.

ಅದೇ ಊರಿನಲ್ಲಿ ಒಬ್ಬ ಭಾರೀ ಕಳ್ಳನಿದ್ದ. ಅವನಿಗೆ ಬೇಕಾದಷ್ಟು ಹಣಕೊಟ್ಟು, ಕಳ್ಳತನ ಕಲಿಸು ಎಂದ ರಾಜಶೇಖರ. ಅವನ ಜೊತೆಗಾರನಾದ. ರಾಜಶೇಖರ ಎಷ್ಟಾದರೂ ಹುಷಾರಿ ಹುಡುಗ. ಜಾತಿವಂಥ ಕ್ಷತ್ರಿಯ ಕೆಲವೇ ದಿನಗಳಲ್ಲಿ ಕಳ್ಳತನದಲ್ಲಿ ಭಾರೀ ಚಾಣಾಕ್ಷನಾದ.

ಒಂದು ದಿನ ತನ್ನ ಜೊತೆಗಾರನೊಂದಿಗೆ ಅರಮನೆಯ ಹಿಂಭಾಗಕ್ಕೆ ಹೋಗಿ ಕನ್ನ ಕೊರೆದ. ಮೇಲಿನ ಕಿಟಕಿಯಿಂದ ಒಂದು ಹಗ್ಗ ಬಂಗಾರದ ಮಂಚದ ಮೇಲೆ ಮಲಗಿದ್ದಾನೆ. ಆ ಮಂಚದ ನಾಲ್ಕೂ ಕಾಲುಗಳನ್ನು ಕೊಯ್ದು ಅವುಗಳ ಸ್ಥಳದಲ್ಲಿ ಈ ಬಾಳೇ ದಿಂಡನ್ನು ಹಚ್ಚಿ ಬಾ.'

ಕಳ್ಳ ಆಗಲೆಂದು ಇಳಿದ.

ಜಾಗರೂಕತೆಯಿಂದ ಪಹರೆ ತಿರುಗುತ್ತಿದ್ದ ಕಾವಲುಗಾರರನ್ನು ದಾಟಿ ರಾಜನ ಕೋಣೆ ಪ್ರವೇಶಿಸಿದ. ರಾಜ ಮಂಚದ ಮೇಲೆ ಮಲಗಿದ್ದ. ಕಳ್ಳ ಮಂಚದ ಒಂದೊಂದೇ ಕಾಲನ್ನು ಕೊಯ್ದು, ಅದರ ಸ್ಥಳದಲ್ಲಿ ಬಾಳೇ ದಿಂಡು ಇಟ್ಟ. ಹೀಗೆ ಮೂರು ಕಾಲುಗಳನ್ನು ತೆಗೆದಿದ್ದ. ನಾಲ್ಕನೆಯದನ್ನು ತೆಗೆಯುತ್ತಿರುವಾಗ ಮಂಚ ಅದುರಿತು. ಅರೆನಿದ್ದೆಯಲ್ಲಿದ್ದ ರಾಜ ತನ್ನ ಕೈಯಲ್ಲಿಯ ಖಡ್ಗ ಬೀಸಿದ. ಮತ್ತೆ ಹಾಗೇ ಬಿದ್ದುಕೊಂಡ. ಆದರೆ ರಾಜ ಖಡ್ಗ ಬೀಸಿದ್ದಕ್ಕೆ ಆ ಕಳ್ಳನ ತಲೆ ಕತ್ತರಿಸಿ ಬಿತ್ತು.

ಹೊರಗೆ ತನ್ನ ಜೊತೆಗಾರ ಕಳ್ಳನನ್ನೇ ನಿರೀಕ್ಷಿಸುತ್ತಿದ್ದ ರಾಜಶೇಖರನಿಗೆ ಅನುಮಾನವಾಯಿತು. ನೋಡಿಕೊಂಡು ಬರಬೇಕೆಂದು ಒಳಗೆ ಬಂದ. ನೋಡಿದರೆ ತನ್ನ ಜೊತೆಗಾರ ಕಳ್ಳನ ರುಂಡ ಬೇರೆ ಮುಂಡ ಬೇರೆಯಾಗಿ ಬಿದ್ದಿತ್ತು. ಚಾಕಚಕ್ಯತೆಯಿಂದ ಮಂಚದ ನಾಲ್ಕನೇ ಕಾಲನ್ನು ತೆಗೆದ. ರಾಜನ ಮುಖಕ್ಕೆ ಸುಣ್ಣದ ಮೂರು ಬೊಟ್ಟನ್ನಿಟ್ಟ. ಎಲೆ ಅಡಿಕೆ ತಿಂದು ಆ ಕೋಣೆಯ ತುಂಬ ಉಗುಳಿದ. ಕೊನೆಗೆ ಜೊತೆಗಾರನ ಕಡಿದು ಬಿದ್ದ ರುಂಡವನ್ನು ಬಟ್ಟೆಯಲ್ಲಿ ಮುಚ್ಚಿಟ್ಟುಕೊಂಡು ಪರಾರಿಯಾದ.

ಬೆಳಿಗ್ಗೆ ಎದ್ದು ನೋಡಿದರೆ ರಾಜನ ಮಂಚದ ಕಾಲುಗಳೇ ಇರಲಿಲ್ಲ. ರುಂಡವಿಲ್ಲದ ಮುಂಡವೊಂದೇ ಪಕ್ಕದಲ್ಲಿ ಬಿದ್ದಿತ್ತು. ರಕ್ತ ಹರಿದಾಡಿತ್ತು. ರಾಜನ ಮುಖದ ಮೇಲೆ ಮೂರು ಬೊಟ್ಟು ಮೂಡಿದ್ದವು. ಎಲ್ಲರಿಗೂ ಆಶ್ಚರ್ಯವಾಯಿತು. ರಾಜ, ಕಾವಲುಗಾರರನ್ನು ದಂಡಿಸಿದ; ಮಂತ್ರಿ ಕೊತವಾಲರನ್ನು ಕರೆಯಿಸಿ, 'ನನ್ನ ಅರಮನೆಯಲ್ಲಿ ಇಂಥಾ ಕಳ್ಳತನ ಮಾಡಿದವರು ಯಾರು? ಮುಂಡ ಬಿಟ್ಟು ರುಂಡ ಮಾತ್ರ ತೆಗೆದುಕೊಂಡು ಹೋದವರು ಯಾರು? ಇಲ್ಲಿಯ ತನಕ ಈ ಬಗೆಯ ಕಳ್ಳತನವಾಗಿರಲಿಲ್ಲ. ಈಗ ಆಗಿದೆಯೆಂದ ಮೇಲೆ

ಆತ ಯಾರೋ ಭಾರೀ ದೊಡ್ಡ ಕಳ್ಳನೇ ಇರಬೇಕು. ಹಿಡಿದುಕೊಟ್ಟರೆ ಸೈ. ಇಲ್ಲದಿದ್ದರೆ ನೀವೂ ಉಳಿಯಲಿಕ್ಕಿಲ್ಲ.' ಎಂದು ರಾಜ ರೇಗಾಡಿದ.

ಆಗ ಮಂತ್ರಿ ಒಂದು ಉಪಾಯ ಮಾಡಿದ. ಸೇವಕರನ್ನು ಕರೆದು, 'ಈ ಮುಂಡವನ್ನು ಒಂದು ಗಾಡಿಯಲ್ಲಿ ಹಾಕಿಕೊಂಡು ಊರ ತುಂಬ ಮೆರವಣಿಗೆ ಮಾಡಿರಿ. ಇದನ್ನು ನೋಡಿ ಯಾರಾದರೂ ಅತ್ತರೆ ತಕ್ಷಣ ಅವರನ್ನು ಹಿಡಿದುಕೊಂಡು ಬನ್ನಿ' ಎಂದು ಆಜ್ಞೆ ಮಾಡಿದ.

ಈ ಸುದ್ದಿ ರಾಜಶೇಖರನಿಗೆ ಹೇಗೋ ತಿಳಿಯಿತು. ಆ ಊರಿನ ಒಂದು ಮುದುಕಿಗೆ ಉಡಿತುಂಬ ಹಣ ಸುರಿದು 'ಅಜ್ಜೀ, ಇಂದೊಂದು ಹೆಣದ ಮೆರವಣಿಗೆ ಬರುತ್ತದೆ. ಕೂಡಲೇ ನಾನು ನಿನ್ನ ಮನೆಯ ಮುಂದೆ ಸತ್ತವರ ಹಾಗೆ ಕೂರುತ್ತೇನೆ ಸೇವಕರು ಬಂದು ಕೇಳಿದರೆ 'ನನ್ನ ಮಗ ಸತ್ತ' ಎಂದು ಹೇಳಿ ಅಳು' ಎಂದ. ಹಣ ನೋಡಿ ಮುದುಕಿ ಒಪ್ಪಿಕೊಂಡಳು.

ಅತ್ತ ಸೇವಕರು ಗಾಡಿಯಲ್ಲಿ ಕಳ್ಳನ ಹೆಣ ಹಾಕಿಕೊಂಡು ಮೆರವಣಿಗೆ ಮಾಡುತ್ತ, ಆ ಮುದುಕಿಯ ಮನೆಯ ಮುಂದೆಯೇ ಬಂದರು. ಕೂಡಲೇ ರಾಜಶೇಖರ ಸತ್ತವನಂತೆ ಕೂತ. ಮುದುಕಿ ಹಾಡಿಕೊಂಡು ಅಳಲಾರಂಭಿಸಿದಳು. ಸೇವಕರು ಯಾಕೆಂದು ಕೇಳಿದರೆ ಹೆಣದಂತೆ ಕೂತ ರಾಜಶೇಖರನನ್ನು ತೋರಿಸಿ, 'ನನ್ನ ಮಗ ಸತ್ತಾ' ಎಂದು ಹೇಳಿ ತಲೆ ಚಚ್ಚಿಕೊಂಡು ಅಳತೊಡಗಿದಳು. ಸೇವಕರಿಗೂ ಕೆಡುಕೆನಿಸಿತು. ಮುದುಕಿಯನ್ನು ಸಮಾಧಾನ ಮಾಡಿ ತಮ್ಮ ಮೆರವಣಿಗೆ ಮುಂದೆ ಸಾಗಿಸಿಕೊಂಡು ಹೋದರು. ಮಂತ್ರಿಯ ಬಳಿಗೆ ಹೋಗಿ, 'ಊರೆಲ್ಲ ಸುತ್ತಿ ಬಂದೆವು. ಯಾರೂ ಅಳಲಿಲ್ಲ. ಒಂದು ಮುದುಕಿ ಮಾತ್ರ ತನ್ನ ಮಗನ ಹೆಣ ಇಟ್ಟುಕೊಂಡು ಅಳುತ್ತಿದ್ದಳು. ನಾವೇ ಸಮಾಧಾನ ಮಾಡಿ ಬಂದೆವು' ಎಂದು ಹೇಳಿದರು. ಮಂತ್ರಿಗೇ ತಕ್ಷಣವೇ ಕಳ್ಳನ ಜಾಣತನ ಗೊತ್ತಾಯಿತು. 'ಎಂಥ ದಡ್ಡರು ನೀವು, ಆ ಮುದುಕಿಯ ಮುಂದೆ ಹೆಣವಾಗಿ ಕೂತವನೇ ಕಳ್ಳ. ಹೋಗಿ ಹಿಡಿದು ತನ್ನಿ' ಎಂದ. ಸೇವಕರು ಓಡಿ ಓಡಿ ಬಂದರು. ಆದರೆ ಕಳ್ಳನೆಲ್ಲಿರುತ್ತಾನೆ?

ಮಾರನೇ ದಿನ ಮಂತ್ರಿ ಇನ್ನೊಂದು ಉಪಾಯ ಮಾಡಿದ. ಕಳ್ಳನ ಮುಂಡದ ರುಂಡ ಇನ್ನೊಂದು ಕಡೆಗಿದೆ. ಇದನ್ನು ಸುಡುವಾಗ ರುಂಡವನ್ನು ತರಲೇಬೇಕಾಗುತ್ತದೆ. ಅವನು ಜಾತಿವಂತ ಕಳ್ಳನಾಗಿದ್ದರೆ ಅದನ್ನು ತಂದೇ ತರುತ್ತಾನೆ ಎಂದು ಯೋಚಿಸಿ ಸೇವಕರಿಗೆ ಹೇಳಿದ: 'ಈ ಹೆಣ ಸುಡುವ ತಯ್ಯಾರಿ ನಡೆಯಲಿ. ಅಗ್ನಿಯಲ್ಲಿ ಈ ಮುಂಡ ಸುಡುತ್ತಿದ್ದಾಗ ಯಾವನಾದರೂ ರುಂಡವನ್ನು ತಂದು ಎಸೆದರೆ ಅವನನ್ನು ಸೆರೆಹಿಡಿದು ತನ್ನಿ'.

ಈ ಸಮಾಚಾರವೂ ರಾಜಶೇಖರನಿಗೆ ಹೇಗೋ ತಿಳಿಯಿತು. ಕೆಲವು ಡಬ್ಬಿಗಳನ್ನು ಒಂದು ಬಂಡಿಯಲ್ಲಿ ಹೇರಿಕೊಂಡ. ಒಂದು ಡಬ್ಬಿಯಲ್ಲಿ ಕಳ್ಳನ ರುಂಡವನ್ನೂ ಹಾಕಿದ. ತುಪ್ಪ ಮಾರುವ ಶೆಟ್ಟಿಯಂತೆ ಸ್ಮಶಾನದ ಕಡೆಗೆ ಹೊರಟ. ಅಷ್ಟರಲ್ಲಿ ಸೇವಕರು ಬೆಂಕಿ ಮಾಡಿ ಅದರಲ್ಲಿ ಮುಂಡವನ್ನು ಸುಡುತ್ತಿದ್ದರು. ಸೇವಕರು ಇವನ್ನು ನೋಡಿ ಬಂಡಿ ನಿಲ್ಲಿಸಿದರು. ಯಾರೆಂದು ಕೇಳಿದರು. ತಾನು ಅರಮನೆಗೆ ತುಪ್ಪ ಮಾರುವ ಶೆಟ್ಟಿ ಎಂದು ಹೇಳಿದ. ತನ್ನ ಮೇಲೆ ಸಂಶಯ ತೋಕ್ಕಂಡದ್ದಕ್ಕೆ ರೇಗಾಡಿದ. ರಾಜನಿಗೇನು ಹೇಳಿಕೊಳ್ಳುತ್ತೀರೋ ನೀವೇ ಹೇಳಿಕೊಳ್ಳಿ. ಎನ್ನುತ್ತ ತುಪ್ಪದ ಡಬ್ಬಿಗಳನ್ನೆಲ್ಲಾ ಬೆಂಕಿಯಲ್ಲಿ ಹಾಕಿದ. ಬಂಡಿ ಹಿಂದುರುಗಿಸಿಕೊಂಡು ಬಂದ.

ಸೇವಕರಾಗಲೇ ಗಾಬರಿಯಾಗಿದ್ದರು. ಅರಮನೆಗೆ ಸೇರಬೇಕಾದ ತುಪ್ಪ ತಮ್ಮ ಆಚಾತುರ್ಯದಿಂದ ಹೀಗೆ ಬೆಂಕಿಯ ಪಾಲಾಯಿತಲ್ಲಾ! ರಾಜರಿನ್ನು ಅದೇನು ಶಿಕ್ಷೆ ಕೊಡುತ್ತಾರೋ ಎನ್ನುತ್ತ ಮಂತ್ರಿಯ ಬಳಿಗೆ ಬಂದು ಹೇಳಿದರು.

'ನಾವೇನೂ ತಪ್ಪು ಮಾಡಲಿಲ್ಲ. ಆದರೂ ಆ ಶೆಟ್ಟಿ ಹೆಣ ಸುಡುವ ಬೆಂಕಿಯಲ್ಲಿ ತುಪ್ಪದ ಡಬ್ಬಿಗಳನ್ನು ಹಾಕಿ ಹೋದ.' ಮಂತ್ರಿಗೆ ಕಳ್ಳನ ಚಾಕಚಕ್ಯತೆ ಅರ್ಥವಾಯಿತು. 'ಎಲಾ, ಕಳ್ಳ ಈ ಬಾರಿಯೂ ಮೋಸ ಮಾಡಿದ. ಇನ್ನು ಅವನನ್ನು ಹಿಡಿಯುವುದು ಹೇಗೆ?' ಎಂದು

ತಲೆಯ ಮೇಲೆ ಕೈ ಹೊತ್ತು ಕೂತ. ರಾಜನಿಗೆ ಈ ಸುದ್ದಿ ತಿಳಿಯಿತು. ಮಂತ್ರಿ ಸೇವಕರನ್ನೆಲ್ಲ ಬೈದು ತಾನೇ ಕಳ್ಳನನ್ನು ಹಿಡಿಯಲು ಸಿದ್ಧನಾದ.

ಹೆಣದ ಬೂದಿಯನ್ನು ಹೇಗೂ ನೀರುಗಾಣಿಸಬೇಕು. ಅದಕ್ಕಾಗಿ ಕಳ್ಳ ಬಂದೇ ಬರುತ್ತಾನೆ. ಅಲ್ಲಿಯೇ ಅವನನ್ನು ಹಿಡಿದರಾಯಿತು. ಎಂದು ಸ್ವಯಂ ಮಂತ್ರಿಯೆ ಸುಡುಗಾಡಿಗೆ ಹೋದ. ಬೂದಿ ಕಾಯುತ್ತ ಕೂತ. ರಾಜಶೇಖರನಿಗೆ ಇದೂ ಹೇಗೋ ಗೊತ್ತಾಯಿತು. ಮಧ್ಯರಾತ್ರಿಯ ಸುಮಾರಿಗೆ ಮಂತ್ರಿಯ ಹೆಂಡತಿಯ ವೇಷ ಹಾಕಿಕೊಂಡು ಪಲ್ಲಕ್ಕಿಯಲ್ಲಿ ಕೂತು, ನಾಲ್ಕು ಜನ ಕಳ್ಳರಿಗೆ ಸೀರೆ ಉಡಿಸಿ ಪಲ್ಲಕ್ಕಿಯನ್ನು ಹೊರಿಸಿಕೊಂಡು ಸುಡುಗಾಡಿಗೆ ಬಂದ.



ಹೆಂಡತಿ ಬಂದಿರುವಳೆಂದು ಮಂತ್ರಿಗೆ ಸೇವಕರು ಹೇಳಿದರು. ಮಂತ್ರಿಗೆ ದಿಗಿಲಾಯಿತು. ಓಡಿ ಬಂದು ಪಲ್ಲಕ್ಕಿಯ ಹತ್ತಿರ ನಿಂತು 'ಇಲ್ಲಿಗ್ಯಾಕೆ ಬಂದೆ?' ಎಂದು ಕೇಳಿದ. ರಾಜಶೇಖರ, 'ನೀವು ಸುಡುಗಾಡಿನಲ್ಲಿದ್ದರೆ ನಾನು ಮನೆಯಲ್ಲಿರುವುದು ಯೋಗ್ಯವೆ?' ಎಂದು ಅವನ ಹೆಂಡತಿಯಂತೆಯೇ ಧ್ವನಿ ಮಾಡಿ ಹೇಳಿದ. 'ಛೇ, ಛೇ, ಮೊದಲು ಇಲ್ಲಿಂದ ಹೊರಡು' ಎಂದು ಹೇಳುತ್ತಿರಲು ಹೆಂಡತಿಯ ವೇಷದಲ್ಲಿದ್ದ ರಾಜಶೇಖರ ಸಿಟ್ಟಿನಿಂದೆಂಬಂತೆ ಮೈ ಪರಚಿಕೊಂಡಂತೆ ಮಾಡಿ ಕತ್ತಿನ ರತ್ನದ ಹಾರವನ್ನು ತೆಗೆದು ಬೂದಿಯಲ್ಲಿ ಎಸೆದು ತಿರುಗಿ ಹೋದ. ಮಂತ್ರಿ, 'ಎಂಥ ಸಿಟ್ಟಿನ ಹೆಂಗಸಿದು' ಎಂದುಕೊಳ್ಳುತ್ತ ರತ್ನದ ಹಾರ ಹುಡುಕಿದ. ಅದಕ್ಕೆ ಸಾಕಷ್ಟು ಬೂದಿಯಂಟಿತ್ತು. ಅಲ್ಲೇ ನದಿಯಲ್ಲಿ ತೊಳೆದುಕೊಂಡು ಮನೆಗೆ ಧಾವಿಸಿದ. ಅಂತೂ ಹೆಣದ ಬೂದಿಯನ್ನು ನೀರಿಗೆ ಬಿಟ್ಟಂತಾಯಿತು. ಅರಮನೆಗೆ ಬಂದು 'ಇಂಥ ಹೊತ್ತಿನಲ್ಲಿ ಸುಡುಗಾಡಿಗೆ ಯಾಕೆ ಬಂದಿದ್ದೇ?' ಎಂದು ಹೆಂಡತಿಯನ್ನು ಕೇಳಿದ. ಅವಳಿಗೆ ವಿಸ್ಮಯವಾಯಿತು. 'ಏನಾಗಿದೆ ನಿಮಗೆ? ಸುಡುಗಾಡಿನೊಳಗಿನ ಭೂತ ಬಡಿದುಕೊಂಡಿತೆ? ನಾನು ಯಾಕೆ ಅಲ್ಲಿಗೆ ಬರಲಿ?' ಎಂದಳು. 'ಅಯ್ಯೋ, ಕಳ್ಳ ನನಗೂ ಮೋಸ ಮಾಡಿದನಲ್ಲಾ!' ಎಂದು ತಲೆ ತಗ್ಗಿಸಿದ.



ಕಳ್ಳನನ್ನು ಹಿಡಿಯುವುದೊಂದು ದೊಡ್ಡ ಸಮಸ್ಯೆಯಾಯಿತು. ಈಗ ಆ ಸಾಹಸಕ್ಕೆ ಸ್ವತಃ ರಾಜನೇ ಸಿದ್ಧನಾದ. ಈ ಸುದ್ದಿ ಹೇಗೋ ರಾಜಶೇಖರನಿಗೆ ತಿಳಿಯಿತು. ಒಂದು ಈಜುಗುಂಬಳಕಾಯಿ ತಕ್ಕೊಂಡ. ಊರ ಬಳಿಯ ನದಿಯ ದಡದಲ್ಲಿ ಅದಕ್ಕೆ ರುಮಾಲು ಸುತ್ತಿದ. ರಾತ್ರಿಯಾಗುತ್ತಲೇ ಅದನ್ನು ಆಚೆ ದಡದ ನೀರಿನಲ್ಲಿ ಬಿಟ್ಟು ಈಚೆ ದಡಕ್ಕೆ ಬಂದ. ಒಂದು ಪೆಟ್ಟಿಗೆಯಲ್ಲಿ ಎಲೆ ಅಡಿಕೆ ಹುರಿಗಾಳು ಇಟ್ಟುಕೊಂಡು ಬೆಳಕಿಗೊಂದು ಪಂಜು ಉರಿಸಿ ಇಟ್ಟುಕೊಂಡು ಕಾದು ಕುಳಿತ.

ಕಳ್ಳನನ್ನು ಗೋಪ್ಯವಾಗಿ ಹಿಡಿಯಲು ಪಹರೆ ಮಾಡುತ್ತಿದ್ದ ರಾಜ ಪಂಜಿನ ಬೆಳಕನ್ನು ನೋಡಿ ಸೈನಿಕರೊಂದಿಗೆ ಧಾವಿಸಿ ಬಂದ. 'ಎಲಾ, ನೀನು ಯಾರು? ಇಂಥ ವೇಳೆಯಲ್ಲಿ ಇಲ್ಲೇನು ನಿನ್ನ ಕೆಲಸ?' ಎಂದು ರಾಜ ಗದರಿಸಿದ. ರಾಜಶೇಖರ ಕೈ ಮುಗಿದು, 'ರಾಜರೇ ಇಲ್ಲಿ ದಿನಾ ರಾತ್ರಿ ಒಬ್ಬ ಕಳ್ಳ ಬರುತ್ತಾನೆ. ಏನೋ ಅಷ್ಟಿಷ್ಟು ವ್ಯವಹಾರ ಮಾಡುತ್ತಾನೆ. ಹುರಿಗಾಳು, ಎಲೆ ಅಡಿಕೆ ಕೊಳ್ಳುತ್ತಾನೆ. ಅವನಿಂದಲೇ ನನ್ನ ಹೊಟ್ಟೆ ತುಂಬುತ್ತದೆ. ನನ್ನ ಹೆಸರು ಸಣ್ಣಶೆಟ್ಟಿ' ಎಂದ. ರಾಜನಿಗೂ ಈ ಮಾತಿನಲ್ಲಿ ನಂಬಿಕೆ ಉಂಟಾಯಿತು. 'ಕಳ್ಳ ಯಾವಾಗ ಬರುತ್ತಾನೆ?' ಎಂದು ಕೇಳಿದ. 'ಇನ್ನೇನು ಬರುವ ಸಮಯವಾಯಿತು. ನೀವು ನಿಮ್ಮ ಸೈನಿಕರನ್ನು ದೂರದಲ್ಲಿ ಅಡಗಿಸಿ. ನೀವು ಒಬ್ಬರೇ ಇಲ್ಲಿದ್ದರೆ ಅವರು ಬರುತ್ತಾರೆ. ಆಗ ನೀವು ನಿಮ್ಮ ಸೈನಿಕರಿಗೆ ಸಂಕೇತ ಮಾಡಿ ಅವರನ್ನು ಹಿಡಿಯಬಹುದು' ಎಂದ, ರಾಜಶೇಖರ. ರಾಜ ಅದರಂತೆಯೇ ಸೈನಿಕರನ್ನು ದೂರದಲ್ಲಿ ಅಡಗಿಸಿಕೊಂಡಿರಲಿಕ್ಕೆ ಹೇಳಿ, ತಾನು ಸಿಳ್ಳು ಹಾಕಿದೊಡನೆ ಬರಬೇಕೆಂದು ಆಜ್ಞೆಯಿತ್ತ.

ಸೈನಿಕರು ದೂರಕ್ಕೆ ಹೋದಾರು. 'ನೀನು ಕಳ್ಳನನ್ನು ಹಿಡಿದುಕೊಟ್ಟರೆ ಭಾರೀ ಬಹುಮಾನ ಕೊಡುತ್ತೇನೆ' ಎಂದು ರಾಜಶೇಖರನನ್ನು ರಾಜ ಪುಸಲಾಯಿಸಿದ. ಆಗ ರಾಜಶೇಖರ, 'ರಾಜರೇ, ನಾವು ಈ ದಿನ ಇಲ್ಲಿ ಇಬ್ಬರಿದ್ದರೆ ಕಳ್ಳನಿಗೆ ಸಂದೇಹ ಬರಬಹುದು. ಅಕೋ ಅಲ್ಲಿ ಬರುತ್ತಿದ್ದಾನೆ ನೋಡಿ' ಎಂದು ರುಮಾಲು ಸುತ್ತಿ ತೇಲಿ ಬರುತ್ತಿದ್ದ ಈಜುಗುಂಬಳಕಾಯಿ ತೋರಿಸಿದ. ಮಂದ ಬೆಳಕಿನಲ್ಲಿ ತೇಲಿ ಬರುತ್ತಿದ್ದ ಅದು ಕಳ್ಳನೇ ಈಜಿಕೊಂಡು ಬರುವಂತೆ ಕಂಡಿತು. ರಾಜನಿಗೆ ಹೌದಲ್ಲಾ ಎನಿಸಿತು. 'ಹಾಗಿದ್ದರೆ ನೀನು ಆ ಮರದ ಹಿಂದೆ ನಿಂತರು. ನಾನು ಅಂಗಡಿಯ ಮುಂದೇ ಇರುತೆನೆ' ಎಂದ ರಾಜ. ರಾಜಶೇಖರ, 'ಪ್ರಭೂ, ತಾವು ರಾಜಪೋಷಾಕಿನಲ್ಲಿದ್ದೀರಿ. ನಿಮ್ಮನ್ನು ನೋಡಿ ಕಳ್ಳ ಓಡದೆ ಇರಲಾರ' ಎಂದ. ರಾಜನಿಗೆ ಇದೂ ಸರಿಯೆನ್ನಿಸಿತು. 'ಹಾಗಿದ್ದರೆ ನಿನ್ನ ಉಡುಪು ನನಗೆ ಕೊಡು. ನನ್ನದನ್ನ ನೀನು ಇಟ್ಟುಕೊಂಡು ಆ ಮರದ ಹಿಂದೆ ಅವಿತುಕೋ' ಎಂದು ಹೇಳಿ ತನ್ನ ಉಡುಪನ್ನು ಅವರಸರದಿಂದ ಕಳಚಿ ರಾಜಶೇಖರನ ಕೈಗೆ ಕೊಟ್ಟ. ಅವನದನ್ನು ರಾಜ ಧರಿಸಿದ.

ರಾಜಶೇಖರ ತಕ್ಷಣವೇ ರಾಜನ ಪೋಷಾಕು ಹಾಕಿಕೊಂಡು ಸೈನಿಕರಿದ್ದಲ್ಲಿಗೆ ಹೋದ. 'ನೋಡ್ರೋ, ಆ ಸಣ್ಣ ಅಂಗಡಿಯ ಮುಂದೆ ವ್ಯಾಪಾರ ಮಾಡುತ್ತಿರುವವನೇ ಕಳ್ಳ. ಹೋಗಿ ತಕ್ಷಣ ಅವನನ್ನು ಬಂಧಿಸಿರಿ. ಅವನು ತಾನೇ ರಾಜ ಎಂದು ಕೂಗಬಹುದು.

ಹಾಗೇನಾದರೂ ಕೂಗಿದರೆ ಅವನ ಮಾತು ನಂಬಬೇಡಿ. ಆ ಅಂಗಡಿಪೆಟ್ಟಿಗೆಯಲ್ಲೇ ಅವನನ್ನು ತುರುಕಿ ತೆಗೆದುಕೊಂಡು ಬನ್ನಿ' ಎಂದ. ಸೈನಿಕರು ಓಡಿಹೋಗಿ ಸಣ್ಣಶೆಟ್ಟಿಯ ವೇಷದಲ್ಲಿದ್ದ ರಾಜನನ್ನು ಸೆರೆಹಿಡಿದರು. ಹಗ್ಗ ಬಿಗಿದು ಕಟ್ಟಿದರು. ಅವನು, 'ಅಯ್ಯೋ, ನಾನೇ ರಾಜ ಕಣ್ರಯ್ಯಾ' ಎಂದು ಕೂಗಿದ. ಕೂಡಲೇ ಅವನನ್ನು ಹೊಡೆದು ಪೆಟ್ಟಿಗೆಯಲ್ಲಿ ತುರುಕಿ ಅರಮನೆಗೊಯ್ದರು. ರಾಜಶೇಖರ ಪರಾರಿಯಾದ.

ಬೆಳಗಾಯಿತು. ರಾಜರು ಕಳ್ಳನನ್ನು ಸೆರೆಹಿಡಿದಿದ್ದ ಸುದ್ದಿ ಹಬ್ಬಿತು. ಮಂತ್ರಿ ಮುಂತಾದ ಹಿರಿಯರು ಬಂದರು. ಕಳ್ಳನನ್ನು ನೋಡುವುದಕ್ಕೆ ರಾಜಕುಮಾರಿಯೂ ಬಂದಳು. ಮಂತ್ರಿ ಪೆಟ್ಟಿಗೆ ತೆಗೆದು ನೋಡಿದರೆ ಒಳಗಿದ್ದ ಶೆಟ್ಟಿಯ ವೇಷದ ರಾಜ. 'ನನ್ನ ಜೀವವೇ' ಎನ್ನುತ್ತ ಹೊರಗೆ ಬಂದ. ಅಯ್ಯೋ ಘಾತವಾಯಿತೆಂದುಕೊಂಡು ಉಪಚರಿಸಿದರು. ಕಳ್ಳನನ್ನು ಯಾರಿಂದಲೂ ಹಿಡಿಯಲಾಗದ್ದಕ್ಕೆ ಸೋತರು. ಕೊನೆಗೆ ರಾಜ, 'ಆ ಕಳ್ಳ ಬಂದು ಹಾಜರಾದರೆ ಅರ್ಧ ರಾಜ್ಯ ಕೊಡುವೆ' ಎಂದು ಡಂಗುರ ಸಾರಿಸಿದ. ರಾಜಶೇಖರ ಹಾಜರಾದ. ನೋಡಿದರೆ ಇವನು ರಾಜಕುಮಾರನಾದ ರಾಜಶೇಖರ! 'ಹಿಂದೆ ನಿಮ್ಮ ಮಗಳನ್ನು ಕೇಳಿದ್ದಕ್ಕೆ ನಿನಗೆ ಕಳ್ಳತನ ಬರುವುದೇ ಎಂದಿದ್ದಿರಿ. ಈಗ ನಾನು ಕಳ್ಳತನವನ್ನು ಬಲ್ಲೆನೆಂದು ಹೇಳಬಲ್ಲೆ' ಎಂದ. 'ನೀನೇ ಆ ಮಹಾಕಳ್ಳ ಎನ್ನುವುದಕ್ಕೆ ಸಾಕ್ಷಿ ಏನಿದೆ?' ಎಂದು ರಾಜ ಕೇಳಿದ. ರಾಜಶೇಖರ ರಾಜನ ಪೋಷಾಕು ತೋರಿಸಿದ. ರಾಜ ಮೆಚ್ಚಿ ತನ್ನ ಮಗಳನ್ನು ರಾಜಶೇಖರನಿಗೆ ಕೊಟ್ಟು ಮದುವೆ ಮಾಡಿದ. ತನ್ನ ರಾಜ್ಯಕ್ಕೆ ಅವನನ್ನೇ ಪಟ್ಟಗಟ್ಟಿದ. ರಾಜಶೇಖರ ತನ್ನ ಹೆಂಡತಿಯೊಂದಿಗೆ ರಾಜ್ಯವಾಳುತ್ತಾ ಸುಖದಿಂದ ಇದ್ದ. ನಾವಿಲ್ಲಿ ಹೀಗಿದ್ದೇವೆ.

* * *

## ರಾಮ-ಭೀಮ

ಒಬ್ಬ ರಾಜನಿದ್ದ. ಎಷ್ಟು ಕಾಲವಾದರೂ ಅವನಿಗೆ ಮಕ್ಕಳಾಗಲಿಲ್ಲ. ಒಮ್ಮೆ ಒಬ್ಬ ಋಷಿ ಅವನ ಅರಮನೆಗೆ ಬಂದ. ರಾಜ ಅವನ್ನು ಭಕ್ತಿಯಿಂದ ಸತ್ಕರಿಸಿ, "ನನಗೆ ಮಕ್ಕಳಾಗುವವೋ ಇಲ್ಲವೋ ಹೇಳಬೇಕು' ಎಂದು ಕೈ ಮುಗಿದು ಕೇಳಿಕೊಂಡ. ಆಗ ಋಷಿ,

'ಇಷ್ಟರಲ್ಲೇ ರಾಜ್ಯ ನಿನ್ನ ಕೈ ತಪ್ಪಿ ಹೋಗಿ ನಿನಗೆ ವನವಾಸ ಪ್ರಾಪ್ತವಾಗುತ್ತದೆ. ಅಲ್ಲಿಯೇ ನಿನಗೆ ಮಕ್ಕಳಾಗುತ್ತಾರೆ. ಮುಂದೆ ಮಕ್ಕಳು ದೊಡ್ಡವರಾಗಿ ಅವರಿಂದ ಮತ್ತೆ ರಾಜ್ಯ ಪ್ರಾಪ್ತಿಯಾಗುತ್ತದೆ' ಎಂದು ಹೇಳಿ ಹೋದ. 'ರಾಜ್ಯ ಹೋದರೂ ಚಿಂತೆಯಿಲ್ಲ; ಮಕ್ಕಳಾಗುತ್ತಾರಲ್ಲ' ಎಂದು ರಾಜ ಸಂತೋಷದಿಂದಲೇ ಇದ್ದ.

ಕೆಲವು ದಿನಗಳಲ್ಲಿಯೇ ವೈರಿ ರಾಜರು ಇವನ ರಾಜ್ಯದ ಮೇಲೆ ದಂಡೆತ್ತಿ ಬಂದರು. ರಾಜನಿಗೆ ಅವರನ್ನು ಎದುರಿಸಲು ಸಾಧ್ಯವಾಗಲಿಲ್ಲ. ಉಟ್ಟ ಬಟ್ಟೆ ಬಿಟ್ಟು ಬೇರೇನೂ ತೆಗೆದುಕೊಳ್ಳದೆ ಹೆಂಡತಿಯೊಂದಿಗೆ ಆತ ವನವಾಸಕ್ಕೆ ಹೋದ. ಅಲ್ಲಿ ಋಷಿಯ ಮಾತಿನಂತೆ ಇಬ್ಬರು ಗಂಡು ಮಕ್ಕಳಾದರು. ದೊಡ್ಡವನಿಗೆ ರಾಮ ಎಂದೂ ಸಣ್ಣವನಿಗೆ ಭೀಮ ಎಂದೂ ಹೆಸರಿಟ್ಟ. ವಿದ್ಯಾ ಬುದ್ಧಿ ಕಲಿಸಿದ. ಮಕ್ಕಳು ಬೆಳೆದು ದೊಡ್ಡವರಾಗಿ ತಂದೆ ತಾಯಿ ಕಷ್ಟಪಡುವುದನ್ನು ನೋಡಿದರು. ಬೇರೆ ನಾಡಿಗೆ ಹೋಗಿ ಹಣ ಸಂಪಾದಿಸಬೇಕೆಂದು ಯೋಚಿಸಿ ತಂದೆ ತಾಯಿಗಳ ಆಶೀರ್ವಾದ ಪಡೆದು ಹೊರಟರು.

ಅಡವಿಯಲ್ಲಿ ಹೋಗುತ್ತಿದ್ದಾಗ ದಣಿವಾಗಿ ಒಂದು ಮಾವಿನ ಮರದಡಿ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆ ಮರದಲ್ಲಿ ಒಂದೇ ಒಂದು ಹಣ್ಣು ಇತ್ತು. ಆ ಮರವನ್ನು ಹತ್ತಿ ಅದನ್ನು ಹರಿಯಬೇಕೆನ್ನುವಷ್ಟರಲ್ಲಿ ಅದು ತಾನಾಗೇ ಕೆಳಗೆ ಬಿತ್ತು. ತೆಗೆದುಕೊಂಡರು. ಅಷ್ಟರಲ್ಲಿ ಅಲ್ಲಿಗೊಬ್ಬ ಸನ್ಯಾಸಿ ಬಂದು, 'ಈ ಮಾವಿನ ಮರದಲ್ಲೊಂದು ಹಣ್ಣಿತ್ತು; ಕಂಡಿರಾ?' ಎಂದ. ಇಬ್ಬರೂ 'ಇಲ್ಲ' ಅಂದರು. ಸನ್ಯಾಸಿ, 'ಅಯ್ಯೋ' ನಾನು ಹನ್ನೆರಡು ವರ್ಷಗಳಿಂದ ಕುಳಿತು ಕಾದದ್ದು ವ್ಯರ್ಥವಾಯಿತು' ಎಂದು ದುಃಖಿಸಲಾರಂಭಿಸಿದ. ಇಬ್ಬರಿಗೂ ಆಶ್ಚರ್ಯವಾಯಿತು. 'ಆ ಹಣ್ಣಿನಲ್ಲಿ ಅಂಥಾದ್ದೇನಿದೆ?' ಎಂದು ಕೇಳಿದರು.



‘ಅದು ಸಾಮಾನ್ಯ ಹಣ್ಣಲ್ಲ. ಹನ್ನೆರಡು ವರುಷಕ್ಕೆ ಒಮ್ಮೆ ಮಾತ್ರ ಕಾಣಿಸಿಕೊಳ್ಳುವ ಹಣ್ಣು. ಆ ಹಣ್ಣು ತಿಂದವ ರಾಜನಾಗುತ್ತಾನೆ. ಒಳಗಿನ ಗೊರಟು ತಿಂದವನು ನಕ್ಕಾಗಲೆಲ್ಲಾ ಮುತ್ತು, ರತ್ನ ಸುರಿಯುತ್ತವೆ’ ಎಂದು ಸನ್ಯಾಸಿ ಹೇಳಿ ದುಃಖಿಸುತ್ತ ತನ್ನ ಆಶ್ರಮಕ್ಕೆ ಹೋದ. ಅಣ್ಣ ತಮ್ಮ ಇಬ್ಬರೂ ನಡೆಯುತ್ತ ಮುಂದೆ ಹೋದರು. ಮುಂದೊಂದು ಸರೋವರ ಬಂತು. ಇಬ್ಬರೂ ನೀರಲ್ಲಿ ಕೈಕಾಲು ಮುಖ ತೊಳೆದುಕೊಂಡು ತಮ್ಮ ಬಳಿಯ ಮಾವಿನಹಣ್ಣು ತೆಗೆದರು. ಹಣ್ಣನ್ನು ಅಣ್ಣ ತಿಂದ. ಒಳಗಿನ ಗೊರಟನ್ನು ತಮ್ಮ ತಿಂದ. ದಣಿವಾರಿಸಿಕೊಂಡು ಮುಂದುವರಿದರು.

ಮುಂದೊಂದು ಪಟ್ಟಣ ಸಿಕ್ಕಿತು. ಆ ಪಟ್ಟಣದ ರಾಜನಿಗೆ ಮಕ್ಕಳಿರಲಿಲ್ಲ. ವಯಸ್ಸಾಗಿತ್ತು. ಆದ್ದರಿಂದ ಪಟ್ಟದಾನೆಯ ಸೊಂಡಿಲಿಗೆ ಮಾಲೆ ಹಾಕಿ, ಅದು ಯಾರ ಕೊರಳಿಗೆ ಮಾಲೆ ಹಾಕುವುದೋ ಅವರಿಗೆ ಪಟ್ಟಗಟ್ಟಬೇಕೆಂದು ಆನೆ ಬಿಟ್ಟಿದ್ದರು. ಅದು ಅವರಿವರನ್ನು ಸರಿಸಿ ರಾಮನ ಕೊರಳಿಗೇ ಮಾಲೆ ಹಾಕಿತು. ವೈಭವದಿಂದ ಅವನಿಗೆ ಪಟ್ಟಗಟ್ಟಿದರು.

ಸಣ್ಣವನಾದ ಭೀಮ ಮಾತ್ರ ಅಣ್ಣನೊಂದಿಗೆ ಇರಲಿಕ್ಕೆ ಒಪ್ಪಲಿಲ್ಲ. ತನ್ನ ಅದೃಷ್ಟವನ್ನು ತಾನೇ ಹುಡುಕುವೆನೆಂದು ಹೇಳಿ ಮುಂದೆ ಹೋದ. ಒಂದು ಪಟ್ಟಣ ಸಿಕ್ಕಿತು. ಆ ಪಟ್ಟಣದ ಒಬ್ಬಳು ನರ್ತಕಿಯ ರೂಪಕ್ಕೆ ಮಾರುಹೋಗಿ ಅವಳಲ್ಲಿಯೇ ಇದ್ದ. ಅವಳು ಈತನನ್ನು ನೃತ್ಯ ಸಂಗೀತಗಳಿಂದ ತೃಪ್ತಿಪಡಿಸಿ ನಗಿಸಿದರು. ಆಗ ಅವನ ಬಾಯಿಂದ ಮುತ್ತು ರತ್ನ ಬಿದ್ದವು. ನರ್ತಕಿ ಓಡಿ ಹೋಗಿ ತನ್ನ ತಾಯಿಗೆ ಈ ಸುದ್ದಿ ಹೇಳಿದಳು. ತಾಯಿ ಮಗಳು ಇಬ್ಬರೂ ಕೂಡಿ ಇವನ ಕೈಕಾಲು ಒತ್ತುತ್ತ ಸೇವೆ ಮಾಡತೊಡಗಿದರು. ಅವನ ಮನಸ್ಸನ್ನು ಸಂತೋಷಪಡಿಸಿ, ‘ನಿಮ್ಮ ಬಾಯಿಂದ ಮುತ್ತು ರತ್ನ ಬಿದ್ದುವಲ್ಲ, ಹೇಗೆ? ಹೇಳಲೇಬೇಕು’ ಎಂದು ಒತ್ತಾಯ ಮಾಡಿದರು. ಕಪಟವರಿಯದ ಭೀಮ ತಾನೊಂದು ಅಪೂರ್ವದ ಮಾವಿನ ಹಣ್ಣಿನ ಗೊರಟು ತಿಂದುದಕ್ಕೆ ಹೀಗಾಯಿತೆಂದು ಹೇಳಿಬಿಟ್ಟ. ಆ ಮುದುಕಿ ಇವನಿಗೆ ಗೊತ್ತಾಗದಂತೆ ವಾಂತಿಯಾಗುವ ಮದ್ದು ಕೊಟ್ಟಳು. ಭೀಮ ವಾಂತಿ ಮಾಡಿದ. ತಿಂದ ಗೊರಟು ಅವನಿಗೆ ಗೊತ್ತಿಲ್ಲದಂತೆ ಹೊರಗೆ ಬಿತ್ತು. ಅವಳು ಗೊರಟನ್ನು ತಾನೇ ನುಂಗಿ ಭೀಮನ್ನು ಮನೆಯಿಂದ ಹೊರಕ್ಕೆ ದೂಡಿದಳು.

ಪಶ್ಚಾತ್ತಾಪ ಪಡುತ್ತ ಭೀಮ ಊರ ಹೊರಗೆ ಒಂದು ಮರದ ಬುಡದಲ್ಲಿ ಮಲಗಿದ. ಅಲ್ಲಿಗೆ ಒಬ್ಬ ಗುರು ತನ್ನ ನಾಲ್ಕು ಜನ ಶಿಷ್ಯರೊಂದಿಗೆ ಬಂದ. ಅವನು ಶಿಷ್ಯರನ್ನು ಕರೆದು, ‘ಶಿಷ್ಯರೇ, ನನ್ನ ಕಾಲ ಮುಗಿಯಿತು. ಇಷ್ಟು ದಿನ ನೀವು ನನ್ನ ಸೇವೆ ಮಾಡಿದಿರಿ. ನನ್ನ ಹತ್ತಿರ ಇದೊಂದು ದಂಡ, ಒಂದು ಚೀಲ, ಒಂದು ಜೊತೆ ಪಾದುಕೆ ಹಾಗೂ ಟೋಪಿ ಇವೆ. ದಂಡಕ್ಕೆ ಇಂಥವರನ್ನು ಹೊಡೆ ಎಂದು ಆಜ್ಞೆ ಕೊಟ್ಟರೆ ಸಾಕು, ಅವರನ್ನು ಹೊಡೆಯುತ್ತದೆ. ನೀವು ಬಯಸಿದ್ದನ್ನು ಚೀಲ ಕೊಡುತ್ತದೆ. ಪಾದುಕೆ ಧರಿಸಿ ಇಂಥಲ್ಲಿ ಹೋಗು ಎಂದರೆ ಅಂಥಲ್ಲಿಗೆ ಹೋಗುತ್ತದೆ. ಈ ಟೊಪ್ಪಿಗೆ ಹಾಕಿ ಇಂಥಾ ಪಟ್ಟಣ ನಿರ್ಮಾಣವಾಗಲೆಂದು ಹೇಳಿದರೆ ಮರುಕ್ಷಣವೇ ಅಂಥಾ ಪಟ್ಟಣ ಸಿದ್ಧವಾಗಿರುತ್ತದೆ. ತಲಾ ಒಂದರಂತೆ ಇವುಗಳನ್ನು ತಕ್ಕೊಂಡು ಸುಖದಿಂದ ಇರಿ’ ಎಂದು ಹೇಳಿ ಆ ಗುರು ಸತ್ತ. ಆ ವಸ್ತುಗಳನ್ನು ಅಲ್ಲೇ ಬಿಟ್ಟು ಅವನ ಶಿಷ್ಯರು ಗುರುಗಳನ್ನು ಸಮಾಧಿ ಮಾಡಲು ಹೋದರು.

ಇದನ್ನೆಲ್ಲ ಮಲಗಿಕೊಂಡು ನೋಡುತ್ತಿದ್ದ ಭೀಮ ಶಿಷ್ಯರು ಅತ್ತ ಹೋದೊಡನೆ ಆ ದಂಡ, ಚೇಲ, ಪಾದುಕೆ ಹಾಗೂ ಟೋಪಿಗಳನ್ನು ತಗೊಂಡು ಪರಾರಿಯಾದ. ಬೇರೊಂದು ಸ್ಥಳಕ್ಕೆ ಹೋಗಿ ಚೇಲವನ್ನು ಬೇಡಿ, ಬೇಕು ಬೇಕಾದ ತಿಂಡಿ ತಿನಿಸು ತಿಂದ. ಆಮೇಲೆ ಪಾದುಕೆ ಹತ್ತಿ ಮತ್ತೆ ಆ ನರ್ತಕಿಯ ಮನೆಗೇ ಹಿಂದಿರುಗಿದ.

ನರ್ತಕಿ ಹಾಗೂ ಅವಳ ತಾಯಿ ಮತ್ತೆ ಸುಳ್ಳು ಪ್ರೀತಿ ತೋರಿಸಿದರು. ನಂಬಿಕೆ ಹುಟ್ಟುವಂತೆ ಅವನ ಸೇವೆ ಮಾಡಿದರು. ಟೋಪಿಯ ಸಹಾಯದಿಂದ ಒಂದು ಸುಂದರವಾದ ಪಟ್ಟಣ ನಿರ್ಮಿಸಿದರು. ಅಲ್ಲಿ ಭೀಮ ನರ್ತಕಿಯನ್ನೆ ರಾಣಿಯಾಗಿರಿಸಿಕೊಂಡು ಸುಖದಿಂದ ಇದ್ದ. ಅಡಿಗೆ ಮಾಡಬೇಕಿರಲಿಲ್ಲ. ಯಾಕೆಂದರೆ ಬೇಡಿದ್ದನ್ನು ಚೇಲ ಕೊಡುತ್ತಿತ್ತು. ವಾಹನ ಬೇಕಿರಲಿಲ್ಲ. ಪಾದುಕೆಗಳು ಬೇಕಾದಲ್ಲಿಗೆ ಅವನನ್ನು ಒಯ್ಯುತ್ತಿದ್ದವು. ವೈರಿಗಳ ಭಯವೂ ಇರಲಿಲ್ಲ. ಯಾಕೆಂದರೆ ಯಾರು ಬಂದರೂ ದಂಡಿಸಲು ದಂಡವಿತ್ತು. ಈ ವಿಚಿತ್ರ ನೋಡಿ ಮತ್ತೆ ನರ್ತಕಿ ಹಾಗೂ ಅವಳ ತಾಯಿಗೆ ದುರಾಸೆ ಹುಟ್ಟಿತು. ಮತ್ತೆ ಮತ್ತೆ ಭೀಮನ ಸೇವೆ ಮಾಡಿದರು. ಮೈ ಕೈ ತಿಕ್ಕಿದರು. ಹೆಜ್ಜೆಗೊಮ್ಮೆ ನೀನೇ ದೊಡ್ಡವನೆಂದರು. ಕೊನೆಗೊಮ್ಮೆ ಈ ವೈಭವ ನಿನಗೆ ಹೇಗೆ ಸಿಕ್ಕಿತೆಂದು ಕೇಳಿದರು. ಭೀಮ ಈ ಸಲವೂ ಮೋಸ ಹೋದ. ದಂಡ, ಚೇಲ, ಪಾದುಕೆ, ಟೋಪಿಗಳನ್ನು ತೋರಿಸಿದ. ಅವುಗಳ ಮಹಿಮೆಯನ್ನು ಬಣ್ಣಿಸಿದ.



ಒಂದು ದಿನ ಆ ನರ್ತಕಿ ಭೀಮನ ಬಳಿ ಬಂದು, "ನನ್ನದೊಂದು ಹರಕೆಯಿದೆ. ಸಮುದ್ರದ ನಡುಗಡ್ಡೆಯಲ್ಲಿ ಒಂದು ದೇವಸ್ಥಾನವಿದೆ. ಅಲ್ಲಿಯ ದೇವರಿಗೆ ಪೂಜೆ ಮಾಡಿ ಬರಬೇಕು; ಹೋಗೋಣ ಬನ್ನಿ' ಎಂದಳು. ಆಗಲೆಂದು ತಾಯಿ ಮಗಳನ್ನು ಪಾದುಕೆಯ ಮೇಲೆ ಹತ್ತಿಸಿಕೊಂಡು ನಡುಗಡ್ಡೆಗೆ ಹೋದ.

ನರ್ತಕಿಯ ತಾಯಿ ಪೂಜಾ ಸಾಮಗ್ರಿಗಳನ್ನು ಅಣಿ ಮಾಡಿದಳು. ಆಮೇಲೆ, 'ನೀವು ಮಡಿ ಮಾಡಿಕೊಂಡು ಹೂ ಪತ್ರೆ ತನ್ನಿ' ಎಂದು ಭೀಮನಿಗೆ ಹೇಳಿದಳು. ಭೀಮ ಹಾಗೆಯೇ ಆಗಲೆಂದು ಬಟ್ಟೆ ಕಳಚಿಟ್ಟು ಸ್ನಾನ ಮಾಡಲು ಹೋದ. ಇದೇ ಅವಕಾಶವೆಂದುಕೊಂಡ ಅವರು ದಂಡ, ಚೇಲ, ಟೋಪಿಗಳನ್ನು ತಗೊಂಡು ಪಾದುಕೆಗಳ ಮೇಲೆ ಹತ್ತಿ, ಭೀಮನನ್ನು ಅಲ್ಲಿಯೇ ಬಿಟ್ಟು ಊರಿಗೆ ಬಂದರು.

ಮಡಿಯಾಗಿ ಹೂ ಪತ್ರೆ ತರಲು ಹೋದ ಭೀಮ ತಿರುಗಿ ಬಂದು ನೋಡಿದರೆ ಅಲ್ಲಿ ಯಾರೂ ಇರಲಿಲ್ಲ. ತನ್ನ ವಸ್ತುಗಳೂ ಮಾಯವಾಗಿದ್ದವು. ಈ ಸಲವೂ ಮೋಸ ಮಾಡಿದರಲ್ಲಾ ಎಂದು ಮತ್ತೆ ಪಶ್ಚಾತ್ತಾಪ ಪಟ್ಟು ಇನ್ನೇನು ಮಾಡುವುದು? ದೇವರು ಮಾಡಿದಂತಾಗಲೆಂದು ಅಲ್ಲೇ ತಿರುಗಾಡುತ್ತಿದ್ದ. ಹೀಗೆ ಅಡ್ಡಾಡುತ್ತಿದ್ದಾಗ ಒಂದು ಹಣ್ಣಿನ ತೋಟ ಸಿಕ್ಕಿತು. ಇವನಿಗೆ ಹಸಿವಾಗಿತ್ತು. ಒಂದು ಹಣ್ಣಿನ ಮರಕ್ಕೆ ಕೈ ಹಾಕುತ್ತಿರುವಾಗ ಒಬ್ಬ ದೇವಕನ್ಯೆ ಕಾಣಿಸಿಕೊಂಡು, 'ಹಾ! ತಾಳು, ತಾಳು' ಎಂದು ಹೇಳಿದಳು. ಯಾಕೆಂದು ಕೇಳಿದ. 'ಈ ಮರದಲ್ಲಿಯ ಹಣ್ಣು ತಿಂದರೆ ತಿಂದವನು ಕೋತಿಯಾಗುತ್ತಾನೆ. ಅಗೋ ಅ ಮರದ ಹಣ್ಣನ್ನು ತಿಂದವರು

ಹಂದಿಯಾಗುತ್ತಾರೆ. ಅಗೋ ಆ ಇನ್ನೊಂದು ಮರವಿದೆಯಲ್ಲ, ಅದರ ಹಣ್ಣು ತಿಂದರೆ, ತಿಂದವರು ಹಕ್ಕಿಯಾಗುತ್ತಾರೆ ಇದೊಂದು ವಿಚಿತ್ರ' ಎಂದಳು.

'ನೀನು ಯಾರು?' - ಎಂದು ಭೀಮ ಕೇಳಿದ. 'ನಾನು ಈ ತೋಟ ಕಾಯುವ ದೇವಕನ್ಯೆ' ಎಂದಳು. ಇಬ್ಬರಿಗೂ ಪರಸ್ಪರ ಪ್ರೀತಿಯಾಯಿತು. ಇಬ್ಬರೂ ಅಲ್ಲಿಯೇ ಇದ್ದ ಗುಡಿಗೆ ಹೋಗಿ ಗಾಂಧರ್ವ ವಿವಾಹವಾದರು. ಭೀಮ ಅಲ್ಲಿ ಕೆಲ ದಿನ ಇದ್ದು ಇನ್ನು ನಮ್ಮ ರಾಜ್ಯಕ್ಕೆ ಹೋಗೋಣವೆಂದು ಹೇಳಿದ. ಅವಳೂ ಒಪ್ಪಿದಳು. ಬರುವಾಗ (ತಿಂದರೆ) ಹಂದಿ ಮತ್ತು ಕೋತಿಯಾಗುವ ಹಣ್ಣುಗಳನ್ನು ಕಿತ್ತುಕೊಂಡು ಬಂದರು.

ಆತ ತನ್ನ ಅಣ್ಣನ ಹತ್ತಿರ ಹೋಗಿ ಹೆಂಡತಿಯನ್ನು ಅವರ ಮನೆಯಲ್ಲಿ ಬಿಟ್ಟ. ಆ ಕ್ಷಣವೇ ನರ್ತಕಿಯ ಮನೆಗೆ ಹೋದ. ಈ ಸಲ ಇನ್ನೇನು ತಂದಿದ್ದಾನು ಎಂಬ ಆಶೆಯಿಂದ ನರ್ತಕಿ ಕೂಡಲೇ ಬಾಗಿಲು ತೆರೆದಳು. 'ಹಣ್ಣ ತಂದಿದ್ದೇನೆ ತಿನ್ನೋಣ ಬನ್ನಿ' ಎಂದು ಹೇಳಿ ಕರೆದ. ಇಬ್ಬರಿಗೂ ಒಂದೊಂದು ಹಣ್ಣು ಕೊಟ್ಟ. ಈ ಸಲ ಅವರೇ ಮೋಸ ಹೋದರು. ಹಣ್ಣು ತಿಂದೊಡನೆ ನರ್ತಕಿ ಕೋತಿಯಾದಳು. ಅವಳ ತಾಯಿ ಹಂದಿಯಾದಳು. ಹಂದಿಗೆ ವಾಂತಿಯಾಗುವ ಮದ್ದು ಕೊಟ್ಟು ಮಾವಿನ ಗೊರಟು ಕಕ್ಕಿಸಿದ. ಆಮೇಲೆ ಅವಳನ್ನು ಹೊರಗಟ್ಟಿದ. ಕೋತಿ ಗಿಡ ಮರ ಹಾರುತ್ತ ಓಡಿಹೋಯಿತು. ಅವರ ಮನೆಯಲ್ಲಿದ್ದ ದಂಡ, ಚೀಲ, ಪಾದುಕೆ ಹಾಗೂ ಟೋಪಿಗಳನ್ನು ತೆಗೆದುಕೊಂಡು ಭೀಮ ತನ್ನ ಅಣ್ಣನ ಹತ್ತಿರ ಬಂದ.

ಇಬ್ಬರೂ ಕೂಡಿ ತಮ್ಮ ತಂದೆ ಕಳೆದುಕೊಂಡಿದ್ದ ರಾಜ್ಯವನ್ನು ಗೆದ್ದರು. ಒಂದು ರಾಜ್ಯಕ್ಕೆ ರಾಮನೂ ಇನ್ನೊಂದಕ್ಕೆ ಭೀಮನೂ ರಾಜರಾಗಿ, ವನವಾಸದಲ್ಲಿದ್ದ ತಂದೆ ತಾಯಿಗಳನ್ನು ಕರೆಸಿಕೊಂಡು, ಅವರ ಸೇವೆ ಮಾಡುತ್ತ ಕಾಲ ಕಳೆದರು.

ಅವರು ಅಲ್ಲಿ ಸುಖದಿಂದ ಇದ್ದರು. ನಾವಿಲ್ಲಿ ಹೀಗಿದ್ದೇವೆ.

* * *

# ಕಾಸಿಗೊಂದು ಸೇರು

## ಕಾಸಿಗೊಂದು ಸೇರು

ಒಂದು ಪಟ್ಟಣವನ್ನು ಅವಿವೇಕಿ ರಾಜ ಆಳುತ್ತಿದ್ದ. ಅವಿವೇಕಿ ರಾಜನಿಗೆ ಒಬ್ಬ ಅಜ್ಞಾನಿ ಮಂತ್ರಿ ಇದ್ದ. ಆದ್ದರಿಂದ ಆ ಪಟ್ಟಣದಲ್ಲಿ ಎಲ್ಲದಕ್ಕೂ ಒಂದೇ ದರ; ಒಂದೇ ಮಾತು. ಯಾವುದೇ ಅಂಗಡಿಯಲ್ಲಿ ಏನೇ ಪದಾರ್ಥ ಕೊಂಡರೂ ಕಾಸಿಗೊಂದು ಸೇರು ಸಿಗುತ್ತಿತ್ತು. ಕಸ್ತೂರಿಯೂ ಕಾಸಿಗೊಂದು ಸೇರು. ಅಕ್ಕಿಯೂ ಕಾಸಿಗೊಂದು ಸೇರು.

ಹೀಗಿರಲಾಗಿ ಆ ಪಟ್ಟಣಕ್ಕೆ ಒಬ್ಬ ಸನ್ಯಾಸಿ ಶಿಷ್ಯನೊಂದಿಗೆ ಬಂದ. ಧರ್ಮಶಾಲೆಯಲ್ಲಿ ಅನುಕೂಲವಿತ್ತು. ಅಲ್ಲೇ ಇಳಿದುಕೊಂಡರು. ಸನ್ಯಾಸಿ ತನ್ನ ಶಿಷ್ಯನಿಗೆ ಒಂದು ರೂಪಾಯಿ ಕೊಟ್ಟು "ಅಡಿಗೆಯ ಪದಾರ್ಥ ಕೊಂಡು ತಾ" ಎಂದು ಕಳಿಸಿದ. ಒಂದು ರೂಪಾಯಿಗೆ ಅದೇನು ಅಡಿಗೆಯ ಪದಾರ್ಥ ಬಂದಾವೆಂದು ಅನುಮಾನದಿಂದಲೇ ಶಿಷ್ಯ ಪೇಟೆಗೆ ಹೋದ.

ಆದರೆ ಅಂಗಡಿಯಲ್ಲಿ ದರ ಕೇಳಿದರೆ ಕಾಸಿಗೊಂದು ಸೇರು! ಈ ಅಂಗಡಿಯವನಿಗೆ ಹುಚ್ಚಿರಬೇಕೆಂದು ಇನ್ನೊಂದು ಅಂಗಡಿಯಲ್ಲಿ ವಿಚಾರಿಸಿದ. ಅವನೂ ಹಾಗೇ ಹೇಳಿದ. ಇವನು ಚೇಷ್ಟೆ ಮಾಡುತ್ತಿರಬೇಕೆಂದು ಮೊತ್ತಂದು ಅಂಗಡಿಯಲ್ಲಿ ವಿಚಾರಿಸಿದ. ಅಲ್ಲೂ ಕಾಸಿಗೊಂದು ಸೇರು! ಈಗ ಶಿಷ್ಯನಿಗೆ ನಂಬಿಕೆಯಾಯಿತು. ಆನಂದವೂ ಆಯಿತು. ಈ ಊರನ್ನು ಯಾವ ಮಹಾರಾಯ

ಆಳುತ್ತಿರುವನೋ ಅವನ ಹೊಟ್ಟೆ ತಣ್ಣಗಿರಲಿ ಎಂದು ಹಾರೈಸಿದ. ಕಾಸಿಗೊಂದು ಸೇರಿನಂತೆ ಅಕ್ಕಿ, ಬೇಳೆ, ತುಪ್ಪ, ಸಕ್ಕರೆ, ರವೆ, ಬೆಲ್ಲ, ತರಕಾರಿ ಕೊಂಡು ಮೂಟೆ ಕಟ್ಟಿಕೊಂಡು ಗುರುವಿನ ಹತ್ತಿರ ಹೋದ. "ಒಂದೇ ರೂಪಾಯಿಗೆ ಇಷ್ಟೊಂದು ಪದಾರ್ಥ ಹೇಗೆ ತಂದೆ?" ಎಂದು ಸನ್ಯಾಸಿ ಕೇಳಿದ. "ಇಲ್ಲಿ ಎಲ್ಲಾ ಪದಾರ್ಥಗಳಿಗೂ ಕಾಸಿಗೊಂದು ಸೇರು" ಎಂದು ಶಿಷ್ಯ ಹೇಳಿದ. ವಿವರವಾಗಿ ಎಲ್ಲವನ್ನೂ ಕೇಳಿಕೊಂಡ ಮೇಲೆ ಸನ್ಯಾಸಿಗೂ ಆಶ್ಚರ್ಯವಾಯಿತು. ಇದು ಅಪಾಯಕಾರಿಯಾದ ಸ್ಥಳವೆಂದು ತೋರುತ್ತದೆ, ಇಲ್ಲಿಂದ ಬೇಗನೆ ಹೊರಡುವುದೇ ಮೇಲೆಂದು ಸನ್ಯಾಸಿ ಹೇಳಿದ. ಆದರೆ ಒಂದೇ ರೂಪಾಯಿಯಲ್ಲಿ ಅನೇಕ ದಿನ ಉಂಡುಟ್ಟು ಸುಖವಾಗಿರಬಹುದಾದ ಸ್ಥಳ. ಬೇಗನೆ ಬಿಟ್ಟು ಹೋಗಲು ಶಿಷ್ಯನಿಗೆ ಮನಸ್ಸಾಗಲಿಲ್ಲ. ಒತ್ತಾಯ ಮಾಡಿ ಗುರುಗಳನ್ನು ಒಲಿಸಿದ, ಅಲ್ಲಿಯೇ ಅನೇಕ ದಿನ ಉಳಿದರು.

ಹೀಗಿರಲು ಒಂದು ದಿನ ರಾತ್ರಿ ಒಬ್ಬ ಕಳ್ಳ ಕಳ್ಳತನ ಮಾಡಲು ಶ್ರೀಮಂತನ ಮನೆಗೆ ಹೋದ. ಯಾರಿಗೂ ಗೊತ್ತಾಗದಂತೆ ಮನೆಯ ಹಿಂಬದಿಯ ಗೋಡೆ ಒಡೆದ. ಇನ್ನೇನು ಒಳಗೆ ನುಗ್ಗಬೇಕೆನ್ನುವಷ್ಟರಲ್ಲಿ ಬಿರಿದ ಗೋಡೆ ಅವನ ಮೇಲೆಯೇ ಬಿತ್ತು. ಕಳ್ಳ ಅಲ್ಲೇ ಸತ್ತುಬಿದ್ದ. ಸುದ್ದಿ ತಿಳಿದು ಕಳ್ಳನ ಹೆಂಡತಿ ರಾಜನ ಬಳಿಗೆ ಅಳುತ್ತ ಹೋದಳು.

"ರಾಜರೇ, ರಾಜರೇ, ನನಗೆ ನ್ಯಾಯ ಕೊಡಿ" ಎಂದಳು. ರಾಜ ಸಮಾಧಾನದಿಂದ "ಯಾಕಮ್ಮಾ, ನಿಗೇನು ಅನ್ಯಾಯವಾಗಿದೆ?" ಎಂದ ಕೇಳಿದ.

"ನಿನ್ನೆ ನನ್ನ ಗಂಡ ಶ್ರೀಮಂತನ ಮನೆಗೆ ಕಳ್ಳತನಕ್ಕೆ ಹೋಗಿದ್ದ. ಗೋಡೆ ಒಡೆದು ಒಳಗೆ ನುಗ್ಗುವಾಗ ಗೋಡೆ ಬಿದ್ದು ಸತ್ತುಹೋದ. ಇದು ಅನ್ಯಾಯವಲ್ಲವೆ? ಗೋಡೆ ಸರಿಯಾಗಿದ್ದಿದ್ದರೆ ಅದು ಬೀಳುತ್ತಿತ್ತೆ? ಅದು ಬೀಳದಿದ್ದರೆ ನನ್ನ ಗಂಡ ಸಾಯುತ್ತಿದ್ದನೆ? ನಾನು ಗಂಡನನ್ನು ಕಳೆದುಕೊಂಡೆ. ಇನ್ನು ನನಗೆ ಯಾರು ದಿಕ್ಕು? ಹೋ!" ಎಂದು ತಲೆ ಜಜ್ಜಿಕೊಂಡು ಅಳತೊಡಗಿದಳು. ರಾಜ ಕರಗಿಹೋದ.

"ನನ್ನ ಪಟ್ಟಣದಲ್ಲಿ ಈ ರೀತಿ ಅನ್ಯಾಯವಾಗುವುದು ಸರಿಯಲ್ಲ. ಸಡಿಲು ಗೋಡೆ ಕಟ್ಟಿ ನಿನ್ನ ಗಂಡನ ಪ್ರಾಣ ತಕ್ಕೊಂಡ ಆ ಶ್ರೀಮಂತನಿಗೆ ಈಗಲೇ ಮರಣ ದಂಡನೆ ಕೊಡುತ್ತೇನೆ, ತಾಳು" ಎಂದು ಹೇಳಿ ಶ್ರೀಮಂತನನ್ನು ಕರೆಯಲು ಸೇವಕರನ್ನು ಕಳಿಸಿದ.

ಶ್ರೀಮಂತ ನಡುಗುತ್ತಲೇ ಬಂದ. ರಾಜ ಗುಡುಗಿದ-

"ಎಲವೋ ಶ್ರೀಮಂತ, ನಿನ್ನೆ ನಿನ್ನ ಮನೆಯ ಗೋಡೆ ಬಿದ್ದು ಆ ಕಳ್ಳ ಸತ್ತದ್ದು ಸರಿಯೋ?"

"ಸರಿ ಸ್ವಾಮಿ. ಕಳ್ಳತನಕ್ಕೆ ಒಳ್ಳೆ ಶಿಕ್ಷೆ ತಾನಾಗೇ ಸಿಕ್ಕಿದೆ."

"ಕಳ್ಳತನ ಮಾಡೋದು ಕಳ್ಳನ ಕೆಲಸ. ಕಳ್ಳತನ ಮಾಡಿಸಿಕೊಳ್ಳೋದು ಶ್ರೀಮಂತನ ಕೆಲಸ. ಹೀಗಿರುವಾಗ ಶಿಕ್ಷೆ ಯಾಕೆ?"

"ಹಾಗಲ್ಲ ಪ್ರಭು, ಕಳ್ಳತನ ಕೆಟ್ಟ ಕೆಲಸ. ಅದಕ್ಕೇ ಅವನಿಗೆ ಆ ಗೋಡೆಯೇ ಶಿಕ್ಷೆ ಕೊಟ್ಟಿತು."

ಅವಿವೇಕಿ ರಾಜನಿಗೆ ಸಿಟ್ಟು ಬಂತು ಪಟ್ಟಣದ ರಾಜನಾದ ತನಗೆ ಈ ರೀತಿ ಬುದ್ಧಿವಾದ ಹೇಳುವುದೇ?

"ಎಲವೋ ಮೂರ್ಖ, ಕಳ್ಳತನ ಕೆಟ್ಟ ಕೆಲಸ ನಿಜ. ಹಾಗಂತ ಕಲ್ಲಿನ ಗೋಡೆ ಶಿಕ್ಷೆ ಕೊಡೋದು ಸರಿಯೇ? ಗೋಡೆಯೇ ಶಿಕ್ಷೆ ಕೊಡೋದಾದರೆ ರಾಜನಾಗಿ ನಾನು ಯಾಕಿರಬೇಕು? ಸಡಿಲು ಗೋಡೆ ಕಟ್ಟಿಸಿ ಕಳ್ಳನ ಪ್ರಾಣ ತಕ್ಕೊಂಡೆ. ಆದ್ದರಿಂದ ಅವನ ಹೆಂಡತಿ ವಿಧವೆಯಾದಳು. ಈಗ ನಿನ್ನ ಪ್ರಾಣ ತಕ್ಕೊಂಡು ನಿನ್ನ ಹೆಂಡತಿಯೂ ವಿಧವೆಯಾಗುವಂತೆ ಮಾಡುತ್ತೇನೆ. ಎಲವೋ ಯಾರಲ್ಲಿ? ಇವನನ್ನು ಗಲ್ಲಿಗೇರಿಸಿ" ಎಂದು ರಾಜ ಆಜ್ಞೆ ಮಾಡಿಬಿಟ್ಟ.

ಶ್ರೀಮಂತನಿಗೆ ತಾನು ಮಾತಾಡಿದ ತಪ್ಪಿನ ಅರಿವಾಯಿತು. ತಡ ಮಾಡಿದರೆ ಅಪಾಯವೆಂದು ತಕ್ಷಣ ರಾಜನ ಕಾಲಿಗೆ ಬಿದ್ದು, "ಮಹಾಪ್ರಭು, ತಮ್ಮಂಥ ನ್ಯಾಯನಿಷ್ಠರ ರಾಜ್ಯದಲ್ಲಿ ನನ್ನಂಥವನಿಗೆ ಅನ್ಯಾಯವಾಗುವುದು ತರವಲ್ಲ. ಆ ಗೋಡೆ ಕಟ್ಟಿದವನು ನಾನಲ್ಲ; ಉಪ್ಪಾರ. ಅವನೇ ಆ ಗೋಡೆಯನ್ನು ಸರಿಯಾಗಿ ಕಟ್ಟಿದ್ದರೆ ಕಳ್ಳ ಸಾಯುತ್ತಿರಲಿಲ್ಲ. ಈ ತಪ್ಪು ಆ ಉಪ್ಪಾರನರದು. ಶಿಕ್ಷೆ ಸಲ್ಲಬೇಕಾದ್ದು ಅವನಿಗೆ ಪ್ರಭು" ಎಂದ. ಹೌದಲ್ಲ, ಅನ್ಯಾಯವಾಗಿ ಶ್ರೀಮಂತನಿಗೆ ಮರಣ ದಂಡನೆ ಆಗುತ್ತಿತ್ತಲ್ಲ ಎನ್ನಿಸಿತು ರಾಜನಿಗೆ.

"ಎಲವೋ, ಇವನನ್ನು ಬಿಟ್ಟು ಆ ಉಪ್ಪಾರನ್ನು ಎಳೆದುಕೊಂಡು ಬನ್ನಿರಿ" ಎಂದು ಆಜ್ಞೆ ಮಾಡಿದ.

ಆ ಉಪ್ಪಾರನನ್ನು ಎಳೆದು ತಂದರು.

"ಎಲವೋ, ಈ ಶ್ರೀಮಂತನ ಮನೆ ಕಟ್ಟಿದವನು ನೀನೇ ತಾನೆ?"

"ಹೌದು ಸ್ವಾಮಿ."

"ಆ ಮನೆಯ ಗೋಡೆ ಸಡಿಲು ಕಟ್ಟಿದ್ದರಿಂದ ಅದು ಬಿದ್ದು ಕಳ್ಳನ ಪ್ರಾಣ ಹೋಯ್ತು. ಆದ್ದರಿಂದ ನಿನಗೆ ಮರಣ ದಂಡನೆ ವಿಧಿಸಿದ್ದೇನೆ. ಈತನನ್ನು ಎಳೆದೊಯ್ಯಿರಿ."

– ಎಂದು ರಾಜ ಆಜ್ಞೆ ಮಾಡಿದ. ಉಪ್ಪಾರ ತಬ್ಬಿಬ್ಬಾದ. ಈಗ ತಡ ಮಾಡಿದರೆ ಅಪಾಯವೆಂದುಕೊಂಡು ಕೂಡಲೇ ರಾಜನ ಕಾಲು ಹಿಡಿದು ಹೇಳಿದ,

"ಸ್ವಾಮಿ, ನಾನು ಸಡಿಲುಗೋಡೆ ಕಟ್ಟಿದ್ದು ನಿಜ. ಆದರೆ ಅದಕ್ಕೆ ಕಾರಣವಿದೆ. ನಾನು ಗೋಡೆ ಕಟ್ಟುವ ಕಾಲಕ್ಕೆ ಈ ಊರಿನ ನರ್ತಕಿ ಅಲ್ಲೇ ಹಾದುಹೋಗುತ್ತಿದ್ದಳು. ಅವಳ ಮೇಲೆ ನನ್ನ ದೃಷ್ಟಿ ಬಿದ್ದುದರಿಂದ ಗೋಡೆಯ ಕಡೆ ನೋಡಲಾಗಲಿಲ್ಲ. ಅವಳೇ ಅಲ್ಲಿ ಹಾಯದಿದ್ದರೆ ನಾನು ಅವಳ ಕಡೆ ನೋಡುತ್ತಿರಲಿಲ್ಲ. ಗೋಡೆ ಸಡಿಲಾಗುತ್ತಿರಲಿಲ್ಲ. ಆದ್ದರಿಂದ ತಪ್ಪು ಅವಳದೆ. ಶಿಕ್ಷೆ ಆಗಬೇಕಾದದ್ದು ಅವಳಿಗೆ. ನ್ಯಾಯವೆಂದರೆ ಇದಲ್ಲವೆ ಸ್ವಾಮಿ?"

ರಾಜನಿಗೆ ಉಪ್ಪಾರನ ಮಾತು ಸರಿಯೆನ್ನಿಸಿತು. ಕೂಡಲೇ ಅವನನ್ನು ಬಿಡಿಸಿ ಆ ನರ್ತಕಿಯನ್ನು ಕರೆದು ತರಲು ಆಜ್ಞೆ ಮಾಡಿದ.

ನರ್ತಕಿಗೆ ದಾರಿಯಲ್ಲೇ ಎಲ್ಲ ವಿಷಯ ಗೊತ್ತಾಯಿತು. ಓಡಿ ಬಂದು ರಾಜನಿಗೆ ಅಡ್ಡ ಬಿದ್ದು ಹೇಳಿದಳು: "ಪ್ರಭು, ಈ ಉಪ್ಪಾರ ಗೋಡೆ ಕಟ್ಟುವಲ್ಲಿ ನಾನು ಹಾದುಹೋಗುತ್ತಿದ್ದುದು ನಿಜ. ಆದರೆ ಅದಕ್ಕೆ ಕಾರಣ ಇದೆ. ಅಕ್ಕಸಾಲಿಯ ಹತ್ತಿರ ನಾನೊಂದು ಆಭರಣ ಮಾಡಿಸಲಿಕ್ಕೆ ಕೊಟ್ಟಿದ್ದೆ. ಅವನು ಈಗ ಬಾ, ಆಗ ಬಾ, ನಾಳೆ ಬಾ ಅಂತ ಅಲೆದಾಡಿಸುತ್ತಿದ್ದ. ಅವನೇ ಹೇಳಿದ ಸಮಯಕ್ಕೆ ಆಭರಣ ಕೊಟ್ಟಿದ್ದರೆ ನಾನಲ್ಲಿ ಹಾಯುತ್ತಿರಲಿಲ್ಲ. ನಾನು ಹಾಯದಿದ್ದರೆ ಉಪ್ಪಾರ ಸರಿಯಾಗಿ ಗೋಡೆ ಕಟ್ಟುತ್ತಿದ್ದ. ಗೋಡೆ ಸರಿಯಾಗಿದ್ದಿದ್ದರೆ ಅದು ಬೀಳುತ್ತಿರಲಿಲ್ಲ. ಕಳ್ಳ ಸಾಯುತ್ತಿರಲಿಲ್ಲ. ಈ ತಪ್ಪು ಅಕ್ಕಸಾಲಿಯದಲ್ಲವೇ ಪ್ರಭು?"

ರಾಜನಿಗೆ ನರ್ತಕಿಯ ಮಾತು ಸರಿದೋರಿತು. ಕೂಡಲೇ ಅಕ್ಕಸಾಲಿಗೆ ಕರೆ ಹೋಯಿತು.

ಅಕ್ಕಸಾಲಿಗೂ ದಾರಿಯಲ್ಲೇ ವಿಷಯ ಗೊತ್ತಾಯಿತು. ಅವನೂ ಓಡಿ ಬಂದು ರಾಜನಿಗೆ ಅಡ್ಡಬಿದ್ದು ಹೇಳಿದ: "ಮಹಾ ಪ್ರಭು, ಆ ನರ್ತಕಿಯ ಆಭರಣವನ್ನು ನಾನು ಹೇಳಿದ ಸಮಯಕ್ಕೆ ಕೊಡಲಿಲ್ಲ ನಿಜ. ಆದರೆ ಅದಕ್ಕೆ ಕಾರಣ ಇದೆ. ಇದ್ದಿಲು ಕೊಡುವವನು ಸಕಾಲಕ್ಕೆ ಇದ್ದಿಲು ಪೂರೈಸಲಿಲ್ಲ. ಅವನೇ ಸಕಾಲಕ್ಕೆ ಇದ್ದಿಲು ಕೊಟ್ಟಿದ್ದರೆ ನಾನು ಹೇಳಿದ ಸಮಯಕ್ಕೆ ಆಭರಣ ಕೊಡುತ್ತಿದ್ದೆ. ಆಭರಣ ಕೊಟ್ಟಿದ್ದರೆ ಅವಳು ಅಲ್ಲಿ ಹಾಯುತ್ತಿರಲಿಲ್ಲ. ಉಪ್ಪಾರ ಅವಳನ್ನು ನೋಡದೆ ಗೋಡೆ ಸರಿಯಾಗಿ ಕಟ್ಟುತಿದ್ದ. ಗೋಡೆ ಸರಿಯಾಗಿದ್ದಿದ್ದರೆ

ಅದು ಬೀಳುತ್ತಿರಲಿಲ್ಲ. ಕಳ್ಳ ಸಾಯುತ್ತಿರಲಿಲ್ಲ. ಹೀಗಾಗಿ ತಪ್ಪು ಆ ಇದ್ದಿಲು ಕೊಡುವವನದು. ಆದ್ದರಿಂದ ಶಿಕ್ಷೆ ಆಗಬೇಕಾದ್ದು ಅವನಿಗಲ್ಲವೆ ಪ್ರಭು?" ರಾಜನಿಗೆ ಅಕ್ಕಸಾಲಿಯ ವಾದವೂ ಸರಿಯೆನಿಸಿತು. ಕೂಡಲೇ ಇದ್ದಿಲು ಮಾರುವವನನ್ನು ಕರೆತರಲು ಆಳುಗಳನ್ನು ಅಟ್ಟಿದ.

ಆದರೆ, ಅವನೋ ಅರೆಹುಚ್ಚ ಬಡಕಲು ಶರೀರದವ, ಇದ್ದಿಲು ವರ್ಣದವ. ಹೀಗಾಗಿ ತನ್ನ ತಪ್ಪನ್ನು ಇನ್ನೊಬ್ಬರ ಮೇಲೆ ಹಾಕಿ ಪಾರಾಗುವುದು ಅವನಿಗೆ ಸಾಧ್ಯವೇ ಇರಲಿಲ್ಲ. ರಾಜನ ಆಳುಗಳು ಹಿಡಿದು ತಂದಾಗ ಹರಕೆಯ ಕುರಿಯ ಹಾಗೆ ಸುಮ್ಮನೆ ಬಂದ. ರಾಜನ ಮುಂದೆ ನಿಂತ ಈತ ರಾಜ ಕೇಳಿದ ಯಾವ ಪ್ರಶ್ನೆಗೂ ಉತ್ತರ ಕೊಡಲಿಲ್ಲ. ಶಿಕ್ಷೆಗೆ ಇವನೇ ಯೋಗ್ಯನೆಂದು ತೀರ್ಮಾನಿಸಿ ರಾಜ ಇವನಿಗೇ ಗಲ್ಲಿನ ಶಿಕ್ಷೆ ಕೊಟ್ಟ. ಗಲ್ಲುಗಂಬಕ್ಕೆ ಇವನನ್ನು ಸೇವಕರು ಎಳೆದೊಯ್ದರು.

ಆದರೆ ಇದ್ದಿಲು ಮಾರುವವನ ಸುದೈವವೋ ಸುದೈವ. ಅಷ್ಟರಲ್ಲಿ ಅಲ್ಲಿಗೆ ಅಜ್ಞಾನಿ ಮಂತ್ರಿ ಬಂದ. ಇವನು ಗಲ್ಲಿಗೇರುವುದನ್ನು ನೋಡಲು ಬಂದ ರಾಜನ ಬಳಿಗೆ ಧಾವಿಸಿ "ಪ್ರಭು, ಇದೇನು ಮಾಡುತ್ತಿರುವಿರಿ? ಇವನೋ ಇದ್ದಿಲು ವರ್ಣದ ನರಪೇತಲ. ನಮ್ಮ ರಾಜರು ಈ ತನಕ ಏನೇ ಮಾಡಿದರೂ ಚಂದ ಚಂದದ ಕೆಲಸಗಳನ್ನೇ ಮಾಡಿದರು. ಈಗ ಈ ಕರಿಯನನ್ನು ಗಲ್ಲಿಗೆ ಹಾಕುವುದು ತಮಗೆ ಎಷ್ಟೂ ಶೋಭಿಸುವುದಿಲ್ಲ. ಆದ್ದರಿಂದ ಈತನ ಬದಲು, ದಷ್ಟಪುಷ್ಟವಾಗಿ ಕೊಬ್ಬಿದವರನ್ನು ಗಲ್ಲಿಗೇರಿಸಿದರೆ ಚಂದವಲ್ಲವೆ ಪ್ರಭು?" ಎಂದ.

ರಾಜನಿಗೆ ಮಂತ್ರಿಯ ಮಾತೇ ಯೋಗ್ಯವೆಂದು ತೋರಿತು. ಸಕಾಲಕ್ಕೆ ತನಗೆ ತನ್ನ ರಾಜ್ಯದ ಸತ್ಸಂಪ್ರದಾಯ ನೆನಪಿಸಿದ್ದಕ್ಕೆ ಕೃತಜ್ಞತೆ ಹೇಳಿದ. ಕೂಡಲೇ ಸೇವಕರಿಗೆ ದಷ್ಟಪುಷ್ಟವಾದ ಧಾಂಡಿಗನನ್ನು ಹಿಡಿದು ತರಲು ಆಜ್ಞೆ ಮಾಡಿದ.

ಸೇವಕರು ಹುಡುಕತ್ತ ಹೊರಟರು. ಧರ್ಮಶಾಲೆಯಲ್ಲಿ ಕಾಸಿಗೊಂದು ಸೇರಿನ ಅಡಿಗೆ ಉಂಡುಂಡು ಗೂಳಿಯಂತೆ ಕೊಬ್ಬಿದ ಶಿಷ್ಯನಿದ್ದನಲ್ಲ, ಬಂದು ಅವನನ್ನೇ ಹಿಡಿದರು. ಶಿಷ್ಯನಿಗೆ ದಿಕ್ಕೇ ತೋಚದಾಯಿತು. ಗುರುಗಳೇ ಇದೇನೆಂದು ಸನ್ಯಾಸಿಯನ್ನು ಕೇಳಿದ. ಸನ್ಯಾಸಿ ನಗುತ್ತಾ "ಇದು ಕಾಸಿಗೊಂದು ಸೇರಪ್ಪಾ" ಎಂದ. ಶಿಷ್ಯನನ್ನು ಹೇಗಾದರೂ ಮಾಡಿ ಉಳಿಸಬೇಕೆಂದು ಸನ್ಯಾಸಿ ಶಿಷ್ಯನ ಕಿವಿಯಲ್ಲಿ ಒಂದು ಉಪಾಯ ಹೇಳಿದ. ಶಿಷ್ಯನನ್ನು ಎಳೆದೊಯ್ದರು.

ಕೊನೆಗೂ ಒಬ್ಬ ಕೊಬ್ಬಿದ ಆಸಾಮಿಯೇ ಸಿಕ್ಕನಲ್ಲಾ ಎಂದು ರಾಜ, ಮಂತ್ರಿ ಇಬ್ಬರಿಗೂ ಸಂತೋಷವಾಯಿತು. ಗುರು ಉಪಾಯ ಹೇಳಿಕೊಟ್ಟಿದ್ದರಿಂದ ಶಿಷ್ಯ ನಿಶ್ಚಿಂತನಾಗೇ ಇದ್ದ. ಅವನ ನೆಮ್ಮದಿ ನೋಡಿ ರಾಜನಿಗೆ ಇನ್ನೂ ಆನಂದವಾಯಿತು. ಇಂಥಾ ಬುದ್ಧಿ ತನ್ನ ಪ್ರಜೆಗಳಿಗೆ ಎಂದು ಬರುವುದೋ ಎಂದುಕೊಂಡ.



ಗಲ್ಲಿಗೇರಿಸುವ ಸುದ್ದಿ ತಿಳಿದು ನೋಡುವುದಕ್ಕೆ ಜನ ಸೇರಿದರು. ಇನ್ನೇನು ಶಿಷ್ಯನನ್ನು ಗಲ್ಲಿಗೇರಿಸಬೇಕು, ಅಷ್ಟರಲ್ಲಿ ಜನರನ್ನು ಆಚೀಚೆ ತಳ್ಳಿ ಸನ್ಯಾಸಿ ಬಂದ. ರಾಜರ ಮುಂದೆ ಕೈ ಮುಗಿದು "ಪ್ರಭು, ದಯಮಾಡಿ ನನ್ನನ್ನು ಮೊದಲು ಗಲ್ಲಿಗೇರಿಸಿ" ಎಂದ.

ಶಿಷ್ಯ ಕೋಪಗೊಂಡಂತೆ ನಟಿಸುತ್ತ "ಸಾಧ್ಯವಿಲ್ಲ. ನೀವು ಹಿಡಿದು ತಂದದ್ದು ನನ್ನನ್ನು. ನನ್ನನ್ನೇ ಮೊದಲು ಗಲ್ಲಿಗೇರಿಸಿ ಪ್ರಭು" ಎಂದು ಅವಸರ ಮಾಡಿದ.

ಹೀಗೆ ಗುರುಶಿಷ್ಯರಿಬ್ಬರೂ ನಾ ಮೊದಲು ತಾ ಮೊದಲು ಎಂದು ಜಗಳಾಡತೊಡಗಿದರು. ಒಬ್ಬರನ್ನೊಬ್ಬರು ಹಿಂದೆ ತಳ್ಳಿ ಗಲ್ಲಿಗೆ ಕತ್ತು ಕೊಡಲು ಪ್ರಯತ್ನಿಸತೊಡಗಿದರು. ರಾಜ, ಮಂತ್ರಿ ಇಬ್ಬರಿಗೂ ದಿಗಿಲಾಯಿತು. ಸಾಮಾನ್ಯವಾಗಿ ಗಲ್ಲಿಗೇರುವಾಗ ಜನ ಅಳುತ್ತಾರೆ. ಇಲ್ಲಾ ಪಾರಾಗಲು ಪ್ರಯತ್ನಿಸುತ್ತಾರೆ. ಇವರು ಹೀಗೆ ನಾ ಮುಂದೆ ತಾ ಮುಂದೆ ಎಂದು ಜಗಳಾಡುತ್ತಾರಲ್ಲಾ, ಏನು ಕಾರಣವಿದ್ದೀತೆಂದು ರಾಜ ಕೇಳಿದ.

ಅದಕ್ಕೆ ಸನ್ಯಾಸಿ "ಪ್ರಭು, ಈ ದಿನ ಯಾರು ಮೊದಲು ಗಲ್ಲಿಗೇರಿ ಸಾಯುವರೋ ಅವರು ಮುಂದಿನ ಜನ್ಮದಲ್ಲಿ ನಿಮ್ಮ ಮಗನಾಗಿ ಹುಟ್ಟಿ ರಾಜರಾಗುತ್ತಾರೆ. ಅನಂತರ ಗಲ್ಲಿಗೇರಿದವನು ಮಂತ್ರಿಯಾಗುತ್ತಾರೆ. ಇವ ನೋಡಿ, ನನ್ನ ಶಿಷ್ಯ, ಗುರುವಿನ ಬಗ್ಗೆ ಸ್ವಲ್ಪವಾದರೂ ಗೌರವ ಭಾವನೆ ಬೇಡವೆ? ತಾನೇ ರಾಜನಾಗಬೇಕೆನ್ನುತ್ತಾನೆ. ನೀವಾದರೂ ಬುದ್ಧಿ ಹೇಳಿ" ಎಂದ.

ಅವಿವೇಕಿ ರಾಜನ ತಲೆಯಲ್ಲಿ ತಕ್ಷಣ ಮಿಂಚು ಹೊಳೆಯಿತು. "ಎಲಾ ಮಂತ್ರಿ, ನೋಡಿದೆಯಾ ಈ ಗುರುಶಿಷ್ಯರ ಕುತಂತ್ರವನ್ನ? ತನ್ನ ತರುವಾಯ ಇನ್ನೊಬ್ಬರೇಕೆ ರಾಜನಾಗಬೇಕು? ನಾನೇ ನನ್ನ ಮಗನಾಗಿ ಹುಟ್ಟಿ ಮತ್ತೆ ನಾನೇ ರಾಜನಾಗುತ್ತೇನೆ. ನನ್ನನ್ನೇ ಮೊದಲು ಗಲ್ಲಿಗೇರಿಸಿ" ಎಂದ. ಮಂತ್ರಿಯೇನು ಕಡಿಮೆ? ಅಜ್ಞಾನಿ ತಾನೆ?

"ನಮ್ಮ ರಾಜರೇ ಮುಂದಿನ ಜನ್ಮದಲ್ಲಿ ರಾಜರಾಗುವುದಾದರೆ, ನಾನೇ ಮುಂದಿನ ಜನ್ಮದಲ್ಲಿ ಮಂತ್ರಿಯಾಗುತ್ತೇನೆ. ರಾಜರ ತರುವಾಯ ನನ್ನನ್ನು ಗಲ್ಲಿಗೇರಿಸಿ" ಎಂದ.



ಸರಿ, ರಾಜಾಜ್ಞೆಯಂತೆ ಮೊದಲು ರಾಜನನ್ನೂ ಆಮೇಲೆ ಮಂತ್ರಿಯನ್ನೂ ಗಲ್ಲಿಗೇರಿಸಿದರು. ಅವರಿಬ್ಬರೂ ಈ ರೀತಿ ಸತ್ತು ಹೋದ ಮೇಲೆ ಸನ್ಯಾಸಿಯೇ ರಾಜನಾದ. ಶಿಷ್ಯನೇ ಮಂತ್ರಿಯಾದ. ಜನ ಸುಖವಾಗಿದ್ದರು.

**ಅಲ್ಲಿ ಅವರು ಸುಖವಾಗಿದ್ದರು.**

**ನಾವಿಲ್ಲಿ ಹೀಗಿದ್ದೀವಿ.**

* * *

# ಬಡತಮ್ಮ – ಸಾವ್ಕಾರಣ್ಣ

ಒಂದಾನೊಂದು ಕಾಲದಲ್ಲಿ ಇಬ್ಬರು ಅಣ್ಣ-ತಮ್ಮ ಇದ್ದರು. ಅಣ್ಣ ಶ್ರೀಮಂತ. ಆಳು ಕಾಳು ಧನ ದಾನ್ಯದಿಂದ ಅವನ ದೊಡ್ಡ ಮನೆ ತುಂಬಿ ತುಳುಕುತ್ತಿತ್ತು. ಅವನ ಕೊಟ್ಟಿಗೆಯ ತುಂಬ ದಷ್ಟಪುಷ್ಟವಾದ ಹಿಂಡುವ ದನಗಳಿದ್ದವು. ಅವನ ತೋಟ ಯಾವಾಗಲೂ ಹಸಿರಾಗಿರುತ್ತಿತ್ತು. ಅವನ ಮನೆಯಲ್ಲಿ ಅವನಾಯಿತು, ಅವನ ಹೆಂಡತಿಯಾಯಿತು. ಸಣ್ಣವಾಗಲಿ, ದೊಡ್ಡವಾಗಲಿ ಮಕ್ಕಳಿರಲಿಲ್ಲ. ಅವರು ಸುಖವಾಗಿದ್ದರು. ಅವನ ಇಂಥ ಶ್ರೀಮಂತಿಕೆಯಿಂದ ಊರವರೆಲ್ಲ ಅವನನ್ನು "ಸಾವ್ಕಾರಣ್ಣಾ" ಎಂದೇ ಕರೆಯುತ್ತಿದ್ದರು.

ತಮ್ಮ ಬಡವ, ಮನೆ ತುಂಬ ಮಕ್ಕಳನ್ನು ಬಿಟ್ಟರೆ ಬೇರೇನೂ ಇರಲಿಲ್ಲ. ಅವನ ಕಣಜ ಸದಾ ಬರದಿದಾಗಿರುತ್ತಿತ್ತು. ಕೊಟ್ಟಿಗೆಯಲ್ಲಿ ಹಿಂಡಲಾರದ ಬಡಕಲು ದನಗಳೇ ಇದ್ದವು. ಹೀಗಾಗಿ ಅವರೆಲ್ಲ ಒಂದುಪವಾಸ, ಎರಡುಪವಾಸ ಇರುತ್ತಿದ್ದರು. ಆದ್ದರಿಂದ ಅವನನ್ನು ಊರವರು "ಬಡತಮ್ಮಾ" ಎಂದೇ ಕರೆಯುತ್ತಿದ್ದರು. ಅವನ ಹೆಸರು ಬರೀ "ತಮ್ಮಾ" ಎಂದಿರಲಿ, "ಬಡತಮ್ಮಾ" ಎಂದಿರಲಿ, ಪಾಪ, ಮಕ್ಕಳಿಗೆ ಕೊಡುವುದಕ್ಕೆ ಅವನ ಬಳಿ ಏನೂ ಇರಲಿಲ್ಲ.

ಹೀಗಿರಲು ಒಂದು ದಿನ ಒಬ್ಬ ಸನ್ಯಾಸಿ ಆ ಊರಿಗೆ ಬಂದ. ಸಾವ್ಕಾರಣ್ಣನ ಮನೆಗೆ ಹೋಗಿ "ಸಾವ್ಕಾರಣ್ಣಾ, ಸಾವ್ಕಾರಣ್ಣಾ ಹಸಿವಾಗಿದೆ. ತುಸು ಅನ್ನ ನೀಡು" ಎಂದ.

ಸಾವ್ಕಾರಣ್ಣನಿಗೆ ಕೋಪ ಬಂತು.

"ದುಡಿದೆಯಾ? ದುಃಖಪಟ್ಟೆಯಾ? ನಿನಗೇಕೆ ಅನ್ನ ನೀಡಬೇಕು? ಸಾಧ್ಯವಿಲ್ಲ, ತೊಲಗಾಚೆ" ಎಂದ.

ಸನ್ಯಾಸಿ ಬಡತಮ್ಮನ ಮನೆಗೆ ಬಂದ. "ಹಸಿವಾಗಿದೆ ಅನ್ನ ಕೊಡುವೆಯಾ?" ಎಂದ.

"ಅನ್ನವಿಲ್ಲ, ಆದರೆ ನನ್ನ ಪಾಲಿನ ಗಂಜಿ ಇದೆ. ಅದನ್ನೇ ಕೊಡಬಲ್ಲೆ" ಎಂದ ಬಡತಮ್ಮ. ಸನ್ಯಾಸಿ ಗಂಜಿಯನ್ನು ಕುಡಿದ. ಅವನಿಗೆ ಬಹಳ ಸಂತೋಷವಾಯಿತು. "ಅಯ್ಯಾ ತೃಪ್ತಿಯಾಯಿತು. ನನ್ನ ಬಳಿ ಇದೊಂದು ಕೊಳಲಿದೆ. ನಿನ್ನ ಹೊಲದಲ್ಲಿ ಒಳ್ಳೆಯ ಬೀಜ ಬಿತ್ತು. ದಿನಾಲು ಕೆಲಸ ಮಾಡಿ ಈ ಕೊಳಲು ನುಡಿಸು. ಬೆಳೆ ಚೆನ್ನಾಗಿ ಬರುತ್ತದೆ." ಎಂದು ಹೇಳಿ ಕೊಳಲು ಕೊಟ್ಟು ಹೋದ.



ಮುಂದೆ ಮಳೆಗಾಲ ಬಂತು. ರೈತರ ಹೊಲ ಉತ್ತು ಬಿತ್ತತೊಡಗಿದರು. ಆದರೆ ಬಡತಮ್ಮ ಉತ್ತು ಬಿತ್ತಬೇಕೆಂದರೆ ಆತನ ಬಳಿ ಬೀಜ ಇರಲಿಲ್ಲ. ಬಡತಮ್ಮ ಸಾವ್ಕಾರಣ್ಣನ ಬಳಿಗೆ ಹೋದ.

ಅಣ್ಣ ಕೇಳಿದ "ಯಾಕೋ ಬಡತಮ್ಮಾ, ಈ ಕಡೆ ಬಂದೆ?"

“ಹಂಗಾಮು ಬಂದಿದೆ” ಬಡತಮ್ಮ ಹೇಳಿದ. “ನನ್ನ ಬಳಿ ಬೀಜಗಳಿಲ್ಲ. ಒಂದಿಷ್ಟು ಬೀಜ ಕೊಟ್ಟರೆ ಹೊಲದಲ್ಲಿ ಬಿತ್ತಬಹುದು.”

“ಸರಿ, ಒಂದು ಚೀಲ ತುಂಬ ಬೀಜ ಕೊಡುತ್ತೇನೆ. ಮುಂದೆ ಬೆಳೆ ಬಂದಾಗ ಒಂದಕ್ಕೆ ಹತ್ತರಷ್ಟು ಧಾನ್ಯ ಕೊಡಬೇಕು.”

“ಒಂದಕ್ಕೆ ಹತ್ತರಷ್ಟು! ಇದು ಹೆಚ್ಚಾಯಿತಲ್ಲವೇ?”

“ಹೌದೋ? ಹಾಗಾದರೆ ಬೀಜ ಕೊಡುವುದಿಲ್ಲ ಹೋಗು” ಎಂದ ಸಾವ್ಕಾರಣ್ಣ.

ಬೇರೆ ದಾರಿಯಿರಲಿಲ್ಲ. ಬಡತಮ್ಮ ಒಂದು ಚೀಲ ತುಂಬ ಬೀಜ ತೆಗೆದುಕೊಂಡು ಬಂದ. ಮಕ್ಕಳೊಂದಿಗೆ ಹೊಲದಲ್ಲಿ ಬೀಜ ಬಿತ್ತಿದ. ದಿನಾಲು ಕೆಲಸ ಮುಗಿದ ಮೇಲೆ ಕೊಳಲು ನುಡಿಸುತ್ತಿದ್ದ. ಆ ಕೊಳಲಿನ ದನಿ ಎಷ್ಟು ಮಧುರವಾಗಿದ್ದಿತೆಂದರೆ - ಅದನ್ನು ಕೇಳಿ ಸುತ್ತಲ ಗಿಡಮರಗಳೂ ತಲೆದೂಗುತ್ತಿದ್ದವು. ತಂಗಾಳಿ ಸೂಸಿ ಬಡತಮ್ಮನ ಹೊಲದಲ್ಲೇ ಸುಳಿದಾಡುತ್ತಿತ್ತು. ಆಕಾಶದ ಮೋಡಗಳು ಇವನ ಹೊಲದ ಮೇಲೆ ಗುಂಪಾಗಿ ನಿಂತು ಮಳೆ ಸುರಿಸುತ್ತಿದ್ದವು. ಅಲ್ಲದೆ ಇವರ ದಣಿವು ಮಾಯವಾಗಿ ದುಡಿಯುವುದಕ್ಕೆ ಹೊಸ ಹುರುಪು ಬರುತ್ತಿತ್ತು. ಹೀಗಾಗಿ ಬಡತಮ್ಮನ ಹೊಲ ತಾಸಿಗೊಂದು ಚೆಂದವಾಗಿ ಹುಲುಸಾಗಿ ಬೆಳೆಯಿತು. ದಂಟಿಗೆಂಟು ತೆನೆಯಾಗಿ, ತೆನೆಗೊಂದು ಹಕ್ಕಿ ಕೂತು ಹಾಡತೊಡಗಿತು. ಉಳಿದವರ ಬೆಳೆಗಳಿನ್ನೂ ನೆಲ ಬಿಟ್ಟು ಎದ್ದಿರಲಿಲ್ಲ. ಬಡತಮ್ಮನ ಪೈರು ಮಾಗಿ ಬಿಟ್ಟಿತ್ತು.

ಒಂದು ದಿನ ಸಾವ್ಕಾರಣ್ಣ ಬಡತಮ್ಮನ ಹೊಲ ನೋಡಿದ. ಅವನಿಗೆ ಆಶ್ಚರ್ಯವಾಯಿತು. ಯಾರ ಹೊಲಗಳೂ ಹೀಗೆ ಬೆಳೆದಿರಲಿಲ್ಲ. ಇದರಲ್ಲೇನೋ ಗುಟ್ಟಿದೆಯೆಂದು ಬಡತಮ್ಮನ ಬಳಿಗೆ ಬಂದ. “ನಮ್ಮೆಲ್ಲರ ಬೆಳೆ ಹೀಗೆ ಮುರುಟಿದ್ದಾಗ ನಿನ್ನ ಬೆಳೆ ಮಾತ್ರ ಹುಲುಸಾಗಿ ಬೆಳೆಯಲು ಏನು ಕಾರಣ?” ಎಂದು ಕೇಳಿದ. ಬಡತಮ್ಮ ಕೊಳಲು ತೋರಿಸಿ, ಅದರ ಮಹಿಮೆಯಿಂದಲೇ ಹೀಗಾಯಿತೆಂದು ಹೇಳಿದ. ಸಾವ್ಕಾರಣ್ಣನಿಗೆ ಆಸೆ ಹುಟ್ಟಿತು.

“ತಮ್ಮಾ ತಮ್ಮಾ ಕೆಲ ದಿನದ ಮಟ್ಟಿಗೆ ನನಗೂ ಈ ಕೊಳಲು ಕೊಡು. ನನ್ನ ಬೆಳೆ ಹುಲುಸಾದ ಮೇಲೆ ಈ ಕೊಳಲು ನಿನಗೆ ವಾಪಸು ಕೊಡುತ್ತೇನೆ” ಆಗಲೆಂದು ಬಡತಮ್ಮ ಕೊಳಲು ಕೊಟ್ಟ.

ದಿನಾಲು ಕೆಲಸ ಮುಗಿದ ಮೇಲೆ ಸಾವ್ಕಾರಣ್ಣನೂ ಕೊಳಲು ನುಡಿಸುತ್ತಿದ್ದ. ಅವನ ಹೊಲದ ಸುತ್ತಲ ಗಿಡಮರ ತಲೆದೂಗಿದವು, ತಂಗಾಳಿ ಸುಳಿದಾಡಿತು. ಆಕಾಶದ ಮೋಡಗಳು ಇವನ ಹೊಲದ ಮೇಲೆ ಗುಂಪಾಗಿ ನಿಂತು ಮಳೆ ಸುರಿಸಿದವು. ಸಾವ್ಕಾರಣ್ಣನ ಹೊಲವೂ ತಾಸಿಗೊಂದು ಚೆಂದವಾಗಿ ಹುಲುಸಾಗಿ ಬೆಳೆಯಿತು.

“ಕೆಲಸವಾಯಿತಲ್ಲ, ಇನ್ನು ಕೊಳಲು ವಾಪಸು ಕೊಡು” ಎಂದು ಬಡತಮ್ಮ ತನ್ನ ಕೊಳಲು ಕೇಳಿದ. ಸಾವ್ಕಾರಣ್ಣ ಆ ಕೊಳಲು ತಾನಿಟ್ಟುಕೊಂಡು, ಇನ್ನೊಂದು ಅಂಥದೇ ಕೊಳಲು ಕೊಟ್ಟು ಕಳುಹಿಸಿದ-

ಬಡತಮ್ಮ ತಂದು ಕೆಲಸ ಮಾಡಿದ ಮೇಲೆ ಈ ಕೊಳಲು ನುಡಿಸಿದ. ಇದರ ದನಿ ಗಗ್ಗರವಾಗಿತ್ತು. ಗಿಡಮರ ತಲೆದೂಗದೆ ಸುಮ್ಮನೆ ನಿಂತು, ತಂಗಾಳಿ ಸುಳಿಯಲಿಲ್ಲ. ಆಕಾಶದಲ್ಲಿ ಮೋಡಗಳು ಗುಂಪುಗೂಡಲಿಲ್ಲ. ದಣಿವು ಪರಿಹಾರವಾಗುವುದರ ಬದಲು ಹೆಚ್ಚಾಯಿತು. ಬಡತಮ್ಮ ಓಡೋಡಿ ಅಣ್ಣನ ಬಳಿ ಬಂದು, “ಹೀಗೇಕೆ, ನನ್ನ ಕೊಳಲಿಗೆ ಏನು ಮಾಡಿದೆ?” ಎಂದ.

“ನಿನ್ನ ಕೊಳಲು ನಿನಗೆ ಕೊಟ್ಟಾಗಿದೆ” ಎಂದು ಹೇಳಿ ಸಾವ್ಕಾರಣ್ಣ ಜಾರಿಕೊಂಡ. ಸಾಲದೆಂಬಂತೆ ಒಂದಕ್ಕೆ ಹತ್ತರಷ್ಟು ಧಾನ್ಯ ಕೊಡಬೇಕಾದ ಕರಾರಿತ್ತಲ್ಲವೇ? ಇದೇ ಸಕಾಲವೆಂದು ಬಂದು ಬಡತಮ್ಮ ಬೆಳೆದ ಧಾನ್ಯವನ್ನೆಲ್ಲಾ ತೆಗೆದುಕೊಂಡು ಹೋದ. ಬಡತಮ್ಮ ಕೈ ಖಾಲಿಯಾಗಿ ಕೂತ. ಇದ್ದಬಿದ್ದ ದವಸ ಧಾನ್ಯವನ್ನು ಸಾವ್ಕಾರಣ್ಣ ತೆಗೆದುಕೊಂಡು ಹೋದುದರಿಂದ ಪಾಪ, ಮಕ್ಕಳಿಗೆ ಕೊಡೋದಕ್ಕೆ ಅವನ ಬಳಿ ಏನೂ ಇರಲಿಲ್ಲ.

ಒಂದು ದಿನವಂತೂ ಊಟವಿಲ್ಲದೆ ಮಕ್ಕಳು ಸುಮ್ಮನೆ ಗುಂಪಾಗಿ ಮಲಗಿದ್ದವು. ಅವರನ್ನು ನೋಡಲಾರದೆ ಬಡತಮ್ಮ ಸಾಪ್ಕಾರಣ್ಣನ ಬಳಿಗೆ ಬಂದ.

ಅಣ್ಣ ಕೇಳಿದ "ಯಾಕೋ ಬಡತಮ್ಮಾ, ಈ ಕಡೆ ಬಂದೆ?"

"ಮಕ್ಕಳಿಗೆ ಕೂಳಿಲ್ಲ" ಬಡತಮ್ಮ ಹೇಳಿದ, "ಗಂಜಿಗೆ ಒಂದಿಷ್ಟು ಹಿಟ್ಟನ್ನಾದರೂ ಕೊಟ್ಟರೆ ಮಕ್ಕಳ ಪ್ರಾಣ ಉಳಿಸಬಹುದು."

"ಸರಿ, ಒಂದು ಬೊಗಸೆ ತುಂಬ ಸಿಟ್ಟು ಕೊಡುತ್ತೇನೆ. ನಾಳೆ ಒಂದು ಚೀಲ ಹಿಟ್ಟು ವಾಪಸು ಕೊಡು."

"ಒಂದು ಬೊಗಸೆ ಹಿಟ್ಟಿಗೆ ಒಂದು ಚೀಲ ಹಿಟ್ಟು! ಇದು ಹೆಚ್ಚಾಯಿತಲ್ಲವೇ?"

"ಹೌದೇ? ಹಾಗಾದರೆ ಬೊಗಸೆ ಹಿಟ್ಟು ಕೊಡುವುದಿಲ್ಲ, ಹೋಗು" ಎಂದು ಸಾಪ್ಕಾರಣ್ಣ.

ಬೇರೆ ದಾರಿಯಿರಲಿಲ್ಲ. ಬಡತಮ್ಮ ಬೊಗಸೆ ಹಿಟ್ಟನ್ನೇ ತೆಗೆದುಕೊಂಡು ಮನೆಗೆ ಬರುತ್ತಿದ್ದ.

ಆದರೆ ದಾರಿಯಲ್ಲಿ ಭರ್‍ರನೆ ಬಿರುಗಾಳಿ ಬೀಸಿತು. ಬೊಗಸೆಯಲ್ಲಿಯ ಎಲ್ಲ ಹಿಟ್ಟು ಹಾರಿಹೋಯಿತು. ಹಸಿದ ಮಕ್ಕಳನ್ನು ನೆನೆದು ತಮ್ಮನಿಗೆ ಸಂಕಟವಾಯಿತು. ಈ ಬಿರುಗಾಳಿಯನ್ನು ಹಿಡಿದು ಶಿಕ್ಷಿಸಲೇಬೇಕೆಂದು ಬಡತಮ್ಮ ಅದರ ಬೆನ್ನು ಹತ್ತಿದ. ಬಿರುಗಾಳಿ ಬಯಲಿನೊಳಗೆ ಓಡಿತು. ತಮ್ಮ ಅಲ್ಲಿಗೂ ಬಂದ. ಬಿರುಗಾಳಿ ಕಾಡಿನೊಳಗೆ ಓಡಿತು. ಬಡತಮ್ಮ ಏದುಸಿರು ಬಿಡುತ್ತ ಅಲ್ಲಿಗೂ ಬಂದ.

ಅವನ ಕಷ್ಟ ನೋಡಲಾರದೆ ಬಿರುಗಾಳಿ ನಿಂತು – "ಬಡತಮ್ಮ, ಯಾಕೆ ನನ್ನ ಬೆನ್ನುಹತ್ತಿ ಓಡಿ ಬರುತ್ತಿರುವೆ?" ಎಂದಿತು.

"ನನ್ನ ಮಕ್ಕಳು ಹಸಿದಿದ್ದವು. ಕೊಡುವುದಕ್ಕೆ ಏನೂ ಇರಲಿಲ್ಲ. ಹಿಟ್ಟು ಕಡ ತಂದು ಬೇಯಿಸಿ ಹಾಕೋಣ ಎಂದುಕೊಂಡು ನನ್ನ ಅಣ್ಣನಿಂದ ಒಂದು ಬೊಗಸೆ ಹಿಟ್ಟು ತರುತ್ತಿದ್ದೆ. ನೀನಿದಿಯಲ್ಲ ಮೀಸಿ ಅದನ್ನು ಹಾರಿಸಿಬಿಟ್ಟೆ. ಬರಿಗೈಯಿಂದ ಮನೆಗೆ ಹೇಗೆ ಹೋಗಲಿ ಹೇಳು?"

"ಇಷ್ಟೇನೋ? ಹಾಗಿದ್ದರೆ ಚಿಂತೆ ಮಾಡಬೇಕು. ನಿನ್ನ ಚಿಂತೆಗೆ ಕಾರಣನಾದ ನಾನೇ ನಿನ್ನ ಆನಂದಕ್ಕೂ ಕಾರಣನಾಗುತೆನೆ. ಇದು ನೋಡು ಮಾಂತ್ರಿಕ ಬುಟ್ಟಿ. ಇದರ ಮುಂದೆ ಕೂತು ಏನು ಬೇಡಿದರೂ ಕೊಡುತ್ತದೆ" ಎಂದು ಹೇಳಿದ ಬರುಗಾಳಿ ಒಂದು ಮಾಂತ್ರಿಕ ಬುಟ್ಟಿಯನ್ನು ಕೊಟ್ಟಿತು.

ಬಡತಮ್ಮನಿಗೆ ಬಹಳ ಆನಂದವಾಯಿತು. ಬಿರುಗಾಳಿಗೆ ನಮಸ್ಕರಿಸಿ ಮನೆಗೆ ಬಂದ. ಎಲ್ಲ ಮಕ್ಕಳನ್ನು ಕರೆದು ವಿಷಯ ಹೇಳಿದ. ಅವರು ಬಗೆಬಗೆಯ ಮೃಷ್ಟಾನ್ನ ಭೋಜನ ಕೇಳಿದರು. ಅವರು ಹೇಳು ಹೇಳುತ್ತಿದ್ದಂತೆಯೇ ಅವರು ಕೇಳಿದ್ದೆಲ್ಲ ಬುಟ್ಟಿಯಿಂದ ಹೊರಬಂತು. ಎಲ್ಲರೂ ಉಂಡು ಸುಖವಾಗಿದ್ದರು.

ಮಾರನೇ ದಿನ ಅವರು ಆಗಷ್ಟೇ ಊಟಕ್ಕೆ ಕುಳಿತಿದ್ದರು. ಅಷ್ಟರಲ್ಲಿ ಸಾಪ್ಕಾರಣ್ಣ ಬಂದ. ನೋಡಿದರೆ ಎಲ್ಲರ ಮುಂದೆ ಮೃಷ್ಟಾನ್ನ ಭೋಜನವಿದೆ! ಅಸೂಯೆಯಿಂದ ಅಣ್ಣನ ಕಣ್ಣು ಕೆಂಪಗಾದವು.

"ಇದೇನೋ ತಮ್ಮ. ಆಗಲೇ ಶ್ರೀಮಂತನಾಗಿ ಬಿಟ್ಟೆಯೋ ಹೇಗೆ?"

ತಮ್ಮ ವಿನಯದಿಂದಲೇ ಹೇಳಿದ "ಶ್ರೀಮಂತಿಕೆಯಲ್ಲ. ಏನಿಲ್ಲ. ಆದರೆ ನಾವು ಉಂಡು ಸುಖವಾಗಿದ್ದು ಬೇಕಾದರೆ ನಿನಗೂ ಒಂದೂಟ ಹಾಕವಷ್ಟು ಅನ್ನವಿದೆ. ನೀನು ಬಾ ಅಣ್ಣ."

“ಅದೆಲ್ಲ ಬೇಡ. ನನಗೆ ಮೊದಲು ನೀನು ಕೊಡಬೇಕಾದ ಒಂದು ಚೀಲ ಹಿಟ್ಟುಕೊಡು” ಎಂದು ಅಣ್ಣ.

“ಅದಕ್ಕೇನು, ಈಗಲೇ ಕೊಡುತ್ತೇನೆ” ಎನ್ನುತ್ತ ತಮ್ಮ ಮಾಂತ್ರಿಕ ಬುಟ್ಟಿಯ ಬಳಿಗೆ ಬಂದು “ಒಂದು ಚೀಲ ತುಂಬ ಹಿಟ್ಟು ಕೊಡು” ಅಂದ. ಅವನ ಮಾತಿನ್ನೂ ಅವನ ಬಾಯೊಳಗೇ ಇದೆ - ಒಂದು ಚೀಲ ತುಂಬ ಹಿಟ್ಟು ಬಂತು. ಸಾಪ್ಕಾರಣ್ಣನಿಗೆ ಕೊಟ್ಟ. ಮಾಂತ್ರಿಕ ಬುಟ್ಟಿಯ ಮಹಿಮೆಯನ್ನು ಹೇಳಿದ. ಮರುಮಾತಿಲ್ಲದೆ ಅಣ್ಣ ತನ್ನ ಮನೆಗೆ ಹೋದ.

ಆದರೆ ಮತ್ತೆ ಸಂಜೆ ಸಮಯಕ್ಕೆ ತಮ್ಮನ ಮನೆಗೆ ಓಡಿಬಂದ.

“ತಮ್ಮಾ ತಮ್ಮಾ, ಮನೆಗೆ ತುಂಬ ಜನ ನೆಂಟರು ಬಂದಿದ್ದಾರೆ. ಅವರಿಗೆಲ್ಲ ಅಡಿಗೆ ಮಾಡಿ ಹಾಕುವುದೆಂದರೆ ತುಂಬ ತೊಂದರೆ. ಒಂದೆರಡು ಗಂಟೆ ನಿನ್ನ ಮಾಂತ್ರಿಕ ಬುಟ್ಟಿಯನ್ನು ಕೊಟ್ಟರೆ ಅವರಿಗೆ ಊಟ ಬಡಿಸಿ ಹಿಂದಿರುಗಿಸುತ್ತೇನೆ” ಅಂದ.



ಬಡತಮ್ಮ ಅವನ ಮಾತನ್ನು ನಂಬಿ ಮಾಂತ್ರಿಕ ಬುಟ್ಟಿಯನ್ನು ಕೊಟ್ಟ.

ಅಣ್ಣ ತನ್ನ ಮನೆಗೆ ಮಾಂತ್ರಿಕ ಬುಟ್ಟಿ ತಂದ. ನೆಂಟರಿಗೆ ಮೃಷ್ಟಾನ್ನ ಭೋಜನ ಉಣಬಡಿಸಿದ. ಅವರು ಹೋದ ಮೇಲೆ ಮಾಂತ್ರಿಕ ಬುಟ್ಟಿಯನ್ನು ಅಡಗಿಸಿಟ್ಟು ಅಂಥದೇ ಇನ್ನೊಂದು ಬುಟ್ಟಿಯನ್ನು ತಮ್ಮನ ಮನೆಗೆ ಕಳಿಸಿದ.

ರಾತ್ರಿ ಬಡತಮ್ಮ ಮಕ್ಕಳ ಸಮೇತ ಬುಟ್ಟಿಯ ಮುಂದೆ ಕೂತು “ಊಟ ಬೇಕು” ಎಂದು ಹೇಳಿದ. ಬುಟ್ಟಿ ಬರಿದಾಗೇ ಇತ್ತು. ತಮ್ಮ ಓಡೋಡಿ ಅಣ್ಣನ ಮನೆಗೆ ಬಂದ. “ನನ್ನ ಬುಟ್ಟಿಗೆ ಏನಾಗಿದೆ?” ಎಂದ. “ನಿನ್ನ ಬುಟ್ಟಿ ನಿನಗೆ ಕೊಟ್ಟಾಗಿದೆ” ಎಂದು ಅಣ್ಣ ಜಾರಿಕೊಂಡ. ಬಡತಮ್ಮನಿಗೆ ಬಹಳ ದುಃಖವಾಯಿತು. ಮನೆಗೆ ಬಂದು ಅಳುತ್ತ ಕೂತ.

ಅಷ್ಟರಲ್ಲಿ ಕಥೆಯ ಪ್ರಾರಂಭದಲ್ಲಿ ಬಂದ ಸನ್ಯಾಸಿ ಬಂದ. ಈ ಸಲ ಆತನ ಬಳಿ ಒಂದು ಡೋಲು ಇತ್ತು. “ತಮ್ಮಾ, ಬಡತಮ್ಮ ಯಾಕಳುವೆ?” ಎಂದು ಕೇಳಿದ. ಬಡತಮ್ಮ ಕೊಳಲು, ಮಾಂತ್ರಿಕ ಬುಟ್ಟಿಗಳು ಕಳೆದು ಹೋದುದನ್ನು ವಿವರಿಸಿ, “ಏನು ಮಾಡಲಿ, ಮಕ್ಕಳೆಲ್ಲ ಉಪವಾಸ ಒದ್ದಾಡುತ್ತಿದ್ದಾರೆ” ಎಂದ.

ಸನ್ಯಾಸಿ ಕತ್ತು ಹಾಕಿ “ಹೀಗೋ? ಇದಕ್ಕೆ ನಾನೇನೂ ಮಾಡಲಾರೆ ಎಂದು ಅನಿಸುತ್ತದೆ. ಬೇಕಾದರೆ ನನ್ನ ಬಳಿ ಇದೊಂದು ಡೋಲು ಇದೆ. ತೆಗೆದುಕೊ. ಇದನ್ನು ಬಾರಿಸಿದರೆ ಸುತ್ತಲಿದ್ದವರೆಲ್ಲ ಕುಣಿದಾಡುತ್ತಾರೆ. ಆದರೆ ಸಮಯ ನೋಡಿ ಬಾರಿಸಬೇಕಷ್ಟೆ. ನೀನು ಊರಿನ ಪಂಚರಿಗೆ ಇದನ್ನು ಹೇಳು ಅವರೇ ಅವನಿಗೆ ಬುದ್ದಿ ಹೇಳಿ ಕೊಡಿಸಬಹುದು.” ಎಂದು ಹೇಳಿ ಸನ್ಯಾಸಿ ಹೊರಟುಹೋದ.

ಬಡತಮ್ಮ ಊರಿನ ಪಂಚರ ಹತ್ತಿರ ಹೋಗಿ ತನಗಾದ ಅನ್ಯಾಯವನ್ನು ತೋಡಿಕೊಂಡ. ತನಗೆ ನ್ಯಾಯ ದೊರಕಿಸಿ ಕೊಡಬೇಕೆಂದು ವಿನಂತಿಸಿಕೊಂಡ.

ಚಾವಡಿಯಲ್ಲಿ ಪಂಚರು ಸೇರಿದರು. ಸಾವ್ಕಾರಣ್ಣನನ್ನು ಕರೆಸಿ, ಕೇಳಲಾಗಿ ಸಾವ್ಕಾರಣ್ಣ ತನ್ನ ಮೇಲಿನ ಆಪಾದನೆಯೆಲ್ಲ ಸುಳ್ಳೆಂದು ಹೇಳಿದ. ಅಲ್ಲದೆ ಅವನ ಶ್ರೀಮಂತನಾದುದರಿಂದ ಅವನ ವಿರುದ್ಧ ತೀರ್ಪು ಕೊಡುವ ಧೈರ್ಯ ಪಂಚರಿಗೂ ಆಗಲಿಲ್ಲ. ಸಾಲದ್ದಕ್ಕೆ ಸಾವ್ಕಾರಣ್ಣನನ್ನು ಪಂಚಾಯ್ತಿಗೆ ಎಳೆದು ಅವಮಾನ ಮಾಡಿದ್ದರಿಂದ ಬಡತಮ್ಮನನ್ನು ಊರು ಬಿಟ್ಟು ಹೊರಗೆ ಹಾಕಬೇಕೆಂದು ತೀರ್ಪಿತ್ತರು. ಇದರಿಂದ ಬಡತಮ್ಮ ಕೋಪಗೊಂಡು ಕೂಡಲೇ ರಭಸದಿಂದ ತನ್ನ ಬಳಿಯ ಡೋಲು ಬಾರಿಸತೊಡಗಿದ. ಸುತ್ತಲಿನವರೆಲ್ಲ “ಎಂಥ ಸಂದರ್ಭದಲ್ಲಿ ಇದೇನು ಚೇಷ್ಟೆ” ಎಂದುಕೊಂಡು ಕುಣಿಯತೊಡಗಿದರು. ಬಡತಮ್ಮ ರಭಸದಿಂದ ಬಾರಿಸತೊಡಗಿದ. ಪಂಚರು, ಸಾವ್ಕಾರಣ್ಣ, ನೋಡಬಂದ ಜನ ಎಲ್ಲರೂ ಇನ್ನೂ ರಭಸದಿಂದ ಕುಣಿಯತೊಡಗಿದರು. ಯಾರಿಗೂ ಕುಣಿಯುವುದನ್ನು ನಿಲ್ಲಿಸಲಾಗಲೊಲ್ಲದು. ಕೆಲವರಂತೂ ಆಗಲೇ ಕೈಕಾಲು ಕುಸಿದು, ಕುಸಿದಲ್ಲೇ ಕಿರುಚುತ್ತ ಕುಣಿಯುತ್ತಿದ್ದರು. “ಬಡತಮ್ಮ, ನಿಲ್ಲಿಸೋ ಆ ಡೋಲು” ಎನ್ನುತ್ತ ಕೂಗಿದರು ವಿನಂತಿಸಿಕೊಳ್ಳುತ್ತ ಕುಣಿದರು. ಬಡತಮ್ಮನಿಗೆ, “ಪ್ರಾಣ ಉಳಿಸೋ” ಎನ್ನುತ್ತ ಕುಣಿದರು. ಸಾವ್ಕಾರಣ್ಣ ಕಾಲು ಮುರಿದು ಬಿದ್ದು ಬಿದ್ದಲ್ಲೇ “ಸಾಯುತ್ತೇನೆ, ಬದುಕಿಸೋ” ಎಂದು ಕುಣಿಯುತ್ತಿದ್ದ. ಕೊನೆಗೆ ಬಡತಮ್ಮ “ನನ್ನ ಕೊಳಲು, ಮಾಂತ್ರಿಕ ಬುಟ್ಟಿ ಕೊಡು. ಇಲ್ಲದಿದ್ದರೆ ಇದನ್ನು ನಿಲ್ಲಿಸೋದೆ ಇಲ್ಲ” ಎಂದು ಹೇಳಿದ. ಸಾವ್ಕಾರಣ್ಣ ಗಡಿಬಿಡಿಯಿಂದ ತಾನು ಬಚ್ಚಿಟ್ಟುಕೊಂಡಿದ್ದ ಮಾಯದ ಕೊಳಲು ಹಾಗೂ ಮಾಂತ್ರಿಕ ಬುಟ್ಟಿಗಳನ್ನು ತಂದು ಕಟ್ಟ. ಬಡತಮ್ಮ ಅವೆರಡನ್ನು ಪರೀಕ್ಷೆ ಮಾಡಿ ನೋಡಿದ. ಅವೆರಡೂ ನಿಜವಾದ ಕೊಳಲು ಮತ್ತು ಮಾಂತ್ರಿಕ ಬುಟ್ಟಿಯಾಗಿದ್ದವು. “ಈ ತನಕ ಕುಣಿದು ದಣಿದಿದ್ದೀರಿ, ಈಗ ಸಂತೋಷದಿಂದಿರಿ” ಎಂದು ಬಡತಮ್ಮ ಕೊಳಲು ನುಡಿಸಿದ. ಎಲ್ಲರಿಗೂ ಸಂತೋಷವಾಯಿತು. ಕುಣಿದ ದಣಿವೂ ಪರಿಹಾರವಾಯಿತು.

ಬಡತಮ್ಮ ತನ್ನ ಮನೆಯಲ್ಲಿ ಮಕ್ಕಳೊಂದಿಗೆ ಸುಖವಾಗಿದ್ದ. ನಾವಿಲ್ಲಿ ಹೀಗಿದ್ದೀವಿ.

* * *

## ಅಡಕೊತ್ತಿನಲ್ಲಿ ಅಡಕೆ

ಒಂದೂರಿನಲ್ಲಿ ಒಬ್ಬ ಶೆಟ್ಟಿಯಿದ್ದ. ಅವನಿಗೆ ಇಬ್ಬರು ಹೆಂಡಂದಿರು. ಇಬ್ಬರ ಹೆಂಡಿಂದಿರಿದ್ದ ಮೇಲೆ ಜಗಳವಾಡದೆ ಹೇಗಿದ್ದಾರೆ? ಆಕೆ ಹೌದೆಂದದ್ದನ್ನು ಈಕೆ ಅಲ್ಲವೆನ್ನುತ್ತಿದ್ದಳು. ನಾನಂಥವಳು, ನೀನಿಂಥವಳು – ಮುಂತಾಗಿ ಸದಾ ಮನೆಯಲ್ಲಿ ಜಗಳ, ಗದ್ದಲ, ಗಲಾಟೆ. ಏನು ಮಾಡಬೇಕೆಂದು ತೋಚದೆ ಚಿಂತೆ ಮಾಡಿ ಮಾಡಿ ಶೆಟ್ಟಿಯ ಕೂದಲುದುರಿ ತಲೆ ಬೋಳಾಯಿತು. ಇಬ್ಬರೂ ಜೊತೆಯಲ್ಲಿದ್ದರೆ ಇದೇ ಗೋಳೆಂದು ಭಾವಿಸಿ ಮನೆಯಲ್ಲಿ ಎರಡು ಭಾಗ ಮಾಡಿದ. ಒಬ್ಬಳಿಗೊಂದು ಭಾಗ, ಇನ್ನೊಬ್ಬಳಿಗೊಂದು ಭಾಗ ಕೊಟ್ಟ. ಇಬ್ಬರೂ ಅವರವರ ಪಾಲಿನ ಮನೆಯಲ್ಲಿ ಪ್ರತ್ಯೇಕ ಒಲೆ ಹೂಡಿ ಅಡಿಗೆ ಮಾಡಿಕೊಳ್ಳುತ್ತಿದ್ದರು. ಆದರೆ ಇದರಿಂದ ಶೆಟ್ಟಿಗೆ ಅನಾನುಕೂಲವೇ ಆಯಿತು. ಅವಳು ಊಟಕ್ಕೆ ಹಾಕುತ್ತಾಳೆಂದು ಇವಳು ಕರೆಯುವುದನ್ನು ಬಿಟ್ಟಳು. ಇವಳು ಹಾಕುತ್ತಾಳೆಂದು ಅವಳು ಊಟಕ್ಕೆ ಕರೆಯುವುದನ್ನು ನಿಲ್ಲಿಸಿದಳು. ಸರಿಯಾಗಿ ಊಟವಿಲ್ಲದೆ, ಉಚಾರವಿಲ್ಲದೆ ಶೆಟ್ಟಿ ಬೇಕಾಬಿಟ್ಟಿಯಾದ.



ಕೊನೆಗೆ ಅವನಿಗೊಂದು ಉಪಾಯ ಹೊಳೆಯಿತು. ತನ್ನ ದೇಹದ ಅರ್ಧಭಾಗದ ಸೇವೆಯನ್ನು ಒಬ್ಬಳು ಮಾಡಿದರೆ ಇನ್ನರ್ಧ ಭಾಗದ ಸೇವೆಯನ್ನು ಇನ್ನೊಬ್ಬಳು ಮಾಡಬೇಕೆಂದು ಹೇಳಿದ. ಎಡಗಾಲು, ಎಡಗೈ - ಹೀಗೆ ದೇಹದ ಎಡಭಾಗವನ್ನು ಒಬ್ಬಳ ಪಾಲಿಗೆ ಕೊಟ್ಟ. ಅವಳ ಹೆಸರು ಎಡಗೈ ಹೆಂಡತಿಯೆಂದಾಯಿತು. ಬಲಗಾಲು, ಬಲಗೈ - ಬಲ ಭಾಗ ಇನ್ನೊಬ್ಬಳದು. ಅವಳ ಹೆಸರು ಬಲಗೈ ಹೆಂಡತಿ ಎಂದಾಯಿತು. ಬೆಳಗಿನ ಊಟ ಎಡಗೈ ಮನೆಯಲ್ಲಿ, ಸಂಜೆ ಊಟ ಬಲಗೈ ಮನೆಯಲ್ಲಿ ಮಾಡುತ್ತಿದ್ದ. ಹೀಗೆ ತಂತಮ್ಮ ಪಾಲಿನ ಶೆಟ್ಟಿಯ ಸೇವೆ ಮಾಡುತ್ತ ಎಡಗೈ ಬಲಗೈ ಹೆಂಡಂದಿರಿದ್ದರು.

ಆದರೆ ಇದೂ ಕೊನೆ ಬಾಳಲಿಲ್ಲ. ಒಂದು ದಿನ ಶೆಟ್ಟಿ ಸಂಜೆ ಅಂಗಡಿಯಿಂದ ದಣಿದು ಬಂದು, ಹಾಗೆ ಅಡ್ಡಾದ. ಬಲಗೈ ಹೆಂಡತಿ ಹೊರಗೆ ಹೋಗಿದ್ದಳು. ಎಡಗೈ ಹೆಂಡತಿಯನ್ನು ಕರೆದು, “ಕಾಲು ತಿಕ್ಕು ಬಾ” ಎಂದ. ಅವಳು ಬಂದು ತನ್ನ ಪಾಲಿನ ಎಡಗಾಲನ್ನು ತಿಕ್ಕಿದಳು. ಶೆಟ್ಟಿಗೆ ಅಷ್ಟರಿಂದಲೇ ಹಾಯೆನಿಸಿ ಅಲ್ಲೇ ನಿದ್ರೆ ಹೋದ. ಎಡಗೈ ಹೆಂಡತಿ ತನ್ನ ಕೆಲಸಕ್ಕೆ ಹೋದಳು.

ಶೆಟ್ಟಿ ನಿದ್ರೆಯಲ್ಲಿ ಎಡಗಾಲನ್ನು ಬಲಗಾಲ ಮೇಲಿಟ್ಟು ಮಲಗಿದ್ದ. ಅದೇ ಸಮಯಕ್ಕೆ ಹೊರಗೆ ಹೋಗಿದ್ದ ಬಲಗೈ ಹೆಂಡತಿ ಒಳಗೆ ಬಂದಳು. ಬಂದು ನೋಡುತ್ತಾಳೆ. ತನ್ನ ಪಾಲಿನ ಕಾಲಿನ ಮೇಲೆ ಇನ್ನೊಬ್ಬಳ ಕಾಲು ಬಿದ್ದಿದೆ! ಅವಳಿಗೆ ವಿಪರೀತ ಸಿಟ್ಟು ಬಂತು. ಒಂದು ಗುಂಡುಕಲ್ಲು ತಕ್ಕೊಂಡು ತನ್ನ ಪಾಲಿನ ಕಾಲಿನ ಮೇಲೆ ಬಿದ್ದಿದ್ದ ಇನ್ನೊಂದು ಕಾಲನ್ನು ಜಜ್ಜಿದಳು. ಶೆಟ್ಟಿ ಅಯ್ಯೋ ಎಂದು ಚೀರುತ್ತ ಎದ್ದು ಕುಳಿತು. ಅವನ ಕೂಗು, ಚೀರಾಟ ಒಳಗಿದ್ದ ಎಡಗೈ ಹೆಂಡತಿಗೆ ಕೇಳಿಸಿತು. ಬಂದು ನೋಡಿದರೆ ತನ್ನ ಪಾಲಿನ ಕಾಲು ಮುರಿದು ಬಿದ್ದಿತ್ತು. ಅವಳಿಗೆ ಕಾರಣ ಗೊತ್ತಾಗುವುದು ತಡವಾಗಲಿಲ್ಲ. ತನ್ನ ಪಾಲಿನ ಕಾಲು ಮುರಿದ ಮೇಲೆ ಅವಳ ಪಾಲಿನ ಕಾಲಾದರೂ ಯಾಕಿರಬೇಕು? ತಕ್ಷಣವೇ ಅದೇ ಗುಂಡುಕಲ್ಲಿನಿಂದ ಶೆಟ್ಟಿಯ ಬಲಗಾಲನ್ನು ಕುಟ್ಟಿದಳು. ಹೀಗೆ ಶೆಟ್ಟಿ ಎರಡೂ ಕಾಲು ಕಳೆದುಕೊಂಡು ಕೂತ.

ಅದಕ್ಕೆ ಹಿರಿಯರು ಹೇಳುತ್ತಾರೆ: ಇಬ್ಬರು ಹೆಂಡಂದಿರನ್ನು ಮದುವೆಯಾದವನ ಸ್ಥಿತಿ ಅಡಕೊತ್ತಿನಲ್ಲಿ ಸಿಕ್ಕ ಅಡಕೆಯ ಹಾಗೆ — ಎಂದು.

## ಆಮೆ ರಾಜಕುಮಾರ

ಒಂದೂರಿನಲ್ಲಿ ಒಬ್ಬ ರಾಜ ಮತ್ತು ಅವನ ಪ್ರಧಾನಿ ಇದ್ದರು. ಇಬ್ಬರಿಗೂ ಬಹಳ ದಿವಸ ಮಕ್ಕಳೇ ಆಗಲಿಲ್ಲ. ಸಾಧು, ಸನ್ಯಾಸಿಗಳನ್ನು ಕೇಳಿದರು. “ಶಿವಪೂಜೆ ಮಾಡಿದರೆ ಮಕ್ಕಳಾಗುತ್ತವೆ” ಎಂದು ಹೇಳಿದರು. ಅದರಂತೆ ಇಬ್ಬರೂ ಬಹಳ ಭಕ್ತಿಯಿಂದ ಶಿವಪೂಜೆ ಮಾಡಲಾಗಿ ರಾಜನ ಹೆಂಡತಿ ಮತ್ತು ಮಂತ್ರಿಯ ಹೆಂಡತಿ ಇಬ್ಬರೂ ಗರ್ಭಿಣಿಯರಾದರು. ಆಗಲೇ ರಾಜ ಮತ್ತು ಪ್ರಧಾನಿ ಮಾತಾಡಿಕೊಂಡರು. ಇಬ್ಬರಿಗೂ ಗಂಡು ಮಕ್ಕಳಾದರೆ ಅವರು ದೊಡ್ಡವರಾಗಿ ರಾಜ, ಪ್ರಧಾನಿ ಆಗಲಿ. ಇಬ್ಬರಲ್ಲಿ ಒಬ್ಬನಿಗೆ ಹೆಣ್ಣು ಮಗು ಹುಟ್ಟಿದರೆ, ಇನ್ನೊಬ್ಬನ ಮಗನಿಗೆ ಅವಳನ್ನು ಕೊಡಬೇಕು. ಹಾಗೆಂದು ಇಬ್ಬರೂ ಕೈಯಲ್ಲಿ ಕೈ ಹಾಕಿ ಭಾಷೆ ಕೊಟ್ಟುಕೊಂಡರು.

ಒಂಬತ್ತು ತಿಂಗಳಾದ ಮೇಲೆ ರಾಜನ ಹೆಂಡತಿ ಒಂದು ಆಮೆಯನ್ನು ಹಡೆದಳು. ಪ್ರಧಾನಿಯ ಹೆಂಡತಿ ಒಂದು ಸುಂದರವಾದ ಹೆಣ್ಣು ಮಗವನ್ನು ಹಡೆದಳು. ರಾಜನಿಗೆ ಮೊದಲು ಬೇಸರವಾಯಿತು ಆದರೇನು? ಹೆತ್ತವರಿಗೆ ಹೆಗ್ಗಣ ಮುದ್ದು ತಾನೆ? ಆಮೆಯನ್ನು ಗಂಡು ಮಗನಂತೆಯೇ ಪ್ರೀತಿಯಿಂದ ಸಾಕುತ್ತಿದ್ದರು. ಪ್ರಧಾನಿಯೂ ಮಗಳನ್ನು ಬಹಳ ಪ್ರೀತಿಯಿಂದ ಬೆಳೆಸುತ್ತಿದ್ದ.

ಇತ್ತ ಆಮೆಯೂ ಅತ್ತ ಪ್ರಧಾನಿಯ ಮಗಳೂ ಬೆಳೆದು ದೊಡ್ಡವರಾಗಿ ವಯಸ್ಸಿಗೆ ಬಂದರು. ರಾಜನಿಗೆ ಚಿಂತೆಯಾಯಿತು. ಹಿಂದೆ ತಾನು ಪ್ರಧಾನಿಗೆ ಭಾಷೆ ಕೊಟ್ಟು ಕರಾರು ಮಾಡಿದ್ದನ್ನು ರಾಣಿಗೆ ಹೇಳಿದ. ರಾಣಿ, "ಅದೇನೋ ನಿಜ. ನಮ್ಮ ಮಗ ರಾಜುಕುಮಾರನಾಗಿದ್ದಿದ್ದರೆ ನಿಮ್ಮ ಕರಾರು ನಡೆಯುತ್ತಿತ್ತು. ನಮ್ಮ ಮಗು ಮೊದಲೇ ಆಮೆ. ಆಮೆಗೆ ಮಗಳನ್ನು ಕೊಡಿ ಎಂದು ಹೇಗೆ ಕೇಳುವುದು?" ಎಂದಳು. ಆದರೆ ಈ ಮಾತುಗಳನ್ನು ಪಕ್ಕದಲ್ಲೇ ಮಲಗಿಕೊಂಡಿದ್ದ ಆಮೆ ಕೇಳಿಸಿಕೊಂಡಿತು.

"ನೀವು ಯಾಕಿಷ್ಟು ಚಿಂತೆ ಮಾಡುತ್ತೀರಿ? ಆಮೆಯಾಗಿರಬಹುದು. ಆದರೂ ನಿಮ್ಮ ಮಗ ತಾನೆ? ಹೋಗಿ ಕೇಳಿ, ಪ್ರಧಾನಿ ಏನಂತಾರೋ ಅದನ್ನು ಬಂದು ಹೇಳಿ" ಎಂದಿತು.

ಈ ತನಕ ಮಾತಾಡದ ಆಮೆ ಈಗ ಮನುಷ್ಯರಂತೆ ಮಾತಾಡಿದ್ದನ್ನು ಕೇಳಿ ರಾಜ, ರಾಣಿಗೆ ಬಹಳ ಸಂತೋಷವಾಯಿತು. ಇದೆಲ್ಲಿಯೋ ಶಾಪ ಹೊಂದಿದ ರಾಜಪುತ್ರನೇ ಇರಬೇಕು. ಇಲ್ಲದಿದ್ದರೆ ಆಮೆಯಾಗಿ ಮನುಷ್ಯರಂತೆ ಮಾತಾಡುವುದೆಂದರೇನು?-ಎಂದುಕೊಂಡು ರಾಜ ಪ್ರಧಾನಿಯ ಮನೆಗೆ ಹೋದ. "ಪ್ರಧಾನಿ ಕರಾರಿನಂತೆ ನನ್ನ ಮಗ ಆಮೆ ರಾಜ ಕುಮಾರನಿಗೆ ನಿನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕು" ಎಂದು ಕೇಳಿದ. ಪ್ರಧಾನಿ ಉತ್ತರ ಕೊಡಲು ಹಿಂದೆ ಮುಂದೆ ನೋಡುತ್ತಿದ್ದಾಗ ಅವನ ಮಗಳೇ ಹೇಳಿದಳು: "ನೀವು ಹಿಂದೆ ಏನೇನೋ ಕರಾರು ಮಾಡಿಕೊಂಡಿರಬಹುದು. ಆದರೆ ಅದಕ್ಕೆ ನಾನು ಜವಾಬ್ದಾರಿಯಲ್ಲ. ನಾನು ಮದುವೆಯಾಗೋದು-ದೇವಲೋಕದ ಪಾರಿಜಾತ ಪುಷ್ಪ ತಂದುಕೊಟ್ಟವನನ್ನು ಮಾತ್ರ" ಎಂದು ನಿಷ್ಠೂರವಾಗಿ ಹೇಳಿದಳು.

ರಾಜ ಬಂದು ಅಮೆ ರಾಜಕುಮಾರನಿಗೆ ಪ್ರಧಾನಿಯ ಮಗಳು ಹೇಳಿದ್ದನ್ನು ಹೇಳಿದ. ಅದಕ್ಕೆ ಆಮೆ "ಹಾಗಿದ್ದರೆ ಇಂದೇ ನನ್ನನ್ನು ಸಮುದ್ರದಲ್ಲಿ ಬಿಡಿ. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ" ಎಂದಿತು. ಅದರಂತೆ ರಾಜ ಅಮೆಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಹೋಗಿ ಸಮುದ್ರದಲ್ಲಿ ಬಿಟ್ಟುಬಂದ.



ಆಮೆ ಚೆನ್ನಾಗಿ ಈಜಿ ಉದಯಪರ್ವತಕ್ಕೆ ಹೋಯಿತು. ಅಲ್ಲಿ ಸೂರ್ಯನನ್ನು ಕುರಿತು ತಪಸ್ಸು ಮಾಡಿತು. ಅದರ ತಪಸ್ಸಿಗೆ ಮೆಚ್ಚಿ ಸೂರ್ಯ ಪತ್ರಕ್ಷನಾದ. "ನೋಡು ಮಗು, ಹಿಂದಿನ ಜನ್ಮದಲ್ಲಿ ನೀನೊಬ್ಬ ರಾಜಕುಮಾರನಾಗಿದ್ದ. ಅಹಂಕಾರದಿಂದ ಒಬ್ಬ ಋಷಿಯ ಮೇಲೆ ಆಮೆ ಎಸೆದುದರಿಂದ ಆ ಋಷಿಯ ಶಾಪದಿಂದಾಗಿ ನಿನಗೆ ಆಮೆಯ ಜನ್ಮ ಪ್ರಾಪ್ತವಾಯಿತು. ಈ ನಿನ್ನ ತಪಸ್ಸಿನಿಂದಾಗಿ ಆ ಶಾಪದಿಂದ ನೀನು ಮುಕ್ತನಾದೆ. ಇಕೋ ನೀನು ಮತ್ತೆ ರಾಜಕುಮಾರನಾಗುವ ಹಾಗೆ ಕರುಣಿಸಿದ್ದೇನೆ. ನೀನು ಬಯಸಿದಾಗ ಆಮೆಯಾಗಲೂಬಹುದು" ಎಂದು ಆಶೀರ್ವದಿಸಿ ಆಕಾಶಕ್ಕೆ ಹೋದ. ಆಮೆ ಮಾಯವಾಗಿ ಅದರ ಸ್ಥಳದಲ್ಲಿ ರಾಜಕುಮಾರ ನಿಂತಿದ್ದ. ಸೂರ್ಯನಿಗೆ ನಮಸ್ಕರಿಸಿ ಪಾರಿಜಾತದ ಹೂವು ತರಲು ಆಮೆ ರಾಜಕುಮಾರ ಹೊರಟ.

ಹೀಗೆ ಮುಂದುವರಿದಾಗ ದಿನಕ್ಕೆ ಒಂದು ಗಳಿಗೆ ತಪಸ್ಸು ಮಾಡುವ ಸನ್ಯಾಸಿ ಸಿಕ್ಕ. ರಾಜಕುಮಾರ ನಮಸ್ಕರಿಸಿ ಕೇಳಿದ "ಸ್ವಾಮಿ, ದೇವಲೋಕದ ಪಾರಿಜಾತ ಎಲ್ಲಿದೆ?"

"ನನಗೆ ಗೊತ್ತಿಲ್ಲವಲ್ಲ. ಇನ್ನೊಂದು ಕೂಗಳತೆ ಹೋಗು, ಅಲ್ಲಿ ನನ್ನ ಗುರುಗಳಿದ್ದಾರೆ. ಅವರಿಗೆ ಗೊತ್ತಿರಬಹುದು" ಅಂದ.



ರಾಜಕುಮಾರ ಇನ್ನೊಂದು ಕೂಗಳತೆ ಮುಂದೆ ಹೋದ. ಅಲ್ಲಿ ದಿನಕ್ಕೆ ಎರಡು ಗಳಿಗೆ ತಪಸ್ಸು ಮಾಡುವ ಸನ್ಯಾಸಿಯಿದ್ದ. ನಮಸ್ಕರಿಸಿ "ಸ್ವಾಮಿ, ದೇವಲೋಕದ ಪಾರಿಜಾತ ಎಲ್ಲಿ ಸಿಕ್ಕೀತು?" ಎಂದ.

ಅವನು "ನನಗೆ ಗೊತ್ತಿಲ್ಲವಲ್ಲಾ. ಇನ್ನೊಂದು ಕೂಗಳತೆ ಹೋಗು. ಅಲ್ಲಿ ನನ್ನ ಗುರುಗಳಿದ್ದಾರೆ. ಅವರನ್ನು ಕೇಳು" ಅಂದ.


ರಾಜಕುಮಾರ ಮತ್ತೊಂದು ಕೂಗಳತೆ ಮುಂದೆ ಹೋದ. ಅಲ್ಲಿ ದಿನಕ್ಕೆ ಮೂರು ಗಳಿಗೆ ತಪಸ್ಸು ಮಾಡುವ ಸನ್ಯಾಸಿ ಇದ್ದ. ಹೋಗಿ ನಮಸ್ಕರಿಸಿ "ಮಹಾಸ್ವಾಮಿ ದೇವಲೋಕದ ಪಾರಿಜಾತ ಎಲ್ಲಿ ಸಿಕ್ಕೀತು?" ಎಂದು ಕೇಳಿದ.

ಆ ಸನ್ಯಾಸಿ ಇವನನ್ನು ನೋಡಿ 'ಹಾ, ತಂದರೆ ಇವನೇ ತರಬಹುದು' ಎಂದುಕೊಂಡು ಹೇಳಿದ "ನೋಡು ಮಗು, ಉತ್ತರ ದಿಕ್ಕಿನಲ್ಲೊಂದು ಶಿವನ ದೇವಾಲಯವಿದೆ. ಅದರಾಚೆ ಒಂದು ಸರೋವರ ಇದೆ. ಅದರೊಳಗೆ ಸ್ನಾನ ಮಾಡಲಿಕ್ಕೆ ದಿನಾಲು ದೇವಲೋಕದ ಕನ್ಯೆಯರು ಬರುತ್ತಾರೆ. ಸೀರೆ ಕಳೆದಿಟ್ಟು ಅವರು ಸರೋವರಗಳಿಗೆ ಇಳಿದ ಕೂಡಲೇ ನೀನು ಹೋಗಿ ಯಾವುದಾದರೊಂದು ಸೀರೆ ಎತ್ತಿಕೊಂಡು ಓಡಿ ಬಂದುಬಿಡು. ಆದರೆ ಹಿಂದಿರುಗಿ ಮಾತ್ರ ನೋಡಬೇಡ. ನೋಡಿದರೆ ಅಪಾಯ ಖಾತರಿ. ಬಂದವನೇ ಶಿವನ ದೇವಾಲಯದಲ್ಲಿ ಹೊಕ್ಕುಬಿಡು. ಪಾರಿಜಾತ ಸಿಗುತ್ತದೆ."

ಆ ಮಾತಿನಂತೆ ರಾಜಕುಮಾರ ಅಲ್ಲಿಗೆ ಹೋಗಿ ದೇವಕನ್ಯೆಯರು ಸ್ನಾನಕ್ಕೆ ಬರುವುದನ್ನೇ ಕಾಯುತ್ತಾ ಕುಳಿತ. ಅವರು ದಂಡೆಯಲ್ಲಿ ಸೀರೆ ಕಳಚಿಟ್ಟು ಸ್ನಾನಕ್ಕಿಳಿದಕೂಡಲೇ ಒಂದು ಸೀರೆ ತೆಗೆದುಕೊಂಡು ಓಡಿದ. ಹಿಂದುರುಗಿ ನೊಡದೆ ಶಿವ ದೇವಾಲಯ ಹೊಕ್ಕು ಬಾಗಿಲಿಕ್ಕಿಕೊಂಡ. ಒಬ್ಬ ದೇವತಾ ಕನ್ಯೆ ಇವನ ಬೆನ್ನು ಹತ್ತಿದ್ದಳು. ಅವಳು ದೇವಾಲಯದ ಮುಂದೆ ನಿಂತು, "ರಾಜಪುತ್ರಾ ನನ್ನ ಸೀರೆ ಕೊಡು" ಎಂದು ಅಂಗಲಾಚಿದಳು. ಪಾರಿಜಾತದ ಹೂವು ಕೊಟ್ಟರೆ ಸೀರೆ ಕೊಡುವುದಾಗಿ ಹೇಳಿದ. ಅವಳು ಒಪ್ಪಿ ಮಾತು ಕೊಟ್ಟಳು. ಕಿಟಕಿಯಿಂದ ಸೀರೆ ತೂರಿದ. ಅವಳುಟ್ಟ ಮೇಲೆ ಬಾಗಿಲು ತೆಗೆದು ಹೊರಬಂದ. ಆ ದೇವಕನ್ಯೆಗೆ ಇವನ ಮೇಲೆ ಪ್ರೀತಿಯಾಯಿತು. ಪಾರಿಜಾತದ ಹೂಗಳನ್ನು ಈಗಲೇ ತರುವೆನೆಂದು ಹೇಳಿ ದೇವಲೋಕಕ್ಕೆ ಹೋಗಿ ಒಂದೆರಡು ಕ್ಷಣಗಳಲ್ಲೇ ಹೂ ತಂದುಕೊಟ್ಟಳು. ಹಾಗೇ ಅವನ ಕೈಗೊಂದು ಕೊಳಲನ್ನು ಕೊಟ್ಟು ಇದನ್ನು ಊದಿದಾಗ ತಾನೇ ಬಂದು ರಾಜಕುಮಾರನ ಆಸೆ ಈಡೇರಿಸುವುದಾಗಿ ಹೇಳಿ, ತನ್ನ ಲೋಕಕ್ಕೆ ಹೋದಳು.

ರಾಜಕುಮಾರ ಹೂ ತೆಗೆದುಕೊಂಡು ತಿರುಗಿ ಬರುವಾಗ ಮೂರು ಗಳಿಗೆಯ ಸನ್ಯಾಸಿ ಸಿಕ್ಕ. “ಅಯ್ಯಾ ರಾಜಕುಮಾರ, ಪಾರಿಜಾತದ ಹೂ ಸಿಕ್ಕಿತೋ?” ಎಂದ.

“ಹೌದು, ಪಾರಿಜಾತದ ಹೂವೂ ಸಿಕ್ಕಿತು, ಹೂವಿನ ಹುಡುಗಿಯೂ ಸಿಕ್ಕಳು - ಎಂದ ರಾಜಕುಮಾರ. “ಎಲ್ಲಿ, ತೋರಿಸು" ಎಂದಾಗ ಕೊಳಲೂದಿದ. ದೇವಲೋಕದ ಕನ್ಯೆ ಬಂದು ರಾಜಕುಮಾರನನ್ನು ಮಾತಾಡಿಸಿಹೋದಳು. ಅವಳನ್ನು ನೋಡಿದೊಡನೆ ಸನ್ಯಾಸಿಯ ಚಿತ್ತ ಚಂಚಲವಾಯಿತು. “ಅಯ್ಯಾ ರಾಜಕುಮಾರ, ನನ್ನ ಬಳಿ ಒಂದು ಯೋಗದಂಡವಿದೆ. ಇಂಥವರನ್ನು ಹೊಡೆ ಎಂದು ಹೇಳಿದರೆ ಸಾಕು, ಹೊಡೆಯುತ್ತದೆ. ನೀನು ಕ್ಷತ್ರಿಯ. ಅದು ನಿನ್ನಲ್ಲಿದ್ದರೇ ಒಳಿತು. ಅದನ್ನು ನಿನಗೆ ಕೊಡುತ್ತೇನೆ. ಪ್ರತಿಯಾಗಿ ನನಗೆ ಈ ಕೊಳಲು ಕೊಡು" ಅಂದ. ರಾಜಕುಮಾರ ಆಗಲೆಂದು ಕೊಳಲು ಕೊಟ್ಟು ಯೋಗದಂಡ ಇಸಿಕೊಂಡ. ತುಸು ಮುಂದೆ ಹೋಗಿ ಯೋಗದಂಡಕ್ಕೆ, “ಆ ಸನ್ಯಾಸಿಯನ್ನು ಹೊಡೆದು ಕೊಳಲು ತೆಗೆದುಕೊಂಡ ಬಾ" ಎಂದ. ಅದು ಹೋಗಿ ಆ ಸನ್ಯಾಸಿಯನ್ನು ಹೊಡೆದು ಹಣ್ಣು ಮಾಡಿತು. ಏಟು ತಡೆಯಲಾರದೆ ಆ ಸನ್ಯಾಸಿ ಕೊಳಲನ್ನು ಕೊಟ್ಟುಬಿಟ್ಟ.



ಕೊಳಲು, ಯೋಗದಂಡ ಮತ್ತು ಪಾರಿಜಾತದ ಹೂ ತಕ್ಕೊಂಡು ರಾಜಕುಮಾರ ಒಂದು ಕೂಗಳತೆ ಮುಂದೆ ಬಂದ. ಇಲ್ಲಿ ಎರಡು ಗಳಿಗೆಯ ಸನ್ಯಾಸಿಯಿದ್ದ. ಅವನಿಗೂ ಹೀಗೆಯೇ ದೇವಲೋಕದ ಕನ್ಯೆಯ ಮೇಲೆ ಮನಸ್ಸಾಯಿತು. ಕೊಳಲಿಗೆ ಬದಲು ತನ್ನ ಹತ್ತಿರವಿದ್ದ ಒಂದು ಕೈಚೀಲ ಕೊಡುವುದಾಗಿ ಹೇಳಿದ. ಅದು ಸಾಮಾನ್ಯ ಕೈಚೀಲವಾಗಿರಲಿಲ್ಲ. ಬೇಡಿದ್ದನ್ನು ಕೊಡುವಂಥದಾಗಿತ್ತು. ಆಗಲೆಂದು ಕೈಚೀಲ ಇಸಿದುಕೊಂಡು ಮತ್ತೆ ಯೋಗದಂಡಕ್ಕೆ ಅಪ್ಪಣೆ ಕೊಟ್ಟ. ಅದು ಮತ್ತೆ ಆ ಸನ್ಯಾಸಿಯನ್ನು ಹೊಡೆದು ಹಣ್ಣು ಹಣ್ಣು ಮಾಡಿ ಕೊಳಲನ್ನು ತಂದಿತು. ಸನ್ಯಾಸಿ ಇಂದು ತಿಂದ ಮಂಗನಂತಾದ.

ರಾಜಕುಮಾರ ಕೊಳಲು, ಯೋಗದಂಡ, ಕೈಚೀಲ ಮತ್ತು ಪಾರಿಜಾತದ ಹೂ ತೊಕ್ಕೊಂಡು ಮುಂದೆ ಬಂದ. ಅಲ್ಲಿ ಒಂದು ಗಳಿಗೆಯ ಸನ್ಯಾಸಿ ಸಿಕ್ಕ. ಇವನೂ ದೇವಕನ್ಯೆಯನ್ನು ಮೋಹಿಸಿ, ತನ್ನ ಹತ್ತಿರವಿದ್ದ ಪಾದುಕೆಗಳನ್ನು ಕೊಟ್ಟು ಕೊಳಲು ತೆಗೆದುಕೊಂಡ. ಈ ಪಾದುಕೆಗಳೂ ಸಾಮಾನ್ಯವಾಗಿರಲಿಲ್ಲ. ಅವುಗಳ ಮೇಲೆ ನಿಂತು ಹೋಗೆಂದಲ್ಲಿಗೆ ಹೋಗುತ್ತಿದ್ದವು. ರಾಜಕುಮಾರ ತುಸು ಮುಂದೆ ಬಂದು ಮತ್ತೆ ಯೋಗದಂಡಕ್ಕೆ ಅಪ್ಪಣೆ ಕೊಟ್ಟ ಈ ಸನ್ಯಾಸಿಯೂ ಹುಚ್ಚನಾಗಿ ಕೂತ.

ಬಳಿಕ ರಾಜಕುಮಾರ ತನ್ನ ಗಳಿಕೆಯನ್ನೆಲ್ಲ ತಕ್ಕೊಂದು ಗೌಪ್ಯವಾಗಿ ಬಂದು ಅರಮನೆ ಸೇರಿದ. ಯಾರೂ ಇಲ್ಲದಲ್ಲಿ ಅವನ್ನೆಲ್ಲ ಇಟ್ಟ. ಮತ್ತೆ ಆಮೆಯಾಗಿ ಪಾರಿಜಾತದ ಹೂ ಮಾತ್ರ ತಕ್ಕೊಂಡು ತಂದೆ ತಾಯಿಗಳ ಬಳಿ ಬಂದು ನಮಸ್ಕರಿಸಿ “ಪಾರಿಜಾತದ ಹೂ ತಂದಿದ್ದೇನೆ. ಮದುವೆ ಮಾಡಬೇಕು" ಎಂದು ಹೇಳಿದ. ರಾಜ, ರಾಣಿಯರಿಗಾದ ಸಂತೋಷ, ಆಶ್ಚರ್ಯ ಅಷ್ಟಿಷ್ಟಲ್ಲ. ಪ್ರಧಾನಿಗೂ ಆಮೆ ಪಾರಿಜಾತದ ಹೂ ತಂದದ್ದು ತಿಳಿಯಿತು ಆಮೆ ಅವನ ಮಗಳಿಗೆ ಪಾರಿಜಾತದ ಹೂ ಕೊಟ್ಟಿತು. ಪ್ರಧಾನಿ ಇನ್ನೇನು ಮಾಡುತ್ತಾನೆ? ಬಾಯಿ ಮುಚ್ಚಿಕೊಂಡು ಆಮೆಗೆ ತನ್ನ ಹಿರಿಯ ಮಗಳನ್ನು ಕೊಟ್ಟು ಮದುವೆ ಮಾಡಿದ. ಅದೇ ಕಾಲಕ್ಕೆ ಪ್ರಧಾನಿಯ ಇನ್ನಿಬ್ಬರು ಕುಮಾರಿಯರನ್ನು ಇಬ್ಬರು ರಾಜಕುಮಾರರಿಗೆ ವೈಭವದಿಂದ ಮದುವೆ ಮಾಡಿಕೊಟ್ಟ. ಪ್ರಧಾನಿಯ ಮಗಳ ತಂಗಿಯರು ತಮ್ಮ ಗಂಡಂದಿರೊಡನೆ ಸುಖವಾಗಿದ್ದರು. ಆದರೆ ಹಿರಿಯ ಮಗಳು ಮಾತ್ರ ತನ್ನ ದೈವದಲ್ಲಿದ್ದಂತಾಗಲೆಂದು ಆಮೆಯ ಜೊತೆಗೆ ಇದ್ದಳು. ತಂಗಿಯರೂ ಅವರ ಗಂಡಂದಿರೂ ಇವಳನ್ನು ನೋಡಿದಾಗೊಮ್ಮೆ 'ಆಮೆಯ ಹೆಂಡತಿ' ಎಂದು ಹೇಳಿ ನಗುತ್ತಿದ್ದರು.



ಒಂದು ದಿನ ಇವರನ್ನು ಅವಮಾನ ಮಾಡುವುದಕ್ಕಾಗಿ ಪ್ರಧಾನಿಯ ಇನ್ನಿಬ್ಬರು ಅಳಿಯಂದಿರು ಬೇಟೆಗೆ ಹೋಗಲು ಸಿದ್ಧರಾದರು. ಆಮೆ ತಾನು ಹೋಗುತ್ತೇನೆಂದು ಹೇಳಿತು. ಪ್ರಧಾನಿಯ ಮಗಳು ಬೇಡವೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಕೊನೆಗೆ ತಂದೆಯ ಹತ್ತಿರ ಬಂದು, “ಅಪ್ಪಾ, ಆನೆ ರಾಜಕುಮಾರರೂ ಬೇಟೆಗೆ ಹೋಗುತ್ತಾರಂತೆ. ಅವರಿಗೂ ಒಂದು ರಥ ಕೊಡು” ಎಂದಳು. ಇದನ್ನು ಕೇಳಿ ಅರಮನೆಯಲ್ಲಿದ್ದವರೆಲ್ಲಾ ಚಪ್ಪಾಳೆ ತಟ್ಟಿ ನಕ್ಕರು. ಆಮೆ ರಾಜಕುಮಾರನಿಗೆ ಒಂದು ಕುಂಟು ಕುದುರೆ ಹಾಗೂ ಒಂದು ಹರಿಯದ ಕತ್ತಿ ಕೊಟ್ಟರು. ಪ್ರಧಾನಿಯ ಮಗಳಿಗೆ ಅವಮಾನವಾಯಿತು. ಆಮೆ ಹೆಂಡತಿಯನ್ನು ಸಮಾಧಾನ ಮಾಡಿ ಬೇಟೆಗೆ ಹೊರಟಿತು.

ಎಲ್ಲರೂ ಕಣ್ಣರೆಯಾಗುವುದಷ್ಟೇ ತಡ ಆಮೆಯು ರಾಜಕುಮಾರನಾಗಿ ಅವರಿಗಿಂತ ಮೊದಲೆ ಅಡವಿಗೆ ಹೋದ. ಪ್ರಧಾನಿಯ ಅಳಿಯರಿಬ್ಬರೂ ಬೇಟೆಗೆ ಹೋದಾಗ ದೂರದಲ್ಲಿ ಎರಡು ಹುಲಿ ಅಬ್ಬರಿಸಿದವು. ಇಬ್ಬರೂ ಜೀವಗಳನ್ನು ಕೈಯಲ್ಲಿ ಹಿಡಿದುಕೊಂಡು ಓಡಿ ಬಂದರು. ಸೈನಿಕರೊಂದು ಕಡೆ, ರಥ ಒಂದು ಕಡೆ, ಇವರೊಂದು ಕಡೆ - ಹೀಗೆ ಫಜೀತಿಪಟ್ಟರು. ಬದುಕಿ ಬಂದದ್ದೇ ಸಾಕೆಂದುಕೊಂಡು ವಾಪಸು ಓಡಿದರು.

ಓಡೋಡುತ್ತ ಬರುವಾಗ ದಾರಿಯಲ್ಲಿ ಆಮೆ ಎರಡೂ ಹುಲಿಗಳನ್ನು ಕೊಂದು ಅಲ್ಲಿಯೇ ಚೆಲ್ಲಿ ಕೊಂಡು ಎಲೆ ಅಡಿಕೆ ಮೆಲ್ಲುತ್ತ ಕೂತಿತ್ತು. ‘ಅರೆ! ಆಮೆಯಂಥಾ ಆಮೆ ಬೇಟೆಯಾಡಿಕೊಂಡು ಹಿಂದಿರುವಾಗ ನಾವು ಹಾಗೇ ಹೋಗುವುದೆಂದರೇನು!’ ಎಂದುಕೊಂಡರು. ಉಪಾಯದಿಂದ ಈ ಹುಲಿಗಳನ್ನು ತಾವು ಒಯ್ಯಬೇಕೆಂದರು.

ಆಮೆಯ ಹತ್ತಿರ ಬಂದು “ಅಯ್ಯಾ, ಈ ಹುಲಿ ನಮಗೆ ಕೊಡು, ನೀನು ಕೇಳಿದ್ದನ್ನು ಕೊಡುತ್ತೇವೆ” ಎಂದರು.

“ಹಾಗಾದರೆ ನಿಮ್ಮ ಅರ್ಧರ್ಧ ಮೀಸೆ ಬೋಳಿಸಿಕೊಡಿ” ಎಂದು ಆಮೆ ಹೇಳಿತು. ಇಬ್ಬರೂ ಯೋಚಿಸಿದರು. “ಇವಷ್ಟು ಮೀಸೆ ಕೊಟ್ಟರೆ ಏನು ಮಹಾ! ನಾವು ಹುಟ್ಟಿನಿಂದಲೇ ಚೆಲುವರಾದ್ದರಿಂದ ಮೂಗಿನ ಎರಡೂ ಕಡೆ ಮೀಸೆ ಇದ್ದರೂ ಚಂದ, ಒಂದೇ ಕಡೆ ಇದ್ದರೂ ಚಂದ. ಅಷ್ಟಾಗಿ ಈ ಮೀಸೆ ಇನ್ನೆಂಟು ದಿನಗಳಲ್ಲಿ ಬೆಳೆಯುತ್ತದೆ. ಹುಲ್ಲಿನಂಥಾ ಹುಲ್ಲು ಬೆಳೆಯುತ್ತದೆ, ಮೀಸೆ ಬೆಳೆಯಲಾರದೆ?” ಹೀಗೆಂದು ವಿಚಾರ ಮಾಡಿಕೊಂಡು ಇಬ್ಬರೂ ತಮ್ಮ ಅರ್ಧರ್ಧ ಮೀಸೆ ಬೋಳಿಸಿಕೊಟ್ಟರು. ಒಬ್ಬೊಬ್ಬರೂ ಒಂದೊಂದು ಹುಲಿ ತೆಗೆದುಕೊಂಡು ಬಂದರು.

ಜನ ಇವರನ್ನು ಮೆರವಣಿಗೆಯಲ್ಲಿ ಕರೆತಂದರು. ಇಬ್ಬರಿಗೂ ಅರ್ಧರ್ಧ ಮೀಸೆ ಇಲ್ಲದ್ದರಿಂದ ಏನೇನೋ ಕಥೆ ಕಟ್ಟಿದರು. ಆದರೂ ದೊಡ್ಡವರು ಮಾಡಿದ್ದೆಲ್ಲಾ ಚಂದವೇ ಅಲ್ಲವೇ? ಆಮೆ ರಾಜಕಮಾರ ಮಾತ್ರ ತನ್ನ ಕುಂಟು ಕುದುರೆ ಹತ್ತಿ ಮೆರವಣಿಗೆಯ ಹಿಂದೆ ಹೋದ. ಅವನನ್ನು ಯಾರೂ ಮಾತಾಡಿಸಲಿಲ್ಲ. ಹುಡುಗರು ಇವನ ಕುಂಟು ಕುದುರೆ ಬೆನ್ನು ಹತ್ತಿ ಚೇಷ್ಟೆ ಮಾಡಿದರು.

ಆ ದಿನ ರಾತ್ರಿ “ಜನ ನನ್ನನ್ನು ನೋಡಿ ನಗುವಂತಾಯಿತಲ್ಲಾ!” ಎಂದು ಚಿಂತಿಸುತ್ತಾ ಪ್ರದಾನಿಯ ಮಗಳು ಮಲಗಿದ್ದಳು. ಅವಳಿಗೆ ನಿದ್ರೆ ಹತ್ತಿದೆಯೆಂದು ತಿಳಿದು ಆಮೆ ರಾಜಕುಮಾರನ ರೂಪ ಹೊಂದಿ ಇವಳ ಸಮೀಪ ಬಂದ. ತಕ್ಷಣವೇ ಎದ್ದು ಕುಳಿತಳು. ತನ್ನ ಗಂಡ

ಆಮೆಯಲ್ಲ, ಹೊಳಪುಳ್ಳ ರಾಜಕುಮಾರನೆಂದು ತಿಳಿದು ಕಾಲಿಗೆ ಬಿದ್ದು “ಸ್ವಾಮಿ, ಇನ್ನು ಮೇಲೆ ಆ ಆಮೆ ವೇಷ ಬಿಸಾಡಬೇಕು” ಎಂದಳು.

“ನಾಳೆ ಸಭೆ ಕೂಡಿಸು. ಅಲ್ಲಿ ತೋರಿಸೋಣ” ಎಂದು ರಾಜಕುಮಾರ ಹೇಳಿದ.

ಮರುದಿನ ಸಭೆ ಕೂಡಿತು. ರಾಜ, ಪ್ರಧಾನಿ, ಅವನ ಅಳಿಯಂದಿರು, ಮಕ್ಕಳು, ಜನರು-ಎಲ್ಲಾ ಸೇರಿದರು. ಅವರೆಲ್ಲರ ಎದುರು ಆಮೆ ಆಕಾರ ಬಿಟ್ಟು ರಾಜಕುಮಾರನಾದ. ಎಲ್ಲರೂ ನೋಡಿ ಬೆರಗಾದರು. ರಾಜಕುಮಾರ ತಾನು ಆಮೆಯಾದದ್ದರ ಕಾರಣ ವಿವರಿಸಿದ. ಹೇಳ ಹೇಳುತ್ತಾ ಪ್ರದಾನಿಯ ಅಳಿಯಂದಿರ ಮೀಸೆಗಳನ್ನೂ ತೋರಿಸಿದ. ಅವರಿಬ್ಬರೂ ಅಲ್ಲಿ ನಿಲ್ಲದೆ ಓಡಿ ಹೋದರು. ರಾಜ ತನ್ನ ಮಗನಿಗೆ ಪಟ್ಟ ಕಟ್ಟಿದ. ರಾಜಕುಮಾರ ತನ್ನ ಹೆಂಡತಿಯೊಂದಿಗೆ ಸುಖವಾಗಿದ್ದ.

**ನಾವಿಲ್ಲಿ ಹೀಗಿದ್ದೀವಿ.**

* * *